ಕರ್ನಾಟಕದ ಸ್ತಬ್ಧಚಿತ್ರಗಳು

ಫೆಲೋಶಿಪ್‌ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ ಸಾದರಪಡಿಸಿದ ಸಂಶೋಧನಾ ಪ್ರಬಂಧ

ಸಂಶೋಧಕ
ಬಸವರಾಜ .ಎಲ್



ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
2015-16

ಕರ್ನಾಟಕದ ಸ್ತಬ್ಧಚಿತ್ರಗಳು

ಫೆಲೋಶಿಫ್‌ಗಾಗಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿಗೆ
ಸಾದರಪಡಿಸಿದ ಸಂಶೋಧನ ಪ್ರಬಂಧ

ಸಂಶೋಧಕ
ಬಸವರಾಜ ಎಲ್.

ಮಾರ್ಗದರ್ಶಕರು
ಡಾ. ಶಿವಾನಂದ ಹೆಚ್. ಬಂಟನೂರ
ಹಂಪಿ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
2015–16

ಕೃತಜ್ಞತೆಗಳು

ಈ ಕೃತಿಯನ್ನು ಬರೆಯಲು ಅವಕಾಶ ಮಾಡಿಕೊಟ್ಟಿರುವಂತಹ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಇವರಿಗೆ, ಮತ್ತು ಆರಂಭದಿಂದ ಅಂತ್ಯದವರೆಗೂ ಅತ್ಯಮೂಲ್ಯವಾದ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳಲು ಹಾಗೂ ಮಾರ್ಗದರ್ಶನ ನೀಡಿದಂತಹ ಡಾ. ಶಿವಾನಂದ ಹೆಚ್. ಬಂಟನೂರ ಅವರಿಗೂ ಹೃದಯ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸಲು ಇಚ್ಛಿಸುತ್ತೇನೆ.

ಪರಿವಿಡಿ

ಅಧ್ಯಾಯ – 1

ಸ್ತಬ್ಧಚಿತ್ರಗಳ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕಲೆಯು ವಿಶ್ವವ್ಯಾಪಿಯಾದ ಒಂದು ಚಟುವಟಿಕೆಯಾಗಿದೆ. ಶತಮಾನಗಳಿಂದಲೂ ವಿದ್ವಾಂಸರು ಕಲಾವಿದರು ಈ ಶಬ್ದವನ್ನು ಕುರಿತು ವ್ಯಾಖ್ಯೆಯನ್ನು ನೀಡಲು ವಾದಿಸುತ್ತ ಬಂದಿರುವುದಾದರೂ ಈವರೆಗೆ ಅವರಲ್ಲಿ ಒಮ್ಮತ ಸಾಧ್ಯವಾಗಿಲ್ಲ. ಕಲೆ ಮಾನವನ ದೈಹಿಕ ಇಲ್ಲವೆ ಬೌದ್ಧಿಕ ಜಾಣ್ಮೆ ಎಂದು ಸಾಮಾನ್ಯವಾಗಿ ಒಪ್ಪಬಹುದಾಗಿದೆ.

ಸಾಹಿತ್ಯ, ಸಂಗೀತ, ನೃತ್ಯ, ನಾಟಕ, ಚಿತ್ರಕಲೆ, ಮೂರ್ತಿಶಿಲ್ಪಕಲೆ ಮತ್ತು ವಾಸ್ತು ಶಿಲ್ಪ ಕಲೆಗಳು ಲಲಿತ ಕಲೆಗಳನಿಸುತ್ತವೆ. ಇಂದು ಕಲೆಯು ಶ್ರವ್ಯ ಮತ್ತು ದೃಶ್ಯ ಕಲೆಗಳಾಗಿ ವಿಭಾಗಿಸಲ್ಪಟ್ಟಿವೆ. ಸಾಹಿತ್ಯ, ಸಂಗೀತ ಕಲೆಗಳು, ಶ್ರವ್ಯ ಕಲೆಗಳೆಂದೂ, ವರ್ಣಚಿತ್ರ, ಸ್ತಬ್ಧಚಿತ್ರ, ರೇಖಾಚಿತ್ರ, ಮೂರ್ತಿ ಶಿಲ್ಪ, ಕೆತ್ತನೆ ಚಿತ್ರಗಳು ಮುಂತಾದವುಗಳನ್ನು ದೃಶ್ಯಕಲೆಗಳೆಂದು ಗುರುತಿಸಲಾಗುತ್ತದೆ.

ನಾನು ಹಲವಾರು ವರ್ಷಗಳಿಂದ ಸ್ತಬ್ಧಚಿತ್ರಗಳ ತಯಾರಿಕೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಹಾಗೇ ಇದರ ತಯಾರಿಕೆಯ ಕುರಿತ ಕುತೂಹಲವನ್ನು ಬೆಳೆಸಿಕೊಂಡಿದ್ದೇನೆ. ಅದರ ಫಲವಾಗಿ ಈಗ ನಿಮ್ಮ ಕೈಯಲ್ಲಿರುವ ಕೃತಿ ಕರ್ನಾಟಕದ ಸ್ತಬ್ಧಚಿತ್ರಗಳು.

ಸ್ತಬ್ಧಚಿತ್ರ ಕೇವಲ ಇಂದಿನ ಕಾಲದಲ್ಲಿ ಹುಟ್ಟಿದ್ದಲ್ಲ ಅದಕ್ಕೆ ಶತಶತಮಾನಗಳ ಅಷ್ಟೇಕೆ ಸಹಸ್ರಮಾನಗಳ ಇತಿಹಾಸವಿದೆ. ಸ್ತಬ್ಧಚಿತ್ರ ಇದು ಕಾಲಕ್ರಮದಲ್ಲಿ ಹೇಗೆ ರೂಪುಗೊಳ್ಳುತ್ತದೆ ಎಂಬ ಕುತೂಹಲ ನನ್ನನ್ನು ಕಾಡಿತ್ತು. ಆ ಸಮಯದಲ್ಲಿ ಸ್ತಬ್ಧಚಿತ್ರಗಳ ಕುರಿತ ಅಧ್ಯಯನ ನಡೆಸಲು ಪ್ರೇರೇಪಿಸಿದವರು ನನ್ನ ನೆಚ್ಚಿನ ಗುರುಗಳಾದ ಪ್ರೊ.ಮಂಜುನಾಥರವರು ಮತ್ತು ಕೆ.ರಾಘವೇಂದ್ರ ರವರು. ಸ್ತಬ್ಧಚಿತ್ರಗಳು ಈ ವಿಷಯ ಸಾರ್ವಜನಿಕ ಸ್ವರೂಪದ್ದು ಸ್ತಬ್ಧಚಿತ್ರಗಳ ಬಗ್ಗೆ ಎಲ್ಲರಿಗೂ ಒಂದಷ್ಟು ವಿಷಯ ತಿಳಿದಿರುತ್ತದೆ. ಆದರೆ ಎಲ್ಲರಿಗೂ ಸಮಗ್ರ ಮಾಹಿತಿ ಇರುವುದಿಲ್ಲ. ಆದ್ದರಿಂದ ಇದನ್ನು ಪುಸ್ತಕ ರೂಪದಲ್ಲಿ ಹೊರತಂದರೆ ಒಂದು ಆಕರ ಗ್ರಂಥವಾಗಬಹುದು ಎಂಬ ಅನೇಕ ಆತ್ಮೀಯರ ಒತ್ತಾಸೆಯ ಫಲವಾಗಿ ಈ ಕೃತಿಯನ್ನು ನಿಮ್ಮ ಮುಂದೆ ಇರಿಸಿದ್ದೇನೆ.

ಸ್ತಬ್ಧಚಿತ್ರಗಳ ಕುರಿತ ಸಮಗ್ರ ಮಾಹಿತಿಯ ಕೃತಿಗಳು ಕಡಿಮೆಯೆ ಆದರೂ ಇದು ಸಾಗರದಂತೆ ತನ್ನ ಒಡಲಾಳದಲ್ಲಿ ಹತ್ತು ಹಲವು ವಿಷಯಗಳನ್ನು ಅಡಗಿಸಿಕೊಂಡಿದೆ. ಕುತುಹೂಲ ಬೆಳೆದಷ್ಟು ವಿಷಯಗಳು ಎದುರು ನಿಲ್ಲುತ್ತವೆ. ಮತ್ತಷ್ಟು ಮಗದಷ್ಟು ಮಾಹಿತಿ ಸಂಗ್ರಹಿಸಿ ಸೇರಿಸುವ

ಅಪೇಕ್ಷೆಯಾಗುತ್ತದೆ. ಆದರೂ ಆಸೆಗೆ ಕಡಿವಾಣ ಕೊಡಿಸಿ, ಒಂದು ಹಂತದವರೆಗಿನ ಅಧ್ಯಯನವನ್ನು ಬಲವಂತವಾಗಿ ನಿಲ್ಲಿಸಿ ಈ ಕೃತಿ ಹೊರತರಲಾಗಿದೆ.

ಜಾನಪದ ಮತ್ತು ಧಾರ್ಮಿಕ ನೆಲೆಗಟ್ಟಿನ ದಟ್ಟ ಅನುಭವ ನಂಬಿಕೆಗಳಿರುವ ನಮ್ಮ ದೇಶದಲ್ಲಿ ನೂರಾರು ಹಬ್ಬಗಳು ಉತ್ಸವಗಳು ಜರುಗುತ್ತವೆ. ನಿಸರ್ಗದ ನಿಯಮಗಳೊಡನೆ ಋತುಮಾನ ಗಳಿಗೆ ತಕ್ಕಂತೆ ಹಬ್ಬ, ಉತ್ಸವಗಳಲ್ಲಿ ಸ್ಥಳೀಯ ಪ್ರಾಮುಖ್ಯತೆ ಪಡೆದ ಮತ್ತು ಸಾಮುದಾಯಿಕ ಸಹಭಾಗಿತ್ವ ಪಡೆದ ಸ್ತಬ್ಧಚಿತ್ರಗಳು ಪ್ರದರ್ಶನಗೊಳ್ಳುತ್ತವೆ.

ಯಾವುದೇ ಸ್ತಬ್ಧಚಿತ್ರಗಳು ಹಲವು ಮಹತ್ವದ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಅದು ಆ ನಾಡಿನ ಸಂಸ್ಕೃತಿಯನ್ನು ತನೊಟ್ಟಿಗೆ ಸಾಕಾರಗೊಳಿಸಿಕೊಂಡಿರಬೇಕು. ಅದರಲ್ಲಿ ಜನರು ತನ್ಮಯರಾಗಬೇಕು. ಅದು ಎಲ್ಲ ವಯಸ್ಸಿನವರಿಗೂ ಪ್ರಿಯವಾಗಬೇಕು. ಅದಕ್ಕೆ ಒಂದು ಕಾರಣವಿರಬೇಕು. ಅಲ್ಲಿ ಒಂದು ಉದ್ದೇಶವಿರಬೇಕು. ಸ್ತಬ್ಧಚಿತ್ರಕ್ಕೆ ಮಾರ್ಗಸೂಚಿ ಇರಬೇಕು. ಅಂತಹ ಸ್ತಬ್ಧಚಿತ್ರವನ್ನು ವೀಕ್ಷಿಸಲು ಎಲ್ಲೆಡೆಯಿಂದ ಪ್ರವಾಸಿಗರು ಬರಬೇಕು. ಸ್ತಬ್ಧಚಿತ್ರವನ್ನು ನೋಡಿದಾಗ ಸಮಾಧಾನವಾಗಬೇಕು. ಅದನ್ನು ನೋಡಿದಾಗ ಅದು ಹೇಗೆ ನಡೆದಿರಬಹುದು? ಎಂಬ ಕಲ್ಪನೆಗೆ ಇಂಬು ಕೊಡುವಂತಿರಬೇಕು. ಇಂತಹ ವೈಶಿಷ್ಟವನ್ನು ಹೊಂದಿರುವ ಚಿತ್ರಕ್ಕೆ ಸ್ತಬ್ಧಚಿತ್ರ ಎನ್ನುವರು. ಸಾಮಾನ್ಯವಾಗಿ ಸ್ತಬ್ಧಚಿತ್ರಗಳು ಕಲೆಯ ಎಲ್ಲಾ ಪ್ರಕಾರಗಳನ್ನು ಹೊಂದಿದ್ದು ಶಿಲ್ಪಕಲೆ, ಚಿತ್ರಕಲೆ, ಉಬ್ಬುಶಿಲ್ಪ, ತಗ್ಗುಶಿಲ್ಪ, ವಾಸ್ತುಶಿಲ್ಪ, ಕಲೆಯ ಅಂಶ ಸಂದೇಶಗಳ ಬರವಣಿಗೆ ಮುಂತಾದ ಮಾಧ್ಯಮವನ್ನು ಹೊಂದಿರುತ್ತದೆ. ವಿವಿಧ ರೀತಿಯ ಕಲಾವಿದರ ಕೈಚಳಕ ಸ್ತಬ್ಧಚಿತ್ರದಲ್ಲಿ ಮುಖ್ಯ ಪಾತ್ರವಹಿಸುತ್ತದೆ.

ಅಧ್ಯಾಯ – 2

ಸ್ತಬ್ಧಚಿತ್ರಗಳ ಪ್ರಯೋಜನ ಮತ್ತು ಪರಿಣಾಮಗಳು

1. ಮಾನಸಿಕ ಬೆಳವಣಿಗೆ:

ವ್ಯಕ್ತಿಯ ದೈಹಿಕ ಬೆಳವಣಿಗೆಯ ಜೊತೆಗೆ ಮಾನಸಿಕ ಬೆಳವಣಿ ಗೆಯು ಆಗುತ್ತದೆ. ಬೌದ್ಧಿಕ ಶಕ್ತಿಗಳಾದ ಲೌಕಿಕ ಯೋಚನೆ, ಗಹನ ತಿಳುವಳಿಕೆ ಮತ್ತು ಏಕಾಗ್ರತೆಗಳು ಈ ಕಾಲದ ಕೊನೆಗೆ ಪೂರ್ತಿ ಬೆಳವಣಿಗೆ ಹೊಂದುತ್ತದೆ. ಸಂಗತಿಗಳ ಸಾಮಾನ್ಯೀಕರಿಸುವ ಸಾಮರ್ಥ್ಯ ಹೆಚ್ಚುತ್ತದೆ. ಮೂರ್ತ ವಸ್ತುಗಳೊಂದಿಗೆ ಸಂಬಂಧ ವನ್ನು ಸಾಮಾನ್ನೀಕರಿಸುವ ಸಾಮರ್ಥ್ಯ ಹೊಂದುತ್ತಾರೆ. ಸ್ತಬ್ಧಚಿತ್ರಗಳಾದ ವ್ಯಕ್ತಿಯು ಅಮೂರ್ತ ವಿಷಯಗಳನ್ನು ಅರಿತುಕೊಳ್ಳುವ ಸಾಮರ್ಥ್ಯ ಮತ್ತು ಸ್ಮರಣೆ ಮತ್ತು ಕಲ್ಪನಾ ಶಕ್ತಿಯನ್ನು ಹೊಂದಿರುತ್ತಾರೆ.

2. ಅಂತಃಪ್ರಜ್ಞೆ:

ಸ್ತಬ್ಧಚಿತ್ರಗಳು ವ್ಯಕ್ತಿಯಲ್ಲಿ ಅಂತಃ ಪ್ರಜ್ಞೆಯ ಆಂತರಿಕ ನಿಯಂತ್ರಣ ಶಕ್ತಿ ಸಾಮಾಜಿಕ ನಿರೀಕ್ಷಣೆ, ಮನ್ನಣೆ ಮತ್ತು ನಿರಾಕರಣೆಗಳು, ಅದರ ಬೆಳವಣಿಗೆಗೆ ಬೇಕಾದ ಲಾಭ ಪ್ರೇರಣೆಗಳನ್ನು ಉಂಟು ಮಾಡುತ್ತದೆ.

3. ಆದರ್ಶ ಮತ್ತು ವಾಸ್ತವಿಕತೆ:

ಸ್ತಬ್ಧಚಿತ್ರಗಳಿಂದ ಆದರ್ಶ ಮತ್ತು ವಾಸ್ತವಿಕತೆಯ ಸ್ಪಷ್ಟ ಕಲ್ಪನೆ ಮೂಡುತ್ತಾ ಹೋಗುತ್ತದೆ. ಜಗತ್ತಿನ ಸ್ಪಷ್ಟ ಕಲ್ಪನೆಯಿಲ್ಲದ, ವಾಸ್ತವಿಕ ಅಂಶಗಳ ಪ್ರಜ್ಞೆಯಿಲ್ಲದ ಬದಲಾವಣೆಗಳನ್ನು ಗುರುತಿಸುವಂತಹ ಮನೋಭಾವ ಬೆಳೆಯುತ್ತದೆ. ಧಾರ್ಮಿಕ ಮತ್ತು ನೈತಿಕ ಮನೋಭಾವ. ಸ್ತಬ್ಧಚಿತ್ರಗಳಲ್ಲಿ ಒಳ್ಳೆಯ ಸ್ವಚ್ಛತೆ, ಸಚ್ಚಾರಿತ್ರ್ಯ, ಪ್ರಾಮಾಣಿಕತೆ, ಕರ್ತವ್ಯ ನಿಷ್ಠೆ, ನಿಯಮಿತ ದೈಹಿಕ ಮತ್ತು ಮಾನಸಿಕ ಶಿಸ್ತು ರೂಪಿಸಲು ಧಾರ್ಮಿಕ ಮತ್ತು ನೈತಿಕ ಶಿಕ್ಷಣವನ್ನು ಒದಗಿಸುತ್ತದೆ. ಧರ್ಮ ಗುರುಗಳ ಜೀವನ ಚರಿತ್ರೆ, ಪುರಾಣ, ಪುಣ್ಯ ಕಥೆಗಳ ಸ್ತಬ್ದಚಿತ್ರಗಳು ಅಧ್ಯಯನ ಮಾಡಿಸುವ ಮುಖಾಂತರ ಅವರಲ್ಲಿ ನೈತಿಕತೆ ಮತ್ತು ಧರ್ಮದಲ್ಲಿ ಆಸಕ್ತಿ ಮೂಡುತ್ತದೆ.

4.ವಿಶೇಷ ಅಭಿರುಚಿಗಳಿಗೆ ಚಾಲನೆ:

ಸ್ತಬ್ಧಚಿತ್ರಗಳ ರಚನೆಯಿಂದ ವೈಯಕ್ತಿಕ ವಿಭಿನ್ನತೆಯ ಕ್ಷೇತ್ರಗಳು ಸ್ಪಷ್ಟವಾಗಿ ಗೋಚರಿಸುವವು. ಆದ್ದರಿಂದ ಅವರ ಅರ್ಹತೆಗಳು, ಆಸೆ, ಆಕಾಂಕ್ಷೆಗಳು, ಅಗತ್ಯತೆಗಳು, ಅಭಿರುಚಿಗಳು, ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ವ್ಯಕ್ತಿಗಳಿಗೆ ವಿಶೇಷ ಅಭಿರುಚಿಗಳಿಗೆ ಚಾಲನೆ ನೀಡಿದಂತಾಗುತ್ತದೆ.

5. ಉತ್ತಮ ಗುಣಗಳನ್ನು ಹಾಗೂ ಹವ್ಯಾಸಗಳನ್ನು ಅಭಿವೃದ್ಧಿಪಡಿಸಬಹುದು:

ಸ್ತಬ್ಧ ಚಿತ್ರಗಳಿಂದ ವ್ಯಕ್ತಿಗಳಲ್ಲಿ ಉತ್ತಮವಾದ ಗುಣಗಳನ್ನು ಹಾಗೂ ಹವ್ಯಾಸಗಳನ್ನು ಅಭಿವೃದ್ಧಿಪಡಿಸುವಲ್ಲಿ ಉಪಯೋಗಿಸಬಹುದು.

6. ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುತ್ತದೆ:

ಜೀವನ ಕೌಶಲಗಳಾದ ಸೃಜಶೀಲ ಚಿಂತನೆ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸುತ್ತದೆ. ಯಾವುದೇ ವಸ್ತು, ವಿಷಯ, ವ್ಯಕ್ತಿ ಸ್ಥಿತಿಯನ್ನು ಬೇರೆ ಬೇರೆ ಮಗ್ಗಲುಗಳಿಂದ ಗ್ರಹಿಸಿ ತನ್ನದೇ ಆದ ತೀರ್ಮಾನ ತೆಗೆದುಕೊಳ್ಳುವ ಬೌದ್ಧಿಕ ಪ್ರಕ್ರಿಯೆಯಾದ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸುತ್ತದೆ.

7. ಸೃಜನಾತ್ಮಕ ಚಿಂತನೆ:

ಸ್ಥಬ್ಧಚಿತ್ರಗಳ ರಚನೆಯಿಂದ ಸೃಜನಾತ್ಮಕ ಮನೋಭಾವ ಬೆಳೆಯುತ್ತದೆ. ಹಳೆಯ ಧಾಟಿಯಲ್ಲಿ ಸೀಮಿತ ರೀತಿಯಲ್ಲಿ ಸಂಪ್ರದಾಯಬದ್ಧವಾಗಿ ಚಿಂತಿಸುವ ಬದಲು, ಹೊಸ ರೀತಿಯಲ್ಲಿ ಸೃಜನಾತ್ಮಕವಾಗಿ ಪೂರ್ವಾಗ್ರಹ ಪೀಡಿತರಾಗದೆ, ಮುಕ್ತವಾಗಿ ಆಲೋಚಿಸುವಂತೆ ಪ್ರೇರೇಪಿಸುತ್ತದೆ.

8. ಪರಿಣಾಮಕಾರಿ ಸಂವಹನ:

ಯಾವುದೇ ಯಶಸ್ಸಿನ ನಿರ್ಧಾರಕ ಅಂಶದಲ್ಲಿ ಪರಿಣಾಮಕಾರಿ ಸ್ತಬ್ಧಚಿತ್ರವು ಪರಿಣಾಮಕಾರಿ ಸಂವಹನವಾಗಿ ಕೆಲಸ ಮಾಡುತ್ತದೆ. ವ್ಯಕ್ತಿಗಾಗಿ ಅಭಿಪ್ರಾಯ, ಅನಿಸಿಕೆಗಳನ್ನು ಪ್ರತಿಭಟನೆಯನ್ನು ನೇರವಾಗಿ ಗೊಂದಲಕ್ಕೆ ಎಡೆ ಇಲ್ಲದಂತೆ ತಿಳಿಸುವ ಉತ್ತಮ ಸಂವಹನ ಮಾಧ್ಯಮವಾಗಿದೆ. ಹಾಗೆಯೇ ವೀಕ್ಷಕರಿಗೆ, ಕಸಿವಿಸಿಯಾಗದಂತೆ ಮನಸ್ಸು ನೋವಾಗದಂತೆ, ಹೇಳುವ ಬರೆಯುವ ಅಭಿವ್ಯಕ್ತಿ ಮಾಡುವ ಉತ್ತಮ ಪರಿಣಾಮಕಾರಿ ಸಂವಹನವಾಗಿದೆ.

9. ಸ್ತಬ್ಧಚಿತ್ರದಿಂದ ಮನೋವಿಕಾಸ:

ವ್ಯಕ್ತಿಯು ಸ್ತಬ್ಧಚಿತ್ರದ ಮೂಲಕ ಅನೇಕ ವಿಷಯಗಳನ್ನು ಸುಲಭವಾಗಿ ತಿಳಿಯುತ್ತಾ ಸಾಗುತ್ತಾನೆ. ನೂರು ಶಬ್ದಗಳು ಹೇಳಬಹುದಾದನ್ನು ಮೂರ್ತರೂಪವೊಂದು ಸರಳವಾಗಿ ಹೇಳಿ ಮನವರಿಕೆ ಮಾಡಿಕೊಡುತ್ತದೆ. ಅಂದರೆ ಸ್ತಬ್ಧಚಿತ್ರಕ್ಕಿರುವ ಸಾಮರ್ಥ್ಯ ಎಂಥದ್ದು ಎಂದು ಊಹಿಸಬಹುದಲ್ಲವೇ? ಸರ್ವಾಂಗೀಣ ಬೆಳವಣಿಗೆಯಲ್ಲಿ ವ್ಯಕ್ತಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡು ಸ್ತಬ್ಧಚಿತ್ರ ರಚಿಸುವ ಕ್ರಮದಿಂದಲೆ ಹೆಚ್ಚು ಉಪಯುಕ್ತತೆಯನ್ನು ಪಡೆಯುತ್ತದೆ.

10. ದೈಹಿಕ ಶ್ರಮ ನೀಗಿಸುವ ಸ್ತಬ್ಧಚಿತ್ರ:

ಸ್ತಬ್ಧಚಿತ್ರ ಕಲಿಕೆಯಿಂದ ನಮ್ಮ ದೈಹಿಕ ಶ್ರಮವನ್ನು ನೀಗುವುದು. ಇದು ಸಾಧ್ಯವೇ? ಹೌದು ಇದು ಅಧ್ಯಯನದಿಂದ ರುಜುವಾಗಿದೆ. ಸ್ತಬ್ಧ ಚಿತ್ರಕ್ಕೆ ಸಂಜೀವಿನಿಯಂಥ ಶಕ್ತಿಯಿದೆ. ವ್ಯಕ್ತಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡು ಸ್ತಬ್ಧಚಿತ್ರ ರಚಿಸಿದರೆ ಮಾತ್ರ. ಇಂಥದೊಂದು ಚಮತ್ಕಾರ ಸಾಧ್ಯವೆನ್ನುವುದು ಗಮನದಲ್ಲಿರಲಿ. ಪಾಶ್ಯಾತ್ಯರಲ್ಲಿ ಸ್ತಬ್ಧಚಿತ್ರದ ಮೂಲಕ ಆರೋಗ್ಯ ಸುಧಾರಣೆ ಮಾಡಿದ ಉದಾಹರಣೆಗಳಿವೆ. ನಮ್ಮಲ್ಲಿಯೂ ಇಂಥ ಪ್ರಯೋಗವನ್ನು ಮಾಡಿದ ಗಣ್ಯರಿದ್ದಾರೆ.

11. ಏಕಾಗ್ರತೆ ಹೆಚ್ಚಿಸುವ ಸ್ತಬ್ಧಚಿತ್ರ ರಚನೆ:

ನಮ್ಮ ಪೂರ್ವಿಕರಲ್ಲಿ ತಪಸ್ವಿಗಳು ಹತ್ತಾರು ವರ್ಷಗಳ ಕಾಲ ಏಕಾಂತವಾದ ಸ್ಥಳಗಳಲ್ಲಿ ಕುಳಿತು ತಪಸ್ಸನ್ನು ಆಚರಿಸಿ ವಿಶೇಷವಾದ ಶಕ್ತಿಯನ್ನು ಪಡೆದು ಸಮಾಜದ ಉದ್ಧಾರಕ್ಕೆ ಮುಂದಾಗುತ್ತಿದ್ದರು ಎಂಬುದನ್ನು ನಾವು ಕೇಳಿದ್ದೇವೆ, ಓದಿದ್ದೇವೆ. ಈ ಏಕಾಗ್ರತೆ ಎನ್ನುವುದು ಸುಲಭ ಲಭ್ಯವಾಗುವಂಥದಲ್ಲ. ಅದಕ್ಕೆಂದೆ ಅದರ ಲಭ್ಯತೆಗಾಗಿ ಕೆಲಕಸರತ್ತುಗಳನ್ನು ನಾವು ಮಾಡಿದರೇನೇ ಸರಿ. ಅದು ಸ್ತಬ್ಧಚಿತ್ರ ರಚನೆಯಿಂದಲೂ ಸಾಧ್ಯ.

12. ಸ್ತಬ್ಧಚಿತ್ರ ರಚನೆಯಿಂದ ಸುಂದರ ಸಮಾಜ:

ಸ್ತಬ್ಧಚಿತ್ರ ಕಲೆಯಿಂದ 'ಸುಂದರ ಸಮಾಜ' ಎಂದು ಭಾವನ ಜೀವಿಯೊಬ್ಬ ಹೇಳಬಹುದಾದ ನುಡಿ ಎನಿಸಿದರೆ ತಪ್ಪೇನೂ ಇಲ್ಲ. ಏಕೆಂದರೆ ಬದುಕು ಸುಂದರವಾಗಿರಬೇಕು. ರೋಚಕವಾಗಿರಬೇಕು, ಸಂತಸದಾಯಕ ವಾಗಿರಬೇಕು. ಭಾವನಾತ್ಮಕವಾಗಿರಬೇಕು. ವೈವಿಧ್ಯಮಯವಾಗಿರಬೇಕು. ಇನ್ನೂ ಏನೆಲ್ಲ ಆಗಿರಬೇಕು. ಅದರಿಂದಲೇ ಬದುಕು ಸುಂದರ ಅನಿಸಿಕೊಳ್ಳುವುದು.

ವ್ಯಕ್ತಿಗೆ ಏಕಾಗ್ರತೆಯನ್ನು ತಂದು ಕೊಡುವ ಸ್ತಬ್ಧಚಿತ್ರ ರಚನಾ ಕಲೆಯು ಸಂತಸವನ್ನು ಭಾವನೆಗಳ ವಿಸ್ತಾರತೆಯನ್ನು, ನೈಜಾಸಕ್ತಿಯನ್ನು, ಕಲಿಯುವ, ತಿಳಿಯುವ ಕುತೂಹಲದ ಜೊತೆಯಲ್ಲಿ ಪ್ರಯೋಗಾತ್ಮಕ ಗುಣವನ್ನು ಸಹ ಸ್ತಬ್ಧಚಿತ್ರಕಲೆಯು ವ್ಯಕ್ತಿಗೆ ತಂದು ಕೊಡುತ್ತದೆ ಎಂದರೆ ಸುಂದರ ಸಮಾಜ ಸ್ತಬ್ಧಚಿತ್ರಕಲೆಯಿಂದ ಸಾಧ್ಯವೆಂದು ಅನ್ನಿಸುತ್ತದೆಯಲ್ಲವೆ?

ಸುಂದರ ಸಮಾಜವು ಸುಂದರ ಮನಸ್ಸಿನಿಂದ ರೂಪು ಪಡೆಯುವಂಥದ್ದು. ವಿಕೃತ ಮನಸ್ಸಿನವರಿಂದ ಎಂದಿಗೂ ಸುಂದರ ಸಮಾಜವು ನಿರ್ಮಾಣವಾಗುವುದಿಲ್ಲ. ಒಬ್ಬ ವ್ಯಕ್ತಿ ಭಾವನೆಗಳನ್ನು ನೈಜವಾಗಿ ಅನುಭವಿಸಿ ಅಭಿವ್ಯಕ್ತಿಸುತ್ತಾನೆ. ಯೋಚಿಸುವ ವ್ಯಕ್ತಿಯ ಮನದ ಮಟ್ಟದ, ಅನುಭವ, ಸಮಾಜ, ಸಂಸ್ಕೃತಿಯ ಬಗೆಗಿರುವ ಗೌರವ ಆ ಸುಂದರತೆಯನ್ನು ಪಡೆದುಕೊಳ್ಳುತ್ತದೆ. ಸ್ತಬ್ಧಚಿತ್ರ ಕಲೆ ಎಲ್ಲಿ ವೈಭವವನ್ನು ಮಾನ್ಯತೆಯನ್ನು ಪಡೆದಿರುತ್ತದೋ ಅಲ್ಲಿ ಒಂದು ಸಂಸ್ಕೃತಿ ಸಂಸ್ಕಾರವು ಅಡಗಿದ್ದು ಸುಂದರ ಸಮಾಜಕ್ಕೆ ಕಾರಣವಾಗಿರುತ್ತದೆ.

ನಾವು ಮಾಡಿದರೇನೆ ಅದು ನಮಗೆ ಕರಗತವಾಗುವುದು, ಸಿಗುವುದು. ಆ ಏಕಾಗ್ರತಯಲ್ಲೆ ಒಬ್ಬ ವ್ಯಕ್ತಿಯ ಭವಿಷ್ಯವು ಅಡಗಿದ್ದು, ಅದು ಅವನನ್ನು ಅತ್ಯಂತ ಉತ್ತುಂಗಕ್ಕೆ ಕರೆದೊಯ್ಯುತ್ತದೆ. ಇಲ್ಲವೆಂದರೆ ಅದು ಅಧಃಪತನ ಸ್ತಬ್ಧಚಿತ್ರ ರಚನೆಯಿಂದ ಏಕಾಗ್ರತೆ ಹೆಚ್ಚುತ್ತದೆ.

13. ಸ್ತಬ್ಧಚಿತ್ರ ಮತ್ತು ಕೌಶಲ:

ಸ್ತಬ್ಧಚಿತ್ರ ಮೂಲಕವೇ ಕೈಕೌಶಲವನ್ನು ಪಡೆಯುವುದು, ವ್ಯಕ್ತಿಯು ತಾನು ರಚಿಸುವ ಸ್ತಬ್ಧಚಿತ್ರದ ಆಕಾರ, ಪ್ರಮಾಣ ಬದ್ಧತೆ ಹಾಗೂ ದೂರ ಹತ್ತಿರಗಳನ್ನು ಸ್ತಬ್ಧಚಿತ್ರ ರಚನೆಯ ಕೌಶಲದಿಂದ ನೈಜತೆಯ ಬಗ್ಗೆ ತಿಳಿದುಕೊಳ್ಳುತ್ತಾರೆ.

14. ಸ್ತಬ್ಧಚಿತ್ರ ಮತ್ತು ಸಂಸ್ಕೃತಿ:

ಸ್ತಬ್ಧಚಿತ್ರ ಮತ್ತು ಸಂಸ್ಕೃತಿಗೆ ಎಂಥ ನಂಟು ಎಂದು ಅನಿಸಿದರೆ ಗತಕಾಲದ ಇತಿಹಾಸವನ್ನು ಆಗಿನ ಕಾಲದ ಸ್ತಬ್ಧಚಿತ್ರಕಲೆಯಿಂದ ತಿಳಿಯ ಬಹುದು. ಆದಿ ಮಾನವನಿಂದ ಹಿಡಿದು ಇಂದಿನ ಪೀಳಿಗೆಯವರೂ ಸಹ ತಮ್ಮ ಎಲ್ಲ ಇಷ್ಟಗಳು ಲಭ್ಯವಾದ ಮರುಕ್ಷಣ, ಸ್ತಬ್ಧಚಿತ್ರಕಲೆ ಅಧ್ಯಯನ ಮಾಡುತ್ತ ಆನಂದ ಪಡುವುದನ್ನು ನಾವು ಕಾಣಬಹುದು.

ಪ್ರಪಂಚದ ಯಾವ ದೇಶದಲ್ಲಿಯೇ ಆಗಲಿ ಸ್ತಬ್ಧಚಿತ್ರ ಸಂಸ್ಕೃತಿಯ ಪ್ರತೀಕವಾಗಿ ರುವುದನ್ನು ನಾವು ಗಮನಿಸಬಹುದಾಗಿದೆ. ಹಾಗೆ ದೇಶದ ಪ್ರಗತಿಯಲ್ಲಿ ಕಲೆಯ ಪಾತ್ರವಿದೆ. ಪ್ರತಿ ವ್ಯಕ್ತಿಯ ಮಾನಸಿಕ ಆರೋಗ್ಯ ಸಹ ಕಲೆಯನ್ನು ಅವಲಂಬಿಸಿದೆ ಎಂದರೆ ತಪ್ಪಾಗದು. ಇಂದು ಭಾರತದ ಸಂಸ್ಕೃತಿಯನ್ನು ವಿಶ್ವವೇ ಮೆಚ್ಚಿಕೊಂಡಾಡುತ್ತದೆ.

15. ಪ್ರಚಾರ ಅನ್ವಯ ಕಲೆಯಾಗಿ ಸ್ತಬ್ಧಚಿತ್ರ:

ಜಾಹಿರಾತು ಎಂದರೆ ಗ್ರಾಹಕರಿಗಾಗಿ ವ್ಯವಹಾರ, ಅಭಿಪ್ರಾಯ ಅಥವಾ ಕಲ್ಪನೆಯನ್ನು ಪ್ರಚಾರ ಮಾಡುವ ವಿವಿಧ ವಿಧಾನಗಳ ಬಳಕೆಯ ಜಾಹಿರಾತು.

ಜಾಹಿರಾತಿನ ಮುಖ್ಯ ಉದ್ದೇಶ ವ್ಯಾಪಾರೋದ್ಯಮ ಜಾಹಿರಾತಿನ ಮಾಹಿತಿಯ ಅಥವಾ ಪ್ರಚಾರದ ವಿಷಯದ ಮುಖ್ಯ ಉದ್ದೇಶವೆಂದರೆ, ಓದುಗರು, ಕೇಳುಗರು ಅಥವಾ ವೀಕ್ಷಕರ ಗಮನವನ್ನು ತನ್ನ ಕಾರ್ಯದೆಡೆಗೆ ಉದಾಹರಣೆ ಉತ್ಪನ್ನವನ್ನು ಕೊಂಡುಕೊಳ್ಳಲು ಅಥವಾ ತನ್ನೆಡೆಗೆ ದೃಷ್ಟಿಕೋನವನ್ನು ಅನುಮೋದಿಸಲು ಸೆಳೆಯುವುದಾಗಿದೆ.

ಸ್ತಬ್ಧಚಿತ್ರವು ಕೇವಲ ಅಭಿವ್ಯಕ್ತಿ ಮಾಧ್ಯಮಕ್ಕೆ ಸೀಮಿತವಾಗಿರದೆ ಪ್ರಚಾರ ವಾಣಿಜೋದ್ಯ ಮದಲ್ಲಿ ಅನ್ವಯಕ್ಕೆ ಕಲೆಯಾಗಿ ಬಳಕೆಯಾಗುತ್ತಿದೆ. ಅಕ್ಷರಗಳ ಅವಿಷ್ಕಾರದಿಂದ ಹೆಚ್ಚು ಪ್ರಾಬಲ್ಯಗಳಿ ಸಿಕೊಂಡ ಅನ್ವಯ ಕಲೆ ಹಲವು ಹೊಸ ಹೊಸ ಆಯಾಮಗಳನ್ನು ಬಳಸಿಕೊಂಡು ಪ್ರಸ್ತುತ ವಿಶ್ವಾಸನೀಯವಾದ ಸಂಪರ್ಕ ಮಾಧ್ಯಮವಾಗಿ ಬೆಳೆಯತ್ತಿದೆ.

ವಿದ್ಯಾವಂತ, ಅವಿದ್ಯಾವಂತರಿಗೂ ಸಹ ಸರಳವಾಗಿ ವಿಷಯ ತಿಳಿಯಬಲ್ಲ ಈ ಮಾಧ್ಯಮವನ್ನು ನಾವು ಕಾಣಬಹುದು. ಪುರಾಣ ಪುಣ್ಯಕಥೆಗಳ ಕಲೆ ಸಾಹಿತ್ಯವನ್ನು ನಿಯತಕಾಲಿಕೆಗಳ ಕಥಾರೂಪ ಚಿತ್ರಗಳು ಅನೇಕ ಓದುಗರನ್ನು ಆಕರ್ಷಿಸಿ ವಿಷಯ ಸರಳವಾಗಿ ಸಂಗ್ರಹಿಸುವಲ್ಲಿ ಸಹಕಾರಿ ಆಗಿದೆ.

ಧರ್ಮ ಪ್ರಸಾರದಲ್ಲಿ, ಅಭಿವ್ಯಕ್ತಿಯಲ್ಲಿ, ವಾಣಿಜ್ಯ ಪ್ರಚಾರದಲ್ಲಿ ವಿವಿಧ ಕ್ಷೇತ್ರಗಳಿಗೂ ಆವರಿಸಿ ವಿಶಾಲವಾಗಿ ಅತ್ಯುತ್ತಮ ಮಾಧ್ಯಮವಾಗಿ ಬೆಳೆಯುತ್ತಿದೆ. ಕಲಾತ್ಮಕತೆಯ ಮೂಲಕ ಬದುಕನ್ನು ಸುಂದರಗೊಳಿಸುತ್ತಿದೆ. ಪ್ರಪಂಚದ ಅರಿಯುವಿಕೆಯನ್ನು ಸುಲಭೀಕರಿಸುತ್ತಿದೆ.

ಪ್ರಚಾರ ಅಥವಾ ವ್ಯಾಪಾರಕ್ಕಾಗಿ ಕಲೆಯನ್ನು ಅನೇಕ ಬಾರಿ ಪ್ರಚಾರದ ಮಾಧ್ಯಮವಾಗಿ ಬಳಸಲಾಗುತ್ತದೆ. ಹೀಗಾಗಿ ಕಲೆಯನ್ನು ಜನಪ್ರಿಯ ಆಲೋಚನೆ ಅಥವಾ ಮನೋಭಾವನೆಗಳ ಮೇಲೆ ಪ್ರಭಾವ ಬೀರಬಹುದು. ಇದೇ ರೀತಿಯಲ್ಲಿ ಒಂದು ವಸ್ತುವನ್ನು ಮಾರಾಟಮಾಡಲು ಕಲೆಯನ್ನು ಬಳಸುವುದು ಕೂಡಾ ಮನೋಭಾವನೆ ಮತ್ತು ಭಾವದ ಮೇಲೆ ಪ್ರಭಾವ ಬೀರಬಹುದು. ಈ ಎರಡು ಸಂದರ್ಭದಲ್ಲಿಯೂ ಕಲೆಯ ಉದ್ದೇಶ ಒಂದು ನಿರ್ದಿಷ್ಟ ಕಲ್ಪನೆ ಅಥವಾ ವಸ್ತುವಿನ ಕಡೆಗೆ ಒಬ್ಬನ ಭಾವನೆಯನ್ನು ಸೂಕ್ಷ್ಮವಾಗಿ ಕೆರಳುವುದಾಗಿರುತ್ತದೆ.

16.ಅಭಿವ್ಯಕ್ತಿ ಮಾಧ್ಯಮವಾಗಿ ಸ್ತಬ್ಧಚಿತ್ರ:

ಅಭಿವ್ಯಕ್ತಿ ಮಾಧ್ಯಮದಲ್ಲಿ ಪ್ರಮುಖವಾಗಿ ಭಾವನೆ ಅನಿಸಿಕೆ, ಆಲೋಚನೆಗಳಿಗೆ ವಿಶಿಷ್ಟ ರೂಪ ನೀಡುವಲ್ಲಿ ಸ್ತಬ್ಧಚಿತ್ರ ಪ್ರಧಾನ ಪಾತ್ರವಹಿಸಿದೆ. ಭಾವನೆಗಳಿಗೆ ಜೀವ ತುಂಬುವ ಕೆಲಸ ಸ್ತಬ್ಧಚಿತ್ರಗಳಿಂದ ಸಾಧ್ಯ. ಧಾರ್ಮಿಕ ಮತ್ತು ರಾಜರ ಬಳಕೆಗೆ ನೆರವಾದ ಕಲೆ ಭಾಗಶಃ ಲಿಯೋನಾರ್ಡೋದ ವಿಂಚಿಯ ಮೊನಲಿಸಾ ಕೃತಿಯೊಂದಿಗೆ ಅಭಿವ್ಯಕ್ತಿಯ ರಂಗಕ್ಕೆ ಕಾಲಿಟ್ಟಿತ್ತು. ಸ್ತಬ್ಧ ಚಿತ್ರವು ವಾಸ್ತವಿಕತೆಯಾಗಲಿ, ಕಾಲ್ಪನಿಕವಾಗಲಿ, ವೈಭವೀಕತೆಯಾಗಲಿ, ವೀಕ್ಷಕರನ್ನು ಆಕರ್ಷಿಸುವುದಕ್ಕಾಗಿ ಚಿಂತನ-ಮಂಥನಗಳಲ್ಲಿ ತೊಡಗಲು, ತೊಡಗಿಸಲು ಇಂದು ಉತ್ತಮ ಮಾಧ್ಯಮವಾಗಿ ಬೆಳೆದು ನಿಂತಿದೆ.

ಮನುಷ್ಯ ಕೇಳದ್ದಕ್ಕಿಂತ ನೋಡಿದ್ದನ್ನು ಹೆಚ್ಚು ನಂಬುವನು, ಮತ್ತೆ ನೋಡಿದಕ್ಕಿಂತ ಮಾಡಿದ್ದನ್ನು ಇನ್ನೂ ಹೆಚ್ಚು ನಂಬುತ್ತಾನೆ. ಒಂದು ಅದ್ಭುತ ಕೃತಿ, ಒಂದು ಅದ್ಭುತವಾದ, ಸೂಕ್ತ ಸ್ಥಳದಲ್ಲೆ ನಿರ್ಮಿಸಲ್ಪಡುತ್ತದೆ ಎಂಬುದು ಸುಳ್ಳಲ್ಲ. ಭಾವನಾಭಿವ್ಯಕ್ತಿಗೆ ಪರಿಕರವು ಅತ್ಯವಶ್ಯಕ.

17. ಸ್ತಬ್ಧಚಿತ್ರ ರಚನೆಯ ಆಧುನಿಕ ಪರಿಕಲ್ಪನೆ:

ಆಧುನಿಕ ಕಲಾವಿದರ ದೃಷ್ಟಿಯಲ್ಲಿ ಸ್ತಬ್ಧಚಿತ್ರವು ಕೇವಲ ನಿಸರ್ಗದ ಪ್ರತಿರೂಪ ಎಂದು ಅಭಿಪ್ರಾಯಪಡುತ್ತಾರೆ. ಏಕೆಂದರೆ ಸ್ತಬ್ಧಚಿತ್ರ ಕಲಾವಿದರು ನಿಸರ್ಗದ ಯಾವದೇ ವಸ್ತುಗಳನ್ನು ಅವು ಇರುವಂತೆಯೇ ಚಿತ್ರಿಸಲು ಬಯಸುವುದಿಲ್ಲ. ಬದಲಿಗೆ ಅಲ್ಲಿರುವುದರಲ್ಲಿ ತನಗೆ ಬೇಕಾದ ವಸ್ತು-ಸಂಗತಿಯನ್ನು ಆರಿಸಿ ಆಕರ್ಷಕವಾಗುವ ರೀತಿಯಲ್ಲಿ ಮತ್ತೇ ಜೋಡಿಸಿರುತ್ತಾನೆ. ಕೆಲವೊಮ್ಮೆ ವಸ್ತುವನ್ನು ಇರುವುದಕ್ಕಿಂತ ಆಕರ್ಷಕವಾಗಿಯೇ ಅಥವಾ ಭಯಾನಕವಾಗಿ ಆಗಾಧವಾಗಿಯು ಸ್ತಬ್ಧಚಿತ್ರ ರಚಿಸಿರುತ್ತಾರೆ. ಒಂದು ವಸ್ತು ಸನ್ನಿವೇಶ ದೃಶ್ಯಗಳನ್ನು ಕಲ್ಪನಾಶಕ್ತಿಗೆ ನಿಲುಕದ ರೀತಿಯಲ್ಲಿ ಚಿತ್ರಿಸಲ್ಪಡುವುದು.

ಸ್ತಬ್ಧಚಿತ್ರ ರಚನಾ ಕಲೆಯು ವಿಜ್ಞಾನ, ಗಣಿತಗಳಂತೆ ಬುದ್ಧಿಗಷ್ಟೇ ಸೀಮಿತವಾದುದಲ್ಲಿ ಮುಖ್ಯವಾಗಿ ಮನುಷ್ಯನ ಭಾವನೆಗೆ ಸಂಬಂಧಿಸಿದ್ದು, ಮಾನವನ ಮಾನಸಿಕ ಪ್ರವೃತ್ತಿಗಳಲ್ಲಿನ ಇಚ್ಚೆಗೆ ಸಂಬಂಧಿಸಿದ್ದು, ಅಭಿಪ್ರಾಯಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಹಾಗೂ ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಅದೇ ರೀತಿ ಸ್ತಬ್ಧಚಿತ್ರಗಳಲ್ಲಿ ಆಧುನಿಕತೆಯ ಪರಿಕಲ್ಪನೆ ಇರುವುದು ಅವಶ್ಯಕ.

ನಮ್ಮ ಕಲೆ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಪರಂಪರೆಯನ್ನು ಮಾನವ ಮುಂದಿನ ಜನಾಂಗಕ್ಕೆ ವರ್ಗಾಯಿಸುವನು.

ನಮ್ಮ ಭಾರತೀಯ ವೈವಿಧ್ಯಮಯ ಸಂಸ್ಕೃತಿಯ ಆಚಾರಕರು. ಈ ಸಂಸ್ಕೃತಿ ವಿವಿಧ ಜನಾಂಗಕ್ಕೆ ಪೂರಕವಾಗಿ ಪ್ರಾದೇಶಿಕತೆಗೆ ಪೂರಕವಾಗಿ ಭಾಷೆಗೆ ಅನುಗುಣವಾಗಿ ಧರ್ಮಕ್ಕನುಗುಣವಾಗಿರುತ್ತದೆ. ಆದರೂ ನಮ್ಮೆಲ್ಲರಲ್ಲೂ ಭಾರತೀಯ ಸಂಸ್ಕೃತಿಯ ಅಂಶ ಅಡಕವಾಗಿರುತ್ತದೆ. ಈ ಅಂಶದ ಬೆಳವಣಿಗೆಗೆ ಸ್ತಬ್ಧಚಿತ್ರ ಸಹಕಾರಿಯಾಗಿದೆ. ಜೊತೆ ಜೊತೆಗೆ ಸಂಸ್ಕೃತಿಯನ್ನು ರಕ್ಷಿಸುತ್ತಾ, ಪೋಷಿಸುತ್ತಾ ಮುಂದಿನ ಪೀಳಿಗೆಗೆ ಕೊಂಡೊಯ್ಯಬೇಕು. ಭಾರತೀಯ ಸಮಸ್ಕೃತಿಯ ಬೆಳವಣಿಗೆ ರಾಷ್ಟ್ರಿಯ ಭಾವೈಕ್ಯತೆಗೆ ಸ್ತಬ್ಧಚಿತ್ರ ರಚನೆ ಪ್ರದರ್ಶನ ತುಂಬ ಸಹಕಾರಿಯಾಗಿದೆ.

ಸರ್ವಧರ್ಮ ಸಮನ್ವಯ ಕಾರ್ಯಕ್ರಮಗಳ ಆಚರಣೆಗೆ ಸಂಬಂಧಪಟ್ಟ ಸ್ತಬ್ಧಚಿತ್ರಗಳಿಂದ ವೈವಿಧ್ಯತೆಯಲ್ಲಿ ಏಕತೆಯನ್ನು ತರಲು ಭಾವೈಕ್ಯತೆಯನ್ನು ವೃದ್ಧಿಸಲು ನಾವೆಲ್ಲ ಭಾರತೀಯರು ಎನ್ನುವ ಭಾವೈಕ್ಯದಂಶ ವೃದ್ಧಿಯಾಗಲು ಸ್ತಬ್ಧಚಿತ್ರವು ಸಹಕಾರಿಯಾಗಿದೆ.

ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ತ್ಯಾಗ ಮನೋಭಾವ ಬೆಳೆಯಲು ಸ್ತಬ್ಧಚಿತ್ರಗಳು ಪ್ರಮುಖ ಪಾತ್ರವಹಿಸುತ್ತವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಂತಹ ದಾದಾಬಾಯಿನವರೋಜಿ, ಗೋಪಾಲಕೃಷ್ಣ ಗೋಖಲೆ, ಬಾಲಗಂಗಾಧರತಿಲಕ, ಮಹಾತ್ಮಗಾಂಧಿ, ಭಗತ್‌ಸಿಂಗ್ ಇಂತಹ ಮಹಾನ್ ನಾಯಕರ ಸ್ತಬ್ಧಚಿತ್ರಗಳನ್ನು ವೀಕ್ಷಿಸುವುದರಿಂದ ರಾಷ್ಟ್ರಪ್ರೇಮ, ರಾಷ್ಟ್ರಭಕ್ತಿ, ತ್ಯಾಗ ಮನೋಭಾವದ ಜೀವನವನ್ನು ಯುವಜನತೆಯು ಅರಿತು ರಾಷ್ಟ್ರದ ಏಳಿಗೆಗೆ ಶ್ರಮಿಸುತ್ತಾ ರಾಷ್ಟ್ರೀಯ ಭಾವೈಕ್ಯತೆಯ ಬೆಳವಣಿಗೆಗೆ ಸಹಕಾರಿಯಾಗುತ್ತದೆ.

ಪ್ರತಿಯೊಬ್ಬ ಪ್ರಜೆಯಲ್ಲಿಯೂ 'ನಾನು' ಎನ್ನುವ ಭಾವನೆಯ ಬದಲು 'ನಾವು' ಎನ್ನುವ ಭಾವನೆಯನ್ನು ಬೆಳೆಸುತ್ತದೆ. ರಾಷ್ಟ್ರೀಯ ಹಬ್ಬಗಳ ಆಚರಣೆ, ಆಚರಣೆಯ ಮಹತ್ವ ಹಿನ್ನೆಲೆಯನ್ನು ತಿಳಿಯಲು ಸಹಕಾರಿಯಾಗುತ್ತದೆ. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಗಾಂಧಿಜಯಂತಿ ಇಂತಹ ರಾಷ್ಟ್ರೀಯ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಸ್ತಬ್ಧಚಿತ್ರಗಳು ಪ್ರಮುಖ ಪಾತ್ರವಹಿಸುತ್ತವೆ.

ಅದರಲ್ಲೂ ಶಾಲಾ ವಿದ್ಯಾರ್ಥಿಗಳಲ್ಲಿ, ಯುವ ಜನತೆಯಲ್ಲಿ ಚಿಂತಕರಾಗಿ ರೂಪಿಸಿ ರಾಷ್ಟ್ರೀಯ ಭಾವೈಕ್ಯತೆಗೆ ಪ್ರಚೋಧಿಸಿ, ವೈಜ್ಞಾನಿಕ ಮನೋಭಾವ ಬೆಳೆಸಿ, ಆಧ್ಯಾತ್ಮಿಕ ಮತ್ತು ಮಾನಸಿಕ ಸ್ವಾತಂತ್ರ್ಯವಾದ ಸಂವಿಧಾನದ ಸಾಮಾಜಿಕ, ಜಾತ್ಯಾತೀತ ಪ್ರಜಾಪ್ರಭುತ್ವದ ಧ್ಯೇಯಗಳ ಸಾಧನೆಗೆ ಅವಕಾಶ ಮಾಡಿಕೊಡುತ್ತದೆ.

ಸ್ತಬ್ಧಚಿತ್ರದಿಂದ ಮಾನವ ತನ್ನ ಪ್ರಾಯೋಗಿಕ ಜ್ಞಾನ ಸಂಪಾದನೆಯೊಂದೇ ಉದ್ದೇಶವಾಗಿರದೆ ಜೀವನದಲ್ಲಿ ಸುಖಮಯವಾದ ಮತ್ತು ವ್ಯಕ್ತಿ ಪರಿಪೂರ್ಣತೆಯ ಸಾಧನೆಗೆ ಮೈಲುಗಲ್ಲಾಗಿದೆ. ಮಾನವನನ್ನು ಆದರ್ಶ ಮತ್ತು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುತ್ತದೆ. ಪ್ರಕೃತಿ ನಡುವೆ ಮಾನವನ ಸೃಜನ ಶೀಲತೆಗೆ ಅನುಗುಣವಾಗಿ ಮನುಷ್ಯ ಮನುಷ್ಯನನ್ನು ಪ್ರೀತಿಸುವ ಸಾಮರಸ್ಯ ಗುಣಗಳನ್ನು ಬೆಳಸುವ ಸೌಹಾರ್ದತೆ, ಸಂಯಮ, ಶಾಂತಿ, ಪ್ರೇಮ, ತಾಳ್ಮೆ ಜೀವನದ ಮೌಲ್ಯಗಳನ್ನು ಬೆಳೆಸಲು ಅನುಕೂಲಕರವಾಗಿದ್ದು ಈ ಮೂಲಕ ಸ್ತಬ್ಧಚಿತ್ರವು ಪ್ರಾಮುಖ್ಯತೆಯನ್ನು ಪಡೆದಿದೆ.

ಹೀಗೆ ಸ್ತಬ್ಧಚಿತ್ರಗಳು ತಮ್ಮದೇ ಆದಂತಹ ಅನುಕೂಲ ಮತ್ತು ಪರಿಣಾಮಗಳನ್ನು ಉಂಟುಮಾಡುತ್ತದೆ.

ಅಧ್ಯಾಯ – 3

ಸ್ತಬ್ಧಚಿತ್ರಗಳ ಬಳಕೆ ಎಲ್ಲೆಲ್ಲಿ ಇರುತ್ತದೆ

1. ದೇಶದ ರಾಜಧಾನಿ ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ ಸ್ತಬ್ಧಚಿತ್ರಗಳ ಬಳಕೆ:

ಜನವರಿ 26, 1950 ಭಾರತ ಸಂವಿಧಾನ ಜಾರಿಗೆ ಬಂದ ನೆನಪಿಗೆ ಪ್ರತಿ ವರ್ಷವು ಜನವರಿ 26 ರಂದು ನಡೆಯುವ ಗಣರಾಜ್ಯೋತ್ಸವದಲ್ಲಿ ಹಲವು ರಾಜ್ಯಗಳ ಸ್ತಬ್ಧಚಿತ್ರಗಳ ಪ್ರದರ್ಶನಗೊಳ್ಳುತ್ತದೆ. ಆಯಾಯ ರಾಜ್ಯಗಳು ನಮ್ಮ ರಾಜ್ಯದ ವಿಶೇಷತೆಗಳಿಗೆ ಸಂಬಂಧಪಟ್ಟಂತೆ ಸ್ತಬ್ಧಚಿತ್ರಕ್ಕೆ ಮಾತ್ರ ಅವಕಾಶವಿರುತ್ತದೆ. ಧಾರ್ಮಿಕ, ಸಮಾಜಿಕ, ಪಾರಂಪರಿಕ, ಸಾಂಸ್ಕೃತಿಕ ಹಿನ್ನೆಲೆಯುಳ್ಳ ಯಾವುದಾದರೊಂದು ಸ್ತಬ್ಧಚಿತ್ರವನ್ನು ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪ್ರದರ್ಶನಕ್ಕೆ ಅವಕಾಶವಿರುತ್ತದೆ.

ವಿವಿಧ ರಾಜ್ಯಗಳು ತಮ್ಮ ರಾಜ್ಯಗಳ ವಿಶೇಷತೆಯನ್ನು ವಿನಿಮಯ ಮಾಡಿಕೊಳ್ಳುತ್ತವೆ. ಇದರಿಂದ ನಮ್ಮ ಸಂಸ್ಕೃತಿ, ಧಾರ್ಮಿಕ, ಸಾಮಾಜಿಕ ವಿಭಿನ್ನತೆಯನ್ನು ಬೇರೆಯವರು ತಿಳಿಯಲು ಸಹಕಾರಿಯಾಗುತ್ತದೆ. ಪ್ರತಿ ವರ್ಷ ಉತ್ತಮವಾಗಿ ಪಥಸಂಚಲನದಲ್ಲಿ ಪ್ರದರ್ಶನಗೊಂಡ ಸ್ತಬ್ಧಚಿತ್ರಕ್ಕೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಪ್ರಶಸ್ತಿ ಪಡೆಯುವುದು ಸಹ ಆಯಾಯ ರಾಜ್ಯಗಳಿಗೆ ಹೆಮ್ಮೆಯ ವಿಷಯವು ಹೌದು.

2. ಕನ್ನಡ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಸ್ತಬ್ಧಚಿತ್ರಗಳ ಬಳಕೆ:

ಪ್ರತಿ ವರ್ಷ ನವೆಂಬರ್ 1ನೇ ತಾರೀಖು ಕರ್ನಾಟಕದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. ಈ ಸಂದರ್ಭದಲ್ಲಿ ಕನ್ನಡದ ನೆಲ, ಜಲ, ಭಾಷೆಗೆ ಸಂಬಂಧಪಟ್ಟಂತೆ ಅರಿವನ್ನು ಮೂಡಿಸಲು ಸ್ತಬ್ಧಚಿತ್ರಗಳನ್ನು ಬಳಸಿಕೊಳ್ಳುತ್ತೇವೆ.

ಕನ್ನಡ ತೇರು ಎಂದು ಈ ಸ್ತಬ್ಧಚಿತ್ರವನ್ನು ಕರೆದು ಭುವನೇಶ್ವರಿ ದೇವಿಯ ಪ್ರತಿಮೆ ನಿರ್ಮಾಣ ಮಾಡಿ ಅದರಲ್ಲಿ ಕನ್ನಡ ಸಾಹಿತ್ಯಕ್ಕಾಗಿ ದುಡಿದ ಕವಿಗಳ ಕಾದಂಬರಿಕಾರರ ಚಿತ್ರಪಟಗಳನ್ನು ಅಂಟಿಸಿ ಸ್ತಬ್ಧಚಿತ್ರ ನಿರ್ಮಾಣ ಮಾಡಿರಲಾಗಿರುತ್ತದೆ.

ಕನ್ನಡ ನಾಡಿನ ಹಿರಿಮೆಯನ್ನು ಸಾರಲು ಈ ಸ್ತಬ್ಧಚಿತ್ರ ತುಂಬ ಅವಶ್ಯಕ. ಇದರಿಂದ ಜನರಿಗೆ ತಮ್ಮ ನಾಡಿನ ಹಿರಿಮೆ ತಿಳಿಯಲು ಭಾಷಾಭಿಮಾನ ಹೆಚ್ಚಲು ಸಹಕಾರಿಯಾಗುತ್ತದೆ. ಕನ್ನಡ ರಾಜ್ಯೋತ್ಸವವನ್ನು ಜಾತಿ ಭೇದ ಭಾವವಿಲ್ಲದೆ ಆಚರಿಸುತ್ತಾರೆ.

3. ಜಯಂತಿಗಳ ಆಚರಣೆಯ ಸಂದರ್ಭಗಳಲ್ಲಿ ಸ್ತಬ್ಧಚಿತ್ರಗಳ ಬಳಕೆ:

ರಾಷ್ಟ್ರೀಯ ಹಬ್ಬಗಳಲ್ಲಿ ಸ್ತಬ್ಧಚಿತ್ರಗಳನ್ನು ಬಳಸಿದಂತೆ ಸಮಾಜ ಸುಧಾರಕರ, ಶರಣರ, ಸಾಹಿತಿಗಳ ಜಯಂತಿಯನ್ನು ಆಚರಿಸುವ ಸಂದರ್ಭದಲ್ಲಿ ಸ್ತಬ್ಧಚಿತ್ರಗಳನ್ನು ಬಳಸುತ್ತೇವೆ. ಉದಾಹರಣೆಗೆ: ಅಂಬೇಡ್ಕರ್ ಜಯಂತಿ, ಗಾಂಧೀಜಯಂತಿ, ಬಸವಜಯಂತಿ, ಕನಕಜಯಂತಿ ಬುದ್ಧಜಯಂತಿ, ಸಂಗೊಳ್ಳಿರಾಯಣ್ಣ ಜಯಂತಿ, ಕೆಂಪೇಗೌಡ ಜಯಂತಿ ಇನ್ನೂ ಮುಂತಾದ ಜಯಂತಿಗಳಲ್ಲಿ ಸ್ತಬ್ಧಚಿತ್ರಗಳನ್ನು ಬಳಸುತ್ತೇವೆ.

ಸಮಾಜ ಸುಧಾಕರ, ಶರಣರ ಸಾಹಿತಿಗಳ ಪ್ರತಿಮೆಗಳನ್ನು ನಿರ್ಮಿಸಿಕೊಂಡು ಅವರ ಸಾಧನೆಗಳನ್ನು ಬಿಂಬಿಸುವ ಭಿತ್ತಿ ಪತ್ರಗಳನ್ನು ಕುದುರೆ ಸಾರೋಟನ ಮೇಲೋ, ಲಾರಿಯ ಮೇಲೋ ಒಟ್ಟಿನಲ್ಲಿ ಅವರ ಅನುಕೂಲಕ್ಕೆ ತಕ್ಕಂತೆ ವಿವಿಧ ವಾಹನಗಳನ್ನು ಬಳಸಿಕೊಂಡು ಸ್ತಬ್ಧಚಿತ್ರ ನಿರ್ಮಾಣ ಮಾಡಿ ಪ್ರದರ್ಶಿಸಲಾಗುತ್ತದೆ.

ಇದರಿಂದ ಸಮಾಜ ಸುಧಾರಕರ, ಶರಣರ, ಸಾಹಿತಿಗಳ ಪರಿಚಯ ಉಂಟಾಗುತ್ತದೆ. ಅವರ ಜೀವನ ಚರಿತ್ರೆ, ಸಾಧನೆಗಳನ್ನು ಅರಿಯಲು ಸ್ತಬ್ಧಚಿತ್ರವು ನೆರವಾಗುತ್ತದೆ.

4. ಚಲನ ಚಿತ್ರಗಳ ಪ್ರಚಾರದಲ್ಲಿ ಸ್ತಬ್ಧಚಿತ್ರಗಳನ್ನು ಬಳಸಲಾಗುತ್ತದೆ:

ಈ ಹಿಂದೆ ಸೈಕಲ್ ಮೇಲೆ ಒಂದು ಚಿಕ್ಕ ಅಳತೆಯ ಪೋಸ್ಟರನ್ನು ಕಟ್ಟಿಕೊಂಡು ಪ್ರಚಾರ ಮಾಡುತ್ತಿದ್ದರು. ಆದರೆ ಈಗ ದೊಡ್ಡ ದೊಡ್ಡ ವಾಹನಗಳನ್ನು ಬಳಸಿಕೊಂಡು ಸಿನಿಮಾದ ಪೋಸ್ಟರ್, ನಾಯಕ ನಟರ ಭಾವಚಿತ್ರ, ನಕ್ಷತ್ರಾಕಾರದ ಚಿತ್ರಗಳನ್ನು ಬಳಸಿಕೊಂಡು ಚಿತ್ರದ ಪ್ರಚಾರ ಮಾಡುತ್ತಾರೆ.

5. ಮಠ, ಮಂದಿರಗಳಲ್ಲಿ ನಡೆಯುವ ಜಾತ್ರೆ, ಉತ್ಸವಗಳಲ್ಲಿ ಸ್ತಬ್ಧಚಿತ್ರಗಳ ಬಳಕೆ:

ಹಲವು ಮಠ, ಮಂದಿರಗಳಲ್ಲಿ ಜಾತ್ರಾ ಉತ್ಸವ ಸಂದರ್ಭಗಳಲ್ಲಿ ಸ್ತಬ್ಧಚಿತ್ರಗಳನ್ನು ಬಳಸಿಕೊಂಡು ಮಠದ ಸಾಧನೆಗಳು ಕಾರ್ಯಕ್ರಮಗಳನ್ನು ಪ್ರದರ್ಶನ ಮಾಡಲಾಗುತ್ತದೆ. ಇದರಿಂದ ಜಾತ್ರಾ ಉತ್ಸವಗಳಲ್ಲಿ ಭಾಗವಹಿಸುವ ಜನರು ಸ್ತಬ್ಧಚಿತ್ರ ವೀಕ್ಷಿಸುವುದರಿಂದ ಅವರಲ್ಲಿ ಮಠದ ಸಾಧನೆ, ಕಾರ್ಯಕ್ರಮಗಳ ಅರಿವು ಉಂಟಾಗುತ್ತದೆ. ಇಂತಹ ಜಾತ್ರಾ ಉತ್ಸವ ಸಂದರ್ಭಗಳಲ್ಲಿ ಕೇವಲ ಮಠ, ಮಂದಿರಗಳ ಸಾಧನೆಗಳನ್ನು ಬಿಂಬಿಸುವ ಸ್ತಬ್ಧಚಿತ್ರಗಳ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಪರಿಸರ ಪ್ರೇಮವನ್ನುಂಟು ಮಾಡುವ ಸ್ತಬ್ಧಚಿತ್ರಗಳು ಪ್ರದರ್ಶನಗೊಳ್ಳುತ್ತವೆ.

6. ಚುನಾವಣಾ ಪ್ರಚಾರಕ್ಕಾಗಿ ಸ್ತಬ್ಧಚಿತ್ರ ಬಳಸುತ್ತಾರೆ:

ರಾಜಕೀಯ ಪಕ್ಷಗಳು ಚುನಾವಣೆಗಳ ಸಂದರ್ಭದಲ್ಲಿ ಪ್ರಚಾರಕ್ಕಾಗಿ ಸ್ತಬ್ಧಚಿತ್ರ ಬಳಸುತ್ತಾರೆ. ವಾಹನಗಳಿಗೆ ಪಕ್ಷದ ಚಿಹ್ನೆ, ಪಕ್ಷದ ನಾಯಕರ ಭಾವಚಿತ್ರಗಳನ್ನು ಅಂಟಿಸಿಕೊಂಡು ಪ್ರಮುಖ ನಾಯಕರ ಮೂರ್ತಿಯನ್ನು ನಿರ್ಮಿಸಿ ಇಟ್ಟುಕೊಂಡು ಚುನಾವಣಾ ಪ್ರಚಾರವನ್ನು ಮಾಡುತ್ತಾರೆ. ತಮ್ಮ ಪಕ್ಷವು ಮಾಡಿದ ಸಾಧನೆಗಳನ್ನು ಬಿಂಬಿಸುವ ವಿಷಯಗಳನ್ನು ಭಿತ್ತಿ ಪತ್ರಗಳನ್ನು ಅಂಟಿಸಿಕೊಂಡು ಪ್ರಚಾರ ಮಾಡುತ್ತಾರೆ.

7. ವಿವಿಧ ಕಂಪನಿಗಳು ತಾವು ತಯಾರಿಸಿದ ವಸ್ತುಗಳನ್ನು ಪ್ರಚಾರ ಮಾಡಲು ಸ್ತಬ್ಧಚಿತ್ರ ಬಳಸುತ್ತಾರೆ:

ಸೋಪು, ಬಟ್ಟೆ, ವಾಹನಗಳ ತಯಾರಿಕೆ ಕಂಪನಿಗಳು ತಮ್ಮ ಕಂಪನಿಯ ವಸ್ತುಗಳನ್ನು ಮಾರಾಟ ಮಾಡಲು ತಮ್ಮ ಕಂಪನಿಯಲ್ಲಿ ತಯಾರಿಸಲಾದ ವಸ್ತುಗಳ ಗುಣಮಟ್ಟ ಬೆಲೆ, ಅದರಿಂದಾಗುವ ಉಪಯೋಗ ಮುಂತಾದ ವಿಷಯಗಳನ್ನು ತಿಳಿಸಲು ಜಾಹಿರಾತಿಗಾಗಿ ಸ್ತಬ್ಧಚಿತ್ರಗಳನ್ನು ಬಳಸುತ್ತಾರೆ. ನಗರ ಪ್ರದೇಶದಲ್ಲಿ ಮಾತ್ರವಲ್ಲದೆ ಹಳ್ಳಿ ಹಳ್ಳಿಗೆ ತಮ್ಮ ಕಂಪನಿಯ ವಸ್ತುಗಳನ್ನು ತಲುಪಿಸಲು, ಪ್ರಚಾರ ಮಾಡಲು ಪ್ರಮುಖ ಸಾಧನವಾಗಿ ಸ್ತಬ್ಧಚಿತ್ರ ಬಳಕೆಯಾ ಗುತ್ತದೆ.

8. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸುವಲ್ಲಿ ಸ್ತಬ್ಧಚಿತ್ರಗಳ ಬಳಕೆ:

ಬಡತನ, ಮೇಲು-ಕೀಳು ಎಂಬ ಭಾವನೆ ತೊಡಗಿಸಲು, ಭ್ರಷ್ಟಾಚಾರ ತೊಡಗಿಸಲು, ಬಾಲ್ಯ ವಿವಾಹ ತಡೆಗಟ್ಟಲು, ಬಾಲ ಕಾರ್ಮಿಕರ ಪದ್ಧತಿಯನ್ನು ಹೋಗಲಾಡಿಸಲು, ಜನರಲ್ಲಿ ಅರಿವನ್ನುಂಟು ಮಾಡಲು ಸ್ತಬ್ಧಚಿತ್ರಗಳನ್ನು ಬಳಸುವರು.

ಕಾನೂನು ಅದರ ಮಹತ್ವ ಕುರಿತು ಸ್ತಬ್ಧಚಿತ್ರಗಳನ್ನು ಬಳಸಿ ಅರಿವನ್ನುಂಟು ಮಾಡುವರು. ಶಿಕ್ಷಣದ ಮಹತ್ವ ಕುರಿತು ಸ್ತಬ್ಧಚಿತ್ರ ಬಳಸಿಕೊಂಡು ಜನರಲ್ಲಿ ಶಿಕ್ಷಣದ ಬಗ್ಗೆ ಅರಿವನ್ನುಂಟು ಮಾಡುವರು. ಹಾಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸ್ತಬ್ಧಚಿತ್ರವನ್ನು ಬಳಸಿಕೊಳ್ಳುವರು. ಸರ್ಕಾರ ಸಂಘ-ಸಂಸ್ಥೆಗಳು, ಚಿತ್ರೋದ್ಯಮಗಳು, ಕೈಗಾರಿಕೋದ್ಯಮಿಗಳು, ರಾಜಕೀಯ ಮುಖಂಡರು ಪ್ರಚಾರ ಮಾಡುವರು.

9. ಸ್ತಬ್ಧಚಿತ್ರಗಳನ್ನು ದಸರಾದಲ್ಲಿ ಬಳಸುತ್ತಾರೆ:

ಕರ್ನಾಟಕದಲ್ಲಿ ಹಲವು ಹಬ್ಬ ಹರಿದಿನಗಳನ್ನು ಆಚರಿಸುತ್ತಾರೆ. ಅದರಲ್ಲಿ ಪ್ರಮುಖ ದಸರಾ ಒಂದು. ಮೈಸೂರಿನ ದಸರಾ, ಮಡಿಕೇರಿ ದಸರಾ, ಮಂಗಳೂರು ದಸರಾ ಹೀಗೆ ವಿವಿಧ ಜಿಲ್ಲೆಗಳಲ್ಲಿ ದಸರಾ ಆಚರಿಸುತ್ತಾರೆ. ಮೈಸೂರು ದಸರಾ ವಿಶ್ವವಿಖ್ಯಾತಿಯನ್ನು ಪಡೆದಿದೆ. ಮೈಸೂರು ದಸರಾ

ಆಚರಣೆಯ ಸಂದರ್ಭದಲ್ಲಿ ಲಕ್ಷಾಂತರ ಜನ ದಸರಾ ವೀಕ್ಷಿಸಲು ಆಗಮಿಸುತ್ತಾರೆ. ಇಲ್ಲಿ ಪ್ರಮುಖ ಆಕರ್ಷಣೆ ಜಂಬೂಸವಾರಿ ಮತ್ತು ಸ್ತಬ್ಧಚಿತ್ರಗಳು.

ವಿವಿಧ ಜಿಲ್ಲೆಗಳ ಸ್ತಬ್ಧಚಿತ್ರಗಳು ಮೈಸೂರು ದಸರಾದಲ್ಲಿ ಭಾಗವಹಿಸುತ್ತವೆ. ತಮ್ಮ ತಮ್ಮ ಜಿಲ್ಲೆಯ ವಿಶೇಷತೆಯಿಂದ ಕೂಡಿದ ಸ್ತಬ್ಧಚಿತ್ರವಾಗಿರಬಹುದು. ಅಥವಾ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಪರಿಸರ ಕಾಳಜಿಯುಳ್ಳ ಸ್ತಬ್ಧಚಿತ್ರಗಳಾಗಿರಬಹುದು ಇಂತಹ ಪ್ರತಿ ಜಿಲ್ಲೆಯಿಂದ ಒಂದೊಂದು ಸ್ತಬ್ಧಚಿತ್ರಗಳು ಬಂದು ಮೈಸೂರು ದಸರಾದಲ್ಲಿ ಭಾಗವಹಿಸುತ್ತವೆ.

ಇದರಿಂದ ಜನರಲ್ಲಿ ವಿವಿಧ ಜಿಲ್ಲೆಗಳ ವಿಶೇಷತೆಗಳನ್ನು ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವೈವಿಧ್ಯತೆಯನ್ನು ತಿಳಿಯಲು ಸಹಕಾರಿಯಾಗುತ್ತದೆ. ಅತ್ಯುತ್ತಮವಾಗಿ ಮೂಡಿ ಬಂದಿರುವ ಸ್ತಬ್ಧಚಿತ್ರಕ್ಕೆ ಬಹುಮಾನಗಳನ್ನು ನೀಡಿ ಪ್ರಶಂಸನಾ ಪ್ರಮಾಣಪತ್ರಗಳನ್ನು ನೀಡಿ ಉತ್ತೇಜಿಸಲಾಗುತ್ತದೆ.

ರಾಷ್ಟ್ರೀಯ, ಅಂತರಾಷ್ಟ್ರೀಯ ದಿನಾಚರಣೆಯ ಉದ್ದೇಶ ಮತ್ತು ವಿಶೇಷತೆಗಳನ್ನು ಜನರಿಗೆ ತಿಳಿಸಲು ಪ್ರಮುಖ ಆಕರ್ಷಣೆಯಾಗಿ ಸ್ತಬ್ಧಚಿತ್ರಗಳನ್ನು ಬಳಸಲಾಗುತ್ತದೆ.

ಡಿಸೆಂಬರ್ 1, ಏಡ್ಸ್ ದಿನಾಚರಣೆ – ಇದರ ಅರಿವನ್ನು ಉಂಟುಮಾಡಲು ಸ್ತಬ್ಧಚಿತ್ರಗಳನ್ನು ಬಳಕೆ ಮಾಡುತ್ತಾರೆ.

ಮಾರ್ಚ್ 21, ಅರಣ್ಯದಿನ (ಅಂತರಾಷ್ಟ್ರೀಯ ಅರಣ್ಯದಿನ) – ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ, ಅರಣ್ಯಗಳಿಂದಾಗುವ ಉಪಯೋಗವನ್ನು ಸ್ತಬ್ಧಚಿತ್ರಗಳನ್ನು ಬಳಸಿ ಅರಿವನ್ನುಂಟು ಮಾಡಲಾಗುತ್ತದೆ.

ಮಾರ್ಚ್ 22, ಜಲದಿನ (ಅಂತರಾಷ್ಟ್ರೀಯ ಜಲದಿನ) – ಜಲದಿನದಂದು ಜಲ, ಜಲಸಂರಕ್ಷಣೆ, ಮಹತ್ವ, ನೀರಿನ ಮಿತ ಬಳಕೆಯ ಬಗ್ಗೆ ಅರಿವನ್ನುಂಟು ಮಾಡಲು ಸ್ತಬ್ಧಚಿತ್ರಗಳನ್ನು ಬಳಸಲಾಗುತ್ತದೆ.

ಅಧ್ಯಾಯ - 4

ಸ್ತಬ್ಧಚಿತ್ರಗಳ ರಚನೆ ಮತ್ತು ಸ್ವರೂಪ

ಸಾಮಾನ್ಯವಾಗಿ ಸ್ತಬ್ಧಚಿತ್ರಗಳು ಕಲೆಯ ಎಲ್ಲಾ ಪ್ರಕಾರಗಳನ್ನು ಹೊಂದಿದ್ದು, ಶಿಲ್ಪಕಲೆ, ಚಿತ್ರಕಲೆ, ಉಬ್ಬುಶಿಲ್ಪ, ತಗ್ಗುಶಿಲ್ಪ ವಾಸ್ತುಕಲೆಯ ಅಂಶ ಸಂದೇಶಗಳ ಬರವಣಿಗೆ ಮುಂತಾದ ಮಾಧ್ಯಮವನ್ನು ಹೊಂದಿರುತ್ತದೆ. ವಿವಿಧ ರೀತಿಯ ಕಲಾವಿದರ ಕೈಚಳಕ ಸ್ತಬ್ಧಚಿತ್ರದಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಮೊದಲು ಸ್ತಬ್ಧಚಿತ್ರದ ಸಂಪೂರ್ಣ ವೇದಿಕೆ ನಿರ್ಮಿಸಿಕೊಂಡ ಕಲಾವಿದರು ವೇದಿಕೆ ಅನುಗುಣವಾದ ಹಾಗೂ ಪೂರಕವಾದ ಮಾಧ್ಯಮವನ್ನು ಬಳಸುತ್ತಾರೆ. ಸ್ತಬ್ಧಚಿತ್ರಕ್ಕೆ ಲಾರಿ, ಟ್ರಾಕ್ಟರ್, ಮೊದಲಾದ ವಾಹನಗಳನ್ನು ಉಪಯೋಗಿಸಿಕೊಂಡು ಕಾರ್ಪೆಂಟರ್‌ಗಳಿಂದ ಬೇಸ್ ನಿರ್ಮಿಸಿಕೊಳ್ಳುತ್ತಾರೆ. ಕಲಾವಿದರಿಗೆ ಬೇಕಾಗುವ ರೀತಿಯಲ್ಲಿ ಬೇಸನ್ನು ನಿರ್ಮಿಸಿಕೊಳ್ಳಲು ಕಾರ್ಪೆಂಟರ್ ಮುಖ್ಯವಾಗಿ ಬೇಕಾಗುತ್ತಾರೆ. ಹೀಗೆ ಪ್ಲೈವುಡ್, ರಿಫೀಸ್ ಪಟ್ಟಿ ಮೊದಲಾದ ಉಪಕರಣಗಳಿಂದ ನಿರ್ಮಾಣಗೊಂಡು ಪ್ರೈಮರ್‌ಗೆ ಬಣ್ಣವನ್ನು ಲೇಪಿಸಿ ಮೇಲ್ಮೈ ಸಿದ್ಧಪಡಿಸಿಕೊಳ್ಳುತ್ತಾರೆ. ಸಿದ್ಧಪಡಿಸಿದ ಬೇಸ್ ಮೇಲೆ ಆ ಸ್ತಬ್ಧಚಿತ್ರದ ಸಂಯೋಜನೆಯ ರೇಖಾಚಿತ್ರ ಮಾಡಿಕೊಳ್ಳುತ್ತಾರೆ. ಅವಶ್ಯಕತೆ ಗನುಗುಣವಾಗಿ ಕಲೆಯ ಮಾಧ್ಯಮವನ್ನು ಸ್ತಬ್ಧಚಿತ್ರ ನಿರ್ಮಾಣ ಮಾಡಲು ಬಳಸಿಕೊಂಡು ಪೇಂಟಿಂಗ್ ಮಾಡುವ ಮೂಲಕ ಸ್ತಬ್ಧಚಿತ್ರ ಸಂಯೋಜನೆಯನ್ನು ಪೂರ್ಣಗೊಳಿಸಿ ಅದಕ್ಕೆ ಸಂಬಂಧಪಟ್ಟ ಸಂದೇಶಗಳನ್ನು ಬರೆಯುತ್ತಾರೆ. ಸಂದೇಶದ ಬರವಣಿಗೆಯಿಂದ ಸ್ತಬ್ಧಚಿತ್ರಗಳ ಅರ್ಥವು ಜನ ಸಾಮಾನ್ಯರಿಗೆ ಸುಲಭವಾಗಿ ಗೋಚರಿಸುತ್ತದೆ.





ರಚನೆಗೆ ಮೊದಲು ತಯಾರಿಸಿದ ವರ್ಣ ಚಿತ್ರಗಳು

ಶಿಲ್ಪಗಳು: ಸ್ತಬ್ಧಚಿತ್ರದಲ್ಲಿ ಶಿಲ್ಪಗಳು ಪ್ರಮುಖ ಪಾತ್ರವಹಿಸಿದ್ದು, ಸ್ತಬ್ಧಚಿತ್ರ ಸಂಯೋಜನೆಗೆ ಪೂರಕವಾಗಿ ಕೆಲವೊಂದು ವ್ಯಕ್ತಿಗಳ ಅಥವಾ ಪ್ರಾಣಿಗಳ ಶಿಲ್ಪವನ್ನು ರಚಿಸಬೇಕಾಗಿರುತ್ತದೆ.

ಉದಾಹರಣೆ: ವಿಜಯನಗರದ ವೈಭವ ಸಾರುವ ಸ್ತಬ್ಧಚಿತ್ರದಲ್ಲಿ ವಿಜಯನಗರ ಶೈಲಿಯ ವಾಸ್ತು ವಿನ್ಯಾಸದ ಜೊತೆಗೆ ವಿಜಯನಗರದಲ್ಲಿ ಕಂಡುಬರುವ ಕೆಲವು ಅರಸರ ಶಿಲ್ಪಗಳನ್ನು ತಯಾರಿಸಲು ಪ್ಲಾಸ್ಟರ್ ಆಫ್ ಪ್ಯಾರಿಸ್‌ನ ಅವಶ್ಯಕತೆ ಇದ್ದು ಮಾಧ್ಯಮದಿಂದ ಅಂತಹ ಶಿಲ್ಪಗಳನ್ನು ಮಾಡುತ್ತಾರೆ. ಮೊದಲಿಗೆ ಕಬ್ಬಿಣದ ಅಸ್ತಿ (ಆರ್ಮೆಚರ್) ಕಟ್ಟಿಕೊಂಡು ಅದಕ್ಕೆ ಹುಲ್ಲು ಮತ್ತು ಗೋಣಿಚೀಲ ಇವುಗಳನ್ನು ಅಳವಡಿಸಿ ಮತ್ತು ತೆಂಗಿನ ನಾರು ಅಳವಡಿಸಿ ನಂತರ ನೀರಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್‌ನ್ನು ಮಿಶ್ರಣಮಾಡಿ ಪ್ರತಿಕೃತಿಗಳ ಅಂಗರಚನೆಯನ್ನು ರಚಿಸಿ ಶಿಲ್ಪಗಳನ್ನು ನಿರ್ಮಿಸುತ್ತಾರೆ. ಸ್ತಬ್ಧಚಿತ್ರವು ಸಾಂದರ್ಭಿಕವಾಗಿರುವುದರಿಂದ ಸಮಯವು ಬಹಳ ಮುಖ್ಯ ಪಾತ್ರವಹಿಸುತ್ತದೆ. ಹಾಗಾಗಿ ಅನುಕೂಲತೆಗೆ ತಕ್ಕಂತೆ ಹೊಸ ಹೊಸ ತಂತ್ರಗಳನ್ನು ಕಲಾವಿದರು ಬಳಸುವುದುಂಟು, ಇಂತಹ ಶಿಲ್ಪಗಳು ಅಲ್ಲದೆ, ಉಬ್ಬು ಶಿಲ್ಪಗಳು ಹಾಗೂ ಶಿಲ್ಪಿಗಳ ಕಾರ್ಯ ರಚನೆಯೂ ಮುಖ್ಯವಾಗುತ್ತದೆ.



ಜೇಡಿ ಮಣ್ಣಿನಲ್ಲಿ ತಯಾರಾಗುತ್ತಿರುವ ಉಬ್ಬು ಶಿಲ್ಪ



ಉಬ್ಬುಶಿಲ್ಪಗಳು: ಸ್ತಬ್ಧಚಿತ್ರದ ಮುಖ್ಯ ಅವಿಬಾಜ್ಯ ಅಂಗವೆಂದರೆ, ಉಬ್ಬು ಶಿಲ್ಪಿಗಳು ಕಲಾವಿದರ ಸಂಯೋಜನೆಗೆ ಅಥವಾ ಅನುಗುಣವಾಗಿ ಕೆಲವೊಂದು ಉಬ್ಬುಶಿಲ್ಪಗಳ ರಚನೆಯ ಆವಶ್ಯಕತೆ ಇರುತ್ತದೆ. ಮೊದಲಿಗೆ ಮಣ್ಣಿನಿಂದ ಸ್ಟೇಜ್ ಒಂದನ್ನೂ ಅಥವಾ ಬೇಸನ್ನು ಸಿದ್ಧಪಡಿಸಿ ಮಣ್ಣಿನಿಂದ ಮೂಲ ಸಂಯೋಜನೆ ಮಾಡಿದ ನಂತರ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಅಚ್ಚು ತೆಗೆಯುತ್ತಾರೆ. ಹೀಗೆ ತೆಗೆದ ಅಚ್ಚುಗಳಲ್ಲಿ ಹತ್ತಾರು ಕೃತಿಗಳನ್ನು ಸಿದ್ಧಪಡಿಸುತ್ತಾರೆ.

ತಗ್ಗುಶಿಲ್ಪಗಳು: ಸ್ತಬ್ಧಚಿತ್ರಗಳಲ್ಲಿ ಉಬ್ಬು ಶಿಲ್ಪಗಳಂತೆ ತಗ್ಗು ಶಿಲ್ಪಗಳು ಮುಖ್ಯವಾಗಿರುತ್ತದೆ. ಪ್ಲಾಸ್ಟರ್ ಆಫ್ ಪ್ಯಾರೀಸ್ ಮೊದಲಾದ ವಸ್ತುಗಳಿಂದ ತಗ್ಗು ಶಿಲ್ಪಗಳನ್ನು ರಚಿಸುತ್ತಾರೆ. ಕಲಾವಿದರ ಸಂಯೋಜನೆಗೆ ತಗ್ಗು ಶಿಲ್ಪಗಳು ನೆರವಾಗಿ ಸ್ತಬ್ಧಚಿತ್ರಗಳ ರಚನೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.







ಮಣ್ಣಿನಿಂದ ತಯಾರಾದ ಕಲಾಕೃತಿಗೆ ಅಚ್ಚು ಹಾಕುತ್ತಿರುವುದು

ಅಚ್ಚು ವ್ಯವಸ್ಥೆ: ಪ್ಲಾಸ್ಟರ್ ಆಫ್ ಪ್ಯಾರೀಸ್ ಅಚ್ಚು ವ್ಯವಸ್ಥೆಯಿಂದ ಕಲಾವಿದರು ಕಂಡುಕೊಂಡಿದ್ದು ಮಣ್ಣಿನಿಂದ ಬೇಕಾದ ಕಲಾಕೃತಿಗಳನ್ನು ನಿರ್ಮಿಸಿಕೊಂಡು ಅದರ ಪ್ರತಿಕೃತಿಗಳ ಅವಶ್ಯಕತೆ ಇದ್ದಾಗ ಅಥವಾ ಹೆಚ್ಚು ಪ್ರತಿಕೃತಿ ಬೇಕಾದಾಗ ಅಚ್ಚು ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುತ್ತಾರೆ. ಅಚ್ಚು ವ್ಯವಸ್ಥೆಯಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಚ್ಚು, ರಬ್ಬರ್ ಅಚ್ಚು, ಫೈಬರ್ ಅಚ್ಚು ಮುಂತಾದ ವಿಧಗಳಿರುತ್ತವೆ. ಅತಿ ಹೆಚ್ಚು ಕೃತಿಗಳು ಬೇಕಾದಾಗ ಹಾಗೂ ಕೃತಿಗಳ ಮುಕ್ತಾಯದ ಅವಶ್ಯಕತೆ ಇದ್ದಲ್ಲಿ ರಬ್ಬರ್ ಅಥವಾ ಫೈಬರ್ ಉಪಯೋಗಿಸುತ್ತಾರೆ.

ಈ ರೀತಿಯಾಗಿ ಉಬ್ಬುಶಿಲ್ಪಗಳು ತಗ್ಗುಶಿಲ್ಪಗಳು, ಅಚ್ಚಿನ ವ್ಯವಸ್ಥೆ ಮೊದಲಾದ ತಂತ್ರಗಳನ್ನು ಬಳಸಿ ಸ್ತಬ್ಧಚಿತ್ರಕ್ಕೆ ಅವಶ್ಯಕ ನಿಟ್ಟಿನಲ್ಲಿ ಅಳವಡಿಸಿ ಅವುಗಳಿಗೆ ಕುಂಚ ಕೈಚಳಕ ತೋರಿಸಿ ಆಕರ್ಷಕವಾಗಿ ತೋರುವಂತೆ ಹಾಗೂ ಅರ್ಥಪೂರ್ಣವಾಗಲು ಕಾಣುವಂತೆ ಮಾಡುತ್ತಾರೆ. ಸ್ತಬ್ಧಚಿತ್ರಗಳಲ್ಲಿ ಉಪಯೋಗವಾಗುವ ಸರ್ವೆ ಪೋಲುಗಳು, ಪ್ಲೈವುಡ್ ಶೀಟ್‌ಗಳು, ರಿಫೀಸ್ ಪಟ್ಟಿಗಳು, ಮೊಳೆಗಳು, ಕಬ್ಬಿಣದ ಸರಳು ಬೈಂಡಿಂಗ್ ವೈರ್, ಜಿ.ಐ ವೈರ್, ತೆಂಗಿನನಾರಿನ ಹಗ್ಗ, ಗೋಣಿಚೀಲ ವಿವಿಧ ರೀತಿಯ ಬಟ್ಟೆಗಳು ಪ್ಲಾಸ್ಟರ್ ಆಫ್ ಪ್ಯಾರೀಸ್, ಮಣ್ಣು, ಸಿಮೆಂಟ್, ಫೈಬರ್ ಮ್ಯಾಟ್, ಚಾಕ್‌ಪೌಡರ್, ಥರ್ಮಕೋಲು, ಫೆವಿಕಲ್, ಕಾರ್ಡ್‌ಬೋರ್ಡ್ ಶೀಟ್, ಬಿದಿರಿನ ಬುಟ್ಟಿಗಳು, ಬಿದಿರು, ವೈಭವಕ್ಕೆ ಸಂಬಂಧಪಟ್ಟ ಮೊದಲಾದ ವಸ್ತುಗಳು ಸ್ತಬ್ಧಚಿತ್ರಕ್ಕೆ ಬಳಸಿಕೊಳ್ಳುವುದು ಕಂಡುಬರುತ್ತದೆ.



ಸ್ತಬ್ಧಚಿತ್ರದ ಪೂರ್ವ ತಯಾರಿಯಲ್ಲಿ ನಿರತರಾಗಿರುವ ಬಡಗಿಗಳು



ರಿಪೀಸ್ ಪಟ್ಟಿಗಳಿಂದ ಸ್ತಬ್ಧಚಿತ್ರದ ಪೂರ್ವ ತಯಾರಿ



ಪ್ಲೈವುಡ್ ಹಾಗೂ ರಿಪೀಸ್ ಪಟ್ಟಿಗಳಿಂದ ತಯಾರಾಗುತ್ತಿರುವ ಸ್ತಬ್ಧಚಿತ್ರ.

ಪೂರ್ವ ತಯಾರಿಯಲ್ಲಿ ಸ್ತಬ್ಧಚಿತ್ರ



ಸ್ತಬ್ಧಚಿತ್ರದ ಕಾರ್ಯ ವೈಖರಿ

ಸ್ತಬ್ಧಚಿತ್ರ ರಚಿಸುವವರು ತಮ್ಮ ಕಲ್ಪನೆಯ ಚಿತ್ರವನ್ನು ಕಲಾವಿದರ ಮೂಲಕ ಬರೆಸಿ, ಬಳಿಕ ಅನುಮೋದನೆ ಪಡೆಯುತ್ತಾರೆ. ಅನಂತರ ಆ ಚಿತ್ರವನ್ನು ಸ್ತಬ್ಧಚಿತ್ರಕ್ಕಾಗಿ ಬಳಸಲಾಗುತ್ತದೆ. ಸ್ತಬ್ಧಚಿತ್ರದ ವೆಚ್ಚವು ಅದಕ್ಕೆ ಬಳಸುವ ಸಾಮಾಗ್ರಿಗಳನ್ನು ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಪ್ಲಾಸ್ಟರ್ ಆಫ್ ಪ್ಯಾರೀಸ್, ಪೈಬರ್, ಕಟ್ಟಿಗೆ, ಪ್ಲೈವುಡ್, ಗೋಣಿತಾಟು, ಥರ್ಮಕೋಲ್, ತೆಂಗಿನ ನಾರು ಇತ್ಯಾದಿ ಬಳಕೆಯಾಗುತ್ತದೆ. ಇತ್ತೀಚೆಗೆ ಚಲನೆಗೆಂದು ಮೋಟಾರ್, ಸ್ಪ್ರಿಂಗ್, ಬಣ್ಣ ಹಾಕಲು ಪಂಪ್ ಮತ್ತು ಸ್ಪ್ರೇಯರ್ಸ್ ರಬ್ಬರ್ ಹಾಗೂ ಸ್ಟೀಲ್‌ಗಳನ್ನು ಬಳಸುತ್ತಾರೆ.

ರಾತ್ರಿ ವೇಳೆಯಲ್ಲಿ ಸ್ತಬ್ಧಚಿತ್ರಗಳ ರಚನೆಯಲ್ಲಿ ತೊಡಗಿರುವುದು



ಸ್ತಬ್ಧಚಿತ್ರಗಳನ್ನು ಹೊತ್ತು ಸಾಗಲು ಡ್ರೈವರ್ ಕ್ಯಾಬೀನ್‌ಗೆ ಅಂಟಿಕೊಂಡಿರುವ ಲಾರಿ ಇರುತ್ತದೆ. ಪಾತ್ರದಾರಿಗಳನ್ನೂ ಕೊಂಡೊಯ್ಯುವ ಸ್ತಬ್ಧಚಿತ್ರಗಳಿಗೆಂದು ಡ್ರೈವರ್ ಕ್ಯಾಬಿನ್‌ಗೆ ಅಂಟಿಕೊಳ್ಳದೆ ಹಿಂಭಾಗವನ್ನು ಎಳೆಯುವ ಟ್ರೈಲರ್ ವಾಹನಗಳನ್ನು ಬಳಸುತ್ತಾರೆ. ಹಾಗೂ ಉದ್ದದ ವಾಹನಗಳನ್ನು ಸ್ತಬ್ಧಚಿತ್ರ ತಯಾರಿಸಲೆಂದು ನಿಗಧಿಪಡಿಸಿದ ಜಾಗದಲ್ಲಿ ತಂದು ನಿಲ್ಲಿಸಿದ ಮೇಲೆಯೇ ಕಾಗದದ ಮೇಲೆ ಬರೆದ ಚಿತ್ರಕ್ಕೆ ಜೀವ ತುಂಬುವ ಕೆಲಸ ಆರಂಭವಾಗುತ್ತದೆ. ಇನ್ನು ಬಡಗಿಗಳು, ಶಿಲ್ಪಿಗಳು, ಚಿತ್ರಕಾರರು, ಬಣ್ಣ ಬಳಿಯುವವರು, ಮೇಸ್ತ್ರಿಗಳು ಪರಿಕರ ಮತ್ತು ಪರಿಚಾರಕರಿಗೆಂದು ದೊಡ್ಡ ಲಾಯಗಳು, ಕೋಣೆಗಳು ಮತ್ತು ಟೆಂಟ್‌ಗಳನ್ನು ನಿರ್ಮಿಸುತ್ತಾರೆ. ವಾಹನ ಚಲಿಸುವಾಗ ವಾಹನದ ಯಾವ ಭಾಗವೂ ಕಾಣಿಸದಂತೆ ಮಾಡುವುದರ ಜೊತೆಗೆ ಚಲಿಸುವಾಗ ಉಂಟಾಗುವ ಕಂಪನಕ್ಕೆ ಯಾವುದೇ ಭಾಗ ಅಲುಗಾಡದ ಹಾಗೆ ನೋಡಿಕೊಳ್ಳುವುದು ಅವಶ್ಯ. ಅದಕ್ಕಾಗಿ ವಾಹನದ ಒಳಭಾಗದಿಂದ ಕಟ್ಟಿಗೆ ತುಂಡುಗಳು ಮರದ ಅಡ್ಡೆಗಳ ಆಧಾರ ನೀಡಿ ಅದರ ಮೇಲೆ ಪ್ಲೈವುಡ್ ಶೀಟ್‌ಗಳನ್ನು ಹೊಡೆಯುತ್ತಾರೆ. ಪರಿಪೂರ್ಣ ದೃಶ್ಯಲೋಕ ಈ ವಾಹನದ ಸುತ್ತ ಸೃಷ್ಟಿಯಾಗಲು ಮೆರವಣಿಗೆಯ ಹಿಂದಿನ ಎಂಟು-ಹತ್ತು ದಿನಗಳೇ ಬೇಕಾಗುತ್ತದೆ. ಹಾಗಾಗಿ ಪ್ರತಿನಿತ್ಯ ಚಾಲಕ ವಾಹನದೊಳಗೆ ಹೋಗಿ ಗಾಡಿ ಚಾಲು ಮಾಡಲು ಆಗುವಷ್ಟು ಜಾಗಕ್ಕೆ ಪ್ಲೈವುಡ್ ಹೊಡೆಯದೇ ಹಾಗೆ ಬಿಡುತ್ತಾರೆ. ನಂತರ ಆ ಜಾಗವನ್ನು ಮೆರವಣಿಗೆಗೆ ಹೊರಡುವ ಮುನ್ನ ದೃಶ್ಯ ಲೋಕಕ್ಕೆ ಹೋಲುವ ಬಣ್ಣದ ಬಟ್ಟೆಯಿಂದ ಅಲಂಕರಿಸಿ ಮುಚ್ಚುತ್ತಾರೆ.

ವಿನ್ಯಾಸಕಾರ ಮಾಡಿದ ಚಿತ್ರಕ್ಕೆ ತಕ್ಕಂತೆ ಪ್ಲೈವುಡ್ ಬಳಸಿಕೊಂಡಿರುವ ವಾಹನಕ್ಕೆ ಆವಶ್ಯವಿದ್ದಲ್ಲಿ ಗೋಣಿತಾಟುಗಳನ್ನು ಹೊದಿಸಿ ಆಕಾರ ಬಂದ ಮೇಲೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಸುರಿದು ಗಟ್ಟಿಯಾಗಲು ಬಿಡುತ್ತಾರೆ. ಕೆಲವೆಡೆ ಫೈಬರ್‌ನಲ್ಲಿ ಎರಕ ಹೊಯ್ದು ಭಾಗಗಳಿಂದ ಗುಡಿಗೋಪುರ, ದೇವರು, ವ್ಯಕ್ತಿಗಳ ಆಕೃತಿ ನಿರ್ಮಿಸುತ್ತಾರೆ. ಮರದ ಆಧಾರದ ಮೇಲೆ ಗೋಣಿಚೀಲ ಹೊದಿಸಿ ಅದರ ಮೇಲೆ ತೆಂಗಿನನಾರು ಹಾಕಿ ಹಸಿರು ಬಣ್ಣವನ್ನು ಸಿಂಪಡಿಸಿ ಮಾಡಲಾಗುತ್ತದೆ. ಉದಾಹರಣೆಗೆ: ಚಾಮುಂಡಿಬೆಟ್ಟ ಮಾಡಿ ನಿಲ್ಲಿಸುವ ಈ ಕಲಾವಿದರು ಹಗಲು ರಾತ್ರಿಯೆನ್ನದೆ ಅಚ್ಚುಮೆಚ್ಚಿನ ದೃಶ್ಯ ರೂಪಕ್ಕೆ ಜೀವ ತುಂಬುತ್ತಾರೆ. ಬಣ್ಣ, ಮೇಕಪ್, ಮಾಸಿಹೋಗದಿರಲೆಂದು ಕಡೆಗಳಿಗೆಯವರೆಗೂ ಲೇಪನ ಮಾಡುತ್ತಲೇ ಇರುತ್ತಾರೆ.

ಕೊನೆಗೆ, ಚಾಲಕರು ಲಾರಿಯನ್ನು ನುಸುಳಿಕೊಂಡು ಹೋಗಿ ಕ್ಯಾಬಿನ್‌ನಲ್ಲಿ ಕುಳಿತುಕೊಂಡು ತನಗೆ ರಸ್ತೆ ಕಾಣಲು ಬೇಕಾದ ಚಿಕ್ಕ ಕಿಂಡಿಯನ್ನು ಕೊರೆಯಲು ಸೂಚನೆ ನೀಡುತ್ತಾರೆ. ಕಲಾಕೃತಿಗೆ ಧಕ್ಕೆ ಬಾರದಂತೆ ಕಿಂಡಿಯನ್ನು ತೆರೆದಿಡುತ್ತಾರೆ.



ಮಣ್ಣಿನಿಂದ ರೂಪುಗೊಳುತ್ತಿರುವ ಕಲಾಕೃತಿ



ಪ್ಲಾಸ್ಟರ್ ಆಫ್ ಪ್ಯಾರೀಸ್ (ಪಿ.ಓ.ಪಿ.) ನಿಂದ ತಯಾರಾದ ಶಿಲ್ಪಕಲಾಕೃತಿಗಳು


ಶಿವಗಂಗೆ ದರ್ಶನ



ಅಧ್ಯಾಯ – 5

ಗಣರಾಜ್ಯೋತ್ಸವಗಳ ಸಂದರ್ಭದ ಸ್ತಬ್ಧಚಿತ್ರ

ಭಾರತೀಯ ಗಣರಾಜ್ಯೋತ್ಸವ ಪ್ರತಿ ವರ್ಷದ ಜನವರಿ 26 ರಂದು ಆಚರಿಸಲಾಗುವ ದಿನಾಚರಣೆ. ಭಾರತೀಯ ಸಂವಿಧಾನ ಜಾರಿಗೆ ಬಂದು ಭಾರತವು ಗಣರಾಜ್ಯವಾದದ್ದು ಜನವರಿ 26, 1950 ರಂದು, ಇದರ ಪ್ರಯುಕ್ತ ಈ ದಿನವನ್ನು ಗಣರಾಜ್ಯೋತ್ಸವವಾಗಿ ಆಚರಿಸಲಾಗುತ್ತದೆ. ಜನವರಿ 26 ಭಾರತದಾದ್ಯಂತ ಸರ್ಕಾರಿ ರಜಾ ದಿನ. ಸಾಮಾನ್ಯವಾಗಿ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ ಇದರ ಪ್ರಯುಕ್ತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದುಂಟು. ಇದಲ್ಲದೆ ನವದೆಹಲಿ ಯಲ್ಲಿ ಭಾರತ ಸಶಸ್ತ್ರಪಡೆಗಳ ಪ್ರಭಾತಭೇರಿ ನಡೆಯುತ್ತದೆ.



ಇತಿಹಾಸ: ಆಗಸ್ಟ್ 15, 1947 ರಂಧು ಭಾರತ ಸ್ವತಂತ್ರವಾದ ನಂತರ ಆಗಸ್ಟ್ 29 ರಂದು ಡಾ. ಅಂಬೇಡ್ಕರ್ ರವರ ನೇತೃತ್ವದಲ್ಲಿ ಎರಡು ಸಮಿತಿಯ ನೇಮಕಾತಿಯನ್ನು ಮಾಡಲಾಯಿತು. ಈ ಸಮಿತಿಯು ಸಂವಿಧಾನದ ಕರಡು ಪ್ರತಿಯನ್ನು ತಯಾರಿಸಿ ನವೆಂಬರ್ 4, 1947 ರಂದು ಶಾಸನ ಸಭೆಯಲ್ಲಿ ಮಂಡಿಸಿತು. ನವೆಂಬರ್ 26, 1949 ರಂದು ಅಂಗೀಕರಿಸಲ್ಪಟ್ಟು ಅನೇಕ ಪರಿಶೀಲನೆ ಮತ್ತು ತಿದ್ದುಪಡಿಗಳ ನಂತರ ಜನವರಿ 26, 1950 ರಂದು ಭಾರತದ ಸಂವಿಧಾನ ಜಾರಿಗೆ ಬಂದಿತು. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಜನವರಿ 26, 1929 ರಂದು ಭಾರತ ರಾಷ್ಟ್ರೀಯ

ಕಾಂಗ್ರೆಸ್ ಪೂರ್ಣ ಸ್ವರಾಜ್ಯದ ಧ್ಯೇಯವನ್ನು ಹಾಕಿಕೊಂಡಿತ್ತು. ಲಾಹೋರ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಈ ನಿರ್ಧಾರವನ್ನು ತೆಗೆದುಕೊಂಡು ಈ ದಿನವನ್ನು ಪೂರ್ಣ ಸ್ವರಾಜ್ಯ ದಿನ ಎಂದು ಘೋಷಿಸಲಾಗಿತ್ತು. ಇದೇ ಕಾರಣಕ್ಕಾಗಿಯೇ ಸ್ವಾತಂತ್ರ್ಯ ನಂತರ ಭಾರತದ ಸಂವಿಧಾನವನ್ನು ಈ ದಿನದಂದೇ ಜಾರಿಗೆ ತರಲಾಯಿತು.

ಈ ಸಂವಿಧಾನವು ಬೇರೆ ಬೇರೆ ರಾಷ್ಟ್ರಗಳ ಸಂವಿಧಾನಗಳ ಕೂಲಂಕುಷ ಅಧ್ಯಯನದ ಫಲವಾಗಿ ರಚಿಸಲ್ಪಟ್ಟ ವಿಶ್ವದ ಅತಿ ದೊಡ್ಡ ಅತ್ಯುತ್ತಮ ಕಾಯಿದೆಗಳ ಭಂಡಾರವಾಗಿದ್ದು, ಇದರಲ್ಲಿ 397 ಆರ್ಟಿಕಲ್ಸ್ ಮತ್ತು 12 ಶೆಡ್ಯೂಲ್ಸ್‌ಗಳು ಪ್ರತಿಯೋರ್ವ ಭಾರತೀಯನ ಸ್ವಾತಂತ್ರ್ಯದ ರಕ್ಷಣೆಗೆ ಕಟಿ ಬದ್ಧವಾದವುಗಳು. ಬ್ರಿಟನ್ನಿನ "ಸಂಸತ್ ಸ್ವರೂಪದ ಸರ್ಕಾರ", ಅಮೇರಿಕಾದ "ಸರ್ವೋಚ್ಛ ನ್ಯಾಯಾಂಗ ವ್ಯವಸ್ಥೆ", ಕೆನಡಾದ "ಕೇಂದ್ರೀಕೃತ ಫೆಡೆರಲ್ ರಾಜ್ಯ ಸ್ವರೂಪದ ಸರ್ಕಾರ", ಐರ್ಲೆಂಡಿನ "ನಿರ್ದೇಶಾತ್ಮಕ ತತ್ವಗಳು (directive principles of state policy), ಆಸ್ಟ್ರೇಲಿಯಾದ "ಸಮಕಾಲೀನ ಮತ್ತು ಪರಸ್ಪರ ಸಹಕಾರದ ಆಡಳಿತ ಹಂಚಿಕೆ", ಜಪಾನಿನ "ನ್ಯಾಯ ಬದ್ಧ ಪೊಲೀಸ್ ವ್ಯವಸ್ಥೆ" ಮುಂತಾದ ಅಂಶಗಳು ಭಾರತದ ಸಂವಿಧಾನದ ವಿಶ್ವರೂಪದ ಅಂಗವಾಗಿವೆ. ಹೀಗೆ ಬೇರೆ ಬೇರೆ ಸಂವಿಧಾನಗಳ ಒಳ್ಳೆಯ ಅಂಶಗಳೆಲ್ಲವನ್ನೂ ತನ್ನಲ್ಲಿ ಅಡಕ ಮಾಡಿಕೊಂಡಿರುವ ಈ ಸಂಗ್ರಹವು ಎಲ್ಲಾ ಮಾನವೀಯ ನಾಗರೀಕ ನೀತಿ ಮೌಲ್ಯವನ್ನು ಎತ್ತಿ ಹಿಡಿಯುವಲ್ಲಿ ಎಂದಿಗೂ ಹಿಂದೇಟು ಹಾಕಿಲ್ಲ.

ಸಂವಿಧಾನದೊಂದಿಗೆ ಭಾರತೀಯರಿಗೆ ಉಡುಗೊರೆಯಾಗಿ ದೊರೆತದ್ದು ತಮ್ಮ ಹಕ್ಕು ಮತ್ತು ಕರ್ತವ್ಯಗಳು. ಇಂದಿಗೂ ಪ್ರತಿ ಭಾರತೀಯನ ಹೃದಯ ಮತ್ತು ಮನಸ್ಸಿನಲ್ಲಿ ತನ್ನ ದೇಶ ಮತ್ತು ತನ್ನ ಜನಗಳ ಬಗ್ಗೆ ಮಮಕಾರ ಉಳಿದಿದ್ದರೆ ಅದು ಕೇವಲ ಮೇಲಿನ ಮೂರು ಅಂಶಗಳಿಂದಲೇ ಎನ್ನಬಹುದು. ಭಾರತ ಸಂವಿಧಾನ ದೇಶದ ಆಡಳಿತವನ್ನು ಕೇಂದ್ರೀಕೃತ ರಾಜ್ಯ ಸರ್ಕಾರವೆಂಬ ವ್ಯವಸ್ಥೆಯನ್ನು ಕೊಡುಗೆಯಾಗಿ ಸುಲಲಿತ ಆಡಳಿತವನ್ನು ಗುರಿಯಾಗಿರಿಸಿ ಅಳವಡಿಸಿದೆ (federal in structure with certain unitary features). ಅದಕ್ಕಾಗಿಯೇ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂದು ಮೂರು ವಿಭಾಗಗಳು ಸಂವಿಧಾನವೆಂಬ ಆಟೋರಿಕ್ಷಾದ ಮೂರು ಚಕ್ರಗಳಿವೆ. ಅಲ್ಲದೆ ಶಾಸಕಾಂಗದಲ್ಲಿಯೂ ಕೇಂದ್ರದಲ್ಲಿ ರಾಜ್ಯಸಭೆ (Council of States) ಮತ್ತು ಲೋಕಸಭೆ (House of the People) ಯೆಂಬ ಮನೆಗಳು, ಪ್ರಧಾನ ಮಂತ್ರಿಯು ಲೋಕಸಭೆ, ಸರ್ಕಾರದ ಮುಖ್ಯಸ್ಥರಾಗಿಯೂ ಪ್ರತಿ ರಾಜ್ಯದಲ್ಲಿ ವಿಧಾನ ಸಭೆ (Legislative Assembly), ಕೆಲವು ರಾಜ್ಯಗಳು ವಿಧಾನ ಪರಿಷತ್ (State Legislative Council), ರಾಜ್ಯ ಸರ್ಕಾರದ ಮುಖ್ಯಸ್ಥರಾಗಿ

ಮುಖ್ಯಮಂತ್ರಿಯು ತನ್ನ ಮಂತ್ರಿಮಂಡಲದ ಸಹಕಾರದಿಂದ ಆಡಳಿತ ನಡೆಸತಕ್ಕುದು. ರಾಷ್ಟ್ರಪತಿಯು ಕೇಂದ್ರ ಕಾರ್ಯಾಂಗದ ಮುಖ್ಯಸ್ಥನಷ್ಟೇ ಅಲ್ಲದೆ ಭಾರತ ಗಣರಾಜ್ಯದ ಸೇನಾ ದಂಡನಾಯಕನಾಗಿರುತ್ತಾನೆ. ಆದೇ ರೀತಿ ರಾಜ್ಯಪಾಲ ರಾಜ್ಯದ ಆಗು ಹೋಗುಗಳ ವೀಕ್ಷಕ, ನಿಯಂತ್ರಕನಾಗಿರುತ್ತಾನೆ.

2017 ರ ಗಣರಾಜ್ಯೋತ್ಸವದಲ್ಲಿ ಕರ್ನಾಟಕದಿಂದ ಪಾಲ್ಗೊಂಡ ಜನಪದ ಕಲಾಶೈಲಿಯ ಸ್ತಬ್ದಚಿತ್ರ



ಈ ಬಾರಿಯ ದೆಹಲಿಯ ಗಣರಾಜ್ಯೋತ್ಸವ ಸ್ತಬ್ಧಚಿತ್ರ ಪಥಸಂಚನದಲ್ಲಿ ಕರ್ನಾಟಕ ರಾಜ್ಯದ ಪರವಾಗಿ ಪಾಲ್ಗೊಳ್ಳುವ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ದಾಖಲೆ ಬರೆದಿದೆ. ಸತತ ಏಳುಬಾರಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ ಏಕೈಕ ರಾಜ್ಯ ಕರ್ನಾಟಕ ಎನ್ನುವ ಹಿರಿಮೆಯನ್ನು ತನ್ನದಾಗಿಸಿಕೊಂಡಿತು.

ಜನವರಿ 26 ನಡೆಯುವ ಗಣರಾಜ್ಯೋತ್ಸವದಲ್ಲಿ ಕನಾಟಕದ ಜನಪದ ನೃತ್ಯಗಳು ಎಂಬ ಸ್ತಬ್ಧಚಿತ್ರ ಭಾಗವಹಿಸಿತು. ಪಥಸಂಚಲನದಲ್ಲಿ ಪೂರ್ಣ ಪ್ರಮಾಣದಲ್ಲಿ ಸಿದ್ಧಗೊಂಡಿರುವ ಸ್ತಬ್ಧಚಿತ್ರ ಹಾಗೂ ಕಲಾವಿದರ ಜೊತೆಯಲ್ಲಿ ಭಾಗವಹಿಸುವ ಮೂಲಕ ಗಮನ ಸೆಳೆಯಿತು. ಹಾಗೆಯೇ ಅಪಾರ ಸಂಖ್ಯೆಯಲ್ಲಿ ನೆರೆದಿದ್ದ ಜನಸ್ತೋಮದ ಮನಸೂರೆಗೊಂಡಿತು.

ಕರ್ನಾಟಕವು ಜನಪದ ಕಲೆಗಳ ತವರೂರು ಎನಿಸಿದೆ. ರಾಜ್ಯದಲ್ಲಿ 500 ಕ್ಕೂ ಹೆಚ್ಚು ಜನಪದ ಕಲೆಗಳಿಂದ ತುಂಬಿದೆ. ರಾಜ್ಯದ ಮೂಲೆ ಮೂಲೆಗಳಲ್ಲೂ ಜನಪದ ಕಲೆಗಳು

ಅನಾವರಣಗೊಂಡಿವೆ. ಜಿಲ್ಲೆಯಿಂದ ಜಿಲ್ಲೆಗೆ ಭಿನ್ನವಾಗಿರುವ ಜನಪದ ಪ್ರಕಾರಗಳು ಇಲ್ಲಿನವರ ಬದುಕಿನಲ್ಲಿ ಹಾಸು ಹೊಕ್ಕಾಗಿದೆ.

ಈ ಬಾರಿಯ ಸ್ತಬ್ಧಚಿತ್ರದಲ್ಲಿ ನಾಡಿನ ಆಯ್ದು ಮತ್ತು ಮುಖ್ಯವಾದ ಜನಪದ ಕಲೆಗಳನ್ನು ಪ್ರತಿಬಿಂಬಿಸಲಾಯಿತು. ವಾರ್ತಾ ಇಲಾಖೆಯು ಸತತವಾಗಿ ಏಳು ವರ್ಷಗಳಿಂದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಳ್ಳುತ್ತಿದೆ. ಇದು ಕನ್ನಡಿಗರ ಹೆಮ್ಮೆ ಪಡುವ ಸಂಗತಿ.

ಅಂತರರಾಷ್ಟ್ರೀಯ ಖ್ಯಾತಿಯ ಕಲಾನಿರ್ದೇಶಕ ಶಶಿಧರ ಅಡಪ ರವರು ವಿನ್ಯಾಸ ಮಾಡಿಕೊಟ್ಟ ಮಾದರಿಗೆ ಆಯ್ಕೆ ಸಮಿತಿ ಮೊದಲ ಹಂತದಲ್ಲೇ ಅನುಮೋದನೆ ನೀಡಿತು. ಖ್ಯಾತ ಸಂಗೀತ ನಿರ್ದೇಶಕ ವಿ.ಮನೋಹರ್ ಅವರ ಸಂಗೀತವನ್ನು ನೀಡಿದ್ದರು. ಈ ಬಾರಿ ರಾಜ್ಯವು ಮತ್ತೊಂದು ಪ್ರಶಸ್ತಿಯನ್ನು ಪಡೆಯುವ ನಿರೀಕ್ಷೆ ಇತ್ತು. ಆದರೆ ಪ್ರಶಸ್ತಿ ಲಭಿಸಲಿಲ್ಲ.

ಸ್ತಬ್ಧಚಿತ್ರದಲ್ಲಿ ಏನೇನು ಇರುತ್ತದೆ

ಸ್ತಬ್ಧಚಿತ್ರದ ಮುಂಭಾಗದಲ್ಲಿ ಶಿವನ ಆರಾಧಕರಾಗಿರುವ ಗೊರವರ ಕುಣಿತದ ವೇಷಧಾರಿ ಢಮರುಗ ಹಾಗೂ ಕೊಳಲು ಹಿಡಿದಿರುವ ಆಳೆತ್ತರದ ಪ್ರತಿರೂಪವಿದೆ. ಇದರ ಹಿಂಭಾಗದಲ್ಲಿ ಖಡ್ಗ ಹಿಡಿದು ನರ್ತಿಸುವ ವೀರಗಾಸೆಯವರಿದ್ದಾರೆ. ಮಧ್ಯಭಾಗದಲ್ಲಿ ಕಂಸಾಳೆ ಬೀಸುತ್ತಾ ಕುಣಿಯುವವರಿದ್ದಾರೆ. ಕೈನಲ್ಲಿ ಬೀಸು ಕಂಸಾಳೆ ಹಿಡಿದು ವೃತ್ತಾಕಾರವಾಗಿ ನರ್ತಿಸುವವರಿದ್ದಾರೆ. ಮೊದಲ ಮೂವರು ಕುಣಿತದವರು ಶಿವನ ಆರಾಧಕರಾಗಿರುವುದು ವಿಶೇಷವಾಗಿದೆ. ಇದಾದ ನಂತರ ಡೊಳ್ಳು ಭಾರಿಸುವವರು ಇದ್ದಾರೆ. ಕೊನೆಯಲ್ಲಿ ಚಿತ್ತಾಕರ್ಷಕವಾದ ಮುಖವಾಡ ಧರಿಸಿ ಕುಣಿಯುವ ಸೋಮನ ಕುಣಿತವಿದೆ. ಸೋಮನ ದೊಡ್ಡ ಮುಖವಾಡವನ್ನು ಇಡಲಾಗಿದೆ.

ವಾಹನದ ಅಕ್ಕ ಪಕ್ಕದಲ್ಲಿ ತಂಬೂರಿ ಮತ್ತು ನಗಾರಿಯ ಉಬ್ಬು ಚಿತ್ರಗಳಿವೆ. ಹಾಗೆಯೇ, ಮೊದಲನೆಯವರಾಗಿ ಕಿನ್ನರಿ ಹಿಡಿದಿರುವ ವ್ಯಕ್ತಿ ಇದ್ದರೆ, ಅವರ ನಂತರ ಜಗ್ಗಲಿ ಭಾರಿಸುವ ವ್ಯಕ್ತಿ ಇದ್ದಾನೆ. ಭಾರಿ ಗಾತ್ರದ ಜಗ್ಗಲಿಯನ್ನು ಚಕ್ರದ ಬಂಡಿಯ ರೀತಿಯಲ್ಲಿ ಉರುಳಿಸುತ್ತಾ ಅದನ್ನು ಭಾರಿಸುತ್ತಾ ಇದಾದ ಬಳಿಕ ತಲೆಮೇಲೆ ಪಟವನ್ನು ಹೊತ್ತು ಕುಣಿಯುವ ಪಟಕುಣಿತದವರಿದ್ದಾರೆ. ಕೊನೆಯಲ್ಲಿ ನಂದಿಧ್ವಜವನ್ನು ಹೊತ್ತು ಸಾಗುತ್ತಿರುವವರು ಇದ್ದಾರೆ.

2017 ರ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕದ ಜನಪದ ಹೆಜ್ಜೆ:

ಈ ಬಾರಿಯ ಗಣರಾಜ್ಯೋತ್ಸವ ಅಂಗವಾಗಿ ರಾಜಪಥದಲ್ಲಿ ನಡೆಯಲಿರುವ ಪಥಸಂಚಲನದಲ್ಲಿ ಕರ್ನಾಟಕದ ಜನಪದ ನೃತ್ಯದ ವಿವಿಧ ಭಂಗಿಗಳು ಪ್ರದರ್ಶನಗೊಂಡವು. ಇನ್ನು ರಾಜಪಥ ಪಥಸಂಚಲನಕ್ಕೆ ಆಯ್ಕೆಯಾಗಲು ಏನೆಲ್ಲ ಮಾನದಂಡಗಳಿರುತ್ತವೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ಕಳೆದ ಬಾರಿ ಜನವರಿ 26 ಗಣರಾಜ್ಯೋತ್ಸವದ ಪ್ರಯುಕ್ತ ದೆಹಲಿಯ ರಾಜಪಥದಲ್ಲಿ ಘಮ-ಘಮ ಎನಿಸಿದ್ದ ಕೊಡಗಿನ ಕಾಫಿಯ ನಂತರ ಈ ಬಾರಿಯ ರಾಜಪಥದಲ್ಲಿ ನಡೆಯಲಿರುವ ಪಥಸಂಚಲನದಲ್ಲಿ ಜನಪದ ನೃತ್ಯ ಪ್ರಕಾರಗಳ ಸ್ತಬ್ಧಚಿತ್ರ ರಾಜ್ಯವನ್ನು ಪ್ರತಿನಿಧಿಸಲಿದೆ.

ರಾಜ್ಯ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೇತೃತ್ವದಲ್ಲಿ, ರಕ್ಷಣಾ ಸಚಿವಾಲಯದ ಬಿಗಿ ಕಾವಲಿನಲ್ಲಿ ಸ್ತಬ್ಧಚಿತ್ರ ನಿರ್ಮಾಣಗೊಂಡಿದ್ದು ಅಂತಿಮ ಸ್ಪರ್ಶ ನೀಡಲಾಯಿತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕ ಎನ್.ಆರ್. ವಿಶು ಕುಮಾರ್ ಅವರು ರಾಜ್ಯವನ್ನು ಪ್ರತಿನಿಧಿಸುವ ಸ್ತಬ್ಧಚಿತ್ರದ ಬಗ್ಗೆ ವಿವರಣೆ ನೀಡಿದರು. ರಕ್ಷಣಾ ಇಲಾಖೆಯ ಆಯ್ಕೆ ಸಮಿತಿ ಕರ್ನಾಟಕದ ಜನಪದ ನೃತ್ಯ ಪ್ರಕಾರಗಳನ್ನು ಆಯ್ಕೆ ಮಾಡಲಾಗಿತ್ತು.

ಈ ಸ್ತಬ್ಧಚಿತ್ರದಲ್ಲಿ ಗೊರವರ ಕುಣಿತ, ಡೊಳ್ಳು ಕುಣಿತ, ಸೋಮನ ಕುಣಿತ, ವೀರಗಾಸೆ, ಕಂಸಾಳೆ, ಪೂಜಾ ಕುಣಿತ, ಪಟ್ಟದ ಕುಣಿತ, ಜಗ್ಗಲಗೆ, ದಾಸರಪದ, ನಂದಿಧ್ವಜದಂತಹ ಜನಪದ ಪ್ರಕಾರಗಳು ಇರಲಿವೆ. ಇದಕ್ಕಾಗಿ ರಾಜ್ಯದಿಂದ ಕಲಾವಿದರನ್ನು ಆಯ್ಕೆ ಮಾಡಲಾಗಿತ್ತು. 15 ದಿನಗಳು ಅಭ್ಯಾಸ ನಿರತರಾಗಿದ್ದರು.

ರಾಜ್ಯದ ಪ್ರಸಿದ್ಧ ಕಲಾವಿದರಾದ ಶಶಿಧರ ಅಡಪ ಅವರ ಕೈಚಳಕದಲ್ಲಿ ರಾಜ್ಯದ ಸ್ತಬ್ಧಚಿತ್ರ ನಿರ್ಮಾಣಗೊಂಡಿತು. ಒಂದು ತಿಂಗಳಿಂದ 25 ಕ್ಕೂ ಹೆಚ್ಚು ಕಲಾವಿದರು ಇದಕ್ಕಾಗಿ ಕೆಲಸ ನಿರ್ವಹಿಸಿದ್ದರು.

ವಿ.ಮನೋಹರ್ ಅವರು ಸ್ತಬ್ಧಚಿತ್ರಕ್ಕೆ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ. ಇಲಾಖೆಯ ಉಪ ನಿರ್ದೇಶಕರಾದ ಗುರುಮೂರ್ತಿ, ಗಿರೀಶ್ ಎಲ್.ಪಿ. ಅವರು ಸ್ತಬ್ಧಚಿತ್ರದ ನಿರ್ಮಾಣದ ಉಸ್ತುವಾರಿ ವಹಿಸಿದ್ದು, ಅಮರೇಶ್ ದೊಡ್ಡಮನಿ ಕಲಾವಿದರ ಉಸ್ತುವಾರಿ ವಹಿಸಿದ್ದರು ಎಂಬ ಅಂಶವನ್ನು ತಿಳಿಯಬಹುದು.

ಪ್ರತಿ ಗಣರಾಜ್ಯೋತ್ಸವದಲ್ಲಿ ಸ್ತಬ್ಧಚಿತ್ರಗಳನ್ನು ಕೇಂದ್ರ ಸಮಿತಿ ಹೇಗೆ ಆಯ್ಕೆಮಾಡಿ ಕೊಳ್ಳುತ್ತದೆ. ಅದರ ನೀತಿ-ನಿಯಮಗಳೇನು ಎಂಬುದರ ಬಗ್ಗೆ ಮಾಹಿತಿಯನ್ನು ನಾವು ತಿಳಿಯಬಹುದು.

ಮೂರ್ನಾಲ್ಕು ವಿಷಯಗಳೊಂದಿಗೆ ನೀಲಿನಕ್ಷೆ



ರಾಜ್ಯಗಳು ತಾವು ಪ್ರದರ್ಶನಗೊಳಿಸಲು ಬಯಸುವ ಮೂರ್ನಾಲ್ಕು ವಿಷಯಗಳನ್ನು ಚಿತ್ರ ವಿನ್ಯಾಸದೊಡನೆ ಆಯ್ಕೆ ಸಮಿತಿಯ ಮುಂದೆ ಮಂಡಿಸಬೇಕು. ಈ ಸಮಿತಿ ಅದರಲ್ಲಿ ಒಂದೆರಡು ವಿಷಯಗಳನ್ನು ಆಯ್ಕೆ ಮಾಡಿ ಅದನ್ನು ಮತ್ತಷ್ಟು ಚೆಂದ ಮಾಡಿ ಪ್ರದರ್ಶಿಸುವಂತೆ ಹೇಳುತ್ತಾರೆ. ಇಲ್ಲಿ ಅಂತಿಮ ವಿಷಯ ಆಯ್ಕೆಯಾದ ನಂತರ ಅದರ ಮೂರು ಆಯಾಮದ **ಕೀ ಮಾದರಿಯನ್ನು** ಸಮಿತಿಯ ಮುಂದೆ ಪ್ರದರ್ಶಿಸಬೇಕು. ಇಲ್ಲಿ ಆಯ್ಕೆಯಾದ ನಂತರ ಸ್ತಬ್ಧಚಿತ್ರ ಮಾದರಿಗೆ ಅನುಗುಣವಾದ ಒಂದು ನಿಮಿಷದ ಮೂರ್ನಾಲ್ಕು ಸಂಗೀತ ತುಣುಕುಗಳ ಜೊತೆ ಆಯ್ಕೆ ಸಮಿತಿಯ ಮುಂದೆ ತೋರಿಸಬೇಕು.

ಕೀ ಮಾದರಿ ಕಲಾಕೃತಿ



ಈ ಆಯ್ಕೆ ಸಮಿತಿಯಲ್ಲಿ ರಾಷ್ಟ್ರಖ್ಯಾತಿಯ ಕಲಾಕಾರರು, ವಿನ್ಯಾಸಗಾರರು, ಸಂಗೀತ ಪರಿಣಿತರು, ರಕ್ಷಣಾ ಇಲಾಖೆಯ ಉನ್ನತ ಅಧಿಕಾರಿಗಳು ಇರುತ್ತಾರೆ. ಅವರೆಲ್ಲರೂ ಕಣ್ಣಲ್ಲಿ ಕಣ್ಣಿಟ್ಟು ನಮ್ಮ ರಾಜ್ಯದ ಸ್ತಬ್ಧಚಿತ್ರ ಮಾದರಿಯನ್ನು ಪ್ರತೀ ಹಂತದಲ್ಲಿ ಪರಿಶೀಲಿಸುತ್ತಾರೆ. ಅವರ ಮುಂದೆ ನಮ್ಮ ರಾಜ್ಯದ ಸ್ತಬ್ಧಚಿತ್ರ ಕಲಾ ಮಾದರಿ ಪ್ರದರ್ಶಿಸುವಾಗ ನಮ್ಮ ಎದೆಯಲ್ಲಿ ಡವ ಡವ ಎನ್ನುತ್ತಿರುತ್ತದೆ. ಕಳೆದ ಹದಿನಾರು ವರ್ಷಗಳಿಂದ ನಮ್ಮ ರಾಜ್ಯದ ಸ್ತಬ್ಧಚಿತ್ರ ಮಾದರಿ ಪ್ರದರ್ಶಿಸುತ್ತಿರುವ ನಮಗೆ ಈ ರೀತಿಯ ಭಯ ಇರಬೇಕಾದರೆ ಮೊದಲ ಬಾರಿಗೆ ಪ್ರದರ್ಶಿಸುವ ಅಧಿಕಾರಿಗಳ ಪರಿಸ್ಥಿತಿ ಹೇಗಿರಬೇಡ?

ಸಮಿತಿಯ ಅಂತಿಮ ತೀರ್ಮಾನ



ಈ ಅಂತಿಮ ಹಂತದ ಆಯ್ಕೆ ನಂತರವಷ್ಟೇ ನಮಗೆ ನಿರಾಳ, ಆದಾಗ್ಯೂ, ಅಂತಿಮ ಹಂತದ ನಂತರವೂ ಸ್ತಬ್ಧಚಿತ್ರ ನಿರ್ಮಾಣ ನಿರೀಕ್ಷಿತ ಗುಣಮಟ್ಟದಲ್ಲಿ ಮೂಡಿಬರುತ್ತಿಲ್ಲ ಎಂದು ಅವರಿಗೆ ಅನಿಸಿದರೆ ಆಗ ಕೂಡ ಸ್ತಬ್ಧಚಿತ್ರವನ್ನು ಹಿಂದಕ್ಕೆ ಕಳುಹಿಸುವ ನಿರ್ಧಾರವನ್ನು ಆಯ್ಕೆ ಸಮಿತಿ ತನ್ನ ಬಳಿ ಇಟ್ಟುಕೊಂಡಿರುತ್ತದೆ. ಇಷ್ಟೆಲ್ಲಾ ಕಠಿಣ ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿ ಕಳೆದ ಎಂಟು ವರ್ಷಗಳಿಂದ ದೆಹಲಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಸತತವಾಗಿ ಸಾಗಿ ಬರುತ್ತಿರುವ ನಮ್ಮ ರಾಜ್ಯದ ಸಾಧನೆಯ ಬಗ್ಗೆ ನಮಗಂತೂ ಹೆಮ್ಮೆಯಿದೆ.

ರಾಜ್ಯಕಲಾವಿದರ ಮನದ ಮಾತುಗಳು



ಈ ಬಾರಿಯ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಂಡಿರುವುದಕ್ಕೆ ಸಂತಸವಾಗುತ್ತಿದೆ. ತಮಗೆ ಇದೊಂದು ಅವಿಸ್ಮರಣೀಯ ಸಮಯ. ನಡುಗುವ ಚಳಿಯಲ್ಲೂ ಮುಂಜಾನೆ ವೇಳೆ ರಾಜ್‌ಪಥ್‌ನಲ್ಲಿ ಅಭ್ಯಾಸ ನಡೆಸುತ್ತಿದ್ದೇವೆ ಎಂದು ಕಲಾವಿದರು ಹರ್ಷ ವ್ಯಕ್ತಪಡಿಸಿದ್ದಾರೆ. ಇನ್ನು ಈ ಸ್ತಬ್ಧಚಿತ್ರವನ್ನು ರಾಜಪಥ ಪಥಸಂಚಲನಕ್ಕೆ ಆಯ್ಕೆ ಮಾಡಲಾಗುತ್ತದೆ. ಅದರ ನೀತಿ ನಿಯಮಗಳೇನು ಎಂಬುದನ್ನು ಸ್ವಲ್ಪ ನಿಮಗೆ ಇಲ್ಲಿ ತಿಳಿಸುವ ಪ್ರಯತ್ನ ನಮ್ಮದು.

2016 ರ ಗಣರಾಜ್ಯೋತ್ಸವದಲ್ಲಿ ಕೊಡಗಿನ ಕಾಫಿ ಸ್ತಬ್ಧಚಿತ್ರ



ಕೊಡಗಿನ ಕಾಫಿ ದೆಹಲಿಯ ರಾಜಪಥದಲ್ಲಿ ಪರಿಮಳ ಬೀರಿತು. ಜನವರಿ 26 ರಂದು ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕದ ಕೊಡಗಿನ ಕಾಫಿ ಬೆಳೆ ಪ್ರದರ್ಶಿತವಾಯಿತು.

ಕೇಂದ್ರ ಸರ್ಕಾರದ ಮೇಕ್ ಇನ್ ಇಂಡಿಯಾ ಯೋಜನೆಯ ಭಾಗವಾಗಿ ಕೊಡಗಿನಲ್ಲಿ ಕಾಫಿ ಬೆಳೆಯುವುದು ಮತ್ತು ಕಾಫಿ ಬೀಜಗಳನ್ನು ಸಂಸ್ಕರಿಸುವ ದೃಶ್ಯಗಳು ಕರ್ನಾಟಕದ ಸ್ತಬ್ಧಚಿತ್ರದಲ್ಲಿದೆ. ಕಲಾ ನಿರ್ದೇಶಕ ಶಶಿಧರ ಅಡಪ ನಿರ್ದೇಶನದಲ್ಲಿ ಈ ಸ್ತಬ್ಧಚಿತ್ರ ಮೂಡಿ ಬಂದಿದೆ.

ಇತಿಹಾಸ ಹೇಳುವ ಪ್ರಕಾರ 1670 ರಲ್ಲಿ ಮುಸ್ಲಿಂ ಸಂತ ಬಾಬ ಬುಡನ ಏಳು ಕಾಫಿ ಬೀಜಗಳನ್ನು ತಂದು ಕರ್ನಾಟಕದ ಚಂದ್ರಗಿರಿ ಪರ್ವತದಲ್ಲಿ ಬಿತ್ತುವ ಮೂಲಕ ಕರ್ನಾಟಕದ ಕಾಫಿ ಜೊತೆಗಿನ ನಂಟು ಆರಂಭವಾಯಿತು. ಇವತ್ತು ಮಲೆನಾಡಿನ ಕಾಫಿ ಕರ್ನಾಟಕದ ಒಟ್ಟು ಜೆಡಿಪಿಯಲ್ಲಿ ಮೂರು ಪ್ರತಿಶತ ಪಾಲು ಹೊಂದಿದೆ. ಕರ್ನಾಟಕದ ಕಾಫಿ ರಾಜಧಾನಿಯ ರಾಜಮಾರ್ಗದಲ್ಲಿ ಪರಿಮಳ ಬೀರಿತು.

ಕೊಡಗಿನ ಕಾಫಿ ಸ್ತಬ್ಧಚಿತ್ರದ ಇನ್ನೊಂದು ನೋಟ



ಕಾಫಿನಾಡು ಕೊಡಗು. ಸುಂದರ ಪ್ರಕೃತಿಯ ನಡುವೆ ಹಲವು ಸಂಕಷ್ಟ ನಡುವೆಯೇ ಕಾಫಿ ಬೆಳೆಗಾರರು ಇಲ್ಲಿ ಕಾಫಿಯನ್ನು ಬೆಳೆಯುತ್ತಾರೆ. ಹೀಗೆ ಸ್ವಾದಿಷ್ಟತೆಗೆ ಹೆಸರಾಗಿದ್ದ ಕೊಡಗಿಗೆ ರಾಷ್ಟ್ರ ಮಾನ್ಯತೆ ಸಿಕ್ಕಿದೆ. ಮೊದಲ ಬಾರಿಗೆ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕೊಡಗಿನ ಕಾಫಿಯ ಸ್ತಬ್ಧಚಿತ್ರ ಎಲ್ಲರ ಗಮನಸೆಳೆಯಿತು. ಜನವರಿ 26, 2016 ರಂದು ನಡೆದ ಗಣರಾಜ್ಯೋತ್ಸವದಲ್ಲಿ ಕಾಫಿ ಬೆಳೆಗೆ ಸಂಬಂಧಿಸಿದಂತೆ ಸ್ತಬ್ಧಚಿತ್ರ ಪ್ರದರ್ಶನಗೊಂಡಿತು.

ವಿನ್ಯಾಸಗೊಳಿಸಿದ ಸ್ತಬ್ಧಚಿತ್ರದ ಮಾದರಿ



ಕಾಫಿ ಬೀಜ ಸಂಸ್ಕರಣೆಗೊಂಡು ಕಾಫಿ ಪುಡಿಯಾಗಿ ಕಾಫಿಯಾಗಿ ಬಟ್ಟಲಿಗೆ ಬರುವ ವಿವಿಧ ಹಂತಗಳನ್ನು ಈ ಸ್ತಬ್ಧಚಿತ್ರದಲ್ಲಿ ತೋರಿಸಲಾಗಿದೆ. ಪ್ರಧಾನ ಭಾಗದಲ್ಲಿ ಕಾಫಿ ತೋಟದಲ್ಲಿ ಕಾಫಿ ಹಣ್ಣು ಕೀಳುತ್ತಿರುವ ಮಹಿಳೆ ಇದ್ದಾರೆ. ಕಾಫಿ ಕಪ್‌ನಲ್ಲಿ ವಿಶ್ವಕ್ಕೆ ಕಾಫಿ ಸ್ವಾದವನ್ನು ಪಸರಿಸುವಂತೆ ಬಿಂಬಿಸಲಾಗಿದೆ. ಹಾಗೆಯೇ, ಕಾಫಿ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗ ಎನ್ನುವುದನ್ನು ಪ್ರತಿಬಿಂಬಿಸಲಾಗಿದೆ. ಕಾಫಿ ಹಣ್ಣುಗಳನ್ನು ಹಸನಗೊಳಿಸುತ್ತಿರುವ ಮತ್ತು ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ವಿವಿಧ ಹಂತಗಳನ್ನು ತೋರಿಸಲಾಗಿದೆ. ವಾಹನದ ಮುಂಭಾಗದಲ್ಲಿ ಫಿಲ್ಟರ್ ಕಾಫಿಯ ತಯಾರಿಸುವ ಪರಿಕರಗಳನ್ನು ಇಡಲಾಗಿದೆ. ಕಾಫಿ ಬೀಜಗಳ ರಾಶಿಯ ನಡುವೆ ಇರುವ ಲೋಟಕ್ಕೆ ಬಟ್ಟಲಿನಿಂದ ಕಾಫಿಯನ್ನು ಸುರಿಯಲಾಗುತ್ತಿದೆ. ಫಿಲ್ಟರ್ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವವರು ಮತ್ತು ವಿವಿಧ ಹಂತಗಳನ್ನು ಪರಿಶೀಲಿಸುವ ಕಾಫಿ ತೋಟದ ಮಾಲೀಕರಾಗಿ ಕೊಡಗಿನ ಕುರಿತಾದ ಗಣಪತಿ ಕವಿತಾ ಮತ್ತು ಸಿ.ಎಂ. ಸಚ್ಚಿ ಮತ್ತು ಕೆ.ಸೋಮಯ್ಯ ಹಾಗೂ ನೇವಿ ಚಾರ್ಲೆ ಅವರುಗಳು ಮೇಲ್ವಿಚಾರಣೆ ನಡೆಸಲಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ದೆಹಲಿಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ರಾಜ್ಯದ ಪರವಾಗಿ ಸ್ತಬ್ಧಚಿತ್ರವು ಪಾಲ್ಗೊಂಡಿತು. ಸ್ತಬ್ಧಚಿತ್ರದ ವಿಷಯದ ಆಯ್ಕೆ, ವಿನ್ಯಾಸ, ಕೇಂದ್ರದಲ್ಲಿ ಅದರ ಅನುಮೋದನೆ, ನಿರ್ಮಾಣ, ಪಾಲ್ಗೊಳ್ಳುವಿಕೆ ಹೀಗೆ ಎಲ್ಲಾ ಹಂತಗಳಲ್ಲೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯೇ ಸಕ್ರಿಯವಾಗಿ ಪಾಲ್ಗೊಳ್ಳುತ್ತದೆ. ಅಲ್ಲದೆ, ವಾರ್ತಾ ಇಲಾಖೆಯು ಕಳೆದ ಆರು ವರ್ಷಗಳಿಂದ ಸತತವಾಗಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಪಾಲ್ಗೊಳ್ಳುತ್ತಿದೆ. ಇದು ಕನ್ನಡಿಗರೆಲ್ಲರೂ ಹೆಮ್ಮೆ ಪಡುವ ಸಂಗತಿ. ಹೆಸರಾಂತ ಬರಹಗಾರ ಡಾ. ಹೆಚ್.ಎಲ್. ನಾಗೇಗೌಡರ ಅವರ "ಬೆಟ್ಟದಿಂದ ಬಟ್ಟಲಿಗೆ" ಕೃತಿಯಿಂದ ಪ್ರೇರಣೆ ಪಡೆದುಕೊಂಡು ಈ ಸ್ತಬ್ಧಚಿತ್ರಕ್ಕೆ ಹೆಸರನ್ನು ಆಯ್ಕೆ ಮಾಡಲಾಗಿತ್ತು. ಈಗ ಅದು ವಾಸ್ತವಾಗಿ ಪ್ರದರ್ಶನಗೊಳ್ಳುತ್ತಿದೆ. ಬರಹಗಾರರ ಡಾ. ಹೆಚ್.ಎಲ್. ನಾಗೇಗೌಡರ ಜನ್ಮ ಶತಮಾನ ವರ್ಷವೂ ಆಗಿರುವ ವರ್ಷವೇ ರಾಜಪಥದಲ್ಲಿ ಕಾಫಿ ಮೆರವಣಿಗೆ ಹೊರಟಿದ್ದು ಸಹಜವಾಗಿ ಸಂತಸ ತಂದಿದೆ. ಅಂತರಾಷ್ಟ್ರೀಯ ಖ್ಯಾತಿಯ ಕಲಾನಿರ್ದೇಶಕ ಶಶಿಧರ ಅಡಪ ಅವರು ವಿನ್ಯಾಸ ಮಾಡಿಕೊಟ್ಟ ಮಾದರಿಗೆ ಆಯ್ಕೆ ಸಮಿತಿ ಮೊದಲ ಹಂತದಲ್ಲೇ ಅನುಮೋದನೆ ನೀಡಿತ್ತು. ಯುವ ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಈ ವಸ್ತುವಿಗೆ ಸಂಗೀತವನ್ನು ರಚಿಸಿದ್ದಾರೆ. ಹೀಗೆ ಗಣರಾಜ್ಯೋತ್ಸವದಂದು ಕೊಡಗು ಹಾಗೂ ಕನ್ನಡಿಗರ ಪ್ರತೀಕವಾಗಿ ರಾಜಪಥದಲ್ಲಿ ಕಾಣಿಸಿಕೊಂಡ ಈ ಸ್ತಬ್ಧಚಿತ್ರ ವಿಶ್ವಮಟ್ಟದಲ್ಲಿ ಗಮನ ಸೆಳೆಯಿತು.

ತೀವ್ರ ಪೈಪೋಟಿ:

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಸ್ತಬ್ಧಚಿತ್ರದೊಂದಿಗೆ ಭಾಗವಹಿಸುವುದು ಪ್ರತಿ ರಾಜ್ಯಕ್ಕೂ ಹೆಮ್ಮೆಯ ಮತ್ತು ಪ್ರತಿಷ್ಠೆಯ ಸಂಕೇತ. ಹಿಂದೆ ಎಲ್ಲಾ ರಾಜ್ಯಗಳಿಗೂ ಪಥಸಂಚಲನದಲ್ಲಿ ಭಾಗವಹಿಸಲು ಅವಕಾಶವಿತ್ತು. ಭದ್ರತೆ ಮತ್ತು ಗಣರಾಜ್ಯೋತ್ಸವದ ಅವಧಿಯಲ್ಲಿ ಮಾಡಿದ ಇಳಿಕೆಯಿಂದಾಗಿ ಸ್ತಬ್ಧಚಿತ್ರಕ್ಕಾಗಿ ಪ್ರತಿನಿಧಿಸುವ ರಾಜ್ಯಗಳ ಸಂಖ್ಯೆಯನ್ನು ಹದಿನಾಲ್ಕಕ್ಕೆ ಒತ್ತು ನೀಡಲಾಗುತ್ತಿದೆ. ಸ್ತಬ್ಧಚಿತ್ರಕ್ಕಾಗಿ ಪ್ರಶಸ್ತಿ ಪಡೆದುಕೊಳ್ಳುವುದಕ್ಕಿಂತಲೂ ಪಥ ಸಂಚಲನದಲ್ಲಿ ಭಾಗವಹಿಸುವುದೇ ಪ್ರತಿಷ್ಠೆಯ ಸಂಕೇತವಾಗಿದೆ. ಇಂತಹ ಕಠಿಣ ಪರೀಕ್ಷೆಯಲ್ಲಿ ಕರ್ನಾಟಕವು ಸತತವಾಗಿ ಆರನೇ ಬಾರಿಗೆ ಆಯ್ಕೆಯಾಗಿದೆ. ಈ ಎಲ್ಲಾ ಅಡೆತಡೆಗಳನ್ನು ನಿವಾರಿಸಿಕೊಂಡು ರಾಜ್ಯವು ಸತತವಾಗಿ ಆರನೇ ಬಾರಿ ಆಯ್ಕೆಗೊಂಡಿರುವುದು ಅಭಿಮಾನದ ಸಂಗತಿ.

ಚನ್ನಪಟ್ಟಣದ ಗೊಂಬೆಗಳ ತಯಾರಿಕೆಯ ಇತಿಹಾಸ

ಭಾರತದ ಕರ್ನಾಟಕ ರಾಜ್ಯದ ಚನ್ನಪಟ್ಟಣದಲ್ಲಿ ಮರದಿಂದ ತಯಾರಿಸಲಾಗುವ ವಿಶಿಷ್ಟ ಗೊಂಬೆಗಳಿಗೆ ಚನ್ನಪಟ್ಟಣದ ಗೊಂಬೆಗಳು ಅನ್ನುತ್ತಾರೆ. ಬಣ್ಣ ಬಣ್ಣದ ಗೊಂಬೆಗಳು. ವಿಶಿಷ್ಟ ಕೆತ್ತನೆಯ ಆಕರ್ಷಕ ಬಣ್ಣ, ವಿನ್ಯಾಸಗಳಿಂದ ಇದು ವರ್ಡ್ ಟ್ರೇಡ್ ಆರ್ಗನೈಸೇಷನ್‌ನಲ್ಲಿ ಒಂದು ಭೌಗೋಳಿಕ ವಿಶೇಷತೆ (Geographical Indication) ಎಂದು ಕರ್ನಾಟಕ ಸರ್ಕಾರದಿಂದ ನೋಂದಾಯಿಸಲ್ಪಟ್ಟಿದೆ. ಈ ಗೊಂಬೆಗಳ ಜನಪ್ರಿಯತೆಯಿಂದಾಗಿ ಚನ್ನಪಟ್ಟಣವು ಗೊಂಬೆಗಳ ಊರುಎಂದೇ ಪ್ರಸಿದ್ಧವಾಗಿದೆ. ಸಾಂಪ್ರದಾಯಿಕವಾಗಿ ಈ ಗೊಂಬೆಗಳನ್ನು ಆಲೆಮರದಿಂದ ತಯಾರಿಸಲಾಗುತ್ತದೆ.



ಇತಿಹಾಸ:

ಇಲ್ಲಿನ ಗೊಂಬೆ ಉದ್ಯಮಕ್ಕೆ ಮೂರು ಶತಮಾನಗಳ ಇತಿಹಾಸವಿದೆ. ಟಿಪ್ಪು ಸುಲ್ತಾನರ ಕಾಲದಿಂದಲೂ ಇಲ್ಲಿ ಗೊಂಬೆಗಳ ಉದ್ಯಮ ಬೆಳೆದು ಬಂದಿದೆ. ಟಿಪ್ಪು ಸುಲ್ತಾನನು ಕರಕುಶಲಕರ್ಮಿಗಳಿಗೆ ಮರದ ಗೊಂಬೆಗಳ ತಯಾರಿಕೆಯನ್ನು ಕಲಿಸಿಕೊಡಲು ಪರ್ಶಿಯಾದಿಂದ ಕುಶಲಕರ್ಮಿಗಳನ್ನು ಕರೆಸಿದ್ದನು. 1759–1799 ರಲ್ಲಿ ಪರ್ಷಿಯಾದ ಕುಶಲಕರ್ಮಿಗಳಿಂದ ಈ ಕಲೆಯು ಪರಿಚಯವಾಯಿತು. ಸ್ಕೂಲ್ ಬಾಬಾ ಸಾಹೇಬ್ ಮಿಯಾ ಈ ಗೊಂಬೆಗಳ ಪಿತಾಮಹ ಎಂದು ಹೇಳಲಾಗುತ್ತದೆ. ಆತ ಈ ಗೊಂಬೆಗಳ ತಯಾರಿಕೆಯಲ್ಲಿ ಜಪಾನಿ ತಂತ್ರಜ್ಞಾನವನ್ನು ಅಳವಡಿಸಿಕೊಂಡನು. 1902 ರಲ್ಲಿ ಚನ್ನಪಟ್ಟಣ ಕುಶಲಕರ್ಮಿ ತರಬೇತಿ ಸಂಸ್ಥೆ ಆರಂಭವಾಯಿತು. ಮೈಸೂರು ದಿವಾನರು ಈ ತರಬೇತಿ ಸಂಸ್ಥೆಯನ್ನು ಆರಂಭಿಸಿದರು. ಹೆಚ್ಚಾಗಿ ಈ ಗೊಂಬೆಗಳ ತಯಾರಿಕೆಗೆ ಆಲೆಮರ ಬಳಸಲ್ಪಡುತ್ತಿದ್ದರು. ಬೀಟೆ ಮತ್ತು ಗಂಧದ ಮರವೂ ಕೂಡ ಬಳಸಲ್ಪಡುತ್ತದೆ.

ತಯಾರಿಕೆ:

ಗುಲಗಂಜಿ ಗಾತ್ರದ ಗೊಂಬೆಗಳಿಂದ ಹಿಡಿದು ದೊಡ್ಡ ಗೊಂಬೆಗಳ ಕೆತ್ತನೆಯಲ್ಲಿ ಕುಶಲ ಕರ್ಮಿಗಳು ನಿಪುಣರು, ಬುಗುರಿ, ಬ್ಯಾಂಡ್ ಸೆಟ್, ದಿಬ್ಬಣ ತಂಡದ ಆಟಿಕೆ ಗೊಂಬೆಗಳು ಹಾಗೂ ದಸರಾ ಗೊಂಬೆಗಳು ಹಾಗೂ ದೇವರ ಗೋಪುರ, ವಿವಿಧ ಭಂಗಿಯ ವಿಗ್ರಹಗಳು, ಗೃಹಾಲಂಕಾರದ, ಗೃಹೋಪಯೋಗಿ ವಸ್ತುಗಳು, ಮರದ ಆಭರಣಗಳು ತಯಾರಾಗುತ್ತವೆ. ಚನ್ನಪಟ್ಟಣದಲ್ಲಿ ಸಾವಿರಕ್ಕೂ ಹೆಚ್ಚು ಬಗೆಯ ಗೊಂಬೆಗಳು ಸಿದ್ಧವಾಗುತ್ತವೆ. ಈ ಗೊಂಬೆಗಳ ತಯಾರಿಕೆಯಲ್ಲಿ ಕಾಲಕ್ರಮೇಣ ಬದಲಾವಣೆಗಳಾಗಿವೆ. ಸಾಂಪ್ರದಾಯಿಕವಾಗಿ ಆಲೆಮರದಲ್ಲಿ ತಯಾರಿಸಲಾಗುತ್ತಿದ್ದರೂ ಅದರ ಜೊತೆ ರಬ್ಬರ್, ಪೈನ್, ಟೀಕ್, ಸೈಕಮೋರ್, ಸಿಡಾರ್ ಮರಗಳೂ ಬಳಸಲ್ಪಡುತ್ತಿವೆ. ಗೊಂಬೆಗಳ ಕೆತ್ತನೆಗೆ ಬೇಕಾದ ಮೃದುವಾದ ಆಲೆ ಮರಗಳು ಚನ್ನಪಟ್ಟಣದಲ್ಲಿಯೇ ಬೆಳೆಯುತ್ತವೆ. ತಯಾರಿಕೆಯ ಹಂತಗಳು ಹೀಗಿರುತ್ತವೆ. ಮರವನ್ನು ತರುವುದು, ಅದರನ್ನು ಸಂಸ್ಕರಿಸುವುದು, ಬೇಕಾದ ಆಕಾರಕ್ಕೆ ಕತ್ತರಿಸುವುದು, ಗೊಂಬೆಗಳನ್ನು ಕೊರೆಯುವುದು, ಬಣ್ಣ ಹಚ್ಚುವುದು ಮತ್ತು ಕೊನೆಗೆ ಪಾಲಿಶ್ ಮಾಡುವುದು. ಈ ಗೊಂಬೆಗಳು ಮಕ್ಕಳ ಆಟಿಕೆಯಾಗಿ ಬಳಕೆಯಾಗುವುದರಿಂದ ಸುರಕ್ಷತೆಗಾಗಿ ಸಸ್ಯಜನ್ಯ ಬಣ್ಣಗಳನ್ನು ಬಳಸಲಾಗುತ್ತದೆ. ಅಕ್ಟೋಬರ್ 2006 ರ ಅಂಕಿ ಅಂಶಗಳ ಪ್ರಕಾರ ಆರು ಸಾವಿರಕ್ಕಿಂತಲೂ ಹೆಚ್ಚು ಜನರು 254 ಗೃಹ ಕೈಗಾರಿಕಾ ಘಟಕಗಲ್ಲಿ ಮತ್ತು 50 ಸಣ್ಣ ಕಾರ್ಖಾನೆಗಳಲ್ಲಿ ಈ ಗೊಂಬೆಗಳ ತಯಾರಿಕೆಯಲ್ಲಿ ತೊಡಗಿದ್ದಾರೆ.

ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ (KSHDCL) ಇವರಿಗೆ ಮಾರುಕಟ್ಟೆ ಒದಗಿಸುವ ಸಹಕಾರ ನೀಡುತ್ತದೆ.

ಬೆಳವಣಿಗೆ:

ಸರಿಯಾದ ಮಾರುಕಟ್ಟೆ ಬೆಂಬಲವಿಲ್ಲದೇ ಒಂದು ಅವಧಿಯಲ್ಲಿ ದಶಕಕ್ಕೂ ಹೆಚ್ಚು ಕಾಲ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಚನ್ನಪಟ್ಟಣದ ಗೊಂಬೆ ನಾಶವಾಗುವ ಹಂತ ತಲುಪಿತ್ತು. ತದನಂತರ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ನೆರವಿನಿಂದ ಕರಕುಶಲಕರ್ಮಿಗಳಿಗೆ ಇಂದಿನ ಬದಲಾಗುತ್ತಿರುವ ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ತರಬೇತಿ ನೀಡಲಾಯಿತು. ನುರಿತ ಕುಶಲಕರ್ಮಿಗಳಿಂದ ತಯಾರಿಸಲ್ಪಟ್ಟ ಗೊಂಬೆಗಳನ್ನು ಸ್ಥಳೀಯ ಕುಶಲಕರ್ಮಿಗಳಿಗೆ ಪರಿಚಯಿಸಿ ಅದರ ಮೂಲಕ ಉತ್ತಮ ಗೊಂಬೆಗಳನ್ನು ತಯಾರಿಸುವ ತರಬೇತಿ ನೀಡಲಾಯಿತು. ಕರ್ನಾಟಕ ರಾಜ್ಯ ಸರ್ಕಾರವು ಚನ್ನಪಟ್ಟಣದಲ್ಲಿ ಒಂದು ಕ್ರಾಫ್ಟ್ ಮಳಿಗೆ ನಿರ್ಮಿಸಿಕೊಟ್ಟಿದ್ದು, ಆ ಉತ್ಪಾದನಾ ಘಟಕವು 32 ಲೇತ್ ಯಂತ್ರಗಳನ್ನು ಹೊಂದಿದೆ. ವಿಶ್ವ ಸ್ಕೀಂನಲ್ಲಿ ಕರ್ನಾಟಕ ಮತ್ತು ಡಚ್ ಸರ್ಕಾರಗಳಿಂದ ಕುಶಲಕರ್ಮಿಗಳಿಗೆ ಆರ್ಥಿಕ ನೆರವು ನೀಡಲಾಗಿದೆ.

ಅಮೆರಿಕ, ಇಂಗ್ಲೆಂಡ್, ಕೆನಡಾ, ಬ್ರಿಟನ್, ಯುಗೋಸ್ಲಾವಿಯಾ, ಜಪಾನ್, ಜರ್ಮನಿ ಮತ್ತಿತರ ದೇಶಗಳಿಗೆ ಇಲ್ಲಿನ ಗೊಂಬೆಗಳು ರಫ್ತಾಗುತ್ತವೆ. ಇತ್ತೀಚಿನ ವರ್ಷಗಳಲ್ಲಿ ಅನೇಕ ಕಂಪನಿಗಳು ಹಾಗೂ ಸಂಸ್ಥೆಗಳಿಂದ ಚನ್ನಪಟ್ಟಣದ ಗೊಂಬೆ ಕಲೆಯ ಪುನಶ್ಚೇತನ ಪ್ರಯತ್ನಗಳಾಗುತ್ತಿವೆ. ಭಾರತ್ ಆರ್ಟ್ ಮತ್ತು ಕ್ರಾಫ್ಟ್ ಈ ಕೆಲಸದಲ್ಲಿ ಮುಂಚೂಣಿಯಲ್ಲಿರುವ ಒಂದು ಹಳೆಯ ಕಂಪನಿಯಾಗಿದ್ದು ಚನ್ನಪಟ್ಟಣದಲ್ಲಿ ಉತ್ಪಾದನಾ ಘಟಕ ಹೊಂದಿದೆ. ಚನ್ನಪಟ್ಟದ ಗೊಂಬೆಗಳಿಗಾಗಿ ಇ-ಕಾಮರ್ಸ್ ತಾಣವನ್ನು ಪ್ರಾರಂಭಿಸಿತು. Craftizone.com ತಾಣವು ನೇರವಾಗಿ ಗೊಂಬೆಗಳನ್ನು ಮಾರಾಟ ಮಾಡುವ ಸಹಾಯ ಮಾಡುತ್ತದೆ. ವರ್ನಮ್ ಎನ್ನುವ ಸಾಮಾಜಿಕ ಸಂಸ್ಥೆಯು ಚನ್ನಪಟ್ಟಣದ ಕರಕುಶಲಕರ್ಮಿಗಳೊಂದಿಗೆ ಈ ಇನ್ನೂರು ವರ್ಷಗಳ ಹಳೆಯ ಕಲೆಯಲ್ಲಿ ಈಗಿನ ಕಾಲಕ್ಕೆ ತಕ್ಕಂತೆ ವಿವಿಧ ವಿನ್ಯಾಸಗಳನ್ನು ಅಭಿವೃದ್ಧಿ ಪಡಿಸುವ ಕೆಲಸ ಮಾಡುತ್ತಿದೆ. ಘೋಕ್ ಚನ್ನಪಟ್ಟಣ ಟಾಯ್ಸ್ ಮತ್ತು ಹ್ಯಾಂಡಿಕ್ರಾಫ್ಟ್ಸ್, ಶ್ರೀ ಬೀರೇಶ್ವರ ಆರ್ಟ್ ಮತ್ತು ಕ್ರಾಫ್ಟ್, ನಿಶಿ ಚೌಹಾಣ್ ಅನಿಮಲ್ ಫಾರ್ಮ್ ಮುಂತಾದ ಸೇವಾಸಂಸ್ಥೆಗಳು, ಕಂಪನಿಗಳು ಚನ್ನಪಟ್ಟಣದ ಗೊಂಬೆಗಳಿಗೆ ಹೊಸವಿನ್ಯಾಸಗಳನ್ನು ಮತ್ತು ಮಾರುಕಟ್ಟೆಗಳನ್ನು ಒದಗಿಸಲು ನೆರವಾಗುತ್ತಿವೆ.

2015 ರ ಗಣರಾಜ್ಯೋತ್ಸವದಲ್ಲಿ ಚನ್ನಪಟ್ಟಣದ ಗೊಂಬೆಗಳ ಕಲರವದ ಸ್ತಬ್ಧಚಿತ್ರ



2015 ರ ಜನವರಿ 26 ರ ಗಣರಾಜ್ಯೋತ್ಸವದಲ್ಲಿ ಚನ್ನಪಟ್ಟಣದ ಗೊಂಬೆಗಳು ಪಾಲ್ಗೊಂಡಿದ್ದವು. "ಆನೆ ಬಂತೊಂದು ಆನೆ" ಹಾಡಿನ ಹಿನ್ನಲೆಯೊಂದಿಗೆ ಪಥಸಂಚಲನದಲ್ಲಿ ಚನ್ನಪಟ್ಟಣದ ಗೊಂಬೆಗಳ ಸ್ತಬ್ಧಚಿತ್ರ ಪಾಲ್ಗೊಂಡಿತ್ತು.

ಗಣರಾಜ್ಯೋತ್ಸವ ಪಥಸಂಚಲನದಲ್ಲಿ 60–70 ರಷ್ಟು ಮಕ್ಕಳು ಪಾಲ್ಗೊಂಡಿದ್ದರು. ಆದ್ದರಿಂದ ಅವರನ್ನು ಪ್ರಮುಖವಾಗಿಟ್ಟುಕೊಂಡು ಚನ್ನಪಟ್ಟಣದ ಗೊಂಬೆಗಳ ಸ್ತಬ್ಧಚಿತ್ರವನ್ನು ಪ್ರದರ್ಶಿಸಲಾಗಿತ್ತು. ದೆಹಲಿ ಕನ್ನಡ ಶಾಲೆಯ 8 ಮಕ್ಕಳನ್ನು ಇದಕ್ಕಾಗಿ ಬಳಸಿಕೊಳ್ಳಲಾಗಿತ್ತು.

ಈ 2015 ರ ಗಣರಾಜ್ಯೋತ್ಸವದಲ್ಲಿ ಅಮೇರಿಕಾದ ಅಧ್ಯಕ್ಷ ಬರಾಕ್ ಓಬಾಮಾ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ಬರಾಕ್ ಓಬಾಮಾ ಪತ್ನಿ ಮಿಷೆಲ್ ಓಬಾಮ ಕಳೆದ ಬಾರಿ ಭಾರತಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ದೆಹಲಿಯಲ್ಲಿ ಚನ್ನಪಟ್ಟಣದ ಗೊಂಬೆಗಳನ್ನು ನೋಡಿ ಮೆಚ್ಚುಗೆ ಗಳಿಸಿದ್ದರು.

ರಾಮನಗರ ಜಿಲ್ಲೆಯ ಚನ್ನಪಟ್ಟಣದ ಗೊಂಬೆಗಳ ವಿನ್ಯಾಸವನ್ನು ಕಲಾನಿರ್ದೇಶಕ ಶಶಿಧರ ಅಡಪ ನಿರ್ವಹಿಸಿದ್ದು ಸಂಗೀತ ನಿರ್ದೇಶಕ ಪ್ರವೀಣ್ ಡಿ. ರಾವ್ ಸಂಗೀತ ನಿರ್ದೇಶನ ಮಾಡಿದ್ದಾರೆ. ಸ್ತಬ್ಧಚಿತ್ರದಲ್ಲಿ ಬಣ್ಣದ ಬುಗುರಿ, ವಿಶ್ವ ಪ್ರಸಿದ್ಧ ರೈಲು, ದಿಬ್ಬಣ, ಬ್ಯಾಂಡ್‌ಸೆಟ್, ದಸರಾ ಗೊಂಬೆ, ದೇವರಗೋಪುರ, ಪ್ರಾಣಿಪಕ್ಷಿಗಳು, ಜೀಕುವ ಕುದುರೆ, ಎತ್ತಿನಗಾಡಿ, ನರ್ತಿಸುವ ಮಕ್ಕಳ ಗೊಂಬೆ, ತಿರುಗುವ ಗೊಂಬೆ, ಬಳೆಗಳು ಪ್ರಧಾನವಾಗಿ ಕಾಣಿಸಿಕೊಂಡವು. ಚನ್ನಪಟ್ಟದ ಗೊಂಬೆಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡೆಯಲು ಈ ಸ್ತಬ್ಧಚಿತ್ರ ನೆರವಾಗಲಿದೆ.

ಚನ್ನಪಟ್ಟಣ ಸ್ತಬ್ಧಚಿತ್ರದಲ್ಲಿ 4 ರಿಂದ 10 ಅಡಿಗಳ ಎತ್ತರದ ಒಟ್ಟು 41 ಆಟಿಕೆಗಳನ್ನು ಅಳವಡಿಸಲಾಗಿತ್ತು. 4 ಗೊಂಬೆಗಳು ಬ್ಯಾಟರಿ ನೆರವಿನಿಂದ ತಿರುಗುತ್ತಿದ್ದವು.

2015 ರ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕದ ಚನ್ನಪಟ್ಟಣ ಗೊಂಬೆಗಳ ಕುರಿತ ಸ್ತಬ್ಧಚಿತ್ರಕ್ಕೆ ಮೂರನೇ ಬಹುಮಾನ ದೊರೆತಿದೆ. ಮಹಾರಾಷ್ಟ್ರಕ್ಕೆ ಮೊದಲ ಮತ್ತು ಛತ್ತೀಸ್‌ಗಢ ರಾಜ್ಯಕ್ಕೆ ಎರಡನೇ ಬಹುಮಾನ ದೊರೆಯಿತು. ಜನವರಿ 31, 2015 ರಂದು ನಡೆದ ಸಮಾರಂಭದಲ್ಲಿ ಕೇಂದ್ರ ರಕ್ಷಣಾ ಸಚಿವರಾಗಿದ್ದ ಮನೋಹರ್ ಪರಿಕ್ಕರ್ ಅವರು ಬಹುಮಾನ ವಿತರಣೆ ಮಾಡಿದರು.

ಚನ್ನಪಟ್ಟಣದ ಸ್ತಬ್ಧಚಿತ್ರದ ಮಾದರಿ

ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸಿದ ಸ್ತಬ್ದಚಿತ್ರಗಳಿಗೆ ಚನ್ನಪಟ್ಟಣದ ಗೊಂಬೆಗಳೇ ಮೆರುಗು. ಈ ಸ್ತಬ್ಧಚಿತ್ರ ತಯಾರಾದ ಬಗೆಯೇ ಒಂದು ಆಸಕ್ತಿಕರ ಕಥಾನಕ.



ಒಂದಲ್ಲ ಎರಡರಲ್ಲ ಬರೋಬ್ಬರಿ ನಲವತ್ತು ದಿನ ಹಗಲು ರಾತ್ರಿ ನಿರಂತರವಾಗಿ ಕೆಲಸ ಮಾಡಿದ್ದಾರೆ. ಡಿಸೆಂಬರ್ ಚಳಿ ಮೈಯನ್ನು ಪತರಗುಟ್ಟಿಸಿದರೂ ಕೆಲಸ ನಿಲ್ಲುತ್ತಿರಲಿಲ್ಲ. ಇಪ್ಪತ್ತಕ್ಕೂ ಹೆಚ್ಚು ಜನ ಮೌಲ್ಡರ್‌ಗಳು, ಹದಿನಾರು ಮಂದಿ ಮರಗೆಲಸದವರು ಜೊತೆಗೆ ಹತ್ತಾರು

ನುರಿತ ಬಣ್ಣಗಾರರು ಬೃಹತ್ ಕೆಲಸದಲ್ಲಿ ದುಡಿಯುತ್ತಿದ್ದರು. ಇದೀಗ ಇವರ ದುಡಿಮೆಯ ಪ್ರತಿರೂಪ ದೆಹಲಿಯ ಪಥಸಂಚಲನದಲ್ಲಿ ಭಾಗವಹಿಸಿತ್ತು.



ಮಣ್ಣಿನ ಕಲಾಕೃತಿಯ ರಚನೆಯಲ್ಲಿ ತಲ್ಲೀನನಾಗಿರುವ ಕಲಾವಿದ

ರಾಷ್ಟ್ರ ರಾಜಧಾನಿಯ ರಾಜಪಥದಲ್ಲಿ ಸಾಗಿ ಬರುವ ಕರ್ನಾಟಕದ ಹೆಮ್ಮೆಯ ಸ್ತಬ್ಧಚಿತ್ರ ಚನ್ನಪಟ್ಟಣದ ಗೊಂಬೆ ಸಿದ್ಧವಾದುದು ಬೆಂಗಳೂರಿನ ಸೋಲದೇವನಹಳ್ಳಿ ಪ್ರತಿರೂಪಿ ಕಾರ್ಯಾಗಾರದಲ್ಲಿ.

ನಂದಿಬೆಟ್ಟ ಸಾಲುಗಳಿಂದ ಮಳೆಗಾಲದಲ್ಲಿ ಹರಿದುಬರುವ ನೀರಿನ ಶುರುವಿನಲ್ಲೇ ತುಂಬುವ ಕೆರೆಗಳಲ್ಲಿ ಒಂದಾದ ಹೆಸರಘಟ್ಟ ಕೆರೆ ಬೆಂಗಳೂರಿಗೆ ಮೊದಮೊದಲು ಕುಡಿಯುವ ನೀರುಣಿಸುತ್ತಿದ್ದ ಕೆರೆ, ನಗರದ ತೆಕ್ಕೆಯಲ್ಲಿರುವ ಹೆಸರಘಟ್ಟ ಕೆರೆ ಸನಿಹದ ಸೋಲದೇವನಹಳ್ಳಿಯಲ್ಲಿರುವ ಕಾರ್ಯಾಗಾರದಲ್ಲಿ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಸಂಚರಿಸುವ ಸ್ತಬ್ಧಚಿತ್ರದ ಬಹುಪಾಲು ಕೆಲಸಗಳೆಲ್ಲವೂ ಇಲ್ಲಿಯೇ ನಡೆದಿದ್ದು.

ದೆಹಲಿಯಲ್ಲಿ ಈ ವರ್ಷ ಚಳಿ–ಹಿಮ ಹೆಚ್ಚಾಗಿದ್ದುದರಿಂದ ಬಣ್ಣಗಾರಿಕೆಗೆ ಅಡ್ಡಿಯಾಗು ವುದೆಂಬ ಶಂಕೆ ಇತ್ತು. ಆದ್ದರಿಂದ ಸ್ತಬ್ಧಚಿತ್ರದ ಬಹುಪಾಲು ಎಲ್ಲಾ ಕೆಲಸಗಳನ್ನೂ ಬೆಂಗಳೂರಿನಲ್ಲೇ ಪೂರ್ಣಗೊಳಿಸಬೇಕಾದ ಅನಿವಾರ್ಯ ಉಂಟಾಯಿತೆಂದರು ಹೆಸರಾಂತ ಕಲಾವಿದ ಶಶಿಧರ ಅಡಪ.

ಕರ್ನಾಟಕ ಸರ್ಕಾರದ ಪರವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಸ್ತುತಪಡಿಸುವ ಗಣರಾಜ್ಯೋತ್ಸವ ಸ್ತಬ್ಧಚಿತ್ರಕ್ಕೆ ಕೀ ಮಾಡಲ್ ಮಾಡಿಕೊಟ್ಟವರು ಶಶಿಧರ ಅಡಪ. ಆಕರ್ಷಕವಾದ ಈ ಸ್ತಬ್ಧಚಿತ್ರ ರೂಪಿಸುವದಕ್ಕಾಗಿ ಟೊಂಕ ಕಟ್ಟಿರುವವರೂ ಅವರೇ.

ಪಥಸಂಚಲನದಲ್ಲಿರುವ ಸ್ತಬ್ಧಚಿತ್ರ ವಾಹನದಲ್ಲಿ ಸಾಗಲಿರುವ ಗೊಂಬೆಗಳು 42. ಇವುಗಳಲ್ಲಿ ಒಂದೂವರೆ ಅಡಿಯಿಂದ ಹಿಡಿದು ಹತ್ತು ಅಡಿಯವರೆಗೆ ವಿವಿಧ ಅಳತೆಗಳಿರುವ ಗೊಂಬೆಗಳಿವೆ. ಆಡುವ ಮಕ್ಕಳಿವೆ. ನೀರೆಯರ ದಂಡು, ರಾಜರಾಣಿಯರ ಜೋಡಿ, ಸೈನಿಕರ ಸಾಲು, ಜಗತ್ತಿನಲ್ಲೆಲ್ಲಾ ಹೆಸರಾಗಿರುವ ಚನ್ನಪಟ್ಟಣ ಆಟಿಕೆ ತಯಾರಿಸುವ ಎರಡು ಶತಮಾನಕ್ಕೂ ಹೆಚ್ಚು ಕಾಲದಿಂದ ಜನಮನದಲ್ಲಿ ಹಾಸುಹೊಕ್ಕಾಗಿರುವ ಚನ್ನಪಟ್ಟಣದ ಗೊಂಬೆಗಳು ಮರ-ಅರಗಿನಿಂದ ತಯಾರಾಗುತ್ತವೆಯಾದರೂ ಅವುಗಳಿಗೆ ಜೀವವಿದೆ. ಆಕರ್ಷಕ ಬಣ್ಣಗಳ ಸೊಗಸಿದೆ. ಎಲ್ಲಾ ವಯೋಮಾನದವರಿಗೆ, ವಿಶೇಷವಾಗಿ ಮಕ್ಕಳಿಗೆ ಮುದ ಕೊಡುವ ಚನ್ನಪಟ್ಟಣದ ಗೊಂಬೆಗಳಿಗೆ ಸ್ತಬ್ಧಚಿತ್ರದಲ್ಲೂ ಜೀವಂತಿಕೆ ತಂದುಕೊಡುವ ಕೆಲಸ ನಡೆದಿದೆ. ಹೀಗಾಗಿ ಸ್ತಬ್ಧಚಿತ್ರದ ವೇದಿಕೆಯಲ್ಲೂ ಕೆಲವು ಗೊಂಬೆಗಳಿಗೆ ಜೀವ ಕೊಡಲಾಗಿದೆ.

ತಿರುಗುವ ಚಿಣ್ಣರು, ರಾಜ-ರಾಣಿಯರು ಸ್ತಬ್ಧಚಿತ್ರದಲ್ಲಿ ನೋಡಲು ಲಭ್ಯ. ಇದಕ್ಕಾಗಿ ವಿಶೇಷ ತಂತ್ರಜ್ಞಾನವನ್ನು ಉಪಯೋಗಿಸಿದ್ದು, ನೈಜವಾಗಿ ಮೂಡಿಬರುವಂತೆ ಮಾಡಲು ಚನ್ನಪಟ್ಟಣದ ಕಸುಬುದಾರರೇ ನೆರವಾದರು.

ಆರು ತಿಂಗಳ ಅವಧಿಯ ಸ್ತಬ್ಧಚಿತ್ರ ಪ್ರಕ್ರಿಯೆಯಲ್ಲಿ ಎದುರಿಸಬೇಕಾಗುವ ಸವಾಲಿನ ಕೆಲಸವನ್ನು ಆರಂಭದ ಹಂತದಲ್ಲೇ ಸುಲಭ ಮಾಡಿದ್ದು ಚನ್ನಪಟ್ಟಣ ಗೊಂಬೆಗಳ ಸ್ತಬ್ಧಚಿತ್ರದ ವಿಶೇಷ ಎಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್.ವಿಶುಕುಮಾರ್, ಕರ್ನಾಟಕ ಆರನೇ ಬಾರಿಯೂ ಸತತವಾಗಿ ಸ್ತಬ್ಧಚಿತ್ರ ಪ್ರದರ್ಶನಕ್ಕೆ ಆಯ್ಕೆಯಾಗಿರುವುದು ಒಂದು ದಾಖಲೆ ಎಂದರು.



ಕಲಾಕೃತಿ ತಯಾರಿಕೆಯಲ್ಲಿ ಕಲಾವಿದರು

ಪಾರಂಪರಿಕ ಗೊಂಬೆಗಳ ಸಂಸ್ಕೃತಿಯನ್ನು ಸ್ತಬ್ಧಚಿತ್ರದಲ್ಲಿ ನೈಜವಾಗಿ ರೂಪಿಸಲು ಅಗತ್ಯವಾದ ಎಲ್ಲಾ ಏರ್ಪಾಡುಗಳನ್ನು ಮಾಡಲಾಗಿದ್ದು, ಇದಕ್ಕೆಲ್ಲ ಟನ್ನುಗಟ್ಟಲೆ ಕಬ್ಬಿಣ, ಫೈಬರ್ ಹಾಗೂ ಮರ ಉಪಯೋಗವಾಗಿದೆ. ಆಟಿಕೆ ಮತ್ತು ಗೊಂಬೆಗಳು ವಿಶಿಷ್ಟ ಕೆತ್ತನೆ, ಆಕರ್ಷಕ ವಿನ್ಯಾಸ, ಬಣ್ಣಗಳಿಂದ ತುಂಬಿಕೊಳ್ಳುವಂತೆ ಮಾಡಲು ಚನ್ನಪಟ್ಟಣ ಕುಶಲಕರ್ಮಿಗಳು ನೆರವಾಗಿದ್ದು, ಸೂಕ್ಷ್ಮ ಹಾಗೂ ನವಿರಾದ ಕೃತಿಗಳು ಹೊರಬರಲು ಕಾರಣರಾಗಿದ್ದಾರೆ.

'ದೊಡ್ಡದಾದ ಮೇಲೆ ಗೊಂಬೆಗಳಲ್ಲಿ ಅಂಕುಡೊಂಕು ಇರದಂತೆ ಮಾಡಲು ವಿಶೇಷ ರೀತಿಯ ಮೌಲ್ಡಿಂಗ್ ಮಾಡಲಾಗಿದೆ. ಇದರಿಂದ ಬೃಹತ್ ಗೊಂಬೆಗಳಲ್ಲಿ ನುಣುಪು ಹಾಗೂ ಹೊಳಪು ಬರಲಿದ್ದು ಇದು ಒಟ್ಟಾರೆ ಚಲನರೂಪಕದ ಅಂದ ಹೆಚ್ಚಿಸುತ್ತದೆ' ಎನ್ನುತ್ತಾರೆ ನಿರ್ಮಾಣ ಮೇಲುಸ್ತುವಾರಿ ವಹಿಸಿರುವ ರಾಮು.

ಎಲ್ಲಾ ರಾಜ್ಯಗಳಿಗೂ ಪಥಸಂಚಲನದಲ್ಲಿ ಅವಕಾಶ ಸಿಕ್ಕುವುದು ಅಸಾಧ್ಯ. ಅನೇಕ ಕಟ್ಟುನಿಟ್ಟಾದ ರಿವಾಜುಗಳನ್ನು ಪೂರ್ಣಗೊಳಿಸಿದ ಬಳಿಕವಷ್ಟೆ ಆಯ್ಕೆ ಸಾಧ್ಯ. 'ಚನ್ನಪಟ್ಟಣ ಚಲನರೂಪಕದ ಪರಿಕಲ್ಪನೆಯೇ ವಿಶಿಷ್ಟವಾಗಿದ್ದು, ಕೇಂದ್ರ ರಕ್ಷಣಾ ಇಲಾಖೆಯ ಉನ್ನತ ಸಮಿತಿ ರೂಪಿಸಿರುವ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಅದು ಇದ್ದಿದ್ದರಿಂದ ಮೊದಲ ಹಂತದಲ್ಲಿಯೇ

ಆಯ್ಕೆಯಾಗಲು ಸಾಧ್ಯವಾಯಿತು' ಎಂದು ಚಲನರೂಪಕ ವಿಭಾಗದ ಉಪನಿರ್ದೇಶಕ ಎಸ್.ಎ.ಲಕ್ಷ್ಮೀನಾರಾಯಣ್ ತಿಳಿಸಿದರು.

'ಮನ ಸೆಳೆಯುವ ವರ್ಣ ವೈಭವದೊಂದಿಗೆ ಚನ್ನಪಟ್ಟಣ ಗೊಂಬೆ ಚಲನರೂಪಕಕ್ಕೆ ಹೆಸರಾಂತ ಸಂಗೀತ ನಿರ್ದೇಶಕ ಪ್ರವೀಣ್ ಡಿ.ರಾವ್ ಮಧುರವಾದ ಸಂಗೀತ ಕೊಟ್ಟಿದ್ದು ಸ್ತಬ್ಧಚಿತ್ರ ವೈವಿಧ್ಯವಾಗಿ ಹೊರಹೊಮ್ಮಲು ಕಾರಣ' ಎನ್ನುವುದು ಜಂಟಿ ನಿರ್ದೇಶಕರು ಎಂ.ರವಿಕುಮಾರ್ ಅಭಿಪ್ರಾಯ.

ಸ್ತಬ್ಧಚಿತ್ರ ಇರಿಸಲಾಗುವ ಬೃಹತ್ ವೇದಿಕೆಯ ಅಂಚುಗಳೂ ಪಾರಂಪರಿಕ ಚನ್ನಪಟ್ಟಣ ಮಣಿಗಳಿಂದ ಅಲಂಕೃತಗೊಳ್ಳಲಿದ್ದು, ಇದಕ್ಕೆ ನವನವೀನ ಬಗೆಯ ವಿನ್ಯಾಸ ಮತ್ತು ವರ್ಣಗಳ ಚಿತ್ತಾರವೂ ಇರಲಿದೆ. ಪಾರಂಪರಿಕ ಕುಶಲ ಕಲೆಯಿಂದಲೇ ಪ್ರಸಿದ್ಧವಾಗಿರುವ ಚನ್ನಪಟ್ಟಣದ ಗೊಂಬೆಗಳು ಗಣರಾಜ್ಯೋತ್ಸವದ ದಿನದ ಪಥಸಂಚಲನದಲ್ಲಿ, ಅದೂ ಅಮೆರಿಕ ಅಧ್ಯಕ್ಷರ ಸಮಕ್ಷಮದಲ್ಲಿ ಅನಾವರಣಗೊಳ್ಳಲು ನುರಿತ ಕಲಾವಿದರ ಗುಂಪು ಕೈಜೋಡಿಸಿರುವುದು ಉಲ್ಲೇಖನೀಯ.

ಹೀಗೆ ಚನ್ನಪಟ್ಟಣದ ಗೊಂಬೆಗಳು ತಮ್ಮದೆ ಆದ ವಿಶೇಷತೆಯನ್ನು ಹೊಂದಿದ್ದು, ರಾಷ್ಟ್ರಮಟ್ಟದಲ್ಲಿ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದೆ. ಇದು ನಾಡಿನ ಸಾಂಸ್ಕೃತಿಕತೆಯನ್ನು ಇಡೀ ಜಗತ್ತಿಗೆ ತಿಳಿಯುವಂತೆ ಮಾಡಿ ಎಲ್ಲರು ತನ್ನೆಡೆ ಆಗಮಿಸಿ ಕೊಂಡುಕೊಳ್ಳುವಂತೆ ಮತ್ತು ರಾಜ್ಯದ ಆರ್ಥಿಕತೆಯನ್ನು ಉತ್ತಮಪಡಿಸುವಲ್ಲಿ ಸಹಕಾರಿಯಾಗಿದೆ.

ಅಪ್ರತಿಮ ವೀರ ಟಿಪ್ಪು ಸುಲ್ತಾನನ ಸ್ತಬ್ಧಚಿತ್ರ



ದೇಶದಾದ್ಯಂತ 65ನೇ ಗಣರಾಜ್ಯೋತ್ಸವವನ್ನು ಆಚರಣೆ ಮಾಡಲಾಗುತ್ತಿದೆ. ನವದೆಹಲಿಯ ರಾಜ್‌ಪಥ್‌ನಲ್ಲಿ ದೇಶದ ಸಾಂಸ್ಕೃತಿಕ ವೈಭವ ಅನಾವರಣಗೊಂಡಿದೆ. ನಾಡಿನ ಸಂಸ್ಕೃತಿ ಬಿಂಬಿಸುವ 14 ಸ್ತಬ್ಧಚಿತ್ರಗಳು ಗಮನ ಸೆಳೆದವು. ಅದರಲ್ಲಿ ಪ್ರಮುಖವಾಗಿ ಕರ್ನಾಟಕದ 'ಅಪ್ರತಿಮ ಪರಾಕ್ರಮಿ ಟಿಪ್ಪು ಸುಲ್ತಾನ್ ಸ್ತಬ್ಧಚಿತ್ರ ಗಮನ ಸೆಳೆಯಿತು. ಸ್ತಬ್ಧಚಿತ್ರದ ಜೊತೆ 8 ಕಲಾವಿದರು ಸೈನಿಕರ ವೇಷದಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ರಾಜ್ಯದ ನಾಲ್ಕು ಮಾದರಿಗಳಲ್ಲಿ ಟಿಪ್ಪುಸುಲ್ತಾನ್ ಸ್ತಬ್ಧಚಿತ್ರ ಆಯ್ಕೆ. ಸಾವಿರ ಕಂಬಗಳ ಬಸದಿ, ಕೊಡಗು ವೀರರ ನಾಡು, 18ನೇ ಶತಮಾನದ ಮೈಸೂರು ದಸರಾ ವೈಭವ ಮತ್ತು ಅಪ್ರತಿಮ ಪರಾಕ್ರಮಿ ಟಿಪ್ಪುಸುಲ್ತಾನ್ ಸೇರಿ 4 ಮಾದರಿಗಳನ್ನು ಕಳುಹಿಸಲಾಗಿತ್ತು. ಇದರಲ್ಲಿ ಅಪ್ರತಿಮ ಪರಾಕ್ರಮಿ ಟಿಪ್ಪುಸುಲ್ತಾನ್ ಸ್ತಬ್ಧಚಿತ್ರ ಆಯ್ಕೆಯಾಗಿತ್ತು.

ಟಿಪ್ಪು ಆಯ್ಕೆ ಹೇಗೆ..? ಟಿಪ್ಪುಸುಲ್ತಾನ್ ಕಾಲದಲ್ಲಿ ರಕ್ಷಣಾ ಇಲಾಖೆಗೆ ಅಪಾರ ಕೊಡುಗೆ ನೀಡಲಾಗಿದೆ. ಶ್ರೀರಂಗಪಟ್ಟಣದಲ್ಲಿ ಮೊತ್ತ ಮೊದಲ ಬಾರಿಗೆ ರಾಕೆಟ್ ಕೇಂದ್ರ ಸ್ಥಾಪಿಸಿದ ಹೆಗ್ಗಳಿಕೆ ಟಿಪ್ಪುಗೆ ಸಲ್ಲುತ್ತದೆ ವಿಜ್ಞಾನ. ತಂತ್ರಜ್ಞಾನ. ಆಡಳಿತ ವೈಖರಿ ಟಿಪ್ಪು ಸ್ತಬ್ಧಚಿತ್ರ ಆಯ್ಕೆ ಪ್ರಮುಖ ಕಾರಣವಾಗಿದೆ.

ಶಶಿಧರ ಅಡಪರಿಂದ ನಿರ್ಮಾಣ: ಕಲಾ ವಿನ್ಯಾಸಕಾರ ಶಶಿಧರ ಅಡಪ ಅವರು ನವದೆಹಲಿಯ ರಾಷ್ಟ್ರೀಯ ರಂಗಶಾಲಾ ಮೈದಾನದಲ್ಲಿ ಸ್ತಬ್ಧಚಿತ್ರ ನಿರ್ಮಾಣ ಮಾಡಿದ್ದಾರೆ. ಟಿಪ್ಪುಸುಲ್ತಾನ್ ಶೌರ್ಯ, ಸಾಹಸವನ್ನು ದೇಶಕ್ಕೆ ಸಾರುವ ಅವಕಾಶ ಈ ಸ್ತಬ್ಧಚಿತ್ರಕ್ಕೆ ದೊರೆತಿದ್ದು, ಟಿಪ್ಪು ಬಗೆಗಿನ ಹಲವು ಮಾಹಿತಿ ಇದೆ. ಬೆಂಗಳೂರಿನ ಸಂಜಯ್ ಮಾರ್ಕೇಟಿಂಗ್ ಕಂಪನಿ ಈ ಸ್ತಬ್ಧಚಿತ್ರ ನಿರ್ಮಾಣದ ಹೊಣೆ ಹೊತ್ತಿತ್ತು. ಸ್ತಬ್ಧಚಿತ್ರ ಸಾಗುವ ವೇಳೆ ಕೇಳಿಬಂದ ಹಿನ್ನೆಲೆ ಸಂಗೀತವನ್ನು ವಿ.ಮನೋಹರ್ ಅವರು ನಿರ್ದೇಶಿದ್ದಾರೆ.

ರಾಜಪಥದಲ್ಲಿ ಪಟ್ಟದಕಲ್ಲು ದೇವಾಲಯದ ಸ್ತಬ್ಧಚಿತ್ರ



8ನೇ ಶತಮಾನದ ಚಾಲುಕ್ಯರ ಆಳ್ವಿಕೆಯಲ್ಲಿ ಹೊರಹೊಮ್ಮಿದ ಪಟ್ಟದಕಲ್ಲು ವಾಸ್ತುಶಿಲ್ಪ ವೈಭವ ಸಾರುವ ಸ್ತಬ್ಧಚಿತ್ರದೊಂದಿಗೆ ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯು ರಾಜಧಾನಿಯಲ್ಲಿ ನಡೆಯುವ 2010ನೇ ಸಾಲಿನ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿತ್ತು.

ದೇವಸ್ಥಾನಗಳ ವಾಸ್ತುಶಿಲ್ಪದ ತೊಟ್ಟಿಲು ಎಂದೇ ಕರೆಯಲಾಗುವ ಪಟ್ಟದಕಲ್ಲನ್ನು ವಿಶ್ವಸಂಸ್ಥೆಯು 1987 ರಲ್ಲಿ 'ವಿಶ್ವ ಪರಂಪರೆ ತಾಣ'ಗಳ ಪಟ್ಟಿಯಲ್ಲಿ ಸೇರಿಸಿತು. ದಕ್ಷಿಣ ಭಾರತದ ಕರ್ನಾಟಕ ರಾಜ್ಯದಲ್ಲಿನ ಉತ್ತರ ಭಾಗದಲ್ಲಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಈ ಪಟ್ಟದಕಲ್ಲು ಇದೆ. ಬಾದಾಮಿಯಿಂದ 22 ಕಿ.ಮೀ. ದೂರದಲ್ಲಿದ್ದರೆ ಐಹೊಳೆಯಿಂದ 12 ಕಿ.ಮೀ. ದೂರದಲ್ಲಿರುವ ಪಟ್ಟದಕಲ್ಲು ದೇಗುಲಗಳ ಸಂಕೀರ್ಣವೇ ಆಗಿದೆ. ಪಟ್ಟದಕಲ್ಲು ಉತ್ತರ ಮತ್ತು ದಕ್ಷಿಣ ವಾಸ್ತುಶಿಲ್ಪದ

ಸಂಗಮವಾಗಿದ್ದು, ಉತ್ತರ ಭಾರತದ ನಾಗರ ಶೈಲಿ ಹಾಗೂ ದಕ್ಷಿಣ ಭಾರತದ ದ್ರಾವಿಡಿಯನ್ ಶೈಲಿಯ ಸಂಗಮವಾಗಿದೆ. ಭಾರತದ ಹಿಂದು ದೇವಾಲಯಗಳ ವೇಸರ ಶೈಲಿಯ ವಾಸ್ತುಶಿಲ್ಪದ ಪ್ರಾರಂಭಿಕ ಪ್ರಯೋಗಗಳು ಪಟ್ಟದಕಲ್ಲಿನಲ್ಲೇ ನಡೆದವು ಎಂಬುದಕ್ಕೆ ಇಲ್ಲಿ ಸಾಕಷ್ಟು ಜೀವಂತ ಪುರಾವೆಗಳಿವೆ. ಈ ಎಲ್ಲಾ ಕಾರಣಕ್ಕೆ ಪಟ್ಟದಕಲ್ಲು 'ವರ್ಲ್ಡ್ ಹೆರಿಟೇಜ್ ಸೈಟ್'ಗಳ ಪಟ್ಟಿಯಲ್ಲಿ ವಿಶ್ವಸಂಸ್ಥೆಯು ಸೇರಿಸಿದೆ.

ಐಹೊಳೆಯನ್ನು ವಾಸ್ತುಶಿಲ್ಪದ ಪ್ರಾಥಮಿಕ ಶಾಲೆ ಎಂದು ಕರೆದರೆ, ಬಾದಾಮಿಯನ್ನು ಶಿಲ್ಪಕಲೆಯ ಪದವಿ ಕಾಲೇಜು ಎಂದು ಕರೆಯಲಾಗಿದೆ. ಪಟ್ಟದಕಲ್ಲು ಶಿಲ್ಪಕಲೆಯ ವಿಶ್ವವಿದ್ಯಾಲಯವೆಂದೇ ಹೆಸರಾಗಿದೆ. ಪಟ್ಟದಕಲ್ಲು ವಿರುಪಾಕ್ಷ ದೇವಾಲಯ, ಸಂಗಮೇಶ್ವರ ದೇವಾಲಯ, ಮಲ್ಲಿಕಾರ್ಜುನ ದೇವಾಲಯ, ಕಾಶಿವಿಶ್ವನಾಥ ದೇವಾಲಯ, ಗಳಗನಾಥ ದೇಗುಲ, ಜೈನ್ ಸಂಪ್ರದಾಯದ ಪಾಪನಾಥ ದೇಗುಲ, ನಾಗನಾಥ, ಚಂದ್ರಶೇಖರ, ಮುಕ್ತೇಶ್ವರ ದೇಗುಲಗಳು ಇಲ್ಲಿದ್ದು, ಪ್ರವಾಸಿಗರನ್ನು ಗತಕಾಲಕ್ಕೆ ಕರೆದೊಯ್ಯುತ್ತವೆ.

ಸ್ತಬ್ಧಚಿತ್ರದ ಜನಪದ ಕಲಾತಂಡ



ಕರ್ನಾಟಕ ಸರ್ಕಾರದ ವಾರ್ತಾ ಇಲಾಖೆಯು 2010ನೇ ಸಾಲಿನ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ ಪಟ್ಟದಕಲ್ಲಿನಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಮತ್ತು ನಾಗರ ಶೈಲಿಯ ಕಾಶಿ ವಿಶ್ವನಾಥ ದೇಗುಲವನ್ನು ಆಯ್ಕೆ ಮಾಡಿಕೊಂಡು ಪ್ರಸ್ತುತಪಡಿಸಿತ್ತು. ಸ್ತಬ್ಧಚಿತ್ರದ ಅತ್ಯಂತ ಸುಂದರ ವಿನ್ಯಾಸವನ್ನು ಕರ್ನಾಟಕದ ಖ್ಯಾತ ಕಲಾವಿದ ಶ್ರೀ ಶಶಿಧರ್ ಅಡಪ ಅವರು ರೂಪಿಸಿದ್ದು, ಅದರ **'3ಡಿ ಕೀ ಮಾಡಲ್'** ಅನ್ನು ಬೆಂಗಳೂರಿನ ಕಲಾವಿದ ಶ್ರೀ ನಂದ ಅವರು ಸಿದ್ಧಪಡಿಸಿದ್ದಾರೆ. ಸ್ತಬ್ಧಚಿತ್ರ ನಿರ್ಮಾಣ ಕಾರ್ಯವನ್ನು ಬೆಂಗಳೂರಿನ ಸಂಜಯ್ ಮಾರ್ಕೆಟಿಂಗ್ ಅವರು ಕಾರ್ಯಗತಗೊಳಿಸಿದರು. 30 ಜನ ನುರಿತ ಫ್ಯಾಬ್ರಿಕೇಷನ್ ಕಲಾವಿದರು ಈ ಸ್ತಬ್ಧಚಿತ್ರವನ್ನು ನಿರ್ಮಾಣ ಮಾಡಿದ್ದರು. ನಿರ್ಮಾಣದ ಮೇಲ್ವಿಚಾರಣೆಯನ್ನು ಕಲಾ ನಿರ್ದೇಶಕ ಶ್ರೀ ರಘು ಅವರು ಭಾಗವಹಿಸಿದ್ದರು.

ಇದು ಶಿವನ ದೇಗುಲವಾದ ಕಾರಣ, ಅದಕ್ಕೆ ಪೂರಕವೆಂಬಂತೆ ಜಾನಪದ ಕಲಾಪ್ರಕಾರ ಡೊಳ್ಳನ್ನು ಈ ಸ್ತಬ್ಧಚಿತ್ರಕ್ಕೆ ಸಂಗೀತವನ್ನಾಗಿ ಅಳವಡಿಸಲಾಗಿದೆ. ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿಗೆ ಸೇರಿದ ಖ್ಯಾತ ಡೊಳ್ಳು ಕಲಾವಿದ ಟಾಕಪ್ಪ ಅವರ ನೇತೃತ್ವದ 25 ಜನ ಕಲಾವಿದರು ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿದ್ದರು.

ಅಧ್ಯಾಯ – 6

ಕನ್ನಡರಾಜ್ಯೋತ್ಸವದ ಸಂದರ್ಭದ ಸ್ತಬ್ಧಚಿತ್ರ



ರಾಜ್ಯೋತ್ಸವ ಅಥವಾ ಕರ್ನಾಟಕರಾಜ್ಯೋತ್ಸವ ಪ್ರತಿ ವರ್ಷದ ನವೆಂಬರ್ 1 ರಂದು ಆಚರಿಸಲಾಗುತ್ತದೆ. ಮೈಸೂರು ರಾಜ್ಯವು (ಈಗಿನ ಕರ್ನಾಟಕ) 1956 ರ ನವೆಂಬರ್ 1 ರಂದು ನಿರ್ಮಾಣವಾದುದರ ಸಂಕೇತವಾಗಿ ಈ ರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ[1]. ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ–ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ದಿನವನ್ನು ಕನ್ನಡಿಗರು ನಾಡಹಬ್ಬವನ್ನಾಗಿ ಆಚರಿಸುತ್ತಾರೆ.

ಇತಿಹಾಸ:

- ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್, ಕರ್ನಾಟಕ ಏಕೀಕರಣ ಚಳುವಳಿಯನ್ನು 1905 ರಲ್ಲಿ ಪ್ರಾರಂಭಿಸಿದರು. 1950 ರಲ್ಲಿ, ಭಾರತವು ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತ್ಯಗಳು, ಭಾಷೆಗಳ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿ ದಕ್ಷಿಣ ಭಾರತದಲ್ಲಿ ಹಲವಾರು ಸಂಸ್ಥಾನಗಳನ್ನು ಒಳಗೊಂಡಂತೆ ರಾಜ್ಯಗಳು ರೂಪುಗೊಂಡಿದ್ದವು. ಕನ್ನಡ ಮಾತನಾಡುವ ಪ್ರಾಂತ್ಯಗಳು ಸೇರಿ, ಮೈಸೂರು ರಾಜ್ಯವು ಉದಯವಾಯಿತು.

- 1956 ರ ನವೆಂಬರ್ 1 ರಂದು, ಮದ್ರಾಸ್, ಬಾಂಬೆ, ಹೈದರಬಾದ್ ಪ್ರಾಂತ್ಯದ ಕನ್ನಡ ಮಾತನಾಡುವ ಪ್ರದೇಶಗಳು ವಿಲೀನಗೊಂಡು ಮೈಸೂರು ರಾಜ್ಯ ಉದಯವಾಯಿತು ಹಾಗೂ ಉತ್ತರ ಕರ್ನಾಟಕ, ಮಲೆನಾಡು ಮತ್ತು ಹಳೆಯ ಮೈಸೂರು ಎಂಬುದಾಗಿ ಹೊಸದಾಗಿ ರೂಪುಗೊಂಡ ಮೈಸೂರು ರಾಜ್ಯವನ್ನು ಮೂರು ಪ್ರದೇಶಗಳಲ್ಲಿ ಗುರುತಿಸಲಾಯಿತು.
- ಹೊಸದಾಗಿ ಏಕೀಕೃತಗೊಂಡ ರಾಜ್ಯದ ಆರಂಭದಲ್ಲಿ ಹೊಸ ಘಟಕದ ಕೋರ್ ರೂಪುಗೊಂಡು ಮುಂಚಿನ ರಾಜ್ಯದ ಹೆಸರು ಇರಲೆಂದು "ಮೈಸೂರು' ಹೆಸರನ್ನು ಉಳಿಸಿಕೊಂಡರು. ಆದರೆ ಉತ್ತರ ಕರ್ನಾಟಕದ ಜನರ ತರ್ಕ ಮಾನ್ಯತೆಗಾಗಿ, ರಾಜ್ಯ ಹೆಸರು ನವೆಂಬರ್ 1, 1973 ರಂದು "ಕರ್ನಾಟಕ' ಎಂದು ಬದಲಾಯಿತು.
- ಈ ಸಂದರ್ಭದಲ್ಲಿ ದೇವರಾಜ ಅರಸುರವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕ ಏಕೀಕರಣದ ಮನ್ನಣೆ ಇತರ ವ್ಯಕ್ತಿಗಳಿಗೂ ಸೇರುತ್ತದೆ. ಅವರೆಂದರೆ ಅನಕೃ. ಕೆ. ಶಿವರಾಮಕಾರಂತ, ಕುವೆಂಪು, ಮಾಸ್ತಿವೆಂಕಟೇಶ್ ಅಯ್ಯಂಗಾರ್, ಎ.ಎನ್. ಕೃಷ್ಣರಾವ್ ಮತ್ತು ಬಿ.ಎಂ. ಶ್ರೀಕಂಠಯ್ಯ.

ಕನ್ನಡರಾಜ್ಯೋತ್ಸವ ಆಚರಣೆಯಲ್ಲಿ ಸ್ತಬ್ಧಚಿತ್ರದ ಮಹತ್ವ



- ರಾಜ್ಯೋತ್ಸವ ದಿನವನ್ನು ಕರ್ನಾಟಕ ರಾಜ್ಯಾದ್ಯಂತ ಮಹದಾನಂದ ಮತ್ತು ಚಟುವಟಿಕೆಯಿಂದ ಆಚರಿಸಲಾಗುತ್ತದೆ. ಕೆಂಪು ಮತ್ತು ಹಳದಿ ಕನ್ನಡ ಧ್ವಜಗಳು ರಾಜ್ಯದ

ಎಲ್ಲೆಡೆ ಹಾರಿಸಲ್ಪಡುತ್ತವೆ. ಕನ್ನಡ ನಾಡಗೀತೆ ("ಜಯ ಭಾರತ ಜನನಿಯ ತನುಜಾತೆ") ಯನ್ನು ಹಾಡಲಾಗುತ್ತದೆ. ಸರ್ಕಾರಿ ಕಛೇರಿ ಮತ್ತು ಹಲವಾರು ಪ್ರಮುಖ ಪ್ರದೇಶಗಳಲ್ಲಿ ವಾಹನಗಳ ಮೇಲೆ ಭುವನೇಶ್ವರಿ ಚಿತ್ರವನ್ನಿಟ್ಟು ಮೆರವಣಿಗೆ ನಡೆಸಲಾಗುತ್ತದೆ.

- ಕನ್ನಡ ರಾಜ್ಯೋತ್ಸವ ಆಚರಣೆಯ ಸಂದರ್ಭದಲ್ಲಿ ಸ್ತಬ್ಧಚಿತ್ರಗಳ ಬಳಕೆ, ಪ್ರತಿ ವರ್ಷ ನವೆಂಬರ್ 1 ನ್ನು ಕರ್ನಾಟಕದಲ್ಲಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ. ಈ ಸಂದರ್ಭದಲ್ಲಿ ಕನ್ನಡದ ನೆಲ, ಜಲ, ಭಾಷೆಗೆ ಸಂಬಂಧಪಟ್ಟಂತೆ ಅರಿವನ್ನು ಮೂಡಿಸಲು ಸ್ತಬ್ಧಚಿತ್ರಗಳನ್ನು ಬಳಸಿಕೊಳ್ಳುತ್ತೇವೆ.
- ಕನ್ನಡ ತೇರು ಎಂದು ಈ ಸ್ತಬ್ಧಚಿತ್ರವನ್ನು ಕರೆದು ಭುವನೇಶ್ವರಿ ದೇವಿಯ ಪ್ರತಿಮೆ ನಿರ್ಮಾಣ ಮಾಡಿ ಅದರಲ್ಲಿ ಕನ್ನಡ ಸಾಹಿತ್ಯಕ್ಕಾಗಿ ದುಡಿದ ಕವಿಗಳ ಕಾದಂಬರಿಕಾರರ ಚಿತ್ರಪಟಗಳನ್ನು ಅಂಟಿಸಿ ಸ್ತಬ್ಧಚಿತ್ರ ನಿರ್ಮಾಣ ಮಾಡಿರಲಾಗಿರುತ್ತದೆ.
- ಕನ್ನಡ ನಾಡಿನ ಹಿರಿಮೆಯನ್ನು ಸಾರಲು ಈ ಸ್ತಬ್ಧಚಿತ್ರ ತುಂಬ ಅವಶ್ಯಕ. ಇದರಿಂದ ಜನರಿಗೆ ತಮ್ಮ ನಾಡಿನ ಹಿರಿಮೆ ತಿಳಿಯಲು ಭಾಷಾಭಿಮಾನ ಹೆಚ್ಚಲು ಸಹಕಾರಿಯಾಗುತ್ತದೆ.
- ಕನ್ನಡ ರಾಜ್ಯೋತ್ಸವವನ್ನು ಜಾತಿ ಭೇದ ಭಾವವಿಲ್ಲದೆ ಆಚರಿಸುತ್ತಾರೆ.

ಅಧ್ಯಾಯ – 7

ಶರಣರ ಉತ್ಸವಗಳಲ್ಲಿ ಸ್ತಬ್ಧಚಿತ್ರ

ಶರಣರು 12ನೇ ಶತಮಾನದಲ್ಲಿ ಶರಣ ಕ್ರಾಂತಿಯನ್ನು ಮಾಡಿದರು. ಅವರು ರಚಿಸಿದ ವಚನಗಳು ಕ್ರಾಂತಿಯ ವಿಚಾರಗಳನ್ನು ಹೊಂದಿವೆ. ಶರಣರಲ್ಲಿ ಎಲ್ಲಾ ಜಾತಿಯ ಜನರು ಇದ್ದರು. ಮೇಲ್ವರ್ಗದ ಜನ ಹಾಗೂ ಕೆಳವರ್ಗದ ಜನ ಎಲ್ಲರನ್ನೂ ಒಟ್ಟಿಗೆ ಸೇರಿಸಿ ಸಾಮಾಜಿಕ ಸಮಾನತೆಗಾಗಿ ಹೋರಾಡಿದರು. ದಾಸೋಹ ತತ್ವವನ್ನು ಶರಣರು ತಾವೂ ಆಚರಿಸಿ ಮುಂದಿನ ಪೀಳಿಗೆಗ ಮಾರ್ಗದರ್ಶಕರಾದರು ಎಂದು ಹೇಳಬಹುದು. ಕನ್ನಡ ಚಳುವಳಿಗೆ ಹಿರಿದಾದ ಇತಿಹಾಸವಿದೆ. 12ನೇ ಶತಮಾನದಲ್ಲಿ ಬಸವಾದಿ ಕೂಡ ಕನ್ನಡದಲ್ಲಿ ವಚನಗಳನ್ನು ರಚಿಸಿ ಸಂಸ್ಕೃತ ಭಾಷೆ ಸರಿಸಮನಾಗಿ ಕನ್ನಡದಲ್ಲೂ ವಚನಗಳನ್ನು ರಚಿಸಿದರು.

ಕರ್ನಾಟಕದಲ್ಲಿ ಪ್ರಮುಖವಾಗಿ ನಾವು ಚಿತ್ರದುರ್ಗದ ಐತಿಹಾಸಿಕ ಮುರುಘಾಮಠವನ್ನು ಕಾಣಬಹುದು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಈ ಮಠವು ತನ್ನನ್ನು ತಾನು ತೊಡಗಿಸಿಕೊಂಡಿದೆ.

ಚಿತ್ರದುರ್ಗ ಐತಿಹಾಸಿಕ ನಗರ ಚಿತ್ರದುರ್ಗ ಪ್ರತಿವರ್ಷದಂತೆ ಈ ವರ್ಷವೂ ಶರಣ ಸಂಸ್ಕೃತಿ ಉತ್ಸವ ಅನೇಕ ವಿಶೇಷಗಳಿಗೆ ಸಾಕ್ಷಿಯಾಯಿತು. ಹಲವು ದಿನಗಳಿಂದ ನಡೆಯುತ್ತಿರುವ ಉತ್ಸವ ಮತ್ತೊಂದು ವಿಶೇಷತೆಗೆ ಕಾರಣವಾಯಿತು. ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ನೇತೃತ್ವದಲ್ಲಿ ಅದ್ದೂರಿ ಜನಪದ ಜಾತ್ರೆಯೇ ನಡೆಯಿತು. ಲಕ್ಷಾಂತರ ಜನ ಆ ಸನ್ನಿವೇಶವನ್ನು ಕಣ್ತುಂಬಿಕೊಂಡರು.

ಇಂದು ಮುಂಜಾನೆ ಎಂದಿನಂತೆ ಮುರುಘಾ ಶರಣರು ಸಹಜ ಶಿವಯೋಗ ಪ್ರಾತ್ಯಕ್ಷಿಕೆಯನ್ನು ಶ್ರೀಮಠದ ಅನುಭವಮಂಟಪದಲ್ಲಿ ನಡೆಸಿಕೊಟ್ಟ ನಂತರ ಮುರುಘಾ ಶಾಂತವೀರ ಸ್ವಾಮಿಗಳ ಗದ್ದುಗೆಯ ಮುಖಾಂತರ ಶ್ರೀಮಠದ ಪ್ರಾಂಗಣದಲ್ಲಿ ಸಿಂಗರಿಸಿದ್ದ ಪುಷ್ಪಾಲಂಕೃತ ಸಾರೋಟನತ್ತ ಸಾಗಿ ನಾಡಿನ ನಾನಾ ಮಠಗಳ ಸ್ವಾಮಿಗಳು, ಬಸವ ಭಕ್ತರು, ಸಾರ್ವಜನಿಕರು, ಕಲಾವಿದರು, ಜನಪ್ರತಿನಿಧಿಗಳ ಹರ್ಷೋದ್ಘಾರಗಳ ನಡುವೆ ಸಾರೋಟವನ್ನು ಏರಿದರು. ನಂತರ ಉತ್ಸವ ಸಮಿತಿ ಸೇರಿದಂತೆ ನಾನಾ ಜಾತಿ ವರ್ಗಗಳ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಶರಣರಿಗೆ ಗೌರವ ವಂದನೆ ಸಲ್ಲಿಸಿದರು. ನಂತರ ಜನತೆ ಮತ್ತು ಕಲಾತಂಡಗಳು ಮುಂಚೂಣಿಯಲ್ಲಿ ಶ್ರೀಗಳ ಸಾರೋಟಿಗೆ ಸಾಥ್ ನೀಡಿದರು.

ಜನಪದ ಕಲಾಮೇಳಕ್ಕೆ ಚೆನ್ನಗಿರಿಹಾಲಸ್ವಾಮಿ ವಿರಕ್ತಮಠದ ಶ್ರೀ ಮ.ನಿ.ಪ್ರ. ಜಯದೇವಸ್ವಾಮಿಗಳು ನಗಾರಿ ಬಾರಿಸುವುದರ ಮೂಲಕ ಉತ್ಸವಕ್ಕೆ ಸಂಭ್ರಮದ ಚಾಲನೆ ನೀಡಿದರು. ಬಳಿಕ ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಬಂದಿದ್ದ ವಿವಿಧ ಪ್ರಕಾರದ ನೂರಾರು ಜಾನಪದ ಕಲಾತಂಡಗಳು ತಮ್ಮದೇ ಆದ ವಿಶಿಷ್ಟ ಭಂಗಿಯ ಪ್ರದರ್ಶನ ನೀಡುತ್ತಾ ಸಾಗಿದ ದೃಶ್ಯ ಸುಮಾರು ಎರಡೂವರೆ ಕಿ.ಮೀ.ನಷ್ಟು ಉದ್ದ ಸಾಗಿತು. ಇದರಲ್ಲಿ ಮುಖ್ಯವಾಗಿ ಬೆಂಕಿಕರಗ, ಹಗಲುವೇಷ, ದೊಡ್ಡಾಟ, ಪೂಜಾ ಕುಣಿತ, ಮಹಿಳಾ ಪುರುಷರ ವೀರಗಾಸೆ, ಒನಕೆ ಕುಣಿತ, ಝಾಂಜ್‌ಮೇಳ, ಜಗ್ಗಲಗಿಮೇಳ, ನಗಾರಿ, ಹಲಗೆ ಮಜಲ್, ಕೊಂಬುಕಹಳೆ, ಭಜನೆ, ವೀರಗಾಸೆನೃತ್ಯ, ಬ್ರಾಸ್ ಬ್ಯಾಂಡ್, ಪಟಕುಣಿತ, ಕರಡಿ ವೇಷ, ಹುಲಿವೇಷ, ಪಾಳೇಗಾರರು, ನಂದಿಕೋಲು, ಸಮಾಳ, ಶಹನಾಯಿ ಭಜಂತ್ರಿ, ತಮಟೆ, ಡೊಳ್ಳು, ಬ್ಯಾಂಡ್ ವಾದ್ಯ, ಕಿಮದರಿಜೋಗಿ, ಕೀಲುಕುಣಿತ, ಹೆಜ್ಜೆಮೇಳ, ಗಾರುಡಿಗೊಂಬೆ, ವೀರ ಮಕ್ಕಳ ಕುಣಿತ, ಮರಗಾಲು, ಕೋಲಾಟ, ಭಜನೆ, ಲಂಬಾಣಿ ಮಹಿಳೆಯರ ನೃತ್ಯ, ನಾಸಿಕ್ ಡೋಲ್, ಭೂತನ ಕುಣಿತ, ಸೋಮನ ಕುಣಿತ, ಕಾಡು ಗೊಲ್ಲರ ಕುಣಿತ, ದಟ್ಟಿ ಕುಣಿತ, ಬೀಸು ಕಂಸಾಳೆ, ಬಸವ ಹೆಜ್ಜೆ ಮೇಳ, ಹೀಗೆ ಹಲವಾರು ತಂಡಗಳು ತಮ್ಮದೇ ಕಲೆ ಪ್ರದರ್ಶಿಸುತ್ತಾ ಸಾಗುತ್ತಿದ್ದ ದೃಶ್ಯ, ರಸ್ತೆ ಬದಿಯಲ್ಲಿ ಮನೆ, ಮಹಡಿ, ಮಹಲುಗಳ ಮೇಲೆ ನಿಂತು ವೀಕ್ಷಿಸುತ್ತಿದ್ದ ಜನತೆಗೆ ಖುಷಿಕೊಟ್ಟಿತು. ಶರಣರೊಂದಿಗೆ ಈ ಮೇಳದಲ್ಲಿ ಧಾರ್ಮಿಕ, ಐತಿಹಾಸಿಕ ಪುಣ್ಯಪುರುಷರ ಸ್ತಬ್ಧಚಿತ್ರಗಳೊಂದಿಗೆ, ಎಸ್.ಜೆ.ಎಂ.ವಿದ್ಯಾಪೀಠದ ಶಾಲಾಕಾಲೇಜುಗಳ ವಿದ್ಯಾರ್ಥಿಗಳು ನಿರ್ಮಾಣ ಮಾಡಿದ ಸಮಾಜಿಕ, ಪರಿಸರದ ಮೇಲೆ ಪ್ರಭಾವ ಮತ್ತು ಪರಿಣಾಮ ಬೀರುವ ಸ್ತಬ್ಧಚಿತ್ರಗಳಲ್ಲಿ ಶರಣರ ಸಮಾಜ ಪರಿವರ್ತನೆ ಸಾಧನೆ ಬಿಂಬಿಸುವ ದುಶ್ಚಟ ಬಿಡಿಸುವಿಕೆ, ಸಾಮೂಹಿಕ ಕಲ್ಯಾಣ, ಗೋವಾ ನಿರಾಶ್ರಿತರಿಗೆ ಸಾಂತ್ವಾನ, ಪರಿಸರ ಸ್ವಚ್ಛತೆ ಜಾಗೃತಿ ಸ್ತಬ್ಧಚಿತ್ರಗಳು, ಎಸ್.ಜೆ.ಎಂ. ಫಾರ್ಮಸಿ ಕಾಲೇಜಿನ 'ಸ್ವಚ್ಛ ಭಾರತ್', ಎಸ್.ಜೆ.ಎಂ. ನರ್ಸಿಂಗ್ ಕಾಲೇಜಿನ 'ಗ್ರೀನ್ ಇಂಡಿಯಾ', ಶ್ರೀ ಬಸವೇಶ್ವರ ಮೆಡಿಕಲ್ ಕಾಲೇಜಿನ 'ಮಿಷನ್ ಇಂದ್ರಧನುಷ್', ಶ್ರೀ ಬೃಹನ್ಮಠ ಸಂ.ಪ.ಪೂ. ಕಾಲೇಜಿನ 'ಮುರುಘಾಮಠದ ಆನೆ ಬಾಗಿಲು', ಶ್ರೀಬೃಹನ್ಮ ಹೈಸ್ಕೂಲ್‌ನ 'ಜಯದೇವ ಜಗದ್ಗುರುಗಳು', ಎಸ್.ಬಿ.ಎಂ.ಬ್ಯಾಂಕ್‌ನ 'ಹಂಪಿ ಕಲ್ಲಿನ ರಥ', ಬಸವೇಶ್ವರ ಆಸ್ಪತ್ರೆಯ 'ಬೇಲೂರು ಹಳೇಬೀಡು ಕಲಾಕೃತಿ', ಎಸ್.ಜೆ.ಎಂ. ವಿದ್ಯಾಪೀಠದ 'ಜೋಗದಜಲಪಾತ' ಸ್ತಬ್ಧಚಿತ್ರಗಳು ಜನರನ್ನು ಆಕರ್ಷಿಸಿದವು.

ಸ್ವಚ್ಛ ಭಾರತ ಕುರಿತು ಸ್ತಬ್ಧಚಿತ್ರ



ಚಿತ್ರದುರ್ಗದಲ್ಲಿ ನಡೆದ ಶರಣರ ಸಂಸ್ಕೃತಿ ಉತ್ಸವ ಅನೇಕ ಕಾರಣಗಳಿಗೆ ವಿಶೇಷವೆನಿಸಿತು. ಹಲವು ಸ್ತಬ್ಧಚಿತ್ರಗಳು ಈ ಉತ್ಸವದಲ್ಲಿ ಪಾಲ್ಗೊಂಡಿದ್ದವು. ಅದರಲ್ಲಿ ಪ್ರಮುಖವಾಗಿ ಪರಿಸರ ಸ್ವಚ್ಛತೆಯನ್ನು ಸಾರುವ ಎಸ್.ಜೆ.ಎಂ. ಫಾರ್ಮಸಿ ಕಾಲೇಜಿನ ಸ್ವಚ್ಛ ಭಾರತ ಸ್ತಬ್ಧಚಿತ್ರ ತುಂಬ ಉತ್ತಮವಾಗಿ ಮೂಡಿ ಬಂದಿತ್ತು.

ಈ ಸ್ತಬ್ಧ ಚಿತ್ರದ ಪ್ರಮುಖ ವಿಶೇಷತೆಗಳು:

- ❖ ಪರಿಸರ ಸ್ವಚ್ಛತೆಯನ್ನು ಸಾರುವ ಸಾಮಾಜಿಕ ಕಳಕಳಿಯುಳ್ಳ ನೈರ್ಮಲ್ಯತೆಯನ್ನು ಸಾರುವ ವಿಷಯದಿಂದ ಕೂಡಿತ್ತು.
- ❖ ರಾಷ್ಟ್ರಪತಿ ಮಹಾತ್ಮ ಗಾಂಧೀಜಿ ಅವರು ಕಂಡ ಸ್ವಚ್ಛ ಭಾರತ, ಸ್ವಚ್ಛ ಭಾರತದ ಕನಸನ್ನು ನನಸಾಗಿಸೋಣ. ಸ್ವಚ್ಛ ಭಾರತ ಅಭಿಯಾನ ಕೇವಲ ಸರ್ಕಾರಿ ಕಾರ್ಯಕ್ರಮದಲ್ಲಿ ದೇಶದ ಪ್ರತಿಯೊಬ್ಬ ನಾಗರೀಕ ಜವಬ್ದಾರಿ ಇದಾಗಿದೆ ಎಂದು ಸಾರುವಂತಿತ್ತು.
- ❖ ಮಕ್ಕಳಲ್ಲಿ ಸ್ವಚ್ಛತೆಯ ಅರಿವು ಮೂಡಿಸುವಂತಿತ್ತು. ಮಕ್ಕಳಲ್ಲಿ ಸ್ವಚ್ಛ ಭಾರತದ ನಿರ್ಮಾಣದ ಬಗ್ಗೆ ಅರಿವು ಮೂಡಿದರೆ ನಾಳಿನ ಬದುಕು ಸುಂದರವಾಗುತ್ತದೆ ಎಂದು ಹೇಳುತ್ತಿತ್ತು.

- ಈ ಸ್ತಬ್ಧಚಿತ್ರವನ್ನು ಕಂಡ ಜನರು ಹೆಚ್ಚಿನ ಸಾರ್ವಜನಿಕ ಪ್ರದೇಶಗಳಲ್ಲಿ ಕೊಳ, ಕಸಗಳನ್ನು ನೋಡಿ ನೋಡಿ ತಾವೇನು ಮಾಡಲಾಗದೆ ಅವುಗಳಿಗೆ ಅನಿವಾರ್ಯವಾಗಿ ಹೊಂದಿಕೊಂಡಂತಿದ್ದ ಬಹಳಷ್ಟು ಜನರಲ್ಲಿ ಸ್ವಚ್ಛತೆ, ನೈರ್ಮಲ್ಯದ ಬಗ್ಗೆ ಗಮನ ಕೊಡುವ ಆಶಾಭಾವನೆಗಳು ಚಿಗುರೊಡೆದಿದೆ.
- ಬಯಲುಶೌಚ ನಿರ್ಮೂಲನೆ ಸಾರ್ವಜನಿಕರಲ್ಲಿ ನಿರ್ಮಲೀಕರಣಕ್ಕಾಗಿ ಮಾನಸಿಕ ಬದಲಾವಣೆ ಉಂಟುಮಾಡಿದೆ.
- ಜನರು ಸಾರ್ವಜನಿಕ ಸ್ಥಳದಲ್ಲಿ ಉಗುಳಬಾರದು, ಇತರರಿಗೆ ಉಗುಳಲೂ ಬಿಡಬಾರದು ಎಂದು ಸಾರುತ್ತಿತ್ತು.
- ಎಲ್ಲರೂ ತಮ್ಮ ಮನೆ ಸುತ್ತ ಮುತ್ತಲನ್ನು ಶುಚಿಯಾಗಿಟ್ಟುಕೊಂಡರೆ ಸ್ವಚ್ಛ ಭಾರತ ನಿರ್ಮಾಣ ಸಾಧ್ಯ. ಕಳೆದ 65 ವರ್ಷಗಳಿಂದಲೂ ಇದನ್ನು ಹೇಳುತ್ತ ಬಂದಿದ್ದೇವೆ. ಆದರೂ ನಮ್ಮಿಂದ ಸಾಧ್ಯವಾಗಿಲ್ಲ. ಆದರೆ ಇಂತಹ ಶರಣರ ಉತ್ಸವಗಳಲ್ಲಿ ಸ್ವಚ್ಛ ಭಾರತದ ಕುರಿತು ಸ್ತಬ್ಧಚಿತ್ರ ಪ್ರದರ್ಶನ ನಡೆಯುವುದರಿಂದ ಜನರಲ್ಲಿ ಜಾಗೃತಿ ಮೂಡಿಸಲು ಸಹಕಾರಿಯಾಗುತ್ತದೆ.
- ಸಂತರು, ಶರಣರು, ಸ್ವಾಮೀಜಿಗಳು, ಮಠಾಧೀಶರು ಇಂತಹ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಅರಿವನ್ನುಂಟು ಮಾಡಿದರೆ ಜನರು ಶರಣರ ಮೇಲಿನ ಅಭಿಮಾನದಿಂದ ಅವರ ಮಾತುಗಳಿಂದ ಉತ್ತೇಜಿತರಾಗಿ ಸ್ವಚ್ಛತೆ, ನೈರ್ಮಲ್ಯದ ಕಡೆ ಗಮನಕೊಡುತ್ತಾರೆ. ಆಗ ಈ ಸ್ತಬ್ಧಚಿತ್ರ ಪ್ರದರ್ಶನದ ಉದ್ದೇಶ ಈಡೇರಿದಂತಾಗುತ್ತದೆ.
- ಶರಣರ ಉತ್ಸವ ಅಂದರೆ ಕೇವಲ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುವುದಕ್ಕಷ್ಟೆ ಸೀಮಿತವಲ್ಲದೆ ಸಾಮಾಜಿಕ ಕಳಕಳಿಯುಳ್ಳ ಕಾರ್ಯಕ್ರಮವನ್ನು ಚಿತ್ರದುರ್ಗದ ಮುರುಘಾಮಠದ ಶರಣರ ಉತ್ಸವದಲ್ಲಿ ಆಯೋಜಿಸಿರುವುದು ನಾವೆಲ್ಲರೂ ಶ್ಲಾಘಿಸಬೇಕಾದ ವಿಚಾರವೆ ಸರಿ.
- ನಮ್ಮ ಗ್ರಾಮ, ನಗರಗಳು, ಊರು ಕೇರಿಗಳು, ರಸ್ತೆ ಬೀದಿಗಳು, ಅವುಗಳ ಬದಿಗಳು, ಕಟ್ಟಡಗಳು, ವನ ಉದ್ಯಾನಗಳು, ನದಿ ಸರೋವರಗಳು ಸ್ವಚ್ಛವಾಗುತ್ತವೆ. ಸ್ವಚ್ಛತೆ ಒಂದು ಸಹಜ ಗುಣ. ಆದರೆ ನಮ್ಮಲ್ಲಿದು ಮೈಗೂಡಿಲ್ಲ. ಸ್ವಚ್ಛ ಮಾಡುವುದು ಗಲೀಜು ಕೆಲಸ ಎಂಬ ಕೀಳರಿಮೆ ಮೊದಲು ನಮ್ಮ ಮನಸ್ಸಿನಿಂದ ಹೊರಹೋಗಬೇಕು. ಅದು ಸಾಧ್ಯವಾಗಲು ಇಂತಹ ಸ್ವಚ್ಛತೆಯ ಕುರಿತ ಸ್ತಬ್ಧಚಿತ್ರಗಳು ಪ್ರಮುಖ ಪಾತ್ರವಹಿಸುತ್ತವೆ.

❖ ಪರಿಸರ ಸಂರಕ್ಷಣೆ, ಸ್ವಚ್ಛತೆ, ನೈರ್ಮಲೀಕರಣ ಕುರಿತು ಜನರಲ್ಲಿ ಜಾಗೃತಿ ಉಂಟು ಮಾಡಲು ಕೇವಲ ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಸರ್ಕಾರದ ಜೊತೆಗೆ ಖಾಸಗಿ ಸಂಸ್ಥೆಗಳು, ಜನಪ್ರತಿನಿಧಿಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು, ಸಾಮಾಜಿಕ ಕಾರ್ಯಕರ್ತರು, ಶರಣರ ಸಹಭಾಗಿತ್ವದಿಂದ ಸ್ವಚ್ಛತೆಯ ಬಗ್ಗೆ ಅಭಿಯಾನವನ್ನು ಮೂಡಿಸಬಹುದು. ಅಂತಹ ಸ್ವಚ್ಛತಾ ಅಭಿಯಾನವನ್ನು ಈ ಶರಣರ ಉತ್ಸವದಲ್ಲಿ ಪ್ರಮುಖವಾಗಿ ನಾವು ಕಾಣಬಹುದು.

ಇದು ಕೇವಲ ಧಾರ್ಮಿಕ, ಸಾಂಸ್ಕೃತಿಕ ಉತ್ತಮವಾಗಿರದೆ ಸಾಮಾಜಿಕ ಕಳಕಳಿಯುಳ್ಳ ಉತ್ಸವವಾಗಿ ರೂಪುಗೊಂಡು ಇಲ್ಲಿ ಸ್ತಬ್ಧಚಿತ್ರವು ಪ್ರಮುಖ ಪಾತ್ರ ನಿರ್ವಹಿಸಿದೆ.

ಅಧ್ಯಾಯ – 8

ಶಾಲೆಗಳಲ್ಲಿ ಸ್ತಬ್ಧಚಿತ್ರಗಳ ಸ್ಪರ್ಧೆ

61 ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ತ ಹಮ್ಮಿಕೊಳ್ಳಲಾಗಿದ್ದ ಸ್ತಬ್ಧಚಿತ್ರ ಸ್ಪರ್ಧೆಯಲ್ಲಿ ಕೊಪ್ಪಳದ ಸರಸ್ವತಿ ವಿದ್ಯಾಮಂದಿರ ಶಾಲೆಯ ಭುವನೇಶ್ವರ ದೇವಿಯ ಸ್ತಬ್ಧಚಿತ್ರ ಪ್ರಥಮ ಬಹುಮಾನಪಡೆದಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಶಾಲೆ ಮತ್ತು ಇಲಾಖೆಗಳ 15 ಕ್ಕೂ ಹೆಚ್ಚು ಸ್ತಬ್ಧಚಿತ್ರಗಳು ಭಾಗವಹಿಸಿದ್ದವು. ಇದರಲ್ಲಿ ಸರಸ್ವತಿ ವಿದ್ಯಾಮಂದಿರ ಭುವನೇಶ್ವರಿ ದೇವಿಯ ಸ್ತಬ್ಧಚಿತ್ರ ಪ್ರಥಮ ಬಹುಮಾನಕ್ಕೆ ಪಾತ್ರವಾಗಿದೆ.

ಸ್ತಬ್ಧಚಿತ್ರದಲ್ಲಿ ರಾಜ್ಯದ ಸಂಸ್ಕೃತಿ ಐತಿಹಾಸಿಕ ಪರಂಪರೆಯನ್ನು ಬಿಂಬಿಸುವ ವಿವಿಧ ವೇಷಭೂಷಣಗಳಾದ ಭುವನೇಶ್ವರಿ, ಸಂಗೊಳ್ಳಿರಾಯಣ್ಣ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ, ಬಸವಣ್ಣ, ಕೊಡಗಿನ ಕಾವೇರಿಯ ವೇಷಭೂಷಣಗಳನ್ನು ಧರಿಸಿದ್ದರು. ಈ ಸ್ತಬ್ಧಚಿತ್ರಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ತಂಗಡಿಯವರು ಪ್ರಥಮ ಬಹುಮಾನ ವಿತರಿಸಿದರು. ಈ ಸಂದರ್ಭದಲ್ಲಿ ಸಂಸದ ಕರಡಿ ಸಂಗಣ, ಶಾಸಕ ರಾಘವೇಂದ್ರ ಹಿಟ್ನಾಳಿ, ಪ್ರಭಾರಿ ಜಿಲ್ಲಾಧಿಕಾರಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಶಾಲೆಯ ಕಾರ್ಯದರ್ಶಿ ಆರ್.ಹೆಚ್.ಅತ್ತನೂರ ಅಭಿನಂದಿಸಿದ್ದಾರೆ.

ಹೀಗೆ ಕಾರ್ಯಕ್ರಮವು ಶಾಲೆಯಲ್ಲಿ ಉತ್ತಮವಾಗಿ ಮೂಡಿಬಂದು ಸಮಯ ಪಾಲನೆಯಿಂದ ನಡೆದು ಎಲ್ಲರನ್ನು ಆಕರ್ಷಿಸಿತು.

ವಿದ್ಯಾಮಂದಿರ ಶಾಲೆಯ ಸ್ತಬ್ಧಚಿತ್ರ



ಬಹುಮಾನ ವಿತರಣೆ ಚಿತ್ರ



ಶಾಲೆಯಲ್ಲಿ ಸ್ತಬ್ಧಚಿತ್ರಗಳ ಸ್ಪರ್ಧೆಯಿಂದ ಆಗುವ ಅನುಕೂಲಗಳು:

- ಮಕ್ಕಳಲ್ಲಿ ಸೃಜನಶೀಲ ಅಭಿವ್ಯಕ್ತಿಯ ಶಕ್ತಿಯನ್ನು ಬೆಳೆಸುವ ಸಾಮರ್ಥ್ಯವನ್ನು ಬೆಳೆಸುತ್ತದೆ.
- ಮಕ್ಕಳಲ್ಲಿ ಶ್ರಮಗೌರವದ ಅರಿವು ಉಂಟಾಗುವುದು.
- ಮಕ್ಕಳಲ್ಲಿ ಸೌಂದರ್ಯಾನ್ವೇಷಕ ಸೃಜನಶೀಲತೆಗಳಿಂದ ಕೂಡಿದ ರಚನಾತ್ಮಕ ಕಾರ್ಯ ಪ್ರವೃತ್ತಿ ಹೆಚ್ಚಿಸುತ್ತದೆ.
- ಪ್ರಜಾಸತ್ತಾತ್ಮಕ ಗುಣಗಳಾದ ಪರಸ್ಪರ ಸಹಾಯ, ಸಹಾನುಭೂತಿ ಕೊಡು ತೆಗೆದುಕೊಳ್ಳುವ ಸೋದರ ಮನೋಭಾವನೆಗಳಿಗೆ ಸಂಬಂಧಿಸಿದೆ. ಜೀವನ ವಿಧಾನಕ್ಕೆ ಯೋಗ್ಯ ತರಬೇತಿ ನೀಡುವುದು.
- ಮಕ್ಕಳಲ್ಲಿ ಸಂಶೋಧನಾತ್ಮಕ ಅಧ್ಯಯನಕ್ಕೆ ಪ್ರಯೋಗಕ್ಕೆ ಅವಕಾಶವಿದೆ.
- ಮಕ್ಕಳು ಸತತ ಕ್ರಿಯಾಶೀಲರಾಗಿದ್ದು, ಸದಾ ಲವಲವಿಕೆಯಿಂದ ಸಂತಸ ಕಲಿಕೆಯಿಂದ ಪ್ರಮುಲ್ಲಿತರಾಗುತ್ತಾರೆ.
- ಮಕ್ಕಳಲ್ಲಿ ಸ್ತುಬ್ಧಚಿತ್ರ ತಯಾರಿಕೆಯು ಯುಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ, ಸ್ವತಂತ್ರ ಆಲೋಚನೆ, ಮುಂದಾಲೋಚನೆ ಮುಂತಾದ ಸಾಮರ್ಥ್ಯ, ಗುಣ ಸ್ವಭಾವಗಳು ಬೆಳೆಸುತ್ತದೆ.

- ಸ್ತಬ್ಧಚಿತ್ರದ ಸ್ಪರ್ಧೆಯಿಂದ ಮಕ್ಕಳು ಆಳವಾದ ಜ್ಞಾನ ಹೊಂದಿ ಅಷ್ಟೇ ಮಟ್ಟದ ಅಜ್ಞಾತದ ಇತರ ವಿಚಾರಗಳ ಬಗ್ಗೆ ಪ್ರದರ್ಶಿಸುವ ಸಾಧ್ಯತೆಗಳಿವೆ.
- ಮಕ್ಕಳು ಸ್ತಬ್ಧಚಿತ್ರದ ತಯಾರಿಕೆಯಲ್ಲಿ ತೊಡಗಿಸಿಕೊಳ್ಳುವುದರಿಂದ ಸಂಪಾದಿಸಿದ ಪ್ರಾಯೋಗಿಕ ಜ್ಞಾನ ದೀರ್ಘಕಾಲ ನೆನಪಿನಲ್ಲಿಟ್ಟುಕೊಳ್ಳುವರು.
- ಮಕ್ಕಳಲ್ಲಿ ಜವಬ್ದಾರಿ ಸಹಕಾರ ಮನೋಭಾವ ಗುಣಗಳಿಗೆ ಬೆಳವಣಿಗೆಗೆ ಪ್ರೇರಕವಾದ ಕಾರ್ಯವಾಗಿದೆ.
- ಮಕ್ಕಳಿಗೆ ದೈನಂದಿನ ಬದುಕಿನಲ್ಲಿ ಕಲಾತ್ಮಕ ಬದುಕಿನ ಮಹತ್ವ ತಿಳಿಸುವುದು.
- ಉತ್ತಮ ಆರೋಗ್ಯಕರ ಸ್ಪರ್ಧಾ ಮನೋಭಾವ ಬೆಳಸುವುದು.
- ವಿಚಾರವಂತರನ್ನಾಗಿಯೂ ಭಾವನಾ ಅಭಿವ್ಯಕ್ತಿಗೆ ಸಶಕ್ತರನ್ನಾಗಿಸುವುದು.
- ಕಠಿಣ ವಿಷಯಗಳನ್ನು ಸರಳೀಕರಿಸಿ ಅರ್ಥೈಸುವುದು.
- ನಮ್ಮ ಕಲೆ, ಸಂಸ್ಕೃತಿ, ಆಚಾರ, ವಿಚಾರಗಳನ್ನು ಪರಂಪರೆಯನ್ನು ಮನನ ಮಾಡಿಸುವುದು. ಮುಂದಿನ ಜನಾಂಗಕ್ಕೆ ವರ್ಗಾಯಿಸುವುದು.
- ಜ್ಞಾನೇಂದ್ರಿಯಗಳು ಮತ್ತು ಭಾವನೆಗಳಿಗೆ ಸರಿಯಾದ ಸಾಮರಸ್ಯ ಏರ್ಪಡಿಸಿ ಅನುಭವ ತಳಹದಿಯ ಮೇಲೆ ತರಬೇತಿ ಪಡೆಯಲು ಸಹಕಾರಿಯಾಗಿದೆ.
- ವಿದ್ಯಾರ್ಥಿಯ ವ್ಯಕ್ತಿತ್ವ ರೂಪಿಸುವ ಅನುಭವ ಜನ್ಯ ತರಬೇತಿ ಶಿಕ್ಷಣ ಕೊಡುವ ದೆಸೆಯಲ್ಲಿ ಮಕ್ಕಳ ಮನಸ್ಸು ಮತ್ತು ಶರೀರ ಎರಡನ್ನು ತರಬೇತಿ ಹೊಂದಿ ಅಂತರಾಳದನುಭವ ಸೃಷ್ಟಿಗೊಂಡು ಜೀವನ ಕಲಾತ್ಮಕವಾಗಿರಲು ಉತ್ತಮವಾದ ಜ್ಞಾನಪ್ರಸಾರ ಮಾರ್ಗವಾಗಿದೆ.
- ಮಗು ಸಮಾಜಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭವು ಮುಗ್ಧವಾಗಿದ್ದು, ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎನ್ನುವ ಪರಿಜ್ಞಾನವಿರುವುದಿಲ್ಲ. ಮಗು ವಿದ್ಯಾಕ್ಷೇತ್ರಕ್ಕೆ ಬಂದ ಸಂದರ್ಭದಲ್ಲೂ ಮಗುವಿಗೆ ಜೀವನ ಎಂದರೇನು? ಯಾವ ಸಂದರ್ಭದಲ್ಲಿ ಯಾವ ರೀತಿ ವರ್ತಿಸಬೇಕು? ಅಥವಾ ಯಾವ ವಿಚಾರಗಳು ಅರ್ಥವಾಗದೇ ಇರಬಹುದು. ಇಂತಹ ಸಂದರ್ಭದಲ್ಲಿ ಅಂತಹ ಮಕ್ಕಳಿಗೆ ವಿಚಾರ ಅಥವಾ ಅಂಶವನ್ನು ಅರ್ಥೈಸಲು ಇರುವ ಒಂದೇ ದಾರಿ ಅದೇ ಶಿಕ್ಷಣ. ಅದರ ಉಪವಿಭಾಗವಾಗಿ ಸ್ತಬ್ಧಚಿತ್ರ, ಸ್ತಬ್ಧಚಿತ್ರ ರಚನೆ, ಸ್ತಬ್ಧಚಿತ್ರ ಪ್ರದರ್ಶನದಲ್ಲಿ ತೊಡಗಿಸಿಕೊಳ್ಳುವಿಕೆ.
- ವಿದ್ಯಾರ್ಥಿಯ ಬಿಡುವಿನ ವೇಳೆಯನ್ನು ರಚನಾತ್ಮಕ ರೀತಿಯಲ್ಲಿ ಉಪಯೋಗಿಸಲು ಸಹಕಾರಿಯಾಗುತ್ತದೆ.

- ವಿದ್ಯಾರ್ಥಿಗಳಲ್ಲಿ ಪೌರತ್ವ, ವೈವಿಧ್ಯತೆಯಲ್ಲಿ ಏಕತೆ, ಪ್ರಜಾಪ್ರಭುತ್ವವಾದ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ, ಸಾಮಾಜಿಕ ನ್ಯಾಯ, ಜಾತ್ಯಾತೀತವಾದ ಸಮಾಜವಾದ ಪರಿಚಯವನ್ನು ಮೂಡಿಸುತ್ತದೆ.

ಹೀಗೆ ಸ್ತಬ್ಧಚಿತ್ರವು ಶಾಲಾ ವಿದ್ಯಾರ್ಥಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ.

ಶಾಲೆಗಳಲ್ಲಿ ಸ್ತಬ್ಧಚಿತ್ರಗಳ ಸ್ಪರ್ಧೆಯಲ್ಲಿ ಶಿಕ್ಷಕರ, ಶಾಲೆಗಳ ಪಾತ್ರ:

- ಶಿಕ್ಷಕರು ಶಾಲೆಗಳಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ, ರಾಷ್ಟ್ರೀಯ ಐಕ್ಯತೆಗೆ ಶ್ರಮಿಸಿದ ಮಹಾನ್ ವ್ಯಕ್ತಿಗಳ ಜಯಂತಿ ಕುರಿತ ಸ್ತಬ್ಧಚಿತ್ರ ತಯಾರಿಸಲು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು.
- ಅಂತರ ಶಾಲಾ ಸ್ತಬ್ಧಚಿತ್ರ ಸ್ಪರ್ಧೆ ಏರ್ಪಡಿಸಬೇಕು. ಅಂತರಶಾಲಾ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ ಸಾಂಸ್ಕೃತಿಕ ಪ್ರಶಾಂಸಾತ್ಮಕ ಚಟುವಟಿಕೆಯಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಬೇಕು.
- ಸ್ತಬ್ಧಚಿತ್ರದಲ್ಲಿ ರಚಿಸಲು ಮುಂದಾಗುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು. ಹಣಕಾಸಿನ ನೆರವನ್ನು ಶಾಲೆಯಿಂದ ಒದಗಿಸಬೇಕು. ಸ್ತಬ್ಧಚಿತ್ರ ರಚಿಸುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ತಪ್ಪನ್ನು ತಿದ್ದಿ ತೀಡಿ ಮಗುವಿನ ಆಸಕ್ತಿ ಸೃಜನಶೀಲತೆಯ ಸ್ತಬ್ಧಚಿತ್ರ ರಚನೆಗೆ ಉತ್ತೇಜನ ನೀಡಬೇಕು.
- ಅಂತರಶಾಲಾ ಸ್ತಬ್ಧಚಿತ್ರ ಸ್ಪರ್ಧೆ ಏರ್ಪಡಿಸಿ ಉತ್ತಮವಾಗಿ ಮೂಡಿ ಬಂದ ಸ್ತಬ್ಧಚಿತ್ರಕ್ಕೆ ಬಹುಮಾನ ನೀಡಿ ಪ್ರೋತ್ಸಾಹಿಸಬೇಕು.
- ವಿದ್ಯಾರ್ಥಿಗಳನ್ನು ಚಿಂತಕರಾಗಿ ರೂಪಿಸಿ, ರಾಷ್ಟ್ರೀಯ ಭಾವೈಕ್ಯತೆಗೆ ಪ್ರಚೋದಿಸಿ, ವೈಜ್ಞಾನಿಕ ಮನೋಭಾವ ಬೆಳೆಸಿ, ಆಧ್ಯಾತ್ಮಿಕ ಮತ್ತು ಮಾನಸಿಕ ಸ್ವಾತಂತ್ರ್ಯ ನೀಡಿ ಸಂವಿಧಾನದ ಸಾಮಾಜಿಕ, ಜಾತ್ಯಾತೀತ, ಪ್ರಜಾಪ್ರಭುತ್ವದ ಧ್ಯೇಯಗಳ ಸಾಧನೆಗೆ ಅವಕಾಶ ಮಾಡಿಕೊಡಬೇಕು.

ಶಾಲೆಗಳಲಿ ಸ್ತಬ್ಧಚಿತ್ರಗಳ ಸ್ಪರ್ಧೆ ಏರ್ಪಡಿಸಲು ಇರುವ ಇತಿಮಿತಿಗಳು:

- ಶಿಕ್ಷಕರಲ್ಲಿ ಇಂತಹ ಕಾರ್ಯಕ್ರಮವನ್ನು ಏರ್ಪಡಿಸಲು ಆಸಕ್ತಿ ಇಲ್ಲದಿರುವುದು. ಕೇವಲ ಪಠ್ಯ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುವುದು.

- ❖ ಚಿತ್ರಕಲಾ ಶಿಕ್ಷಕರ ಕೊರತೆ ಶಾಲೆಗಳಲ್ಲಿ ವಿಷಯ ಬೋಧನೆ ಮಾಡಲು ಶಿಕ್ಷಕರು ಇರುತ್ತಾರೆ ಹೊರತು, ಸಹಪಠ್ಯ ವಿಷಯಕ್ಕೆ ಸಂಬಂಧಪಟ್ಟ ಶಿಕ್ಷಕರು ಇರುವುದಿಲ್ಲ. ಶಾಲಾ ಆಡಳಿತ ಮಂಡಳಿಯ ಇಂತಹ ಸಹಪಠ್ಯ ಚಟುವಟಿಕೆಗಳಿಗೆ ಉತ್ತೇಜನ ನೀಡದಿರುವುದು.
- ❖ ಸರ್ಕಾರದ ನಿರ್ಲಕ್ಷ್ಯ ಶಾಲೆಗಳಲ್ಲಿ ಚಿತ್ರಕಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಕಡ್ಡಾಯ ಮಾಡದಿರುವುದು, ಸ್ತಬ್ಧಚಿತ್ರ ನಿರ್ಮಿಸಲು ಧನ ಸಹಾಯ, ವಿಶೇಷ ಪ್ರೋತ್ಸಾಹಧನ ನೀಡದಿರುವುದರಿಂದ ಸ್ತಬ್ಧಚಿತ್ರ ರಚನೆಯಾಗಲಿ, ಸ್ಪರ್ಧೆಯಾಗಲಿ ಏರ್ಪಡಿಸಲು ಸಾಧ್ಯವಾಗುತ್ತಿಲ್ಲ.
- ❖ ಸ್ತಬ್ಧಚಿತ್ರ ನಿರ್ಮಿಸಲು ಅಧಿಕ ಹಣ ವ್ಯಯಿಸಬೇಕಾಗಿರುವುದರಿಂದ ಶಾಲಾ ಮಟ್ಟದ ಹಂತದಲ್ಲಿ ಸ್ತಬ್ಧಚಿತ್ರ ಸ್ಪರ್ಧೆ ಏರ್ಪಡಿಸಲು ಸಾಧ್ಯವಾಗುತ್ತಿಲ್ಲ.

ಈ ಎಲ್ಲಾ ಕಾರಣಗಳಿಂದ ಸ್ತಬ್ಧಚಿತ್ರ ಸ್ಪರ್ಧೆಯನ್ನು ಅಂತರಮಟ್ಟ ಹಂತದಲ್ಲಿ ಏರ್ಪಡಿಸುವುದು ಸುಲಭದ ಮಾತಲ್ಲ. ಪೂರ್ವತಯಾರಿಯ ಜೊತೆಗೆ ಹಣದ ಅನುದಾನ ಹಾಗೂ ಸಮಯವಕಾಶ ಸರಿಯಾಗಿ ಕೂಡಿಬಂದಾಗ ಇಂತಹ ಕಾರ್ಯಕ್ರಮಗಳನ್ನು ನಡೆಸಲು ಸಾಧ್ಯ.

ಅಧ್ಯಾಯ – 9

ಸಮಾಜ ಸುಧಾರಕರ ಸ್ತಬ್ಧಚಿತ್ರಗಳು

ನಮ್ಮ ದೇಶವು ಸಾಧುಸಂತರ ನಾಡು. ನೂರಾರ ಸಂತರು, ಸಮಾಜ ಸುಧಾರಕರು, ಮಹಾನಾಯಕರು ಕಾಲಕಾಲಕ್ಕೆ ಈ ನೆಲದಲ್ಲಿ ಜನಿಸಿದರು. ಇವರು ಸಮಾಜದಲ್ಲಿ ಸಾಮರಸ್ಯ ತಂದರಲ್ಲದೆ ಜನರನ್ನು ಸನ್ಮಾರ್ಗದಲ್ಲಿ ಮುನ್ನೆಡೆಸಿದರು. ಸಾಮಾಜಿಕ ಲೋಪದೋಷಗಳನ್ನು ಕೂಡ ಅವರು ತಪ್ಪೆಂದು ಎತ್ತಿ ತೋರಿಸಿದರು.

ಮೇಲುಕೀಳು ಎಂಬ ಭೇದಭಾವವನ್ನು ಖಂಡಿಸಿದರು. ಸಮಾನತೆಯನ್ನು ಸಾರಿದರು. ಜನರ ಹೃದಯವನ್ನು ಬೆಸೆಯುವ ಕಾರ್ಯ ಮಾಡಿದರು. ಪ್ರೇಮ, ಸಹೋದರಭಾವ ಮತ್ತು ದಾನಶೀಲತೆ ಇವು ಮನುಷ್ಯನನ್ನು ಒಂದಾಗಿಸುತ್ತವೆ ಎಂದು ಸಾರಿದರು.

ಧರ್ಮವೆಂದರೆ ಪ್ರೇಮ, ಮಾನವ ಸೇವೆ ಎಂಬುದಾಗಿ ಸಾರಿದರು. ಹಲವು ಸಮಾಜ ಸುಧಾರಕರು ಸಮಾಜದ ಉದ್ಧಾರಕ್ಕಾಗಿ ಒಳಿತಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ತಮ್ಮ ಕುಟುಂಬವನ್ನೇ ತೊರೆದು ಸಮಾಜದ ಏಳಿಗೆಗಾಗಿ ಹೋರಾಡಿದರು.

ಸಮಾಜ ಸುಧಾರಕರಲ್ಲಿ ಪ್ರಮುಖರು ರಾಜರಾಮ್‌ಮೋಹನ್‌ರಾಯ್, ಸ್ವಾಮಿ ವಿವೇಕಾನಂದ, ಗಾಂಧೀಜಿ, ಅಂಬೇಡ್ಕರ್, ಕನಕದಾಸ, ಬಸವಣ್ಣ ಇವರೆಲ್ಲರೂ ಸಮಾಜದ ಒಳಿತಿಗಾಗಿ ತಮ್ಮ ಬದುಕನ್ನೇ ತ್ಯಾಗ ಮಾಡಿದ ಮಹಾನ್ ವ್ಯಕ್ತಿಗಳು.

ಈ ಎಲ್ಲಾ ಮಹಾನ್ ವ್ಯಕ್ತಿಗಳ ಉದ್ದೇಶ ಒಂದೇ ಅದು ಸಮಾಜ ಸುಧಾರಣೆ.

- ❖ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡುವುದು.
- ❖ ಮೇಲು–ಕೀಲು ಎಂಬ ಬೇದಭಾವ ಹೋಗಲಾಡಿಸುವುದು.
- ❖ ಮಹಿಳೆಯರಿಗೂ ಸಮಾನ ಅವಕಾಶಗಳನ್ನು ಒದಗಿಸುವುದು.
- ❖ ಮೂಡನಂಬಿಕೆ, ಕಂದಾಚಾರವನ್ನು ಹೋಗಲಾಡಿಸುವುದು.
- ❖ ಸಾಮಾಜಿಕ ಕಟ್ಟು ಪಾಡುಗಳನ್ನು ಇಲ್ಲವಾಗಿಸುವುದು.
- ❖ ಬಾಲ್ಯ ವಿವಾಹ ತಡೆಗಟ್ಟುವುದು.
- ❖ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಿರುವುದು.

ಹೀಗೆ ಹತ್ತು ಹಲವು ಸುಧಾರಣೆಗಳನ್ನು ತರಲು ತಮ್ಮ ಬದುಕನ್ನು ಮುಡುಪಾಗಿಸಿದರು. ಈ ಎಲ್ಲಾ ಕಾರಣಗಳಿಂದ ಇವರನ್ನು ನಾವು ಇಂದಿಗೂ, ಎಂದೆಂದಿಗೂ ನೆನೆಯುತ್ತೇವೆ. ಜೊತೆಗೆ ಇವರ ಜಯಂತಿಗಳನ್ನು ಆಚರಿಸುವ ಮುಖೇನ ಇವರು ಸಮಾಜ ಸುಧಾರಣೆಗೆ ಕೈಗೊಂಡ ಕಾರ್ಯಕ್ರಮಗಳನ್ನು ಸ್ತಬ್ಧಚಿತ್ರದ ಮುಖಾಂತರ ಎಲ್ಲರಿಗೂ ತಿಳಿಸಲು ಪ್ರಯತ್ನಿಸುತ್ತೇವೆ.

ಸಂವಿಧಾನ ಶಿಲ್ಪಿ ಡಾ. ಬಿ.ಆರ್.ಅಂಬೇಡ್ಕರ್ ಜಯಂತಿಯ ಸಂದರ್ಭದ ಸ್ತಬ್ಧಚಿತ್ರ



ಭಾರತದ ಪ್ರತಿಯೊಂದು ಪ್ರಜೆಯ ಹೃದಯದಲ್ಲಿ ಅಂಟಿ ಕೊಂಡಿರುವ ಹೆಸರು ಒಂದು ಇದ್ದರೆ ಅದು ಡಾ. ಭೀಮರಾವ್ ರಾಮ್‌ಜೀ ಅಂಬೇಡ್ಕರ್, ಇವರು ಏಪ್ರಿಲ್ 14, 1891 ರಂದು ಮಧ್ಯಪ್ರದೇಶದಲ್ಲಿ ಜನಿಸಿದರು. ಇಂದು ಭಾರತದಲ್ಲೆಡೆ ಡಾ. ಬಿ.ಆರ್.ಅಂಬೇಡ್ಕರ್‌ರ ಜನ್ಮ ದಿನಾಚರಣೆಯನ್ನು ಬಹಳ ಸಡಗರದಿಂದ ಆಚರಿಸಲಾಗುತ್ತದೆ. ಡಾ. ಬಿ.ಆರ್.ಅಂಬೇಡ್ಕರ್ ರವರು ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು ಭಾರತದ ಸಂವಿಧಾನವನ್ನು ರಚಿಸಿದ ಇವರನ್ನು 'ಸಂವಿಧಾನ ಶಿಲ್ಪಿ' ಎಂದು ಕರೆಯುತ್ತಾರೆ.

ಮಹಾರಾಷ್ಟ್ರ ರತ್ನಾಗಿರಿ ಜಿಲ್ಲೆಯವರಾದ ಅಂಬೇಡ್ಕರರ ತಂದೆಯವರು ಮರಾಠಿ ಹಾಗೂ ಇಂಗ್ಲೀಷಿನಲ್ಲಿ ಕಲಿತಿದ್ದರು. ಅವರು ಬ್ರಿಟಿಷ್ ಸೈನ್ಯದಲ್ಲಿ ಸುಬೇದಾರರಾಗಿ ಸೇವೆ ಸಲ್ಲಿಸಿದ್ದರು. ಇದರ

ಆಧಾರದ ಮೇಲೆ ಅವರು ತಮ್ಮ ಮಕ್ಕಳಿಗೆ, ಅದರಲ್ಲಿಯೂ ಮುಖ್ಯವಾಗಿ ಭೀಮರಾಯರಿಗೆ, ಸ್ವತಃ ಕಲಿಸಿ ಅವರ ಜ್ಞಾನಾರ್ಜನೆಯಲ್ಲಿ ಪ್ರೋತ್ಸಾಹಿಸಲು ಸಾಧ್ಯವಾಯಿತು. 1908 ರಲ್ಲಿ ಅಂಬೇಡ್ಕರ್‌ರವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದಾಗ, ಆಗಿನ ಜಾತಿ ವ್ಯವಸ್ಥೆಯಲ್ಲಿ ಅಸ್ಪೃಶ್ಯ ಎಂದು ಕಾಣಲ್ಪಡುತ್ತಿದ್ದ ತಮ್ಮ ಸಮಾಜಕ್ಕೆ ಮೊದಲನೆಯವರಾದರು.

ಬಸವಜಯಂತಿಯ ಸಂದರ್ಭದ ಸ್ತಬ್ಧಚಿತ್ರ



ಜನನ	ಕ್ರಿ.ಶ.1134 ಬಸವನ ಬಾಗೇವಾಡಿ ವಿಜಯಪುರ ಜಿಲ್ಲೆ, ಕರ್ನಾಟಕ, ಭಾರತ
ಮರಣ	ಕ್ರಿ.ಶ.1196 ಕೂಡಲಸಂಗಮ, ಕರ್ನಾಟಕ, ಭಾರತ
ತತ್ವಶಾಸ್ತ್ರ	ಶರಣ ಶರಣೆಯರ ಲಿಂಗಾಯತ ದರ್ಶನ
ಸಾಹಿತ್ಯದ ಕೆಲಸಗಳು	ವಚನ ಸಾಹಿತ್ಯ ವಚನಗಳು
ನುಡಿ	ಅರಿತಡೆ ಶರಣ–ಮರೆತಡೆ ಮಾನವ, ಕಾಯಕ ದಾಸೋಹ, ಜಂಗಮ ಆಧ್ಯಾತ್ಮಜ್ಞಾನಿ ಅರ್ಥಶಾಸ್ತ್ರ

ಶ್ರೀ ಬಸವೇಶ್ವರ (ಶ್ರೀ ಬಸವ ಅಥವಾ ಬಸವಣ್ಣನವರು) ಶರಣ ಶರಣೇತರ ಲಿಂಗಾಯತ ದರ್ಶನ ಪ್ರತಿಪಾದಕರು. ಬಸವಣ್ಣವರು 12ನೇಯ ಶತಮಾನದ ಭಕ್ತಿ ಪಂಥದ ಪ್ರಮುಖರಲ್ಲಿ ಒಬ್ಬರು. ಬಸವಣ್ಣವರು ಮತ್ತು ಶರಣ ಶರಣೆಯರಾದ ಅಲ್ಲಮಪ್ರಭು, ಅಕ್ಕಮಹಾದೇವಿ,

ಚೆನ್ನಬಸವಣ್ಣ ಮೊದಲಾದ ನೂರಾರು ಶರಣ ಶರಣೆಯರು ವಚನಗಳ ಮೂಲಕ ಭಕ್ತಿಪಂಥ ಮತ್ತು ಜೀವನದ ಬಗ್ಗೆ ಹೊಸ ದೃಷ್ಟಿ ಬೀರಿದರು.

ಶ್ರೀ ಕನಕದಾಸರ ಜಯಂತಿಯ ಸಂದರ್ಭದ ಸ್ತಬ್ಧಚಿತ್ರ



ಶ್ರೀ ಕನಕದಾಸರು (ಮೂಲ ಹೆಸರು–ತಿಮ್ಮಪ್ಪನಾಯಕ) (1509–1609) ಕರ್ನಾಟಕದಲ್ಲಿ 15–16ನೆಯ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ದಾಸ ಪರಂಪರೆಯಲ್ಲಿ ಬರುವ 250ಕ್ಕೂ ಹೆಚ್ಚು ಕನಕದಾಸರೊಬ್ಬರೇ ಶೂದ್ರದಾಸರು. ಹಾಗೆಯೇ ಕನ್ನಡ ಭಾಷೆಯ ಪ್ರಸಿದ್ಧ ಕೀರ್ತನಕಾರರು ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತದ ಮೂಲಭೂತ ಸಿದ್ಧಾಂತಗಳಿಗೆ ಕಾಣಿಕೆಯನ್ನಿತ್ತವರು. ಕನಕದಾಸರು ಮತ್ತು ಪುರಂದರದಾಸರನ್ನು ಕರ್ನಾಟಕ ಕೀರ್ತನ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಬಣ್ಣಿಸಲಾಗಿದೆ. ಕನಕದಾಸರು ದಂಡನಾಯಕರಾಗಿದ್ದು ಯುದ್ಧವೊಂದರಲ್ಲಿ ಸೋತ ಅವರಿಗೆ ಉಪರತಿ/ವೈರಾಗ್ಯ ಉಂಟಾಗಿ, ಹರಿಭಕ್ತರಾದಂತೆ.

ವಾಲ್ಮೀಕಿ ಜಯಂತಿ ಸಂದರ್ಭದ ಸ್ತಬ್ಧಚಿತ್ರ



ವಾಲ್ಮೀಕಿ ಎಂಬ ಋಷಿಯು ರಾಮಾಯಣ ಮಹಾಕಾವ್ಯದ ಕರ್ತೃ. ವಾಲ್ಮೀಕಿಯನ್ನು ಆದಿಕವಿ ಎಂದು ಕರೆಯಲಾಗಿದೆ.

ಹಿನ್ನೆಲೆ:

ವಾಲ್ಮೀಕಿಯ ಜೀವನದ ಕುರಿತಾಗಿ ಅನೇಕ ದಂತಕಥೆಗಳಿವೆ. ಅದರಲ್ಲಿ ಒಂದು ಕಥೆಯ ಪ್ರಕಾರ, ವಾಲ್ಮೀಕಿ ಋಷಿಯಾಗುವ ಮೊದಲು ರತ್ನ ಎಂಬ ಹೆಸರಿನ ಒಬ್ಬ ಡಕಾಯಿತನಾಗಿದ್ದನು. ಕಾಡಿನ ಮಾರ್ಗದಲ್ಲಿ ಸಂಚರಿಸುವ ಪ್ರಯಾಣಿಕರನ್ನು ದೋಚಿ ಜೀವನ ನಡೆಸುತ್ತಿದ್ದನು. ಒಮ್ಮೆ ನಾರದ ಋಷಿಯ ರತ್ನನಿಗೆ ಎದುರಾದಾಗ, ಅವನು ನಾರದನನ್ನು ದರೋಡೆ ಮಾಡಲು ಯತ್ನಿಸಿದನು. ಆಗ ನಾರದನ ಉಪದೇಶದಿಂದ ರತ್ನಗೆ ಜ್ಞಾನೋದಯವಾಯಿತೆಂದು ಹೇಳಲಾಗುತ್ತದೆ. ವಾಲ್ಮೀಕಿ ಮಹರ್ಷಿಗಳು ಪ್ರಚೇತಸಮುನಿಯ ಮಗ. ಹೀಗಾಗಿ ಅವರಿಗೆ 'ಪ್ರಾಚೇತಸ' ಎಂಬ ಹೆಸರಿದೆ. ಪರಮಾತ್ಮನನ್ನು ಕುರಿತು ಬಹಳ ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದಾಗ ಅವರ ಸುತ್ತ ಹುತ್ತ ಬೆಳೆದಿತ್ತು. ಹುತ್ತ (ಸಂಸ್ಕೃತದಲ್ಲಿ-ವಲ್ಮೀಕ)ವನ್ನು ಭೇದಿಸಿಕೊಂಡು ಹೊರಗೆ ಬಂದಿದ್ದರಿಂದ 'ವಾಲ್ಮೀಕಿ' ಎಂಬ ಹೆಸರು ಬಂತು.

ಅಧ್ಯಾಯ – 10

ಬಂಟ್ವಾಳದ ಮಲೈಮಹದೇಶ್ವರ ಜಾತ್ರೆಯ ಸ್ತಬ್ಧಚಿತ್ರಗಳು

ಶೋಭಾಯಾತ್ರೆಯಲ್ಲಿ ಕಲ್ಲಡ್ಕ ಶಿಲ್ಪಾಗೊಂಬೆ ಬಳಗ "ಮಲೆಮಾದೇಶ್ವರನ ಜಾತ್ರಾ ಮಹೋತ್ಸವ"ದ ಸ್ತಬ್ಧಚಿತ್ರ ನೋಡುಗರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿದೆ.

ಬಂಟ್ವಾಳ ಪ್ರತೀ ವರ್ಷ ಒಂದಲ್ಲ ಒಂದು ಹೊಸತನದ ಸ್ತಬ್ಧಚಿತ್ರದ ಮೂಲಕ ಕಲ್ಲಡ್ಕದ ಶ್ರೀ ರಾಮ ಮಂದಿರದ ಆಶ್ರಯದಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ನಡೆಯುವ ಮೊಸರು ಕುಡಿಕೆ ಉತ್ಸವದ ಶೋಭಾಯಾತ್ರೆಯಲ್ಲಿ ಗಮನಸೆಳೆಯುವ ಕಲ್ಲಡ್ಕ ಶಿಲ್ಪಾಗೊಂಬೆ ಬಳಗ ಈ ಬಾರಿ ಪ್ರಸ್ತುತ ಪಡಿಸಿದ "ಮಲೆಮಾದೇಶ್ವರನ ಜಾತ್ರಾ ಮಹೋತ್ಸವ"ದ ಸ್ತಬ್ಧಚಿತ್ರ ನೋಡುಗರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿದೆ.



ಸಾಮಾನ್ಯವಾಗಿ ಸ್ತಬ್ಧಚಿತ್ರವೆಂದರೆ ಅದು ಚಲನೆಯಿಲ್ಲದ ಕಲಾಕೃತಿ. ಆದರೆ ಸ್ತಬ್ಧಚಿತ್ರದ ಹೆಸರಿನಲ್ಲಿ ಶಿಲ್ಪಾಗೊಂಬೆ ಬಳಗ ಪ್ರದರ್ಶಿಸಿದ್ದು ವಿಶಿಷ್ಟ ಶೈಲಿಯ ಚಲನಶೀಲ ಕಲಾಕೃತಿ. ಹೌದು ಆ ಟ್ರಕ್ಕಿನಲ್ಲಿ 10 ಅಡಿ ಎತ್ತರದ ಮಲೆಮಾದೇಶ್ವರ (ಶಿವ)ನ ಮೂರ್ತಿ ಗಮನಸೆಳೆದರೆ, ಶಿವನ ಸಾನಿಧ್ಯದಲ್ಲಿ ಜಾತ್ರಾ ಮಹೋತ್ಸವದ ನೆಪದಲ್ಲಿ 7 ತಂಡಗಳು ಪ್ರಸ್ತುತಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಕರ್ನಾಟಕದ ವೈವಿಧ್ಯತೆಯನ್ನು ಎತ್ತಿ ಹಿಡಿಯಿತು.

ಜಾತ್ರಾ ಸಂಭ್ರಮದ ಅರ್ಥಪೂರ್ಣ ನಿರೂಪಣೆಯ ಜೊತೆಗೆ ಮಾದೇಶ್ವರನಿಗೆ ಊರ ಹಿರಿಯರ ಪುಷ್ಪಾರ್ಚನೆಯೊಂದಿಗೆ ಕಲಾಪ್ರದರ್ಶನಗಳು ಆರಂಭಗೊಂಡ ಬಳಿಕ ಮೈಸೂರು ತಂಡದಿಂದ ಜೋಗಯ್ಯ ನೃತ್ಯ, ಭಕ್ತಿ ರಸಮಂಜರಿ, ತುಮಕೂರು ಜಿಲ್ಲೆಯ ತಂಡದಿಂದ ವೀರಗಾಸೆ, ಬೆಂಗಳೂರು ಸಂತರ ತಂಡದ ಭಕ್ತಿ ಪ್ರಧಾನ ರೂಪಕ, ಹಾಸನದ ಗೀಗಿ ಬಳಗದ ಕಲಾವಿದರಿಂದ ಗೀಗೀಪದ, ಏಳು ಮಲೆ ನೃತ್ಯ ನಡೆದು ಕೊನೆಯದಾಗಿ ಕೋಲಾರ ತಂಡದಿಂದ ನಂದಿ ಕುಣಿತ ಹಾಗೂ ಪೂಜಾಕುಣಿತ ಜಾತ್ರೆಯ ರಂಗನ್ನು ಇಮ್ಮಡಿಗೊಳಿಸಿತ್ತು.

ಇದೆಲ್ಲಾ ನಡೆದದ್ದು ಟ್ರಕ್ಕಿನ ಮೇಲೆ ಅನ್ನುವುದೇ ಇದರ ವಿಶೇಷತೆ. ಟ್ರಕ್ಕಿನ ಹಿಂಭಾಗದಲ್ಲಿ ಡ್ರೆಸ್ಸಿಂಗ್ ರೂಂ ತೆರೆಯಲಾಗಿತ್ತು. ಕ್ರಿಯಾಶೀಲರಾಗಿ ತೊಡಗಿಸಿಕೊಂಡ ಎಲ್ಲಾ 15 ಮಂದಿ ಕಲಾವಿದರು ಆಗಾಗ್ಗೆ ವೇಷ ಬದಲಿಸಿಕೊಂಡು ಚಲನಶೀಲ ಸ್ತಬ್ಧಚಿತ್ರಕ್ಕೆ ಜೀವ ತುಂಬಿದರು. ಅರ್ಧಗಂಟೆ ಅವಧಿಯಲ್ಲಿ ಧ್ವನಿಮುದ್ರಿತ ನಿರೂಪಣೆ ಸಹಿತ ಎಲ್ಲಾ ಹಾಡುಗಳಿಗೆ ಧ್ವನಿಯಾಗಿ, ಹೆಜ್ಜೆ ಹಾಕಿದ ಕಲಾವಿದರು ಶಿಲ್ಪಾಗೊಂಬೆ ಬಳಗದ ಹಿರಿಮೆಗೆ ಗರಿಇಟ್ಟರು. ಕಲ್ಲಡ್ಕದ ರಾಜ ರಸ್ತೆಯಲ್ಲಿ ಸಾಗಿದ ಶೋಭಾಯಾತ್ರೆಯಲ್ಲಿ ಅರ್ಧಗಂಟೆ ಅವಧಿಯ ಕಾರ್ಯಕ್ರಮವನ್ನು 6 ಬಾರಿ ಪ್ರದರ್ಶಿಸಿದ ಬಳಗ ನೋಡುಗರಿಂದ ಚಪ್ಪಾಳೆಯ ಅಭಿನಂದನೆ ಪಡೆದುಕೊಂಡಿತು.

ಬಳಗದ ಮೂಲಕ ರಮೇಶ್ ಕಲ್ಲಡ್ಕ ಒಂದೊಮ್ಮೆ ಗಾಯಕನಾಗಿ ಕಾಣಿಸಿಕೊಂಡರೆ, ಮತ್ತೊಮ್ಮೆ ಸಂತನಾಗಿ, ಇನ್ನೊಮ್ಮೆ ಏಳೂಮಲೆ ಹಾಡಿಗೆ ಹೆಜ್ಜೆ ಹಾಕುವ ಕಲಾವಿದನಾಗಿ ಕಾಣಿಸಿಕೊಂಡರು. ಇವರ ಪುತ್ರ ನಿತಿನ್ ಕಲ್ಲಡ್ಕ ಕೂಡ ಬಗೆಬಗೆಯ ಪಾತ್ರದಲ್ಲಿ ಕಾಣಿಸಿಕೊಂಡು ಒಟ್ಟು ಕಾರ್ಯಕ್ರಮದ ಚಲನಶೀಲತೆಯನ್ನು ಹೆಚ್ಚಿಸಿದರು. ಇವರಿಗೆ ಸಾಥ್ ನೀಡಿದ ಸುರೇಶ್ ಶೆಟ್ಟಿ, ರಾಜೇಶ್ ಪೂರ್ಲಪ್ಪಾಡಿ, ಸವ್ಯರಾಜ್, ಚರಣ್, ಪ್ರದೀಪ್ ಕಾವು, ಮೌನೇಶ್ ವಿಶ್ವಕರ್ಮ, ಸೋಹನ್, ಭಾಸ್ಕರ್ ಆಚಾರ್ಯ, ಗೋಪಾಲ್ ಮದ್ದ, ನವ್ಯರಾಜ್, ಸುರೇಶ್, ನವೀನ್ ರವರು ಕುಡ ಒಟ್ಟು ಜಾತ್ರಾ ಸಂಭ್ರಮದ ಕಳೆ ಹೆಚ್ಚಿಸಿದರು. ಒಟ್ಟಿನಲ್ಲಿ ಆಕರ್ಷಣೀಯ ಸ್ತಬ್ಧಚಿತ್ರದ ಮೂಲಕ ಶಿಲ್ಪಾ ಗೊಂಬೆ ಬಳಗ ಪ್ರೇಕ್ಷಕರ ಗಮನ ಸೆಳೆಯುವುದರಲ್ಲಿ ಯಶಸ್ವಿಯಾಗಿದೆ. ಎಂಬುದಂತೂ ಸತ್ಯ.

ಸ್ತಬ್ಧಚಿತ್ರಗಳು ಕೇವಲ ಪ್ರದರ್ಶನವಲ್ಲದೆ ನಮ್ಮ ಸಂಸ್ಕೃತಿಯನ್ನು ಪರಸ್ಪರ ಹಂಚಿಕೊಳ್ಳುವ ವೇದಿಕೆಯಾಗುವುದರ ಜೊತೆಗೆ ಕಲಾವಿದರು ತಮ್ಮ ಅಂತರ್ಗತದಲ್ಲಿ ಹುದುಗಿರುವ ಕಲೆಯನ್ನು ಹೊರಪದರ್ಶಿಸಲು ಇಂತಹ ಜಾತ್ರೆಗಳು ಹಾಗೂ ಸ್ತಬ್ಧಚಿತ್ರಗಳು ವೇದಿಕೆಯಾಗುತ್ತವೆ.

ಅಧ್ಯಾಯ - 11

ದಸರಾ ಸಂದರ್ಭಗಳಲ್ಲಿ ಸ್ತಬ್ಧಚಿತ್ರಗಳು

ಜಿಲ್ಲೆಯ ಹೆಸರು	ಸ್ತಬ್ಧಚಿತ್ರ ಸಾಧರಪಡಿಸುತ್ತಿರುವ ವಿವರ
ಉಡುಪಿ	ಸೇಂಟ್ ಮೇರಿ ದ್ವೀಪ
ಉತ್ತರಕನ್ನಡ	ಮಾರಿಕಾಂಬ ದೇವಾಲಯ – ಶಿರಸಿ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ	ಒಗ್ಗೂಡಿದ ಕರ್ನಾಟಕಕ್ಕೆ 60 ವರ್ಷ
ಕಲಬುರಗಿ	ಶ್ರೀ ಚಂದ್ರಲಾಂಬಾ ಪರಮೇಶ್ವರಿ ದೇವಸ್ಥಾನ ಹಾಗೂ ಸ್ತೂಪ
ಕೊಡಗು	ಕೊಡಗು–ಬುಡಗಟ್ಟು ಸಮುದಾಯದ ಬಂಧು
ಕೊಪ್ಪಳ	ಸಂಯುಕ್ತ ಗ್ರಾಮ ಪಂಚಾಯಿತಿ ಘನತ್ಯಾಜ್ಯ ವಿಲೇವಾರಿ ಘಟಕ
ಕೋಲಾರ	ಸೋಮೇಶ್ವರ ದೇವಾಲಯ
ಗದಗ	ಗದಗಿನ ಸಂಗೀತ ಕಲಾ ಜಗದ್ಗುರು
ಚಾಮರಾಜನಗರ	ಸಮಾನತೆಗಾಗಿ ಸರ್ಕಾರದ ಸಪ್ತಹೆಜ್ಜೆಗಳು
ಚಿಕ್ಕಬಳ್ಳಾಪುರ	ಶ್ರೀಕ್ಷೇತ್ರ ಕೈವಾರದ–ಬಕಾಸುರ ವಧೆ
ಪ್ರವಾಸೋದ್ಯಮ ಇಲಾಖೆ	ವನ್ಯಮೃಗಗಳ ವೈವಿಧ್ಯತೆಯ ನೆಲೆ
ಚಿಕ್ಕಮಗಳೂರು	ವಿದ್ಯಾಶಂಕರ ದೇವಾಲಯ
ಚಿತ್ರದುರ್ಗ	ಅಭಿವೃದ್ಧಿಗಾಗಿ–ಸೌರಶಕ್ತಿ ಮತ್ತು ಪವನಶಕ್ತಿ
ತುಮಕೂರು	ಕಲ್ಪತರು ನಾಡು ಸಿರಿಧಾನ್ಯಗಳ ಬೀಡು
ವಾರ್ತಾ ಇಲಾಖೆ	ಜನತೆಯ ಕಡೆಗೆ ಭರವಸೆಯ ನಡಿಗೆ
ದಕ್ಷಿಣಕನ್ನಡ	ರಾಣಿ ಅಬ್ಬಕ್ಕ ಮಹಾದೇವಿ
ದಾವಣಗೆರೆ	ಶ್ರೀರಂಗನಾಥಸ್ವಾಮಿಯ ದೇವಾಲಯ–ಜಗಳೂರು
ಧಾರವಾಡ	ವೀರಯೋಧ ಹನುಮಂತಪ್ಪ
ಬಳ್ಳಾರಿ	ಲಕ್ಷ್ಮೀನರಸಿಂಹ ಶಿಲಾಮೂರ್ತಿ
ಆರೋಗ್ಯ ಇಲಾಖೆ	ಎಲ್ಲರಿಗೂ ಆರೋಗ್ಯ ಎಲ್ಲೆಡೆಯೂ ಆರೋಗ್ಯ
ಬಾಗಲಕೋಟೆ	ಸಂಗಮೇಶ್ವರ ದೇವಾಲಯ–ಪಟ್ಟದಕಲ್ಲು

ಬೀದರ್	ಅಂತರ್ಜಲ ಮರು ಪೂರೈಕೆ
ಬೆಳಗಾವಿ	ಭೀಮಗಡ ವನ್ಯಧಾಮ
ಶಿಕ್ಷಣ ಇಲಾಖೆ	ಶಿಕ್ಷಣದ ಸಾರ್ವತ್ರೀಕರಣ
ಬೆಂಗಳೂರು (ಗ್ರಾ)	ಪಾರಂಪರಿಕ ತಾಣಗಳು ಹಾಗೂ ಅಭಿವೃದ್ಧಿ
ಬೆಂಗಳೂರು (ನ)	ರಾಜ್ಯ ಕೇಂದ್ರ ಗ್ರಂಥಾಲಯ – ಶತಮಾನೋತ್ಸವ
ಮೈಸೂರು	ರಾಜಮಾತೆಯರ ಕೊಡುಗೆಗಳು
ಮಂಡ್ಯ	ಸತ್ಯಾಗ್ರಹ ಸೌಧ
ಯಾದಗಿರಿ	ಯಾದಗಿರಿ ಕೋಟೆ ಚಿಂತನಹಳ್ಳಿ ಗವಿಸಿದ್ದಲಿಂಗೇಶ್ವರ
ರಾಮನಗರ	ಚನ್ನಪಟ್ಟಣದ ಗೊಂಬೆ ಪರಸೆ
ಸ್ತಬ್ಧಚಿತ್ರ ಉಪ ಸಮಿತಿ	ಬಾಬಾ ಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮದಿನೋತ್ಸವ
ರಾಯಚೂರು	ಹಟ್ಟಿ ಚಿನ್ನದ ಗಣಿ
ವಿಜಯಪುರ	ಶ್ರೀ ಲಾಲ್ ಬಹುದ್ದೂರ್ ಶಾಸ್ತ್ರೀ ಸಾಗರ – ಆಲಮಟ್ಟಿ ಜಲಾಶಯ
ಶಿವಮೊಗ್ಗ	ಇಕ್ಕರಿ ದೇವಸ್ಥಾನ ಮತ್ತು ಜೋಗ್ ಫಾಲ್ಸ್
ಹಾವೇರಿ	ಸ್ವಾತಂತ್ರ್ಯ ಹೋರಾಟಗಾರರು (ವೀರಸೌಧ)
ಹಾಸನ	2018 – ಮಹಾಮಸ್ತಕಾಭಿಷೇಕ
ಪುರುತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ	ಬೆಂಗಳೂರು ವಸ್ತು ಸಂಗ್ರಹಾಲಯ 150ನೇ ವರ್ಷದ ಸಂಭ್ರಮ
ಸೆಸ್.ಬಿ.ಎಂ.	ಬ್ಯಾಂಕ್ ಸೇವೆಗಳು
ಕಾವೇರಿ ನೀರಾವರಿ ನಿಗಮ	ಜಲ ಜಾಗೃತಿಯ ಬಗ್ಗೆ – ಜನಾಂದೋಲನ
ವಾಕ್ ಶ್ರವಣ ಸಂಸ್ಥೆ	ಇಲಾಖಾ ಕಾರ್ಯಕ್ರಮಗಳು
ಭಾರತ ಪೆಟ್ರೋಲಿಯಂ	ಪರಿಸರ ಸ್ನೇಹ ಇಂಧನ

ಉಡುಪಿ ಜಿಲ್ಲೆ
ಸೇಂಟ್ ಮೇರಿ ದ್ವೀಪದ ಸ್ತಬ್ಧಚಿತ್ರ



'ಉಡುಪಿ' ಎಂದರೆ ನಮಗೆ ಮೊದಲು ನೆನಪಾಗುವುದು ಶ್ರೀ ಮಧ್ವಾಚಾರ್ಯರಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ಕೃಷ್ಣ ದೇವಾಲಯ. ಇದು ಕರ್ನಾಟಕ ಕರಾವಳಿ ಜಿಲ್ಲೆಗಳಲ್ಲಿ ಒಂದಾಗಿದೆ. ಉಡುಪಿ ಶೈಲಿಯ ಅಡುಗೆ ವಿಶ್ವವಿಖ್ಯಾತವಾದುದು. ಈ ಜಿಲ್ಲೆಯಲ್ಲಿ ಅನೇಕ ಪವಿತ್ರ ಧಾರ್ಮಿಕ ಕ್ಷೇತ್ರಗಳಿವೆ. ಇದಲ್ಲದೆ ನಿಸರ್ಗ ರಮಣೀಯವಾದ ಹಲವಾರು ಸುಂದರ ತಾಣಗಳಿವೆ. ಅವುಗಳಲ್ಲಿ ಪ್ರಮುಖವಾದುದು ಎಂದರೆ **'ಸೇಂಟ್ ಮೇರಿ ದ್ವೀಪ'.**

ಸೇಂಟ್ ಮೇರಿ ದ್ವೀಪಕ್ಕೆ **'ಕೋಕನಟ್ ಐಲ್ಯಾಂಡ್ ಅಥವಾ ತೋನ್ಸೆಪಾರ್'** ಎಂದು ಸಹ ಕರೆಯುತ್ತಾರೆ. ಅಂದಾಜಿನ ಪ್ರಕಾರ 88 ಮಿಲಿಯನ್ ವರ್ಷಗಳ ಹಿಂದೆ ರೂಪಾಂತರಗೊಂಡ ಷಟ್ ಮುಖಗಳ ಶಿಲೆಯ ಕಲ್ಲುಗಳಿಂದ ನೈಸರ್ಗಿಕವಾಗಿ ರಚನೆಗೊಂಡಿರುವ ದ್ವೀಪವಾಗಿರುತ್ತದೆ. ಇಂತಹ ಸುಂದರವಾದ ನೈಸರ್ಗಿಕ ದ್ವೀಪ ಭಾರತದಲ್ಲೇ ಏಕಮಾತ್ರವಾಗಿರುತ್ತದೆ.

ಸೇಂಟ್ ಮೇರಿ ದ್ವೀಪ ಎಂಬುದು ಪಂಚ ದ್ವೀಪಗಳ ಸಮೂಹಕ್ಕೆ ನೀಡಲಾದ ಹೆಸರು. ಪಶ್ಚಿಮ ಕರಾವಳಿಯ ಮಲ್ಪೆಯಿಂದ 3 ಕಿ.ಮೀ. ದೂರದಲ್ಲಿ ಅರಬ್ಬೀ ಸಮುದ್ರದಲ್ಲಿರುವ ದ್ವೀಪಗುಚ್ಛವಾಗಿದೆ. ಈ ದ್ವೀಪ ಗುಚ್ಛಗಳ ಪೈಕಿ 'ತೆಂಗಿನದ್ವೀಪ'ವು 27 ಎಕರೆಗಳಷ್ಟು ದೊಡ್ಡದು, ಉಳಿದವು ಚಿಕ್ಕವು.

ಕ್ರಿ.ಶ. 1964 ರ ನಂತರ ಈ ದ್ವೀಪಗಳಲ್ಲಿ ಸಂಶೋಧನೆ ನಡೆಸಿ, ಅವುಗಳ ಭೂ ವೈಜ್ಞಾನಿಕ ಮಹತ್ವವನ್ನು ವಿಜ್ಞಾನ ಜಗತ್ತಿಗೆ ಸಾರಲಾಯಿತು. ಈ ದ್ವೀಪದಲ್ಲಿರುವ ಶಿಲೆಗಳು ಜ್ವಾಲಾಮುಖಿಯಿಂದ ಹೊರಹೊಮ್ಮಿದ ಲಾವಾರಸವು ತಂಪುಗೊಂಡಾಗ ನಿರ್ಮಾಣವಾದವುಗಳು. ಇವುಗಳ ವೈಜ್ಞಾನಿಕ ಹೆಸರು ಡೇಸೈಟ್, ರೈಯೋಲೈಟ್ ಮತ್ತು ಗ್ರ್ಯಾನೋಫೈರ್, ಸಂರಕ್ಷಿಸುವ ದೃಷ್ಟಿಯಿಂದ ಈ ದ್ವೀಪಗಳನ್ನು ಭೂ ವೈಜ್ಞಾನಿಕ ಸ್ಮಾರಕಗಳೆಂದು ಘೋಷಿಸಲಾಗಿದೆ.

ಸುಂದರವಾದ ದ್ವೀಪವನ್ನು ನೋಡಲು ಪ್ರತಿನಿತ್ಯ ಸವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಸಮುದ್ರತೀರದಿಂದ 5 ಕಿ.ಮೀ. ದೂರದಲ್ಲಿರುವ ಈ ದ್ವೀಪಕ್ಕೆ ಹೋಗಿ ಬರಲು ಪ್ರವಾಸಿಗರಿಗೆ ಅನುಕೂಲವಾಗುವಂತೆ ಯಂತ್ರದ ದೋಣಿಗಳ ವ್ಯವಸ್ಥೆಯನ್ನು ಮಾಡಲಾಗಿದೆ.

ಉತ್ತರ ಕನ್ನಡ ಜಿಲ್ಲೆ
ಶಿರಸಿಯ ಮಾರಿಕಾಂಬಾ ದೇವಾಲಯದ ಸ್ತಬ್ದಚಿತ್ರ



ಕರ್ನಾಟಕ ಕರಾವಳಿ ಜಿಲ್ಲೆಗಳಲ್ಲಿ ಒಂದಾದ ಉತ್ತರ ಕನ್ನಡ ಜಿಲ್ಲೆಯು ಪ್ರಕೃತಿ ಸೌಂದರ್ಯಕ್ಕೆ ಹೆಸರಾಗಿದೆ. ಈ ಜಿಲ್ಲೆಯ ಪಶ್ಚಿಮಕ್ಕೆ ಅರಬ್ಬೀ ಸಮುದ್ರವಿದೆ. ಬಹುತೇಕ ಭಾಗ ಅರಣ್ಯ ಪ್ರದೇಶದಿಂದ ಆವರಿಸಲ್ಪಟ್ಟಿದೆ. ಈ ಜಿಲ್ಲೆಯಲ್ಲಿ ಯಾಣ, ಮುರುಡೇಶ್ವರ, ಶಿರಸಿ ಮಾರಿಕಾಂಬಾ, ಗೋಕರ್ಣ, ಸೋಂದಾಮಠ, ಕಾರವಾರ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ.

ಶಿರಸಿ ಮಾರಿಕಾಂಬಾ ದೇವಾಲಯವು ಕರ್ನಾಟಕದ ಹಿಂದೂ ದೇವಾಲಯಗಳಲ್ಲಿ ಒಂದಾಗಿದೆ. ಇದು ಶಿರಸಿ ಮತ್ತು ಬನವಾಸಿಗೆ ಹೋಗುವ ರಸ್ತೆಯಲ್ಲಿದೆ. ವಿಶೇಷವಾದ ಈ ದೇವಾಲಯದ ಪ್ರವೇಶದ್ವಾರದ ಎರಡು ಕಡೆಗಳಲ್ಲಿ ಬೃಹದಾಕಾರದ ಆನೆಗಳ ಶಿಲೆಗಳಿವೆ. ದೇವಾಲಯದ ಒಳಭಾಗದಲ್ಲಿ ವಿಶಾಲವಾದ ಸಭಾ ಭವನವಿದೆ. ಸಭಾ ಭವನದ ಗೋಡೆಗಳು ವರ್ಣರಂಜಿತ ಚಿತ್ರಗಳಿಂದ ರಾರಾಜಿಸುತ್ತವೆ. ಈ ಪ್ರಶಾಂತ ವಾತಾವರಣದ ಒಳಭಾಗದಲ್ಲಿ ದೇವಿಯ ಗರ್ಭಗುಡಿಯಿದೆ. ಇದು ಕ್ರಿ.ಶ. 1688 ರಲ್ಲಿ ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ. ದುರ್ಗಾದೇವಿಯ ಮತ್ತೊಂದು ಅವತಾರವಾದ ಮಾರಿಕಾಂಬಾ ದೇವಿಯು ಕರ್ನಾಟಕದ ಎಲ್ಲಾ ಸ್ತ್ರೀಶಕ್ತಿ ದೇವತೆಗಳ ಅಗ್ರಜೆಯಾಗಿದ್ದಾಳೆ. ಆದ್ದರಿಂದ ಈ ದೇವಾಲಯವನ್ನು **'ದೊಡ್ಡಮ್ಮನ ದೇವಾಲಯ'** ಎಂದು ಕೂಡ ಕರೆಯುತ್ತಾರೆ. ಪ್ರತಿವರ್ಷ ನಡೆಯುವ ಮಾರಿಕಾಂಬಾ ಜಾತ್ರೆ ಕರ್ನಾಟಕದಲ್ಲಿ ಬಹಳ ಪ್ರಸಿದ್ಧವಾಗಿದೆ. ಮಹಾತ್ಮ ಗಾಂಧೀಜಿ ಅವರ ಭೇಟಿಯ ನಂತರ ಸಾಂಪ್ರದಾಯಿಕವಾಗಿ ನೀಡಲಾಗುತ್ತಿದ್ದ ಕೋಣದ ಬಲಿಯನ್ನು ನಿಷೇಧಿಸುವುದರ ಮೂಲಕ ಅಹಿಂಸಾತತ್ವವನ್ನು ಪಾಲಿಸಲಾಗಿದೆ.

ದಾಂಡೇಲಿ-ಅಣಶಿ ಭಾಗದಲ್ಲಿರುವ **'ಕಾಳಿ ಹುಲಿಧಾಮ'ವು** ಸಂರಕ್ಷಿತ ಪ್ರದೇಶವಾಗಿದೆ. ಈ ಸಂರಕ್ಷಿತಾರಣ್ಯವು ಸುಮಾರು 1300 ಕಿ.ಮೀ. ಗಳಷ್ಟು ವ್ಯಾಪಿಸಿದ್ದು, ಇದು ಬಂಗಾಳ ಹುಲಿಗಳ ತಾಣವಾಗಿದೆ. ಇಲ್ಲಿ ಹುಲಿಗಳ ಜೊತೆಗೆ ಕಪ್ಪು ಚಿರತೆಗಳು, ಆನೆಗಳು ಸಹ ಇದೆ. ಹಾರ್ನಬಿಲ್ ಪಕ್ಷಿಗಳು ಇಲ್ಲಿನ ಮತ್ತೊಂದು ವಿಶೇಷವಾಗಿದೆ. ಕಾಳಿ ನದಿಯು ಈ ವನ್ಯಧಾಮದ ಮೂಲಕ ಪ್ರವಹಿಸುತ್ತದೆ.

ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶವಾದ್ದರಿಂದ ಬಹುತೇಕ ಜನರು ಮೀನುಗಾರಿಕೆಯನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡಿದ್ದಾರೆ. ಈ ಜಿಲ್ಲೆಯು ಧರ್ಮ ಸಹಿಷ್ಣುತೆಗೆ ಹೆಸರಾಗಿದ್ದು, ಹಿಂದೂ ದೇವಾಲಯಗಳಂತೆಯೇ ಇಲ್ಲಿ ಬೌದ್ಧ ದೇವಾಲಯಗಳು, ಮಸೀದಿಗಳು ಹಾಗೂ ಚರ್ಚ್‌ಗಳು ಇವೆ.

ಉತ್ತರಕನ್ನಡ ಜಿಲ್ಲೆ ಕರಾವಳಿ ಪ್ರದೇಶವಾಗಿದ್ದು, ಇದು ಇಡೀ ನಮ್ಮ ರಾಜ್ಯದಲ್ಲೆ ಒಂದು ವಿಶೇಷವಾದ ಜಿಲ್ಲೆಯಾಗಿದೆ. ಧಾರ್ಮಿಕ ಸ್ಥಳಗಳು, ಕರಾವಳಿ ಭಾಗಗಳು, ಪ್ರವಾಸಿಗರನ್ನು ತನ್ನೆಡೆ ಸೆಳೆಯುವುದರ ಜೊತೆಗೆ ಪ್ರವಾಸಿಗರ ಸ್ವರ್ಗವಾಗಿ ಕಂಡು ತನ್ನೆಡೆ ಪ್ರವಾಸಿಗರನ್ನು ಬರುವಂತೆ ಮಾಡುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಸಂಸ್ಕೃತಿ ಇಲಾಖೆ

ಒಗ್ಗೂಡಿದ ಕರ್ನಾಟಕಕ್ಕೆ 60 ವರ್ಷದ ಸ್ತಬ್ದಚಿತ್ರ



ಎರಡು ಸಾವಿರ ವರ್ಷಗಳಲ್ಲಿ ಕರ್ನಾಟಕ ಸಾಂಸ್ಕೃತಿಕವಾಗಿ ಹಾಗೂ ರಾಜಕೀಯವಾಗಿ ತನ್ನದೇ ಆದ ಪರಂಪರೆಯನ್ನು ಉಳಿಸಿ, ಬೆಳೆಸಿಕೊಂಡು ಬಂದಿದೆ. ಭಾಷಾವಾರು ಆಧಾರದ ಮೇಲೆ ಕರ್ನಾಟಕ ಪ್ರಾಂತ್ಯದ ರಚನೆಗಾಗಿ ಆರಂಭವಾದ ಆಂದೋಲನ ಸ್ವಾತಂತ್ರ್ಯ ಸಂಗ್ರಾಮದ ಜೊತೆಯಲ್ಲೆ ಮೂಡಿಬರತೊಡಗಿತು. ಏಕೀಕರಣದ ಕಲ್ಪನೆ ಮೂಲತಃ ಒಂದು ಆಂದೋಲನವಾಗಿ ರೂಪುಗೊಳ್ಳಲು ಕಾರಣರಾದವರು ಬುದ್ಧಿಜೀವಿಗಳು, ಕವಿಗಳು, ಲೇಖಕರು, ಪತ್ರಕರ್ತರು ಮೊದಲಾದವರು. ಇವರ ಪ್ರಯತ್ನದಿಂದಾಗಿ ಜನತೆಯಲ್ಲಿ ಮೂಡಿದ ಭಾವನಾತ್ಮಕ ವಾತಾವರಣ ದೇಶದ ಸ್ವಾತಂತ್ರ್ಯ ಗಳಿಕೆಗೂ ಪೂರಕವಾದ್ದರಿಂದ ಸಹಜವಾಗಿಯೇ ರಾಜಕಾರಣಿಗಳೂ ಏಕೀಕರಣದ ಸೊಲ್ಲೆತ್ತಿ ಬೆಂಬಲಿಸತೊಡಗಿದರು. ಕನ್ನಡದ ಕುಲಪುರೋಹಿತ ಆಲೂರು ವೆಂಕಟರಾಯರು 'ಕರ್ನಾಟಕ ಗತ ವೈಭವ' ಕೃತಿಯನ್ನು ರಚಿಸಿದರು. ಆ ಮೂಲಕ ನಾಡಿನ ಕಿರುಪರಿಚಯ ಮಾಡಿಕೊಂಡ ಜನತೆ ಅದರ ಅಸ್ತಿತ್ವಕ್ಕಾಗಿ ಹಾತೊರೆಯಲಾರಂಭಿಸಿದರು. ಹುಯಿಲಗೋಳ ನಾರಾಯಣರಾಯರು 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂದು ಬರೆದ ಕ್ರಾಂತಿಗೀತೆಯು ಕನ್ನಡಿಗರ ಹೃದಯವನ್ನು ಮೀಟಿತು. ದ.ರಾ.ಬೇಂದ್ರೆ, ಶಂ. ಬಾ ಜೋಷಿ, ಬೆಟಗೇರಿ ಕೃಷ್ಣಶರ್ಮ, ಶ್ರೀರಂಗ, ವಿನಾಯಕ ಕೃಷ್ಣ ಗೋಕಾಕ್, ಪಂಜೆ ಮಂಗೇಶರಾಯರು, ಗೋವಿಂದ ಪೈ, ಶಿವರಾಮಕಾರಂತ, ಬಿ.ಎಂ.ಶ್ರೀಕಂಠಯ್ಯ, ಡಿ.ವಿ.ಗುಂಡಪ್ಪ, ಬಿ.ಶಿವಮೂರ್ತಿ ಶಾಸ್ತ್ರೀ, ತಿ.ತಾ.ಶರ್ಮ,

ಕುವೆಂಪು, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅ.ನ.ಕೃಷ್ಣರಾಯರು, ಡಾ. ಎನ್.ಎಸ್.ಹರ್ಡೀಕರ್ ಅವರು ತಾರಾನಾಥ, ಕೆ.ಕೃಷ್ಣರಾಯ, ಎ.ಜೆ.ದೊಡ್ಡಮೇಟಿ ಆಂದಾನಪ್ಪ, ಎಸ್.ನಿಜಲಿಂಗಪ್ಪ, ಸಿ.ವಿ.ಪೂಣಚ್ಚ, ಶಂಕರಗೌಡ ಪಟೇಲ, ಮೊದಲಾದವರು ಕರ್ನಾಟಕ ಏಕೀಕರಣ ಯತ್ನದಲ್ಲಿ ಪ್ರವಾಸಕೈಗೊಂಡು ಜನಜಾಗೃತಿಯನ್ನುಂಟು ಮಾಡುವಲ್ಲಿ ಶ್ರಮಿಸಿದ ಮಹನೀಯರುಗಳು. ಕರ್ನಾಟಕ ವಿದ್ಯಾವರ್ಧಕ ಸಂಘ (ಕ್ರಿ.ಶ.) 1980). ಕನ್ನಡ ಸಾಹಿತ್ಯ ಪರಿಷತ್ತು (ಕ್ರಿ.ಶ.1915). ಕರ್ನಾಟಕ ಸಭಾ (ಕ್ರಿ.ಶ.1916). ಕರ್ನಾಟಕ ಏಕೀಕರಣ ಸಭಾ ಮೊದಲಾದ ಕನ್ನಡ ಸಂಘ ಸಂಸ್ಥೆಗಳು ಕರ್ನಾಟಕ ಏಕೀಕರಣ ಆಂದೋಲನವನ್ನು ರೂಪಿಸುವಲ್ಲಿ ಯಶಸ್ವಿಯಾದವು.

ಈ ಎಲ್ಲರ ಹೋರಾಟದ ಫಲವಾಗಿ 'ವಿಶಾಲ ಮೈಸೂರು ರಾಜ್ಯ'ವು ಕ್ರಿ.ಶ. 1956 ರ ನವೆಂಬರ್ 1 ರಂದು ಅಸ್ತಿತ್ವಕ್ಕೆ ಬಂದಿತು. ಆ ಮೂಲಕ ಕನ್ನಡಿಗರು ಒಂದು ರಾಜ್ಯದಲ್ಲಿ ಕೂಡಿಕೊಳ್ಳುವಂತಾದುದು ಎಲ್ಲರಿಗೂ ಸಂತಸವನ್ನು ತಂದಿತು. ಶ್ರೀ ದೇವರಾಜ ಅರಸ್ ಅವರು ಮುಖ್ಯಮಂತ್ರಿಯಾಗಿದ್ದಾಗ ಅಂದರೆ ಕ್ರಿ.ಶ. 1973 ರ ನವೆಂಬರ್ 1 ರಂದು 'ಕರ್ನಾಟಕ ರಾಜ್ಯ' ಎಂದು ನಾಮಕರಣ ಮಾಡಲಾಯಿತು. ಹೀಗೆ ಒಗ್ಗೂಡಿದ ಕರ್ನಾಟಕ 60 ವರ್ಷಗಳನ್ನು ಪೂರೈಸುತ್ತಿರುವುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿಯಾಗಿದೆ.

ಕಲಬುರಗಿ ಜಿಲ್ಲೆ
ಶ್ರೀ ಚಂದ್ರಲಾಂಬಾ ಪರಮೇಶ್ವರಿ ದೇವಸ್ಥಾನ ಹಾಗೂ ಸ್ತೂಪದ ಸ್ತಬ್ದಚಿತ್ರ



ಕಲಬುರಗಿ ಕರ್ನಾಟಕದ ಉತ್ತರ ಭಾಗದಲ್ಲಿರುವ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಬೇಸಿಗೆಯಲ್ಲಿ ಅತಿ ಹೆಚ್ಚು ಉಷ್ಣಾಂಶವನ್ನು ಹೊಂದಿರುವ ಪ್ರದೇಶವಾಗಿದೆ. ಇಲ್ಲಿ ಶ್ರೀ ಶರಣಬಸವೇಶ್ವರ ದೇವಾಲಯ, ಬಂದೇ ನವಾಜ್ ದರ್ಗಾ ಹಾಗೂ ಬೌದ್ಧ ವಿಹಾರಗಳು ಸರ್ವಧರ್ಮ ಸಮನ್ವಯತೆಯನ್ನು ಸಾರುವ ಧಾರ್ಮಿಕ ಕೇಂದ್ರಗಳಾಗಿವೆ.

ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಸನ್ನತಿ ಗ್ರಾಮದಲ್ಲಿ ಐತಿಹಾಸಿಕವಾಗಿ ಪ್ರಸಿದ್ಧವಾದ ಶ್ರೀ ಚಂದ್ರಲಾಂಬಾ ದೇವಾಲಯವಿದೆ. ಭೀಮ ನದಿಯು ತೀರದಲ್ಲಿ ಇರುವ ಈ ದೇವಾಲಯಕ್ಕೆ ಸುಮಾರು 800 ಇತಿಹಾಸವಿದೆ. ಈ ದೇವಾಲಯದ ಆವರಣದಲ್ಲಿ ಅಶೋಕ ಸಾಮ್ರಾಟನ ಕಾಲದ ನಾಲ್ಕು ಶಾಸನಗಳು ದೊರೆಕಿವೆ. ಇವುಗಳು ಪ್ರಾಕೃತ ಮತ್ತು ಬ್ರಾಹ್ಮೀ ಲಿಪಿಗಳಲ್ಲಿವೆ. ಪ್ರತಿವರ್ಷ ನವರಾತ್ರಿಯ ಸಮಯದಲ್ಲಿ ಚಂದ್ರಲಾಂಬಾ ದೇವಿಯ ಮಹೋತ್ಸವವು ವಿಜೃಂಭಣೆಯಿಂದ ಜರುಗುತ್ತದೆ. ಕರ್ನಾಟಕದವರಲ್ಲದೆ ಮಹಾರಾಷ್ಟ್ರ, ತೆಲಂಗಾಣ ಮತ್ತು ಆಂಧ್ರಪ್ರದೇಶದ ಸಾವಿರಾರು ಭಕ್ತರು ಈ ಮಹೋತ್ಸವದಲ್ಲಿ ಭಾಗವಹಿಸುತ್ತಾರೆ.

ಕಲಬುರಗಿ ಜಿಲ್ಲೆ ಚಿತ್ತಾಪೂರ ತಾಲ್ಲೂಕಿನ ಸನ್ನತಿ ಗ್ರಾಮದ ಪರಿಸರದ ಕನಗನಹಳ್ಳಿಯಲ್ಲಿ ಬೌದ್ಧ ಸ್ತೂಪದ ಅವಶೇಷಗಳು ದೊರಕಿವೆ. ಕ್ರಿ.ಶ. 1994 ರಿಂದ 2001 ರವರೆಗೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಕೈಗೊಂಡ ವಿಸ್ತೃತ ಉತ್ಖನನದ ಪರಿಣಾಮವಾಗಿ ಈ ಅವಶೇಷಗಳು ಬೆಳಕಿಗೆ ಬಂದಿತು. ಈ ಬೌದ್ಧ ಸ್ತೂಪಕ್ಕೆ 'ಮಹಾಚೈತನ್ಯ' ಎಂದು ಸಹ ಕರೆಯಲಾಗುತ್ತದೆ. ಇದಲ್ಲದೆ ಬುದ್ಧನ ಜಾತಕ ಕಥೆಗಳಲ್ಲಿ ಬರುವ ಬುದ್ಧನ ಜೀವನದ ಪ್ರಮುಖ ಘಟನೆಗಳು, ಬೌದ್ಧ ಧರ್ಮದ ಪ್ರಸಾರಕ್ಕಾಗಿ ಅಶೋಕನು ಭಾರತದ ವಿವಿಧ ಭಾಗಗಳಿಗೆ ಬೌದ್ಧ ಭಿಕ್ಷುಗಳನ್ನು ಕಳುಹಿಸಿದ ಘಟನೆಗಳ ಬಗ್ಗೆ ಸುಮಾರು 60 ಶಿಲ್ಪಗಳಿರುವ ಅಂಡ ಫಲಕಗಳು ದೊರೆತಿವೆ. ಇವುಗಳೂ ಸಹ ಪ್ರಾಕೃತ ಮತ್ತು ಬ್ರಾಹ್ಮೀ ಲಿಪಿಗಳಲ್ಲಿವೆ.

ಕಲಬುರಗಿಯು ತೊಗರಿಯ ಕಣಜ ಎಂದು ಪ್ರಸಿದ್ಧವಾಗಿದೆ. ಇದು ಇಡೀ ರಾಜ್ಯದಲ್ಲೆ ಅತಿ ಹೆಚ್ಚು ಉಷ್ಣಾಂಶ ದಾಖಲಾಗುವ ಜಿಲ್ಲೆಯಾಗಿದೆ. ಇಲ್ಲಿಯ ಜನರ ಪ್ರಮುಖ ಉದ್ಯೋಗ ಕೃಷಿ. ಅತಿ ಹೆಚ್ಚು ಸಿಮೆಂಟ್ ಕಾರ್ಖಾನೆಗಳು ಇಲ್ಲಿ ಇವೆ. ಕಲುಬುರಗಿ ಜಿಲ್ಲೆಯು ತನ್ನದೆಯಾದ ವೈಶಿಷ್ಟ್ಯವನ್ನು ಹೊಂದಿದ್ದು, ಉತ್ತರ ಕರ್ನಾಟಕದಲ್ಲೆ ಮುಂದುವರಿದ ಜಿಲ್ಲೆಯಾಗಿದೆ. ಇತ್ತೀಚೆಗೆ ಈ ಜಿಲ್ಲೆಯನ್ನು ಹೈದರಬಾದ್ ಕರ್ನಾಟಕ ಜಿಲ್ಲೆಗಳ ಮೀಸಲಾತಿಗೆ ಹಿಂದುಳಿದ ಜಿಲ್ಲೆ ಎಂದು ಸೇರಿಸಲಾಗಿದೆ.

ಕೊಡಗು ಜಿಲ್ಲೆ

ಕೊಡಗು – ಬುಡಕಟ್ಟು ಸಮುದಾಯದ ಸ್ತಬ್ಧಚಿತ್ರ



'ಕರ್ನಾಟಕ ಕಾಶ್ಮೀರ' ಎಂದು ಪ್ರಸಿದ್ಧವಾದ ಸುಂದರ ತಾಣ ಕೊಡಗು. ಕಾವೇರಿ ನದಿಯ ಉಗಮ ಸ್ಥಾನವಾದ ತಲಕಾವೇರಿಯು ಕೊಡಗಿನ ಪ್ರಕೃತಿ ಸೌಂದರ್ಯವನ್ನು ಇಮ್ಮಡಿಗೊಳಿಸಿರುವ ತಾಣವಾಗಿದೆ. ಬೆಟ್ಟ-ಗುಡ್ಡ ಪ್ರದೇಶ ಮತ್ತು ಕಾಡುಗಳಿಂದ ಕೂಡಿರುವ ಈ ಭಾಗದಲ್ಲಿ ಬುಡಕಟ್ಟು ಜನಾಂಗದವರು ವಿಶೇಷವಾಗಿ ವಾಸಿಸುತ್ತಾರೆ. ಸಾಮಾನ್ಯ ಜನರಿಂದ ಬೇರ್ಪಟ್ಟಿರುವ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ದುರ್ಬಲರಾಗಿರುವ ಇವರು ಭೌಗೋಳಿಕವಾಗಿಯೂ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಇವರ ಕೃಷಿ ಪದ್ಧತಿ, ಸಾಮಾಜಿಕ-ಸಾಂಪ್ರದಾಯಿಕ ಕಟ್ಟುಪಾಡುಗಳು, ಆಹಾರ ಪದ್ಧತಿ ಮೊದಲಾದವುಗಳಲ್ಲಿ ವಿಭಿನ್ನತೆಯು ಕಂಡು ಬರುತ್ತವೆ. ಇವರ ಮನರಂಜನಾ-ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ವಿಭಿನ್ನವಾಗಿವೆ. ಇವರು ನೈಸರ್ಗಿಕವಾಗಿ ದೊರೆಯುವ ಪೌಷ್ಠಿಕ ಆಹಾರವನ್ನು ಸೇವಿಸುವುದರ ಮೂಲಕ ಪರಿಸರಕ್ಕೆ ಬಹಳ ಹತ್ತಿರವಾಗಿದ್ದಾರೆ.

ಇಲ್ಲಿ ಪ್ರಮುಖವಾಗಿ ಜೇನು ಕುರುಬರು, ಎರವರು, ಸೋಲಿಗರು, ಕಾಡು ಕುರುಬರು, ಕುಡಿಯರು ಮೊದಲಾದ ಬುಡಕಟ್ಟು ಜನಾಂಗದವರನ್ನು ಕಾಣಬಹುದು. ಅರಣ್ಯ ಪ್ರದೇಶಗಳಲ್ಲಿ ವಾಸಿಸುವ ಈ ಸಮುದಾಯದವರು ಶಿಕ್ಷಣ, ಆರೋಗ್ಯ ಮತ್ತು ಜೀವನಾಧಾರ ಅವಕಾಶಗಳಿಂದ

ವಂಚಿತರಾಗಿ ಹಿಂದುಳಿದಿದ್ದಾರೆ. ಇವರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು ಒಂದು ಸವಾಲಾಗಿದೆ. ಆದ್ದರಿಂದ ಅವರ ಅಭಿವೃದ್ಧಿಯು ಕುಂಠಿತವಾಗಿದೆ. ಇದಕ್ಕಾಗಿ ಸರ್ಕಾರವು ಈ ಜನಾಂಗದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಪಡಿಸಲು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಜಿಲ್ಲಾ ಪಂಚಾಯತ್ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಇವರಿಗೆ ಮೂಲಭೂತ ಸೌಕರ್ಯಗಳಾದ ವಸತಿ, ರಸ್ತೆ, ಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಶೌಚಾಲಯ ವ್ಯವಸ್ಥೆ, ಶೈಕ್ಷಣಿಕ ಅನುಕೂಲಗಳು, ಸಮುದಾಯ ಭವನಗಳ ನಿರ್ಮಾಣ, ಸೋಲಾರ್ ಬೀದಿದೀಪಗಳ ವ್ಯವಸ್ಥೆ, ಸ್ವಯಂ ಉದ್ಯೋಗ ಕಾರ್ಯಕ್ರಮ, ಆರ್ಥಿಕ ಅಭಿವೃದ್ಧಿಗಾಗಿ ಕಾರ್ಯಕ್ರಮಗಳು, ಪೌಷ್ಠಿಕಾಂಶಯುಕ್ತ ಆಹಾರದ ಸರಬರಾಜು, ಅರಣ್ಯ ಹಕ್ಕುಪತ್ರ ವಿತರಣೆ, ಹೀಗೆ ಹತ್ತುಹಲವಾರು ಯೋಜನೆಗಳನ್ನು ರೂಪಿಸಿ, ಅಗತ್ಯ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಬುಡಕಟ್ಟು ಜನಾಂಗದವರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಲಾಗಿದೆ.

ಈ ಜಿಲ್ಲೆಯ ಬುಡಕಟ್ಟು ಜನಾಂಗದವರು ತಮ್ಮ ಜೀವನದ ಬಹುತೇಕ ಕಾಲವನ್ನು ಅರಣ್ಯದಲ್ಲೇ ಕಳೆಯಲು ಇಚ್ಛಿಸುತ್ತಾರೆ. ಕಾಡುಪ್ರಾಣಿಗಳ ಮೇಲೆ ಅಪಾರ ಪ್ರೇಮವನ್ನು ಹೊಂದಿರುವ ಇವರು ಪರಿಸರ ಪ್ರೇಮಿಗಳಾಗಿದ್ದು, ಅರಣ್ಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಾರೆ.

ಕೊಪ್ಪಳ ಜಿಲ್ಲೆ
ಸಂಯುಕ್ತ ಗ್ರಾಮ ಪಂಚಾಯತ್ ಘನ ತ್ಯಾಜ್ಯ ವಿಲೇವಾರಿ ಘಟಕದ ಸ್ತಬ್ದಚಿತ್ರ



ಕೊಪ್ಪಳ ಜಿಲ್ಲೆಯು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಪ್ರಸಿದ್ಧವಾದ ಉತ್ತರ ಕರ್ನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಕ್ರಿ.ಶ. 1998 ರಲ್ಲಿ ಪ್ರತ್ಯೇಕ ಜಿಲ್ಲೆಯಾಗಿ ರೂಪುಗೊಂಡಿತು. ಗ್ರಾಮ ಪಂಚಾಯತ್ ಹಂತದಲ್ಲು ಘನತ್ಯಾಜ್ಯ ವಸ್ತುಗಳ ನಿರ್ವಹಣೆಗಾಗಿ ಮಾದರಿ ಯೋಜನೆಯೊಂದನ್ನು ರೂಪಿಸಿ ಅನುಷ್ಠಾನಗೊಳಿಸಿರುವುದು ಶ್ಲಾಘನೀಯ ಹಾಗೂ ಅನುಕರಣೀಯವಾದ ಕಾರ್ಯಕ್ರಮವಾಗಿದೆ.

ಕರ್ನಾಟಕ ರಾಜ್ಯದ ಪ್ರಪ್ರಥಮ **'ಸಂಯುಕ್ತ ಗ್ರಾಮ ಪಂಚಾಯತ್ ತ್ಯಾಜ್ಯ ಸಂಸ್ಕರಣ ಘಟಕ'**ವನ್ನು ಕೊಪ್ಪಳ ಜಿಲ್ಲೆಯ ಹುಲಗಿ ಗ್ರಾಮದ ಹೊಸಳ್ಳಿ ಹೊನ್ನೂರು ಮಟ್ಟಿಯಲ್ಲಿ ಪ್ರಾರಂಭಿಸಲಾಗಿದೆ. ಈ ಘಟಕವು 9 ಗ್ರಾಮ ಪಂಚಾಯತ್‌ಗಳನ್ನು ಒಳಗೊಂಡಿರುತ್ತದೆ. ಇಲ್ಲಿ ತ್ಯಾಜ್ಯವನ್ನು ಮನೆಯಿಂದಲೇ ವಿಂಗಡಿಸಿಕೊಡುವ ವಿಧಾನವನ್ನು ಅನುಸರಿಸಲಾಗುತ್ತಿದೆ. ಮದುವೆ ಇತರೆ ಸಮಾರಂಭಗಳಿಗೆ ತ್ಯಾಜ್ಯ ಸಂಗ್ರಹಿಸಲು ತಳ್ಳು ಬಂಡಿಗಳನ್ನು ಪೂರೈಸಲಾಗುತ್ತದೆ. ಇಲ್ಲಿ ಕೊಳೆಯುವ ಕಸವನ್ನು ಎರೆಹುಳು ಗೊಬ್ಬರವನ್ನಾಗಿ ಪರಿವರ್ತಿಸಲಾಗುತ್ತಿದೆ. ಕೊಳೆಯದ ಪ್ಲಾಸ್ಟಿಕ್, ಗ್ಲಾಸ್ ಇತರೆ ವಸ್ತುಗಳನ್ನು ವಿಂಗಡಿಸಿ ಮರು ಬಳಕೆಗೆ ಉಪಯೋಗಿಸುವಂತೆ ಮಾಡಲಾಗುತ್ತಿದೆ. ರಾಜ್ಯದಲ್ಲಿಯೇ ಬಹು ಗ್ರಾಮ ಪಂಚಾಯತ್‌ಗಳ ಘಟಕ ಸ್ಥಾಪನೆಯು ಹೊಸ ಕಲ್ಪನೆಯಾಗಿದ್ದು, ಇದು ರಾಜ್ಯಕ್ಕೆ ಮಾದರಿ ಘಟಕವಾಗಿರುವುದರಿಂದ ರಾಜ್ಯ ಸರ್ಕಾರದಿಂದ **"ವಿಶ್ವ ಪರಿಸರ ಪ್ರಶಸ್ತಿ"** ಲಭಿಸಿದೆ. ಕಸ ಸಂಗ್ರಹಿಸುವ ವಾಹನಕ್ಕೆ ಸಿ.ಸಿ. ಕ್ಯಾಮರಾವನ್ನು ಸಹ ಅಳವಡಿಸಿಲಾಗಿದೆ.

ಮಾನವನ ಆಧುನಿಕ ಜೀವನ ಶೈಲಿಯಲ್ಲಿ ತ್ಯಾಜ್ಯ ಸಂಗ್ರಹ ಹಾಗೂ ವಿಲೇವಾರಿ ಬಹು ದೊಡ್ಡ ಸಮಸ್ಯೆಯಾಗಿದ್ದು, ಈ ಸಮಸ್ಯೆಯನ್ನು ನಿವಾರಿಸುವ ನಿಟ್ಟಿನಲ್ಲಿ ಈ ಘಟಕವು ಪ್ರಗತಿ ಪಥದಲ್ಲಿ ಸಾಗಿದೆ. ತ್ಯಾಜ್ಯ ಮುಕ್ತ ಗ್ರಾಮಗಳನ್ನಾಗಿ ಮಾಡಬೇಕೆಂಬ ಸರ್ಕಾರದ ಸಂಕಲ್ಪಕ್ಕೆ ಈ ಘಟಕ ಪೂರಕವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಬಹು ಗ್ರಾಮ ತ್ಯಾಜ್ಯ ಸಂಸ್ಕರಣ ಘಟಕಗಳನ್ನು ಮಾಡಲು ಇದು ಪ್ರೇರಣೆಯಾಗಿದೆ. ಅನೇಕ ಜಿಲ್ಲೆಗಳಿಂದ ಜನ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಈ ಘಟಕ ವೀಕ್ಷಿಸಿ, ಇಂತಹ ಘಟಕಗಳನ್ನು ತಮ್ಮ ಜಿಲ್ಲೆಯಲ್ಲಿ ಪ್ರಾರಂಭಿಸಲು ದೃಢ ಸಂಕಲ್ಪ ಮಾಡಿದ್ದಾರೆ.

ಕೊಪ್ಪಳ ಜಿಲ್ಲೆಯ ಸ್ತಬ್ಧಚಿತ್ರವು ಉತ್ತಮವಾಗಿ ಮೂಡಿಬಂದಿದ್ದು, ಮೈಸೂರು ದಸರಾದಲ್ಲಿ ಪ್ರದರ್ಶನಗೊಂಡು ಪ್ರವಾಸಿಗರನ್ನು ಆಕರ್ಷಿಸಿತು. ಈ ಸ್ತಬ್ಧಚಿತ್ರವು ಸ್ವಚ್ಛತೆಯ ಅರಿವನ್ನು ಉಂಟುಮಾಡುವಲ್ಲಿ ಸಹಕಾರಿಯಾಗಿದೆ.

ಕೋಲಾರ ಜಿಲ್ಲೆ

ಕೋಲಾರದ ಸೋಮೇಶ್ವರ ದೇವಾಲಯದ ಸ್ತಬ್ದಚಿತ್ರ



'ಚಿನ್ನದ ಗಣಿ' ಎಂದು ಪ್ರಖ್ಯಾತವಾದ ಕೋಲಾರ ಗಂಗರ ಮೊದಲ ರಾಜಧಾನಿ. ಇದನ್ನು ಗಂಗರ ಕಾಲದಲ್ಲಿ **'ಕುವಲಾಲಪುರ'** ಎಂದು ಕರೆಯಲಾಗುತ್ತಿತ್ತು. ಆನಂತರ ಇದು **'ಕೋಲಾರ'** ಎಂದಾಯಿತು ಗಂಗರ ಕಾಲದ ಕೋಲಾರಮ್ಮ ದೇವಾಲಯವು ಪ್ರಸಿದ್ಧವಾದುದು. ಕೋಲಾರ ಜಿಲ್ಲೆಯಲ್ಲಿ ಅಂತರಗಂಗೆ, ಬಂಗಾರ ತಿರುಪತಿ, ಕೋಟಿಲಿಂಗೇಶ್ವರ, ಮಾರ್ಕಂಡೇಯ ಪರ್ವತ, ಆವಣಿ, ಕುರುಡುಮಲೆ ಗಣಪತಿ ದೇವಾಲಯ ಮತ್ತು ಸೋಮೇಶ್ವರ ದೇವಾಲಯಗಳು ಪ್ರಸಿದ್ಧ ಪ್ರೇಕ್ಷಣೀಯ ಸ್ಥಳಗಳಾಗಿವೆ.

ಕೋಲಾರದ ಶ್ರೀ ಸೋಮೇಶ್ವರ ದೇವಾಲಯವು ಕ್ರಿ.ಶ. ಸುಮಾರು 14ನೆಯ ಶತಮಾನದ ಆದಿಭಾಗದಲ್ಲಿ, ವಿಜಯನಗರದ ಆಡಳಿತದ ಕಾಲದಲ್ಲಿ ನಿರ್ಮಾಣಗೊಂಡಿದೆ. ಶುದ್ಧ ದ್ರಾವಿಡ ಶೈಲಿಯಲ್ಲಿ ನಿರ್ಮಿಸಲಾಗಿರುವ ಈ ದೇವಾಲಯದ ತಳಭಾಗವನ್ನು ಕಲ್ಲಿನಿಂದ ನಿರ್ಮಿಸಿಲಾಗಿದ್ದು, ಮೇಲೆ ಇಟ್ಟಿಗೆಯಿಂದ ಗೋಪುರವನ್ನು ಕಟ್ಟಲಾಗಿದೆ. ದೇವಾಲಯದ ಒಳಭಾಗದಲ್ಲಿ ಒಂದು ಗರ್ಭಗೃಹ, ಸುಕನಾಸಿ ಮತ್ತು ನವರಂಗವಿದೆ. ಮುಂಭಾಗದಲ್ಲಿ ಕಂಬಗಳುಳ್ಳ ಮುಖಮಂಟಪವಿದೆ. ಇವುಗಳ ಸುತ್ತ ಕೈಸಾಲೆಯಿಂದ ಕೂಡಿದ ಪ್ರಕಾರವಿದೆ. ಮುಖ್ಯ ದೇವಾಲಯದ ಅಧಿಷ್ಠಾನದಲ್ಲಿ ಪಾದ,

ಅಧೋಕುಮುದ, ತ್ರಿಪಟ್ಟ ಕುಮುದ, ಕಂಠ ಮತ್ತು ಅಧೋಮುಖ ಪಟ್ಟಿಗಳಿವೆ. ಅಧೋಮುಖದ ಸಾಲಿನಲ್ಲಿ ಆನೆಗಳು, ನರ್ತಿಸುತ್ತಿರುವ ಕುಬ್ಜರು, ಮುಂಗಾಲುಗಳ ಮೇಲೆ ಕುಳಿತಿರುವ ಸಿಂಹಗಳ ಪಟ್ಟಿಗಳನ್ನು ಕಾಣಬಹುದಾಗಿದೆ. ಗೋಡೆಯ ಹಿಂಭಾಗದಲ್ಲಿ ಚಿಕ್ಕ ಗೋಪುರಗಳಿಂದ ಕೂಡಿದ ದೇವಕೋಷ್ಠಗಳಿವೆ. ಮುಖಮಂಟಪದ ಕಂಬಗಳ ಬೋದಿಗಳಲ್ಲಿ ಸಿಂಹಗಳಿವೆ. ದೇವಾಲಯದ ನೈರುತ್ಯ ದಿಕ್ಕಿನಲ್ಲಿರುವ ಕರಿಯ ಕಲ್ಲಿನ ಕಂಬಗಳಿಂದ ಅಲಂಕೃತವಾದ ಕಲ್ಯಾಣ ಮಂಟಪವು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದೆ. ವಾಯುವ್ಯ ದಿಕ್ಕಿನಲ್ಲಿ ಪಾರ್ವತಿ ದೇವಾಲಯವಿದೆ. ಎರಡೂ ಗರ್ಭಗುಡಿಗಳ ಮೇಲೆ ದ್ರಾವಿಡ ಶೈಲಿಯ ಶಿಖರಗಳಿವೆ. ಈಶಾನ್ಯ ದಿಕ್ಕಿನಲ್ಲಿ ಯಾಗಶಾಲೆಯಿದೆ. ಹೀಗೆ ಸುಂದರ ಕೆತ್ತನೆಗಳಿಂದ ಆಕರ್ಷಕವಾಗಿರುವ ಸೋಮೇಶ್ವರ ದೇವಾಲಯವು ಭಕ್ತರನ್ನು ತನ್ನೆಡೆಗೆ ಸದಾ ಆಕರ್ಷಿಸುತ್ತಿದೆ.

ಗದಗ ಜಿಲ್ಲೆ
ಸಂಗೀತ ಕಲಾ ಜಗದ್ಗುರುಗಳ ಸ್ತಬ್ದಚಿತ್ರ



ಉತ್ತರ ಕರ್ನಾಟಕದ ಗದಗ ಜಿಲ್ಲೆಯು ಒಂದು ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿದೆ. 'ಗದಗ' ಎಂಬ ಹೆಸರನ್ನು ಕೇಳಿದ ಕ್ಷಣ ನೆನಪಾಗುವುದು ವೀರನಾರಾಯಣನ ದೇವಾಲಯ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ **'ಕಲಿಯುದವರ ಕಾಮಧೇನು'** ಎಂದೇ ಪ್ರಖ್ಯಾತನಾದ ಕುಮಾರವ್ಯಾಸನು ಈ ಪ್ರದೇಶದವನು. ಈ ನಗರದ ಮತ್ತೊಂದು ಪ್ರಮುಖ ಆಕರ್ಷಣೆಯ ಕೇಂದ್ರವೆಂದರೆ **'ಶ್ರೀ ವೀರೇಶ್ವರ ಪುಣ್ಯಾಶ್ರಮ'**. ಹುಟ್ಟುಕುರುಡರಾದ ಶ್ರೀ ಪಂಚಾಕ್ಷರ ಗವಾಯಿಗಳು ಈ ಪುಣ್ಯಾಶ್ರಮದ ಸಂಸ್ಥಾಪಕರು.

ಇವರ ಪೂರ್ವಾಶ್ರಮದ ಹೆಸರು ಗದಿಗೆಯ್ಯ. ಇವರು ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಕಾಡಶೆಟ್ಟಿ ಹಳ್ಳಿಯಲ್ಲಿ ಜನಿಸಿದರು. ಪೂಜ್ಯ ಹಾನಗಲ್ ಶ್ರೀ ಕುಮಾರಸ್ವಾಮಿಯವರು ಇವರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿ, **'ಪಂಚಾಕ್ಷರ ಗವಾಯಿ'** ಎಂದು ಹೆಸರಿಟ್ಟರು. ಪಂಚಾಕ್ಷರ ಗವಾಯಿಗಳು ತಮ್ಮ ಶಿಷ್ಯರಿಗಾಗಿ ಬಹಳವಾಗಿ ಪಾಠಶಾಲೆಯನ್ನು ಕಟ್ಟಿಸಿಕೊಟ್ಟು, ಧನ-ದಾನ್ಯ ಸಹಾಯವನ್ನು ನೀಡಿದರು.

ಪೂಜ್ಯ ಶ್ರೀ ಪಂಚಾಕ್ಷರ ಗವಾಯಿಗಳ ಪ್ರೀತಿಯ ಅಂಧ ಶಿಷ್ಯರಾದ ಪೂಜ್ಯ ಶ್ರೀ ಪುಟ್ಟರಾಜ ಗವಾಯಿಗಳು ನೂರಾರು ಅಂಧ ಮತ್ತು ವಿಕಲಚೇತನರ ಆಶ್ರಯತಾಣವಾದ 'ಶ್ರೀ ವೀರೇಶ್ವರ ಪುಣ್ಯಾಶ್ರಮ'ದ ಪುರೋಭಿವೃದ್ಧಿಗಾಗಿ ತಮ್ಮ ಜೀವಮಾನ ಪರ್ಯಂತ ಶ್ರಮಿಸಿದರು. ಇಂದು ಇಲ್ಲಿ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಯಾವುದೇ ಭಾಷೆ, ಜಾತಿ, ವರ್ಗ, ಪಂಥಗಳ ತರತಮ್ಯವಿಲ್ಲದೆ ಸಂಗೀತಾಭ್ಯಾಸವನ್ನು ಮಾಡುತ್ತಿದ್ದಾರೆ. ಪುಟ್ಟರಾಜ ಗವಾಯಿಗಳ ಪೂರ್ವಾಶ್ರಮದ ಹೆಸರು ಪುಟ್ಟಯ್ಯ ಇವರು ಕರ್ನಾಟಕ ಹಾಗೂ ಹಿಂದೂಸ್ಥಾನೀ ಸಂಗೀತಗಳಲ್ಲಿ ಪರಿಣತರಾಗಿದ್ದರು. ಹಲವಾರು ವಾದ್ಯಗಳನ್ನು ಸ್ವತಃ ನುಡಿಸುತ್ತಿದ್ದರು. ಇವರು ಕನ್ನಡ ಮತ್ತು ಸಂಸ್ಕೃತ ಭಾಷಾ ವಿದ್ವಾಂಸರಾಗಿದ್ದರು.

ಪಂಡಿತ ಚಂದ್ರಶೇಖರ ಪುರಾಣಿಕ ಮಠ, ಪಂಡಿತ ಎಸ್. ಬಲ್ಲೇಶ, ಪಂಡಿತ ವೀರೇಶ್ವರ ಮಾದ್ರಿ, ಪಂಡಿತ ರಾಜಗುರು ಗುರುಸ್ವಾಮಿ ಕಲಕೇರಿ, ಪಂಡಿತ ವೆಂಕಟೇಶ ಕುಮಾರ, ಜಿ.ಜಿ.ಆರಾಧ್ಯ ಮಠ, ಮಲ್ಲಿಕಾರ್ಜುನಯ್ಯ, ಪಂಡಿತ ನಾಗಲಿಂಗಯ್ಯ ವಸ್ತ್ರದ ಮಠ, ಬಾಲಚಂದ್ರ ಶಾಸ್ತ್ರೀ. ಪಂಡಿತ ಸಿದ್ಧರಾಮಸ್ವಾಮಿ ಇವರಲ್ಲದೆ ಪಂಡಿತ ಭೀಮಸೇನ ಜೋಷಿ ಮೊದಲಾದ ಸಂಗೀತ ದಿಗ್ಗಜರು ಈ **'ಶ್ರೀ ವೀರೇಶ್ವರ ಪುಣ್ಯಾಶ್ರಮ ವೃಕ್ಷದ ಫಲಗಳು'**.

ಚಾಮರಾಜನಗರ ಜಿಲ್ಲೆ

ಸಮಾನತೆಗಾಗಿ ಸರ್ಕಾರದ ಸಪ್ತ ಹೆಜ್ಜೆಗಳ ಸ್ತಬ್ದಚಿತ್ರ

"ಸರ್ಕಾರ ನಡೆದು ಬಂದಿರುವ ಹಾದಿಯನ್ನು ನೋಡಿದರೆ ಅಲ್ಲಿ ಮಾತೃ ಹೃದಯದಿಂದ ರೂಪು ತಳೆದಿರುವ ಹಲವಾರು ಭಾಗ್ಯೋದಯ ಯೋಜನೆಗಳ ನೋಟವಿದೆ" ಎಂಬ ಮುನ್ನುಡಿ ಇದೆ. ಸಾಮಾಜಿಕ ನ್ಯಾಯ, ಭದ್ರತೆಯ ಆಶಯಗಳನ್ನು ಹೊಂದಿರುವ ನಮ್ಮ ಸರ್ಕಾರ ತಾಯಿ ಪ್ರೀತಿ, ಮಾತೃ ಹೃದಯ ಪ್ರತಿಬಿಂಬವಾಗಿರುತ್ತದೆ. ಶೋಷಿತರ ಶ್ರೇಯಸ್ಸು ಮತ್ತು ಅಭ್ಯುದಯಕ್ಕಾಗಿ ಸಮಾಜಮುಖಿಯಾಗಿರುವ ಈ ಸರ್ಕಾರದ ಸಾಧನೆಗೆ ಸಾಕ್ಷಿಯೇ ಈ ಸಪ್ತಹೆಜ್ಜೆ.



ಒಂಭತ್ತನೇ ಶತಮಾನದಲ್ಲಿ ನಿರ್ಮಿತವಾಗಿರುವ ಚಾಮರಾಜನಗರ ಜಿಲ್ಲೆಯ ನರಸಮಂಗಲ ಗ್ರಾಮದಲ್ಲಿ ಇರುವ ಸಪ್ತಮಾತೃಕೇಯ ದೇವಸ್ಥಾನವನ್ನು ಸ್ಪೂರ್ತಿ ಸಂಕೇತವೆಂದು ಭಾವಿಸಿ ಸಮಾನತೆಗಾಗಿ ನಮ್ಮ ಸರ್ಕಾರ ಮಾಡುತ್ತಿರುವ ಸಪ್ತ ಯೋಜನೆಗಳನ್ನು ಪ್ರತಿಬಿಂಬಿಸುವುದು ಈ ಸ್ತಬ್ಧಚಿತ್ರದ ಮುಖ್ಯ ಉದ್ದೇಶ. ಮಾತೃ ಪ್ರೀತಿ ಮಾದರಿಯಾಗಿ ಮುನ್ನಡೆಯುವ ಸರ್ಕಾರ ನಮ್ಮ ನಾಡಿಗೆ ಒಂದು ವರವೆಂದು ಭಾವಿಸುತ್ತ. ಚಾಮುಂಡೇಶ್ವರಿ ತಾಯಿಯ ಆರ್ಶಿವಾದ ನಮ್ಮೆಲ್ಲರ ಮೇಲೆ ಸದಾ ಇರಲಿ ಎಂದ ಬಯಸಿ ಈ ದಸರಾ ಉತ್ಸವದಲ್ಲಿ ಚಾಮರಾಜನಗರ ಜಿಲ್ಲೆಯ ಜನರ ಕಾಣಿಕೆ.

ಸಪ್ತ ಮಾತೃಕತೆಯರು – ಸಪ್ತ ಯೋಜನೆಗಳು – ಸಮಾನತೆಗಾಗಿ ಸರ್ಕಾರದ ಸಪ್ತ ಹೆಜ್ಜೆಗಳು ಹೀಗಿವೆ.

- “ಮಾತೆಯ ಮಮತೆಯ ಪ್ರತೀಕ ಯೋಜನೆ’ಯು (ಎಂ.ಎ.ಎ.) ಸಪ್ತ ಹೆಜ್ಜೆಗಳು ಹೀಗಿವೆ.
- “ಕಿಶೋರಿ ಯೋಜನೆ”ಯ ಪ್ರತೀಕ “ವೈಷ್ಣವೀ”.
- “ಏಕಲವ್ಯ ಯೋಜನೆ”ಯ ಪ್ರತೀಕ “ಮಹೇಶ್ವರಿ”.
- “ಶೇ.50 ರ ಮೀಸಲಾತಿ ಯೋಜನೆ”ಯ ಪ್ರತೀಕ “ಇಂದ್ರಾಣಿ”
- “ಜನನಿ ಸುರಕ್ಷಾ ಯೋಜನೆ”ಯ ಪ್ರತೀಕ “ಕೌಮಾರಿ”
- “ಸ್ತ್ರೀಶಕ್ತಿ ಮತ್ತು ಮಹಿಳಾ ಸಬಲೀಕರಣ ಯೋಜನೆ”ಯ ಪ್ರತೀಕ “ವಾರಾಹಿ” ಮತ್ತು
- ಮಾನ್ಯ ಮುಖ್ಯಮಂತ್ರಿಗಳು ಚಾಮರಾಜನಗರ ಜಿಲ್ಲೆಯಲ್ಲೇ ಉದ್ಘಾಟನೆಗೊಳಿಸಿದ “ಮನಸ್ವಿನಿ ಮತ್ತು ಮೈತ್ರಿ” ಯೋಜನೆ ಪ್ರತೀಕ “ಚಾಮುಂಡಿ”.

ಸಮಾನತೆಗಾಗಿ ಈ ಸಪ್ತ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ, ಸಾಮಾಜಿಕ, ನ್ಯಾಯ ನಿಟ್ಟಿನಲ್ಲಿ ಹೆಜ್ಜೆ ಇಡುತ್ತಾ, ಮುಂದೆ ನಡೆಯುತ್ತಿರುವ ನಮ್ಮ ಸರ್ಕಾರ ನಮ್ಮ ತಾಯಿ ಎಂದು ಒಪ್ಪುತ್ತೀರಲ್ಲವೇ? **ಹೌದು, ಸರ್ಕಾರ ನಮ್ಮೆಲ್ಲರ ತಾಯಿ.**

ಚಿಕ್ಕಬಳ್ಳಾಪುರ ಜಿಲ್ಲೆ

ಶ್ರೀಕ್ಷೇತ್ರ ಕೈವಾರದ ಬಕಾಸುರ ವಧೆಯ ಸ್ತಬ್ದಚಿತ್ರ



ಚಿಕ್ಕಬಳ್ಳಾಪುರವು ಕ್ರಿ.ಶ. 2008ರಲ್ಲಿ ಜಿಲ್ಲೆಯಾಗಿ ಪರಿವರ್ತನೆಗೊಂಡಿತು. ಇಲ್ಲಿನ ಪ್ರಸಿದ್ಧ ಸ್ಥಳಗಳು ಪುರಾತನ ನಂದಿ ದೇವಾಲಯ, ವಿಶ್ವಪ್ರಸಿದ್ಧವಾದ ನಂದಿ ಗಿರಿಧಾಮ, ಶ್ರೀಯೋಗಿ ನಾರೇಯಣ ಅವರ ಸಾಧನ ಕ್ಷೇತ್ರವಾದ ಕೈವಾರ ಹಾಗೂ ವಿದುರಾಶ್ವತ್ಥ. ಭಾರತದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಮುದ್ದೇನಹಳ್ಳಿಯೂ ಸಹ ಈ ಜಿಲ್ಲೆಗೆ ಸೇರಿದೆ. ಇಲ್ಲಿಗೆ ಸುಮಾರು 25 ಕಿ.ಮೀ. ದೂರದಲ್ಲಿರುವ ಮಾಕಿರೆಡ್ಡಿಪಲ್ಲಿಯಲ್ಲಿ ಪುರಾತನವಾದ ಮುತ್ತುರಾಯಸ್ವಾಮಿ ದೇವಾಲಯವಿದೆ.

ಶ್ರೀಕ್ಷೇತ್ರ ಕೈವಾರವು ಚಿಕ್ಕಬಳ್ಳಾಪುರ ಜಿಲ್ಲೆಯ ಒಂದು ಪ್ರಸಿದ್ಧ ಪುಣ್ಯಕ್ಷೇತ್ರ. ದ್ವಾಪರಯುಗದಲ್ಲಿ ಇದನ್ನು 'ಏಕಚಕ್ರ ನಗರ' ಎಂದು ಕರೆಯಲಾಗುತ್ತಿತ್ತು ಎಂದು ನಂಬಲಾಗಿದೆ. ಪಾಂಡವರು ವನವಾಸದಲ್ಲಿದ್ದಾಗ ಇಲ್ಲಿಗೆ ಬಂದಿದ್ದದು ಹಾಗೂ ಇಲ್ಲಿರುವ ಭೀಮಲಿಂಗೇಶ್ವರ ದೇವಾಲಯವನ್ನು ಭೀಮಸೇನನು ಸ್ಥಾಪಿಸಿದನೆಂಬ ಐತಿಹ್ಯವಿದೆ. ಇದಕ್ಕೆ 'ಕೈವಾರ ನಾಡು' ಎಂಬ ಹೆಸರು ಸಹ ಇದ್ದಿತು ಎಂಬ ಉಲ್ಲೇಖವಿದೆ. ಇಲ್ಲಿ ಭೀಮಸೇನನು ತಾಯಿ ಕುಂತಿಯ ಆದೇಶದಂತೆ ತಾವು ವಾಸವಿದ್ದ

ಮನೆಯ ಯಜಮಾನನ ಪುತ್ರನನ್ನು ರಕ್ಷಿಸುವುದಕ್ಕಾಗಿ ಜನರಿಗೆ ಉಪಟಳವನ್ನು ನೀಡುತ್ತಿದ್ದ ಬಕಾಸುರ ಎಂಬ ರಾಕ್ಷಸನನ್ನು ವಧಿಸಿದನೆಂದು ತಿಳಿದು ಬರುತ್ತದೆ.

ಕೈವಾರ ನಾಡು ಮಹಾನ್ ಸಂತ ಹಾಗೂ ಕಾಲಜ್ಞಾನಿ ಶ್ರೀಯೋಗಿ ನಾರೇಯಣ ಯತೀಂದ್ರರು ಜನಿಸಿದ ಪುಣ್ಯಭೂಮಿ. ಬಲಿಜ ಜನಾಂಗಕ್ಕೆ ಸೇರಿದ ಮುದ್ದಮ್ಮ ಮತ್ತು ಕೊಂಡಪ್ಪ ದಂಪತಿಗಳಿಗೆ ಜನಿಸಿದ ಇವರ ಪೂರ್ವಾಶ್ರಮದ ಹೆಸರು ನಾರಣಪ್ಪ. ಕುಲದೇವರಾದ ಶ್ರೀ ಅಮರ ನಾರೇಯಣನ ಕೃಪೆಯಿಂದ ಜನಿಸಿದ ಇವರು ಬಾಲ್ಯದಲ್ಲಿಯೇ ವೈರಾಗ್ಯದತ್ತ ವಾಲಿದ್ದರು. ಇವರಿಗೆ ಶ್ರೀಪರದೇಶಿ ಸ್ವಾಮಿಗಳು ಮುಕ್ತಿ ದಾರಿಯನ್ನು ತೋರಿಸಿ, ಅಷ್ಟಾಕ್ಷರಿ ಮಂತ್ರವನ್ನು ಬೋಧಿಸಿದರು. ಆನಂತರ ಅನೇಕ ವರ್ಷಗಳ ಕಾಲ ಕೈವಾರದ ಶ್ರೀನರಸಿಂಹ ಗುಹೆಯಲ್ಲಿ ತಪಸ್ಸು ಮಾಡಿ, ದೈವಸಾಕ್ಷಾತ್ಕಾರವನ್ನು ಪಡೆದರು. ಮಹಾಮಾನವತಾವಾದಿಯಾದ ಇವರು ಮೇಲುಕೀಳು ಭೇದಭಾವ ಮತ್ತು ಜಾತಿ ಪದ್ಧತಿಯನ್ನು ತೊಲಗಿಸಲು ಶ್ರಮಿಸಿದರು. ಶತಾಯುಷಿಗಳಾದ ಇವರು ಕೈವಾರ ಕ್ಷೇತ್ರದಲ್ಲಿ ಸಜೀವ ಸಮಾಧಿಯಾಗಿ, **'ಕೈವಾರ ತಾತಯ್ಯ'** ಎಂದು ಲೋಕಪ್ರಸಿದ್ಧರಾದರು.

ಪ್ರವಾಸೋದ್ಯಮ ಇಲಾಖೆ

ವನ್ಯಮೃಗಗಳ ವೈವಿಧ್ಯತೆಯ ನೆಲೆಯ ಸ್ತಬ್ದಚಿತ್ರ



ಕರ್ನಾಟಕ ರಾಜ್ಯವು ಭಾರತದ ಅತ್ಯಂತ ಜೀವ ವೈವಿಧ್ಯಭರಿತ ಪ್ರದೇಶಗಳಲ್ಲಿ ಒಂದಾಗಿದೆ. ಇದು ಪಶ್ಚಿಮಘಟ್ಟದ ನಿತ್ಯಹರಿದ್ವರ್ಣದ ಕಾಡುಗಳಿಂದ ಹಿಡಿದು, ಸಮತಟ್ಟಾದ ಪ್ರದೇಶಗಳಲ್ಲಿ ಕುರುಚಲು

ಗಿಡಗಂಟಿಗಳಿಂದ ಕೂಡಿದ ಅರಣ್ಯಗಳನ್ನು ಹೊಂದಿದೆ. ಇಲ್ಲಿ ವೈವಿಧ್ಯಮಯವಾದ ಗಿಡಮರಗಳು, ಪ್ರಾಣಿಪಕ್ಷಿಗಳು, ಜಲಚರಗಳು ಪೋಷಿಸಲ್ಪಡುತ್ತಿವೆ. ಇಂದಿನ ಮತ್ತು ಮುಂದಿನ ಪೀಳಿಗೆಗಾಗಿ ಅರಣ್ಯಗಳನ್ನು ಮತ್ತು ವನ್ಯಜೀವಿಗಳನ್ನು ಸಂರಕ್ಷಿಸುವುದು, ನಿರ್ವಹಿಸುವುದು ಅಭಿವೃದ್ಧಿಪಡಿಸುವುದು ಮತ್ತು ಪ್ರವಾಸಿ ತಾಣಗಳನ್ನು ಪರಿವರ್ತಿಸುವುದು ಸರ್ಕಾರದ ಪ್ರಮುಖ ಧ್ಯೇಯವಾಗಿದೆ. ಇದಕ್ಕಾಗಿ ಸರ್ಕಾರವು ಅನೇಕ ಯೋಜನೆಗಳನ್ನು ರೂಪಿಸುವುದರ ಮೂಲಕ ಪ್ರವಾಸಿ ತಾಣಗಳಾಗಿ ಅಭಿವೃದ್ಧಿಪಡಿಸಿದೆ.



ಕರ್ನಾಟಕದಲ್ಲಿ ಅರಣ್ಯ ಮತ್ತು ವನ್ಯಜೀವಿಗಳ ಸಂರಕ್ಷಣೆಗಾಗಿ ಈ ಕೆಳಕಂಡ ಪ್ರದೇಶಗಳನ್ನು ರಾಷ್ಟ್ರೀಯ ಉದ್ಯಾನವನಗಳು ಎಂದು ಘೋಷಿಸಿ, ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಿದೆ.

1) ಕಾರವಾರದ ಬಳಿಯಿರುವ ಅಣಶಿ ರಾಷ್ಟ್ರೀಯ ಉದ್ಯಾನವನ

2) ಚಾಮರಾಜನಗರದ ಬಳಿಯಿರುವ ಬಂಡೀಪುರ ರಾಷ್ಟ್ರೀಯ ಉದ್ಯಾನವನ

3) ಬೆಂಗಳೂರಿನ ಬಳಿಯಿರುವ ಬನ್ನೇರು ಘಟ್ಟ ರಾಷ್ಟ್ರೀಯ ಉದ್ಯಾನವನ

4) ಚಿಕ್ಕಮಗಳೂರು ಬಳಿಯಿರುವ ರಾಷ್ಟ್ರೀಯ ಉದ್ಯಾನವನ

5) ಮೈಸೂರು ಬಳಿಯಿರುವ ನಾಗರಹೊಳೆ ರಾಷ್ಟ್ರೀಯ ಉದ್ಯಾನವನಗಳು

ಸರ್ಕಾರವು ಈ ಪ್ರದೇಶಗಳನ್ನು ವನ್ಯಜೀವಿ ಅಭಯಾರಣ್ಯ ಎಂದು ಘೋಷಿಸಿ, ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಿದೆ.

1) ಭೀಮಗಡ ವನ್ಯಜೀವಿ ಅಭಯಾರಣ್ಯ

2) ರಂಗಯ್ಯನದುರ್ಗ ವನ್ಯಜೀವಿ ಅಭಯಾರಣ್ಯ

3) ಚಿಂಚೋಳಿ ವನ್ಯಜೀವಿ ಅಭಯಾರಣ್ಯ

4) ರಾಮದೇವರ ಬೆಟ್ಟ ವನ್ಯಜೀವಿ ಅಭಯಾರಣ್ಯ

5) ಮಲೆಮಹದೇಶ್ವರ ವನ್ಯಜೀವಿ ಅಭಯಾರಣ್ಯ

6) ಗುಡೆಕೋಟೆ ಮದಡು ಕರಡಿ ಅಭಯಾರಣ್ಯಗಳಾಗಿವೆ.

ಇವುಗಳಲ್ಲದೆ ಬಿಳಿಗಿರಿರಂಗನಬೆಟ್ಟ, ಹೆಗ್ಗಡದೇವನ ಕೋಟೆಯ ಕಾಕನಕೋಟೆ ಮೊದಲಾದ ಕಾಡುಗಳಲ್ಲಿ ಆನೆಗಳು, ಹುಲಿಗಳು, ಚಿರತೆಗಳು ಅಲ್ಲದೇ ವೈವಿಧ್ಯಮಯವಾದ ಜಿಂಕೆಗಳು ಹೇರಳವಾಗಿ ಕಂಡುಬರುತ್ತವೆ. ಇವಲ್ಲದೆ ಶಿವಮೊಗ್ಗ ಗುಡವಿ, ಶ್ರೀರಂಗಪಟ್ಟಣದ ರಂಗನತಿಟ್ಟು, ಬೆಳ್ಳೂರು ಮೊದಲಾದ ಕಡೆಗಳಲ್ಲಿರುವ ಪಕ್ಷಿಧಾಮಗಳು ಪ್ರಸಿದ್ಧ ಪ್ರವಾಸಿ ತಾಣಗಳಾಗಿವೆ.

ಚಿಕ್ಕಮಗಳೂರು ಜಿಲ್ಲೆ
ವಿದ್ಯಾಶಂಕರ ದೇವಾಲಯದ ಸ್ತಬ್ದಚಿತ್ರ



ಚಿಕ್ಕಮಗಳೂರು ಜಿಲ್ಲೆಯಲ್ಲಿ ಇರುವ ಶೃಂಗೇರಿಯು ಕರ್ನಾಟಕ ರಾಜ್ಯದ ಇತಿಹಾಸ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾಗಿದೆ. ಇದು ಪಶ್ಚಿಮಘಟ್ಟಗಳ ಮಡಿಲಿನಲ್ಲಿ ಪ್ರವಹಿಸುವ ತುಂಗಾ ನದಿಯ ತಟದಲ್ಲಿದೆ. ಶೃಂಗೇರಿ ಶಾರದಾಪೀಠವು ಕ್ರಿ.ಶ. ಎಂಟನೆಯ ಶತಮಾನದಲ್ಲಿ ಅದ್ವೈತ ಸಿದ್ಧಾಂತದ

ಪ್ರತಿಪಾದಕರಾದ ಶ್ರೀಶ್ರೀಶ್ರೀ ಆದಿಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಮೊದಲನೆಯದಾಗಿದೆ. ಇದನ್ನು **'ದಕ್ಷಿಣಾಮ್ನಾಯ ಪೀಠ'** ಎಂದು ಕರೆಯುತ್ತಾರೆ. ಇಲ್ಲಿರುವ ಶ್ರೀ ಶಾರದಾದೇವಿ ಹಾಗೂ ವಿದ್ಯಾಶಂಕರ ದೇವಾಲಯಗಳು ಯಾತ್ರಾರ್ಥಿಗಳ ಪ್ರಮುಖ ಆಕರ್ಷಣೆಯಾಗಿವೆ.

ಶೃಂಗೇರಿಯ ವಿದ್ಯಾಶಂಕರ ದೇವಾಲಯವು ಕ್ರಿ.ಶ. ಸುಮಾರು 1338 ರಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯವನ್ನು ವಿಜಯನಗರ ಸಾಮ್ರಾಜ್ಯ ಸಂಸ್ಥಾಪಕ ಗುರುಗಳಾದ ಶ್ರೀ ವಿದ್ಯಾರಣ್ಯರು ನಿರ್ಮಿಸಿದರು. ಇದು ದ್ರಾವಿಡ, ಚಾಲುಕ್ಯ, ದಕ್ಷಿಣ ಭಾರತ ಹಾಗೂ ವಿಜಯನಗರ ವಾಸ್ತುಶಿಲ್ಪ ಶೈಲಿಯನ್ನು ಹೋಲುತ್ತದೆ. ಈ ಚತುಷ್ಕೋನ ದೇವಾಲಯದ ಗರ್ಭಗುಡಿಯಲ್ಲಿ ದುರ್ಗಾಮಾತೆ, ವಿದ್ಯಾ ಗಣೇಶ ಮುಂತಾದ ವಿಗ್ರಹಗಳನ್ನು ಕಾಣಬಹುದಾಗಿದೆ. ಇದರ ಜೊತೆಗೆ ಬ್ರಹ್ಮ, ವಿಷ್ಣು, ಮಹೇಶ್ವರ ವಿಗ್ರಹಗಳೂ ಇವೆ. ಸುಂದರವಾದ ವಾಸ್ತುಶಿಲ್ಪಗಳನ್ನು ಹೊಂದಿರುವ ದೇವಾಲಯದ ಒಳ ತಾರಸಿ ಇನ್ನೊಂದು ಮುಖ್ಯ ವಿಶೇಷವಾಗಿದೆ. ದೇವಾಲಯದ ತಾರಸಿಗಳು ಇಳಿಜಾರು ಚಪ್ಪಡಿ ವಿನ್ಯಾಶವನ್ನು ಹೊಂದಿವೆ. ಗರ್ಭಗೃಹದ ಮುಂದಿರುವ ಸಭಾಭವನದ ಮೇಲಣ ಗೋಪುರವು ಗೋಳಾಕಾರಾವಾಗಿ ನಿಲ್ಲಿಸಿರುವ 12 ಶಿಲಾಸ್ತಂಭಗಳ ಆಧಾರದ ಮೇಲೆ ನಿಂತಿದೆ. ಈ ಕಂಬಗಳಲ್ಲಿ ಕ್ರಮವಾಗಿ 12 ರಾಶಿಗಳ ಚಿಹ್ನೆಗಳನ್ನು ಕೆತ್ತಲಾಗಿದೆ. ಈ ಭವನದ ಪೂರ್ವ, ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ 3 ಚಿಕ್ಕ ಬಾಗಿಲುಗಳಿವೆ. ಉದಯರವಿಯ ಕಿರಣಗಳು ಆಯಾಯ ಮಾಸಗಳಲ್ಲಿ ಆಯಾಯ ರಾಶಿಸ್ತಂಬಗಳ ಮೂಲಕವೇ ಹಾದುಹೋಗುವಂತೆ ನಿರ್ಮಿಸಲಾಗಿದೆ. ಇದು ಸೌರಮಾನಕ್ಕೆ ಅನುಗುಣವಾಗಿ ಸೂರ್ಯನ ಸಂಕ್ರಮಣವನ್ನು ಅನುಸರಿಸುವಂತಿದ್ದು, ಬೇರೆ ಯಾವ ಕಂಬದ ಮೇಲೂ ಹಾದುಹೋಗುವುದಿಲ್ಲ. ದೇವಾಲಯದ ತಳಮನೆಯು ಸುಂದರವಾದ ವಿಷ್ಣು, ಶಿವ, ದಶಾವತಾರಗಳು, ಷಣ್ಮುಖ, ಕಾಳಿಮಾತೆ ಮೊದಲಾದ ವಿವಿಧ ಬಗೆಯ ಶಿಲ್ಪಗಳಿಂದ ಕಂಗೊಳಿಸುತ್ತದೆ.

ಚಿಕ್ಕಮಗಳೂರು ಹಸಿರನ್ನು ಹೊದ್ದಿಕೊಂಡು ಮಲಗಿರುವ ಗಿರಿಶಿಖರಗಳನ್ನು ಒಳ ಗೊಂಡಿದೆ. ಶೃಂಗೇರಿಯ ಶಾರದಾದೇವಾಲಯವು ಕರ್ನಾಟಕ ರಾಜ್ಯದ ಧಾರ್ಮಿಕ ಕ್ಷೇತ್ರಗಳಲ್ಲಿ ಇದು ಒಂದು. ಇಲ್ಲಿ ಶಂಕರಾಚಾರ್ಯರು ಮಠವನ್ನು ಸ್ಥಾಪಿಸಿದರೆಂದು ನಮಗೆ ಇತಿಹಾಸದಿಂದ ತಿಳಿಯುತ್ತದೆ. ತುಂಬಾ ಪ್ರಾಚೀನವಾದ ಶೃಂಗೇರಿ ದೇವಾಲಯ ಪ್ರವಾಸೋದ್ಯಮಕ್ಕೆ ಒಂದು ಕೊಡುಗೆಯಾಗಿ ದೇಶವಿದೇಶಗಳಲ್ಲಿ ಹೆಸರು ಮಾಡಿದೆ.

ಚಿತ್ರದುರ್ಗ ಜಿಲ್ಲೆ

ಅಭಿವೃದ್ಧಿಗಾಗಿ – ಸೌರಶಕ್ತಿ ಮತ್ತು ಪವನ ಶಕ್ತಿಯ ಸ್ತಬ್ದಚಿತ್ರ



ಚಿತ್ರದುರ್ಗ ಜಿಲ್ಲೆ ಕೋಟೆಗಳ ನಾಡು. ಸುಂದರ ಬೆಟ್ಟಗುಡ್ಡಗಳಿಂದ ಅವೃತ್ತವಾಗಿದೆ. ಗಂಡುಮೆಟ್ಟಿದ ಈ ನಾಡಿನಲ್ಲಿರುವ ಕೋಟೆಯು ಇತಿಹಾಸ ಪ್ರಸಿದ್ಧವಾಗಿದೆ. ನಯವಾದ ಬೃಹದಾಕಾರಾದ ಕಲ್ಲುಗಳನ್ನು ಗಾರೆಯ ಸಹಾಯವಿಲ್ಲದೆ ಒಂದರ ಮೋಲೊಂದರಂತೆ ಭದ್ರವಾಗಿ ಜೋಡಿಸಿ ನಿರ್ಮಿಸಲಾಗಿದೆ. ಆಕ್ರಮಣಕಾರರಿಂದ ರಕ್ಷಣೆಯನ್ನು ಪಡೆಯಲು ಕೋಟೆಯ ಹೊರಭಾಗದಲ್ಲಿ ವಿಶಾಲವಾದ ಕಂದಕಗಳನ್ನು ನಿರ್ಮಾಣ ಮಾಡಲಾಗಿದೆ. ಚಿತ್ರದುರ್ಗದ ಈ ಏಳು ಸುತ್ತಿನ ಕೋಟೆಯಲ್ಲಿ ಏಕನಾಥೇಶ್ವರಿ ಬಾಗಿಲು ಎಂಬ ಮಹಾದ್ವಾರವಿದೆ. ಕೋಟೆಯ ಮುಂಭಾಗದಲ್ಲಿ ನಾಗರಹಾವಿನ ಲಾಂಛನವಿದೆ. ಕೋಟೆಯ ಗೋಡೆಯು 30 ಅಡಿ ಎತ್ತರವಾಗಿದ್ದು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿ ನಿರ್ಮಾಣಗೊಂಡಿವೆ. ಇಲ್ಲಿರುವ **'ಒನಕೆ ಒಬವ್ವನ ಕಿಂಡಿ'ಯು** ಇಂದಿಗೂ ಪ್ರಸಿದ್ಧವಾಗಿದೆ.

ಇದು ಸೌರ ಮತ್ತು ಪವನ ವಿದ್ಯುತ್ ಸ್ಥಾವರಗಳ ಆಗರವಾಗಿದೆ. ಇಲ್ಲಿನ ಹೆದ್ದಾರಿ ಅಕ್ಕ–ಪಕ್ಕದ ಗುಡ್ಡಗಳಲ್ಲಿ ಸ್ಥಾಪಿತವಾಗಿರುವ ಸೌರ ಮತ್ತು ಪವನಯಂತ್ರಗಳು ನೋಡುಗರಿಗೆ ಸುಂದರ ಮನಮೋಹಕ ದೃಶ್ಯವಾಗಿದೆ. ಅದಕ್ಕಿಂತ ಹೆಚ್ಚಾಗಿ ಈ ಜಿಲ್ಲೆಯು ಸೌರ ಮತ್ತು ಪವನಯಂತ್ರ ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿದ್ದು, ಈ ಕ್ಷೇತ್ರಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿದೆ.

ಇಂದು ದೇಶದ ಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆಯ ಕೊರತೆಯನ್ನು ನಿವಾರಿಸಲು ಇಲ್ಲಿ ಸುಮಾರು 953 ಪವನಯಂತ್ರಗಳನ್ನು ಸ್ಥಾಪಿಸಲಾಗಿದೆ. ಪ್ರತಿವರ್ಷ ಸುಮಾರು 863 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ. 8 ಪವನ ವಿದ್ಯುತ್ ಉತ್ಪಾದನಾ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು 600 ಕಾರ್ಮಿಕರಿಗೆ ಉದ್ಯೋಗ ಲಭಿಸಿದೆ. ಈ ಯೋಜನೆಯು ಪರಿಸರಸ್ನೇಹಿ ಆಗಿರುವುದರಿಂದ ಯಾವುದೇ ರೀತಿಯ ವಾಯು, ಜಲ, ಶಬ್ಧ ಮಾಲಿನ್ಯಗಳು ಆಗುವುದಿಲ್ಲ. ಕೃಷಿಗೆ ಯೋಗ್ಯವಲ್ಲದ ಅನುಪಯುಕ್ತ ಭೂಮಿಯಲ್ಲಿ ಈ ಪವನ ಯಂತ್ರಗಳನ್ನು ಸ್ಥಾಪಿಸಲಾಗಿದೆ. ಹಾಗೆಯೇ ಇದರ ಜತೆಗೆ ನವೀಕರಿಸಬಹುದಾದ ಸೌರಶಕ್ತಿಯಿಂದಲೂ ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ. ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಲು ಉದ್ಯಮಿಗಳಿಗೆ ಅವಕಾಶವನ್ನು ನೀಡಲಾಗುತ್ತಿದೆ.

ತುಮಕೂರು ಜಿಲ್ಲೆ
ಕಲ್ಪತರು ನಾಡು – ಸಿರಿಧಾನ್ಯಗಳ ಬೀಡು ಒಂದು ಸ್ತಬ್ದಚಿತ್ರ



'ನಡೆದಾಡುವ ದೇವರು' ಎಂದು ಪ್ರಸಿದ್ಧರಾದ ಶತಾಯುಷಿ ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿಗಳವರ ಕರ್ಮಭೂಮಿ **'ಕಲ್ಪತರು ನಾಡು** – ಸಿರಿಧಾನ್ಯಗಳ ಬೀಡು' ತುಮಕೂರು ಜಿಲ್ಲೆ. ಇಲ್ಲಿ ಸುಮಾರು 1,45,616 ಹೆಕ್ಟೇರ್ ಪ್ರದೇಶದಲ್ಲಿ ತೆಂಗನ್ನು ಬೆಳೆಯಲಾಗುತ್ತಿದೆ. ಆಹಾರ, ಪಾನೀಯ ಹಾಗೂ ಔಷಧಿಯ ಬೆಳೆಯಾಗಿರುವ ತೆಂಗು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ತೆಂಗಿನಿಂದ ವಿವಿಧ ಬಗೆಯ ಕರಕುಶಲ ವಸ್ತುಗಳು, ನಾರಿನ ಉತ್ಪನ್ನಗಳನ್ನು ಉತ್ಪಾದಿಸಲಾಗುತ್ತದೆ. ಅಲ್ಲದೆ ಇದು

ಸಣ್ಣ ಕೈಗಾರಿಕೆಗಳಲ್ಲಿ ಕಚ್ಚಾ ಉತ್ಪನ್ನವಾಗಿ ಬಳಕೆಯಾಗುತ್ತಿದೆ. ತೆಂಗಿನ ಕಾಯಿಯಾಗಿ, ಕೊಬ್ಬರಿಯಾಗಿ ಅಡುಗೆಗೆ ಹಾಗೂ ಸಿಹಿ ತಿನಿಸುಗಳ ತಯಾರಿಕೆಗೆ ಬಳಕೆಯಾಗುತ್ತಿದೆ. ತೆಂಗಿನ ಹಾಲಿನ ಪುಡಿ, ತೆಂಗಿನ ಎಣ್ಣೆ, ಕೊಬ್ಬರಿ ಎಣ್ಣೆ, ನೀರಾ, ನೀರಾಬೆಲ್ಲ, ಇದ್ದಿಲು ಇನ್ನು ಅನೇಕ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಭಾರತದಲ್ಲಿ ತೆಂಗು ಬೆಳೆಯುವ ಪ್ರದೇಶಗಳಲ್ಲಿ ತುಮಕೂರು ಅಗ್ರಸ್ಥಾನದಲ್ಲಿವೆ. ತುಮಕೂರು ಜಿಲ್ಲೆಯ ಜನರೊಂದಿಗೆ ತೆಂಗು ಅವಿನಾಭಾವವಾಗಿ ಬೆಸೆದುಕೊಂಡಿದೆ. ಆದ್ದರಿಂದಲೇ ಇದನ್ನು **'ಕಲ್ಪತರು ನಾಡು'** ಎಂದು ಕರೆಯಲಾಗುತ್ತದೆ.

ಇಂದಿನ ಆಧುನಿಕ ಯುಗದಲ್ಲಿ ಬದಲಾಗುತ್ತಿರುವ ಸಂಸ್ಕೃತಿ ಹಾಗೂ ಜೀವನ ಕ್ರಮಗಳಿಂದ, ಪರಂಪರಾನುಗತವಾಗಿ ಬಂದ ಕಿರು(ಸಿರಿ) ಧಾನ್ಯಗಳ ಬೆಳೆ ಮತ್ತು ಬಳಕೆ ಅವನತಿಯತ್ತ ಸಾಗುತ್ತಿದೆ. ಆಹಾರ ಕೊರತೆಯುಂಟಾದಾಗ ಹಸಿರುಕ್ರಾಂತಿಯ ಸಮಯದಲ್ಲಿ ಭತ್ತ ಮತ್ತು ಗೋಧಿಯ ಬೆಳೆಯ ಬೆಳೆಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿದ ಕಾರಣ ಈ ಧಾನ್ಯಗಳು ಕಡೆಗಣಿಸಲ್ಪಟ್ಟವು. ಕಿರುಧಾನ್ಯಗಳಾದ ಬಾರ್ಲಿ, ಊದಲು, ಬರಗು, ಅರ್ಕ, ಸಾಮೆ, ಸಜ್ಜೆ, ರಾಗಿ, ನವಣೆ, ಜೋಳ ಇವುಗಳ ಬಳಕೆಯಿಂದ ರೋಗನಿರೋಧಕ ಶಕ್ತಿ ಹೆಚ್ಚುವುದಲ್ಲದೆ ದೇಹವು ದೃಢವಾಗಿ ಆರೋಗ್ಯವಂತರಾಗಿರಲು ಸಾಧ್ಯವಾಗುತ್ತದೆ. ಇವುಗಳಲ್ಲಿ ಪ್ರೋಟಿನ್, ಕಬ್ಬಿಣಾಂಶ, ಕ್ಯಾಲ್ಸಿಯಂ, ಖನಿಜಾಂಶಗಳು ಹಾಗೂ ಜೀವಸತ್ವಗಳು ಹೆಚ್ಚಿ ಪ್ರಮಾಣದಲ್ಲಿರುತ್ತದೆ. ಆದ್ದರಿಂದಲೇ ಇವುಗಳ ಬಳಕೆಯಿಂದ **'ಜೀವಕ್ಕೆ ತಂಪು – ಜುಟ್ಟಿಗೆ ಭದ್ರ'** ಎಂಬ ನಾಣ್ಣುಡಿಯಿದೆ. ಇತರ ಬೆಳೆಗಳಿಗೆ ಹೋಲಿಸಿದರೆ ಸಿರಿಧಾನ್ಯಗಳ ಬೆಳೆಗಳನ್ನು ಕಡಿಮೆ ನೀರಿನಲ್ಲಿ ಬೆಳೆಯಬಹುದಾಗಿದೆ. ಅಲ್ಲದೆ ರೈತರಿಗೆ ಬೆಳೆ ನಾಶದ ಭಯವು ಇರುವುದಿಲ್ಲ. ಬಡ ಜನರಿಗೆ ಹಾಗೂ ಮಹಿಳೆಯರಿಗೆ ಅಗತ್ಯವಾದ ಪೌಷ್ಠಿಕಾಂಶಗಳು ಇವುಗಳಿಂದ ಸುಲಭವಾಗಿ ಲಭ್ಯವಾಗುತ್ತವೆ. ಮಳೆ ಆಧಾರಿತ ವ್ಯವಸಾಯ ಪದ್ಧತಿಯನ್ನು ಅವಲಂಭಿಸಿರುವ ರೈತರು ಈ ಬೆಳೆಯನ್ನು ಹೆಚ್ಚಾಗಿ ಬೆಳೆಯಬಹುದಾಗಿದೆ. ತುಮಕೂರಿನಲ್ಲಿ ಇಂತಹ ಸಿರಿಧಾನ್ಯಗಳನ್ನು ಹೆಚ್ಚಾಗಿ ಬೆಳೆಯುವುದರಿಂದ ಈ ಜಿಲ್ಲೆಯನ್ನು **'ಸಿರಿಧಾನ್ಯಗಳ ಬೀಡು'** ಎಂದು ಕರೆಯಲಾಗುತ್ತದೆ.

ತುಮಕೂರಿನ ಸ್ತಬ್ಧಚಿತ್ರವು ತನ್ನ ಜಿಲ್ಲೆಯ ವಿಶೇಷತೆಯನ್ನು ಸಾರುವಂತಹ ಅಂಶವನ್ನು ಒಳಗೊಂಡಿದ್ದು, ಪ್ರವಾಸಿಗರು ತುಮಕೂರಿನ ಪ್ರಮುಖ ಬೆಳೆಯಾದ ತೆಂಗು ಹಾಗೂ ಅಲ್ಲಿಯ ಪ್ರಮುಖ ಉದ್ಯೋಗ ತೆಂಗಿನ ತೋಟಗಾರಿಕೆಯ ಬಗ್ಗೆ ತಿಳಿಯಲು ಸಹಕಾರಿಯಾಯಿತು.

ವಾರ್ತಾ ಇಲಾಖೆ
ಜನತೆಯ ಕಡೆಗೆ ಭರವಸೆಯ ನಡಿಗೆಯ ಸ್ತಬ್ಧಚಿತ್ರ



ಕರ್ನಾಟಕ ಸರ್ಕಾರ ಸುಖೀರಾಜ್ಯದ ಕನಸಿನೊಂದಿಗೆ ಹಲವಾರು ಯೋಜನೆಗಳನ್ನು ರೂಪಿಸಿಕೊಂಡಿದೆ. **'ಹಸಿವು ಮುಕ್ತ ಕರ್ನಾಟಕ'** ಎನ್ನುವ ಆಶಯದೊಂದಿಗೆ **'ಅನ್ನಭಾಗ್ಯ'** ಮತ್ತು ಮಕ್ಕಳಲ್ಲಿ ಪೌಷ್ಠಿಕತೆ ಹೆಚ್ಚಿಸುವ ಸದುದ್ದೇಶದಿಂದ **'ಕ್ಷೀರಭಾಗ್ಯ'** ಯೋಜನೆಗಳನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಈ ಎರಡೂ ಯೋಜನೆಗಳನ್ನು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾಗಿವೆ. ಇವಲ್ಲದೆ ಕೃಷಿ ಉತ್ಪನ್ನವನ್ನು ಹೆಚ್ಚಿಸಲು ಮತ್ತು ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸಲು **'ಕೃಷಿ ಭಾಗ್ಯ'** ಯೋಜನೆಯನ್ನು, ಹೈನುಗಾರಿಕೆಯನ್ನು ಉತ್ತೇಜನಗೊಳಿಸಲು **'ಕ್ಷೀರಧಾರೆ'** ಯೋಜನೆಯನ್ನು, ಹೆಣ್ಣು ಮಕ್ಕಳ ಉನ್ನತ ಶಿಕ್ಷಣಕ್ಕೆ ಸಹಾಯ ಮಾಡಲು ಹಾಗ ಸರ್ವರಿಗೂ ಶಿಕ್ಷಣ ಪಡೆಯುವ ಅವಕಾಶವನ್ನು ನೀಡಲು **'ವಿದ್ಯಾಸಿರಿ'** ಯೋಜನೆಯನ್ನು ಹಾಗೂ ಬಡವರ ಬಾಳಿಗೆ ಬೆಳಕು ನೀಡಲು **'ಭಾಗ್ಯಜ್ಯೋತಿ'** ಇವೇ ಮೊದಲಾದ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಮೂಲಕ **'ಜನತೆಯ ಕಡೆಗೆ ಭರವಸೆಯ ನಡಿಗೆ'** ಎಂಬ ಧ್ಯೇಯವಾಕ್ಯವನ್ನು ಸಾಕಾರಗೊಳಿಸಲಾಗಿದೆ. ಬೆಂಗಳೂರು ನಗರದ ವಾಹನ ಸಂಚಾರದ ಒತ್ತಡವನ್ನು ಕಡಿಮೆಗೊಳಿಸುವ ದೃಷ್ಟಿಯಿಂದ ಬಹುದಿನಗಳ ಕನಸಾದ **'ನಮ್ಮ ಮೆಟ್ರೋ'** ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

ಅನ್ನಭಾಗ್ಯ ಯೋಜನೆ: 'ರಾಜ್ಯದಲ್ಲಿ ಹಸಿವಿನಿಂದ ಯಾರು ಸಾಯಬಾರದು' ಎಂಬ ಸದುದ್ದೇಶದಿಂದ ಜಾರಿಗೆ ತಂದಿರುವ ಯೋಜನೆ **'ಅನ್ನಭಾಗ್ಯ'**. 'ಅನ್ನ ಕೊಡುವುದಕ್ಕಿಂತ ಒಳ್ಳೆಯ ಕೆಲಸ ಇನ್ನೊಂದಿಲ್ಲ'

ಎಂಬ ಹಿನ್ನೆಲೆಯಲ್ಲಿ ಈ ಯೋಜನೆಗೆ **'ಅನ್ನಭಾಗ್ಯ'** ಎಂದು ಹೆಸರಿಡಲಾಗಿದೆ. **'ಅಂತ್ಯೋದಯ'** ಹಾಗೂ **ಬಿ.ಪಿ.ಎಲ್.** (ಬಡತನ ರೇಖೆಗಿಂತ ಕೆಳಗಿರುವ) ಪಡಿತರ ಚೀಟಿಯನ್ನು ಹೊಂದಿರುವ ಬಡಕುಟುಂಬಗಳಿಗೆ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯ ನೀಡುವ **'ಅನ್ನಭಾಗ್ಯ'** ಯೋಜನೆಯನ್ನು ಸರ್ಕಾರ 2013 ರ ಜುಲೈ 10 ರಿಂದ ರಾಜ್ಯದಾದ್ಯಂತ ಜಾರಿಗೆ ತಂದಿದೆ. ಈ ಯೋಜನೆಯಲ್ಲಿ ಅಕ್ಕಿ ಜೊತೆಗೆ ರಾಗಿ, ಜೋಳ, ಕೆಂಪು ಅಕ್ಕಿ ಹಾಗೂ ಗೋಧಿ ಸಹ ದೊರೆಯುತ್ತಿದೆ.

ಕ್ಷೀರಭಾಗ್ಯ ಯೋಜನೆ: ಅಮೃತ ಸಮಾನವಾದ ಹಾಲನ್ನು ದೇವರ ಸಮಾನರಾದಂತಹ ಮಕ್ಕಳಿಗೆ ನೀಡುತ್ತಿರುವ ಈ ಯೋಜನೆಗೆ **'ಕ್ಷೀರಭಾಗ್ಯ'** ಎಂದು ಹೆಸರಿಡಲಾಗಿದೆ. **'ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು'** ಎಂಬುದನ್ನು ಮನಗಂಡು ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ. ಶಾಲಾ ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುವ ಸದುದ್ದೇಶದಿಂದ ಅಂಗನವಾಡಿಯ ಮಕ್ಕಳು ಸೇರಿದಂತೆ 1 ರಿಂದ 10ನೆಯ ತರಗತಿಯವರೆಗಿನ ಒಂದು ಕೋಟಿಗೂ ಅಧಿಕ ಮಕ್ಕಳು ವಾರದಲ್ಲಿ ಮೂರು ದಿನ (ಸೋಮವಾರ, ಬುಧವಾರ ಮತ್ತು ಶುಕ್ರವಾರ) ತಲಾ 150 ಎಂ.ಎಲ್. ಬಿಸಿ ಹಾಲನ್ನು ಕುಡಿಯಲು ನೀಡಲಾಗುತ್ತಿದೆ. ಈ **'ಕ್ಷೀರಭಾಗ್ಯ'** ಯೋಜನೆಯನ್ನು ಕರ್ನಾಟಕ ಸರ್ಕಾರ 2013 ರ ಆಗಸ್ಟ್ ತಿಂಗಳಿನಿಂದ ರಾಜ್ಯದಾದ್ಯಂತ ಅನುಷ್ಠಾನಗೊಳಿಸಿದೆ.

ದಕ್ಷಿಣ ಕನ್ನಡ ಜಿಲ್ಲೆ

ರಾಣಿ ಅಬ್ಬಕ್ಕ ಮಹಾದೇವಿಯ ಸ್ತಬ್ದಚಿತ್ರ





ರಾಣಿ ಅಬ್ಬಕ್ಕ ಮಹಾದೇವಿ ತುಳು ನಾಡಿನ ಕೆಚ್ಚೆದೆಯ ನಾರಿ. ಉಳ್ಳಾಲದಲ್ಲಿ ಆಳಿದ ಚೌಟರಾಣ ಬಂಗರಸನ ಪಟ್ಟ ಮಹಿಷಿ. ಮಂಗಳೂರು ಬಂದರು ನಗರಿಗೆ ಉಳ್ಳಾಲವು ರಾಜಧಾನಿಯಾಗಿತ್ತು. ಭಾರತಕ್ಕೆ ವ್ಯಾಪಾರಕ್ಕಾಗಿಯೇ ಬಂದ ಪೋರ್ಚುಗೀಸರು ಇಲ್ಲಿ ನೆಲೆಯೂರಲೂ ಪ್ರಯತ್ನ ಮಾಡಿದರು. ಅದಕ್ಕಾಗಿ ತಮ್ಮ ಆಧುನಿಕ ನೌಕಾಸೇನೆ ಮತ್ತು ಶಸ್ತ್ರಾಸ್ತ್ರಗಳ

ಬಲದ ಮೂಲಕ ಕಪ್ಪಕಾಣಿಕೆಗಳನ್ನು ಪಡೆಯಲು ಬಲ ಪ್ರಯೋಗ ಮಾಡಿದರು. ಇದರ ಬಿಸಿಯು ಅಬ್ಬಕ್ಕ ರಾಣಿಗೂ ತಟ್ಟಿತು. ತನ್ನ ಪತಿಯು ಪೋರ್ಚುಗೀಸರ ಪರವಾಗಿ ನಿಂತರೂ ಉಳ್ಳಾಲವನ್ನು ಉಳಿಸಿಕೊಳ್ಳುವುದಕ್ಕಾಗಿ ಅವರನ್ನು ಸೆದೆ ಬಡಿಯಲು ಪಣತೊಟ್ಟು, ಹೋರಾಡಿದಳು.

ರಾಣಿ ಅಬ್ಬಕ್ಕ ಮಹಾದೇವಿಯು ದಶಕಗಳ ಕಾಲ ಹೋರಾಡಿ, ಪೋರ್ಚುಗೀಸರನ್ನು ಹಿಮ್ಮೆಟ್ಟಿಸಿದಳು. ಭಾರತದಲ್ಲಿ ಸ್ವಾತಂತ್ರ್ಯದ ಕಿಡಿಯನ್ನು ಹೊತ್ತಿಸಿದಳು. ದೇಶಾಭಿಮಾನ ಹಾಗೂ ಸಾಮರಸ್ಯದ ಪತಾಕೆಯನ್ನು ಎತ್ತಿ ಹಿಡಿದಳು. ತನ್ನ ಪರಾಕ್ರಮದೊಂದಿಗೆ ಉತ್ತಮ ರಾಜತಂತ್ರಜ್ಞೆ ಎಂಬುದನ್ನು ತೋರಿಸಿ **'ಅಭಯ ರಾಣಿ'** ಎಂದೇ ಪ್ರಸಿದ್ಧಳಾದಳು. ಕೇವಲ ಸ್ವಾತಂತ್ರ್ಯಕ್ಕಾಗಿ ಹೋರಾಡದೆ ಸಾಮಾಜಿಕ, ಧಾರ್ಮಿಕ ಹಾಗೂ ಸ್ತ್ರೀ ಸಮಾನತೆಯನ್ನು ತರಲು ಕಾರ್ಯಪ್ರವೃತ್ತಳಾದಳು. ಭಾರತೀಯ ಮಹಿಳೆಯರು ಸ್ತ್ರೀ ಶೋಷಣೆಯ ವಿರುದ್ಧ ಧ್ವನಿ ಎತ್ತಲು ಅಬ್ಬಕ್ಕ ಸ್ಫೂರ್ತಿಯಾದಳು. ತನ್ನ ಕುಟುಂಬದೊಳಗೆ ಗಂಡನ ದಬ್ಬಾಳಿಕೆಯನ್ನು ಎದುರಿಸಿ ನಿಂತು ಸ್ತ್ರೀ ಸಮೂಹಕ್ಕೆ ಮಾದರಿಯಾದಳು.

ತನ್ನ ಆಡಳಿತದ ಅವಧಿಯಲ್ಲಿ ಧಾರ್ಮಿಕವಾಗಿ ಜನರನ್ನು ಒಗ್ಗೂಡಿಸಿ ತುಳು ನಾಡಿನ ಜನರ ಸ್ವಾಭಿಮಾನವನ್ನು ಮೆರೆದಳು. ಜಾತ್ಯಾತೀತತೆಯನ್ನು ಎತ್ತಿ ಹಿಡಿದಳು. ಸಮಾನತೆಯ ಮೂಲಕ ಸಾಮಾಜಿಕ ನ್ಯಾಯವನ್ನು ನೀಡಿದಳು. ದೇಶೀಯ ತಂತ್ರಜ್ಞಾನವನ್ನು ಬಳಸಿ, ಕೃಷಿಗೆ ಆದ್ಯತೆಯನ್ನು ನೀಡಿದಳು. ಅಂತರ್ಜಾತಿಯ ವಿವಾಹಗಳಿಗೆ ಪ್ರೋತ್ಸಾಹ ನೀಡಿದಳು. ಹೀಗೆ ತನ್ನ ಸಂಸ್ಥಾನವನ್ನು ಆರ್ಥಿಕ ಭದ್ರತೆಗೆ ಕೊಂಡೊಯ್ದಳು. ತನ್ನ ಆದರ್ಶ ಮತ್ತು ಪರಾಕ್ರಮಗಳ ಮೂಲಕ ಇತಿಹಾಸದಲ್ಲಿ ಚಿರಸ್ಮರಣೀಯಳಾದಳು.

ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಲವು ಮಹಾನ್ ವ್ಯಕ್ತಿಗಳಲ್ಲಿ ಇವರು ಒಬ್ಬರು. ಮಹಿಳೆಯಾಗಿದ್ದುಕೊಂಡು, ಭಾರತ ಸ್ವಾತಂತ್ರ್ಯಕ್ಕಾಗಿ ತನ್ನ ಬದುಕನ್ನು ಮುಡಿಪಾಗಿಟ್ಟಂತಹ ದಿಟ್ಟ ಮಹಿಳೆ. ಈ ಸ್ತಬ್ಧಚಿತ್ರವು ದಕ್ಷಿಣಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ್ದು, ಈ ಸ್ತಬ್ಧಚಿತ್ರ ನೋಡುಗರಲ್ಲಿ ದೇಶಪ್ರೇಮವನ್ನು ಉಂಟುಮಾಡುವಂತಹ, ಜನರಲ್ಲಿ ತ್ಯಾಗ, ಬಲಿದಾನ, ದೇಶಕ್ಕಾಗಿ ತಮ್ಮ ಜೀವನವನ್ನು ಅರ್ಪಿಸುವಂತಹ ಮನೋಭಾವವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ಸ್ತಬ್ಧಚಿತ್ರವು ತನ್ನದೆಯಾದಂತಹ ವಿಶೇಷತೆಯನ್ನು ಒಳಗೊಂಡಿದೆ.

ದಾವಣಗೆರೆ ಜಿಲ್ಲೆ
ಜಗಳೂರು ಶ್ರೀರಂಗನಾಥಸ್ವಾಮಿಯ ದೇವಾಲಯದ ಸ್ತಬ್ಧಚಿತ್ರ



ದಾವಣಗೆರೆ ಜಿಲ್ಲೆ ಜವಳಿ ಉದ್ಯಮಕ್ಕೆ ಪ್ರಸಿದ್ಧವಾಗಿದೆ. ದಾವಣಗೆರೆಯ ಮೊದಲ ಹೆಸರು 'ಧವನಗಿರಿ'. ಇದು ಕರ್ನಾಟಕದ ಪ್ರಮುಖ ವ್ಯಾಪಾರ ಮತ್ತು ವಿದ್ಯಾ ಕೇಂದ್ರವಾಗಿದೆ. ಇಲ್ಲಿ ಹರಿಹರೇಶ್ವರ, ಉಚ್ಚಂಗಿದುರ್ಗ, ನೀಲಗುಂದ, ಬಾಗಳಿ, ನೀರ್ತಡಿ, ಆನೆಕೊಂಡ, ನಂದಿಗುಡಿ, ಸಂತೇಬೆನ್ನೂರು ಪುಷ್ಕರಣಿ ಮೊದಲಾದ ಪ್ರೇಕ್ಷಣೀಯ ಸ್ಥಳಗಳಿವೆ.

1) **ಹೆಳವನಕಟ್ಟೆ ಗಿರಿಯಮ್ಮ:** ಕ್ರಿ.ಶ. ಸುಮಾರು 18ನೆಯ ಶತಮಾಣದ ಪೂರ್ವಾರ್ಧದಲ್ಲಿ ಜೀವಿಸಿದ್ದ ಈಕೆ ಮಲೆಬೆನ್ನೂರಿನ ಹೆಳವನಕಟ್ಟೆ ರಂಗನಾಥ ಭಕ್ತೆ. ಇವಳು ಹರಿದಾಸ ಸಾಹಿತ್ಯದ ಮುಂದುವರಿಕೆಯಾಗಿ ಅನೇಕ ಕೀರ್ತನೆಗಳನ್ನು ಬರೆದಿರುವ ಕನ್ನಡದ ಎರಡನೆಯ ಕವಯತ್ರಿ.

2) **ಮಹಾಲಿಂಗ ರಂಗ: 'ಅನುಭವಾಮೃತ'** ಎಂಬ ಆಧ್ಯಾತ್ಮಿಕ ಕಾವ್ಯವನ್ನು ರಚಿಸಿದ ಮಹತ್ವದ ಕವಿ ಮಹಾಲಿಂಗರಂಗ, ಈತನು ದಾವಣಗೆರೆಯ ಉಚ್ಚಂಗಿದುರ್ಗ ಭಾಗದಲ್ಲಿ ನೆಲೆನಿಂತ ಕನ್ನಡದ ಹೆಮ್ಮೆಯ ಕವಿ. ಕೃತಿಗಳನ್ನು ರಚಿಸಲು ಸಂಸ್ಕೃತ ಅನಿವಾರ್ಯವಲ್ಲ ಎಂದು ತೋರಿಸಿ, ಕನ್ನಡದಲ್ಲಿಯೇ ಕೃತಿ ರಚಿಸಿದ ಧೀಮಂತ ಕವಿ. ಕನ್ನಡ ಭಾಷೆಯು ಸುಲಿದ ಬಾಳೆಯ ಹಣ್ಣಿನಂತೆ ಸುಲಭವಾದುದು ಎಂದು ಹೇಳಿದ ಕನ್ನಡಿಗ.

3) **ಉಚ್ಚಂಗಿದುರ್ಗ:** ಹರಪ್ಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗವನ್ನು ಕದಂಬರ ದೊರೆ ರವಿಮರ್ಮನ ಸೋದರ ಶಿವರಥನು ಪ್ರಾಂತ್ಯಾಧಿಕಾರಿಯಾಗಿ ಎರಡನೆಯ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದಳು. ಆನಂತರ ಇದು ಹರಪ್ಪನಹಳ್ಳಿ ಪಾಳೆಗಾರರ ಆಳ್ವಿಕೆಗೆ ಒಳಪಟ್ಟಿತು. ಇವರು ಈ ಪರಿಸರದಲ್ಲಿಯೇ ದೊರೆತ ಕಲ್ಲುಗಳಿಂದ ಉಚ್ಚಂಗಿದುರ್ಗ ಕೋಟೆಯನ್ನು ನಿರ್ಮಿಸಿದರು. ಏಳು ಬಾಗಿಲುಗಳನ್ನು ಹೊಂದಿರುವ ಈ ಕೋಟೆಯ ಏಳನೆಯ ಬಾಗಿಲನ್ನು ದಾಟಿದ ಬಳಿಕ ಬೆಟ್ಟದ ಉತ್ತರದ ತುದಿಯಲ್ಲಿ ಇತಿಹಾಸ ಪ್ರಸಿದ್ಧ ಉಚ್ಚಂಗಿಯಮ್ಮ ದೇವಾಲಯವಿದೆ.

4) **ಕೊಂಡುಕುರಿ ಅರಣ್ಯಧಾಮ:** ಇದು ಜಗಳೂರು ತಾಲ್ಲೂಕಿನ ರಂಗಯ್ಯನದುರ್ಗ ಅರಣ್ಯ ಪ್ರದೇಶದಲ್ಲಿ ಕಂಡುಬರುವ ವಿಶಿಷ್ಟ ವನ್ಯಜೀವಿ 'ಕೊಂಡುಕುರಿ'ಗಳ ಆಶ್ರಯ ತಾಣ ಗಂಡು ಕೊಂಡುಕುರಿಗೆ ನಾಲ್ಕು ಕೋಡುಗಳಿರುತ್ತವೆ. ಹೆಣ್ಣು ಕೊಂಡುಕುರಿಗೆ ಕೋಡುಗಳು ಇರುವುದಿಲ್ಲ. ಭಾರತದ ಯಾವುದೇ ಅರಣ್ಯ ಪ್ರದೇಶಗಳಲ್ಲಿ ಈ ವಿಶಿಷ್ಟ ಪ್ರಾಣಿ ಕಾಣಸಿಗುವುದಿಲ್ಲ.

5) **ನೀರ್ತಡಿ ರಂಗನಾಥಸ್ವಾಮಿ ದೇವಾಲಯ:** ದಾವಣಗೆರೆ ತಾಲ್ಲೂಕಿನಲ್ಲಿರುವ ಇದು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಿತವಾಗಿದೆ. ದೇವಾಲಯದ ಮುಂಭಾಗದಲ್ಲಿ ಮುಕ್ತಮಂಟಪವಿದೆ. ಪ್ರವೇಶದ್ವಾರದಲ್ಲಿ ಏಳು ಸ್ತಂಭಗಳನ್ನು ಹೊಂದಿದ್ದು, ನೋಡುಗರ ಕಣ್ಮನಗಳನ್ನು ಸೆಳೆಯುತ್ತದೆ.

ಧಾರವಾಡ ಜಿಲ್ಲೆ
ವೀರಯೋಧ ಹನುಮಂತಪ್ಪನ ಸ್ತಬ್ದಚಿತ್ರ



ಧಾರವಾಡ ಉತ್ತರ ಕರ್ನಾಟಕ ಪ್ರಸಿದ್ಧ ಜಿಲ್ಲಾ ಕೇಂದ್ರವಾಗಿದೆ. ವಿದ್ಯಾಕಾಶಿಯಾದ ಧಾರವಾಡ ಎಂದ ತಕ್ಷಣ ನೆನಪಿಗೆ ಬರುವುದು 'ಕರ್ನಾಟಕ ಕಾಲೇಜು'. ಕನ್ನಡ ಸಾರಸ್ವತ ಲೋಕದ ದಿಗ್ಗಜರನ್ನು ಸಮಾಜಕ್ಕೆ ನೀಡಿದ ಹೆಗ್ಗಳಿಕೆ ಈ ಸಂಸ್ಥೆಯದಾಗಿದೆ. ಅಂತಹ ದಿಗ್ಗಜರಲ್ಲಿ ದ.ರಾ.ಬೇಂದ್ರೆ ಅವರು ಒಬ್ಬರಾಗಿದ್ದಾರೆ. ಧಾರವಾಡ ಜಿಲ್ಲೆಯು ಕನ್ನಡ ಸಾಹಿತ್ಯ ಲೋಕಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆಯನ್ನು ನೀಡಿದ ವಿದ್ವನ್ಮಣಿಗಳಿಗೆ ಜನ್ಮ ನೀಡಿದೆ. ಭಾರತೀಯ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರುಗಳಾದ ವಿ.ಕೃ. ಗೋಕಾಕ್ ಹಾಗೂ ಗಿರೀಶ್ ಕಾರ್ನಾಡ್ ಇವರ ಕನ್ನಡ ಸೇವೆ ಅನನ್ಯವಾದುದು. ಕನ್ನಡ ಕುಲಪುರೋಹಿತ ಆಲೂರ ವೆಂಕಟರಾವ್, ಶಂಬಾಜೋಷಿ, ಬಸವರಾಜ ಕಟ್ಟೀಮನಿ, ಡಾ. ಜಿ.ಎಸ್.ಅಮೂರ, ನಾಡೋಜ ಚೆನ್ನವೀರ ಕಣವಿ, ಶಾಂತಾದೇವಿ ಮಾಳವಾಡ, ಕೀರ್ತಿನಾಥ ಕುರ್ತುಕೋಟಿ, ಜಿ.ಬಿ.ಜೋಷಿ, ಗಿರಿಡ್ಡಿ ಗೋವಿಂದರಾಜು, ಚಂದ್ರಶೇಖರ ಪಾಟೀಲ, ರಾ.ಹ.ದೇಶಪಾಂಡೆ, ಪಾಟೀಲ್ ಪುಟ್ಟಪ್ಪ, ಡಿ.ಸಿ. ಪಾವಟೆ, ಡೆಪ್ಯುಟಿ ಚೆನ್ನಬಸಪ್ಪ, ರಾವಬಹದ್ದೂರ್ ಶ್ರೀನಿವಾಸರಾವ್ ಮೊದಲಾದವರ ಕನ್ನಡ ಸೇವೆ ಸ್ಮರಣೀಯವಾದುದು. ಈ ಸಾಲಿನಲ್ಲಿ ನಾಡಹಬ್ಬ ದಸರಾವನ್ನು ಉದ್ಘಾಟಿಸಿದ ಕೀರ್ತಿ ಈ ಜಿಲ್ಲೆಯ ಚನ್ನವೀರ ಕಣವಿ ಅವರಿಗೆ ಸಲ್ಲುತ್ತದೆ.

ಕೆಚ್ಚೆದೆಯ ವೀರಯೋಧರನ್ನು ನಾಡಿಗೆ ಸಮರ್ಪಿಸಿದ ಕೀರ್ತಿ ಈ ಜಿಲ್ಲೆಯದಾಗಿದೆ. ಇತ್ತೀಚೆಗೆ ವೀರ ಮರಣವನ್ನು ಹೊಂದಿ, ಹುತಾತ್ಮರಾದ ವೀರಯೋಧ ಶ್ರೀ ಹನುಂತಪ್ಪ ಕೊಪ್ಪದ ಈ ಜಿಲ್ಲೆಯವರು. ಲ್ಯಾನ್ಸ ನಾಯಕರಾಗಿದ್ದ ಇವರು ದೇಶರಕ್ಷಣೆಯ ಜವಾಬ್ದಾರಿಯನ್ನು ಹೊತ್ತು ದೇಶದ್ರೋಹಿಗಳ ನಿಗ್ರಹಕ್ಕಾಗಿ ಪಣತೊಟ್ಟರು. ಕೊರೆಯುವ ಚಳಿ, ರಕ್ತ ಹೆಪ್ಪುಗಟ್ಟುವ

ಹಿಮಪ್ರದೇಶವಾದ ಸಿಯಾಚಿನ್ ಪ್ರದೇಶದಲ್ಲಿ ಕಾರ್ಯನಿರ್ವಹಿಸುವಾಗ ಹಿಮಪಾತಕ್ಕೆ ಸಿಲುಕಿ, ವೈದ್ಯಕೀಯ ಕ್ಷೇತ್ರಕ್ಕೆ ಸವಾಲಾಗಿ 21 ದಿನಗಳವರೆಗೆ ಹಿಮದೊಳಗೆ ಹುದುಗಿ ಜೀವ ಬಿಗಿ ಹಿಡಿದು ಉಸಿರಾಡುತ್ತಲೆ ಬದುಕಿದ್ದರು. ಅನಂತರ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ವೀರ ಮರಣವನ್ನು ಹೊಂದಿದರು. ನಾಡು ಇವರ ಶೌರ್ಯ ಹಾಗೂ ಸಾಹಸವನ್ನು ಸದಾ ನೆನೆಯುತ್ತದೆ.

ಕಲೆ, ಸಾಹಿತ್ಯ, ಸಂಗೀತ ಹಾಗೂ ಸಂಸ್ಕೃತಿಯಲ್ಲಿ ತನ್ನದೆಯಾದ ಹೆಸರನ್ನು ಹೊಂದಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳು ಪ್ರಸಿದ್ಧ ವ್ಯಾಪಾರ ಕೇಂದ್ರಗಳು ಸಹ ಆಗಿವೆ. ಇಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ, ಕಾನೂನು ವಿಶ್ವವಿದ್ಯಾಲಯ, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಭಾರತೀಯ ತಂತ್ರಜ್ಞಾನ ಸಂಸ್ಥೆಗಳು ರಾಜ್ಯದಲ್ಲಿಯೇ ಹೆಸರುವಾಸಿಯಾದ ಸಂಸ್ಥೆಗಳಾಗಿವೆ.

ಬಳ್ಳಾರಿ ಜಿಲ್ಲೆ
ಉಗ್ರನರಸಿಂಹ ಶಿಲಾಮೂರ್ತಿಯ ಸ್ತಬ್ದಚಿತ್ರ



ದಕ್ಷಿಣ ಭಾರತವನ್ನು ಆಳಿದ ಮೊದಲ ಹಿಂದೂ ಸಾಮ್ರಾಜ್ಯ ವಿಜಯ ನಗರ ಸಾಮ್ರಾಜ್ಯ. ಹದಿಮೂರನೆಯ ಶತಮಾನದಿಂದ ಹದಿನೇಳನೆಯ ಶತಮಾನದವರೆಗೆ ಪ್ರಸಿದ್ಧವಾದ ಸಂಗಮ, ಸಾಳ್ವ, ತುಳು ಮತ್ತು ಅರವೀಡು ಎಂಬ ಅರಸು ವಂಶಗಳು ಈ ಸಾಮ್ರಾಜ್ಯವನ್ನು ಆಳ್ವಿಕೆ ನಡೆಸಿದವು. ಇವರ ಕಾಲದಲ್ಲಿ ಭಾರತವು ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆಗಳ ಶ್ರೀಮಂತಿಕೆ ಪಡೆದು ವಿಶ್ವ ವಿಖ್ಯಾತವಾದುವು. ಹಂಪೆ ಎಂದರೆ ತತ್‌ಕ್ಷಣ ನೆನಪಿಗೆ ಬರುವುದು ಬೃಹದಾಕಾರದ 16 ಅಡಿ ಎತ್ತರದ ಕಲ್ಲಿನ ರಥ, ಹಂಪೆಯ ಪ್ರಮುಖ ಸ್ಮಾರಕಗಳೆಂದರೆ, ಉಗ್ರನರಸಿಂಹ, ಸಾಸುವೆಕಾಳುಗಣಪತಿ, ಕಡಲೆಕಾಳು ಗಣಪತಿ, ಕಮಲ ಮಹಲ್ ಅರಮನೆ ಹಾಗೂ ರಾಯ ತುಲಾಭಾರ ಶಿಖರಗಳು.

ದ್ರಾವಿಡ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾಗಿರುವ ವಿರೂಪಾಕ್ಷ, ವಿಜಯವಿಠಲ ಮತ್ತು ಹಜಾರರಾಮ ಇಲ್ಲಿನ ಪ್ರಮುಖ ದೇವಾಲಯಗಳು. ಹಿಂದೂ ಮುಸ್ಲಿಂ ಶೈಲಿಯಲ್ಲಿ ನಿರ್ಮಿಸಲಾಗಿರುವ ಗುಮ್ಮಟ ಹಾಗೂ ಕಮಾನುಗಳು ಇಲ್ಲಿನ ವಿಶೇಷವಾಗಿದೆ.

ಕಮಲ ಮಹಲ್ ಎರಡು ಅಂತಸ್ತುಗಳಿರುವ ಇಂಡೋ–ಇಸ್ಲಾಂ ಶೈಲಿಯ ಕಟ್ಟಡವಾಗಿದೆ. ಒರಟುಕಲ್ಲುಗಳ ರಚನೆಯ ಮೇಲೆ ಗಾರೆಯನ್ನು ಲೇಪಿಸಲಾಗಿದೆ. ತಳ ವಿನ್ಯಾಸ ಚೌಕಾಕಾರವಾಗಿದ್ದು, ನಾಲ್ಕು ದಿಕ್ಕುಗಳಲ್ಲಿ ಮುಂಚಾಚುಗಳಿವೆ. ಕಮಾನಿನ ರಚನೆಯ ಮೇಲೆ ಪಿರಮಿಡ್ಡು ಆಕಾರದ ಶಿಖರ ಭಾಗವಿದ್ದು, ಉನ್ನತ ಕಲಾ ನೈಪುಣ್ಯತೆಗೆ ಸಾಕ್ಷಿಯಾಗಿದೆ. ಇದನ್ನು ಬೇಸಿಗೆ ಅರಮನೆ ಎಂದು ಕರೆಯಲಾಗುತ್ತದೆ.

ವಿಜಯವಿಠ್ಠಲ ದೇವಾಲಯದ ಸಮೀಪದಲ್ಲಿ ರಾಯತುಲಾಭಾರ ಶಿಖರವಿದೆ. ವಿಜಯನಗರ ಕಾಲದಲ್ಲಿ ಇಲ್ಲಿ ವಜ್ರ ವೈಡೂರ್ಯ, ಚಿನ್ನ ಮತ್ತು ಬೆಳ್ಳಿಗಳಿಂದ ಅರಸರನ್ನು ತೂಗಿ, ಅದನ್ನು ದೇವಾಲಯಗಳಿಗೆ ನೀಡಲಾಗುತ್ತಿತ್ತು. ಕೆಲವೊಮ್ಮೆ ತುಲಾಭಾರದಷ್ಟು ತೂಕದ ಹಣವನ್ನು ಪ್ರಜೆಗಳಿಗೆ ದಾನ ಮಾಡುತ್ತಿದ್ದರು ಎಂಬ ಐತಿಹ್ಯವಿದೆ.

ಕೃಷ್ಣದೇವರಾಯನ ಆಳ್ವಿಕೆಯ ಅವಧಿಯಲ್ಲಿ ಆರ್ಯ ಕೃಷ್ಣಭಟ್ಟರು ಪ್ರತಿಷ್ಠಾಪಿಸಿದ ದೇವಾಲಯವೇ ಲಕ್ಷ್ಮೀನರಸಿಂಹ ದೇವಾಲಯ. ಲಕ್ಷ್ಮೀನರಸಿಂಹ ಮೂರ್ತಿಯು ಏಕಶಿಲೆಯಲ್ಲಿ 3 ಅಡಿ ಎತ್ತರದ ಪೀಠದ ಮೇಲೆ ಸುಮಾರು 7 ಮೀ. ಎತ್ತರವಿದ್ದು, ಯೋಗಭಂಗಿಯಲ್ಲಿ ಸರ್ಪದ ಮೇಲೆ ಆಸೀನವಾಗಿದೆ. ಎಡತೊಡೆಯ ಮೇಲೆ ಲಕ್ಷ್ಮೀಮೂರ್ತಿ ಇದೆ. ಅಕ್ಕಪಕ್ಕದಲ್ಲಿ ತೋರಣಕಂಬ ಮತ್ತು ಮಕರತೋರಣಗಳಿವೆ.

ಹಂಪೆಯ ಮತ್ತೊಂದು ವಿಶೇಷ ಕಲ್ಲಿನ ರಥ. ಗರುಡ ಮಂಟಪದಲ್ಲಿರುವ ಏಕಶಿಲೆಯ ಈ ರಥವು 16 ಅಡಿ ಎತ್ತರವಾಗಿದೆ. ರಥದ ಮೇಲೆ ಗೋಪುರವಿದ್ದು, ಚಕ್ರಗಳನ್ನು ತಿರುಗದಂತೆ ಭದ್ರಪಡಿಸಲಾಗಿದೆ. ಆನೆಗಳು ರಥವನ್ನು ಎಳೆಯುವಂತೆ ಕೆತ್ತಲಾಗಿದೆ. ಇದರಲ್ಲಿ ವಿಷ್ಣುವಿನ ಲೀಲೆ, ಕೃಷ್ಣಾವತಾರದ ಚಿತ್ರಗಳು, ಕೋಲಾಟ, ನೃತ್ಯ, ಬೇಟೆ ಮೊದಲಾದ ದೃಶ್ಯಗಳನ್ನು ಕೆತ್ತಲಾಗಿದೆ.

ಹಂಪಿಯ ದಕ್ಷಿಣ ದಿಕ್ಕಿನಲ್ಲಿ ಸುಮಾರು 20 ಅಡಿ ಎತ್ತರದ ಬೃಹತ್ ಗಾತ್ರದ ಕಲ್ಲಿನಲ್ಲಿ ಕೆತ್ತಿದ ವಿಷ್ಣುವಿನ ಉಗ್ರರೂಪವಾದ ಉಗ್ರನರಸಿಂಹ ಮೂರ್ತಿ ಇದೆ.

ಹಂಪಿ ಒಂದಾನೊಂದು ಕಾಲದಲ್ಲಿ ಭವ್ಯತೆಯನ್ನು ಮೆರೆದಂತಹ ಸಾಮ್ರಾಜ್ಯವಾಗಿತ್ತು. ಇಲ್ಲಿ ಚಿನ್ನ, ಮುತ್ತುರತ್ನಗಳನ್ನು ಬೀದಿಯಲ್ಲಿ ಮಾರುತ್ತಿದ್ದಂತಹ ಇತಿಹಾಸವನ್ನು ಹೊಂದಿದೆ. ಧಾರ್ಮಿಕವಾಗಿಯೂ ಆ ಕಾಲದಲ್ಲಿ ಪ್ರೋತ್ಸಾಹವಿತ್ತು ಎಂಬುದನ್ನು ಈ ಸ್ತಬ್ಧಚಿತ್ರವು ತಿಳಿಸಿಕೊಡುತ್ತದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಎಲ್ಲರಿಗೂ ಆರೋಗ್ಯ: ಎಲ್ಲೆಡೆಯೂ ಆರೋಗ್ಯದ ಸ್ತಬ್ದಚಿತ್ರ



'ಆರೋಗ್ಯವೇ ಭಾಗ್ಯ' – ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸು ಇರುತ್ತದೆ. ಜನತೆಗೆ ಉತ್ತಮ ಆರೋಗ್ಯ ಹಾಗೂ ನೈರ್ಮಲ್ಯದ ಬಗ್ಗೆ ತಿಳಿವಳಿಕೆ ನೀಡುವಲ್ಲಿ ಆರೋಗ್ಯ ಇಲಾಖೆಯು ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅವುಗಳೆಂದರೆ,

1) **ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ:** ಮಕ್ಕಳ ಸಕಾಲಿಕ ಆರೋಗ್ಯ ತಪಾಸಣೆಯ ಮೂಲಕ ಮಕ್ಕಳಲ್ಲಿರುವ ಹುಟ್ಟು ನ್ಯೂನತೆಗಳನ್ನು ಪತ್ತೆಹಚ್ಚಿ ಚಿಕಿತ್ಸೆಗೆ ಒಳಪಡಿಸುವುದು. ಅನ್ನಾಂಗಗಳ ಕೊರತೆಯನ್ನು ಗುರುತಿಸಿ, ಪೌಷ್ಠಿಕ ಆಹಾರವನ್ನು ನೀಡುವುದರ ಮೂಲಕ ಸರಿಪಡಿಸುವುದು. ಕಾಯಿಲೆಗಳನ್ನು ಪತ್ತೆಹಚ್ಚಿ ಚಿಕಿತ್ಸೆಯನ್ನು ನೀಡುವುದು. ಬೆಳವಣಿಗೆ ಕುಂಠಿತವನ್ನು ಸರಿಪಡಿಸುವುದು. ಈ ಕಾರ್ಯಕ್ರಮದ ಉದ್ದೇಶಗಳಾಗಿವೆ.

2) **ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ:** 2016ನೆಯ ಸಾಲಿನಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ ಘೋಷಣೆಯನ್ನು ಮಾಡುವುದರ ಮೂಲಕ ಕ್ಷಯರೋಗವನ್ನು ನಿಯಂತ್ರಿಸುವುದು. ಇದಕ್ಕಾಗಿ ಸಕಾಲಿಕ ತಪಾಸಣೆ ಹಾಗೂ ಸಂಪೂರ್ಣ ಚಿಕಿತ್ಸೆಯನ್ನು ನೀಡಿ. ರೋಗಿಗಳನ್ನು ನಿರಂತರವಾಗಿ ಪರೀಕ್ಷಿಸುವುದು. ಕ್ಷಯರೋಗ ಮುಕ್ತ ಸಮಾಜವನ್ನು ನಿರ್ಮಾಣ ಮಾಡುವಲ್ಲಿ, ರೋಗ ಹರಡುವ ಬಗ್ಗೆ ಹಾಗೂ ತಡೆಗಟ್ಟುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮುಡಿಸುವುದು.

3) **ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ:** ಮಾನವನಿಗೆ ಬಹಳಷ್ಟು ಕಾಡುವ ಪರೋಪಜೀವಿ ಸೊಳ್ಳೆಯಿಂದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ಆನೆಕಾಲು ರೋಗ, ಮೆದುಳು ಜ್ವರ ಮುಂತಾದ ಸೋಂಕು ರೋಗಗಳು ಉಂಟಾಗುತ್ತದೆ. ಈ ರೀತಿಯ ಸೊಳ್ಳೆಗಳು ಶುದ್ಧ ನೀರಿನಲ್ಲಿ ವೃದ್ಧಿಗೊಳ್ಳುವುದರಿಂದ ಈ ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸುವುದು.

4) **ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ:** ಧೂಮಪಾನ ಮತ್ತು ಮದ್ಯಪಾನಗಳಿಂದ ಉಂಟಾಗುವ ಮಾರಣಾಂತಿಕ ಕಾಯಿಲೆಗಳ ಬಗ್ಗೆ ಅರಿವು ಮೂಡಿಸುವುದು. ಬೀಡಿ, ಸಿಗರೇಟ್, ಗುಟ್ಕಾ, ಚುಟ್ಟಾ, ಇವುಗಳ ಬಳಕೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗುವುದಲ್ಲದೇ ಕ್ಯಾನ್ಸರ್ ಹಾಗೂ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು ಬರುತ್ತವೆ ಎಂಬುದನ್ನು ಜನರಿಗೆ ಮನದಟ್ಟು ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಬಾಗಲಕೋಟೆ ಜಿಲ್ಲೆ
ಪಟ್ಟದಕಲ್ಲು ಸಂಗಮೇಶ್ವರ ದೇವಾಲಯದ ಸ್ತಬ್ದಚಿತ್ರ



ಬಾಗಲಕೋಟೆಯು ಉತ್ತರ ಕರ್ನಾಟಕ ಪ್ರಮುಖ ಜಿಲ್ಲೆ. ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿರುವ ಇದು ಚಾಲುಕ್ಯರು ಆಳಿದ ನಾಡು. ಇಲ್ಲಿ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬನಶಂಕರಿ ಮತ್ತು ಮಹಾಕೂಟ ಮೊದಲಾದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಿವೆ.

ಪಟ್ಟದಕಲ್ಲು ಮಲಪ್ರಭಾ ನದಿಯ ತೀರದಲ್ಲಿದ್ದು, ವಾಸ್ತುಶಿಲ್ಪ ಮತ್ತು ಸಂಸ್ಕೃತಿಯ ಸಂಗಮವಾಗಿ, ವಿಶ್ವಪರಂಪರೆಯ ಪಟ್ಟಿಯಲ್ಲಿ ಸೇರುವುದರ ಮೂಲಕ ವಿಶ್ವವಿಖ್ಯಾತವಾಗಿದೆ. ಪಟ್ಟದಕಲ್ಲಿನಲ್ಲಿ ನಿರ್ಮಾಣವಾಗಿರುವ ಹತ್ತು ದೇವಾಲಯಗಳಲ್ಲಿ ನಾಲ್ಕು ದೇವಾಲಯಗಳು ಉತ್ತರಭಾರತದ ಇಂಡೋ-ಆರ್ಯನ್ ಶೈಲಿಯ ನಾಗರ ಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಉಳಿದ ಆರು ದೇವಾಲಯಗಳು ದ್ರಾವಿಡ ಶೈಲಿ ಅಂದರೆ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣಗೊಂಡಿವೆ.

ಹಿಂದೆ ವಿಜಯೇಶ್ವರ ದೇವಾಲಯ ಎಂದು ಕರೆಯಲಾಗುತ್ತಿದ್ದ 'ಸಂಗಮೇಶ್ವರ ದೇವಾಲಯ' ಪಟ್ಟದಕಲ್ಲಿನಲ್ಲಿರುವ ಪ್ರಮುಖ ದೇವಾಲಯವಾಗಿದೆ. ಈ ದೇವಾಲಯವನ್ನು ಕ್ರಿ.ಶ. ಸುಮಾರು 696 ರಿಂದ 70 ರ ಮಧ್ಯದಲ್ಲಿ ಚಾಲುಕ್ಯರ ಅರಸನಾದ ಸತ್ಯಾಶ್ರಯ ವಿಜಯಾದಿತ್ಯನು ನಿರ್ಮಿಸಿದನು ಎಂದು ತಿಳಿದು ಬರುತ್ತದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯದ ಒಳಭಾಗದಲ್ಲಿ ಒಂದು ವಿಶಾಲವಾದ ಸಭಾಂಗಣವಿದೆ. ಹೊರಭಾಗದ ಗೋಡೆಗಳ ಮೇಲೆ ಉಗ್ರನರಸಿಂಹ ಹಾಗೂ ನಟರಾಜನ ಸುಂದರ ಮೂರ್ತಿಗಳನ್ನು ಬಿಡಿಸಲಾಗಿದೆ. ವಿರೂಪಾಕ್ಷ ದೇವಾಲಯದ ಸಭಾಂಗಣ ಮತ್ತು ಮೇಲ್ಚಾವಣಿಯ ಮಾದರಿಯಲ್ಲಿಯೇ ಈ ದೇವಾಲಯವನ್ನು ವಿನ್ಯಾಸ ಮಾಡಲಾಗಿದೆ. ಕಂಚಿಯ ಕೈಲಾಸನಾಥ ದೇವಾಲಯದಿಂದ ಸ್ಫೂರ್ತಿ ಪಡೆದು ಈ ದೇವಾಲಯ ನಿರ್ಮಾಣ ಮಾಡಲಾಗಿದೆ. ಇಲ್ಲಿರುವ ಸಂಗಮೇಶ್ವರ ಮತ್ತು ವಿರೂಪಾಕ್ಷ ದೇವಾಲಯಗಳು ಅಡಿಪಾಯದಿಂದ ಹಿಡಿದು ಗೋಪುರದವರೆಗೂ ಚೌಕಾರವಾಗಿ ನಿರ್ಮಾಣಗೊಂಡಿವೆ. ಶಿಖರ, ವಿಮಾನಗೋಪುರ, ಒಳ ಮತ್ತು ಹೊರಗೋಡೆಗಳು ಆಯಾತಾಕಾರ ಮತ್ತು ಚೌಕಾಕಾರಗಳಲ್ಲಿವೆ. ದಕ್ಷಿಣ ಭಾರತದ ಅಪರೂಪದ ತಾಣಗಳಲ್ಲಿ ಒಂದಾದ ಸಂಗಮೇಶ್ವರ ದೇವಾಲಯವು ಪ್ರವಾಸಿಗರ ಮೆಚ್ಚಿನ ತಾಣವಾಗಿದೆ.

ಬಾದಾಮಿ ಚಾಲುಕ್ಯರು ಕರ್ನಾಟಕದಲ್ಲಿ ಹಲವಾರು ದೇವಾಲಯಗಳನ್ನು ನಿರ್ಮಿಸಿದ್ದರು. ಐಹೊಳೆಯು ದೇವಾಲಯಗಳ ತೊಟ್ಟಿಲಾಗಿದೆ. ಇದು ಪ್ರಾಚೀನವಾದ ಹಾಗೂ ವಿಶೇಷ ಶೈಲಿಯಾದ ಚಾಲುಕ್ಯ ಶೈಲಿಯಿಂದ ದೇವಾಲಯಗಳು ನಿರ್ಮಾಣವಾಗಿದೆ.

ಬೀದರ್ ಜಿಲ್ಲೆ
ಬೀದರ್ ಕೋಟೆ – ಅಂತರ್ಜಲ ಮರು ಪೂರೈಕೆಯ ಸ್ತಬ್ದಚಿತ್ರ



ಕರ್ನಾಟಕದ ಕಿರೀಟಪ್ರಾಯವಾದ ಬೀದರ್ ಜಿಲ್ಲೆ ತನ್ನದೇಯಾದ ಐತಿಹಾಸಿಕ ಮಹತ್ವವನ್ನು ಪಡೆದಿದೆ. ತನ್ನ ಭೌಗೋಳಿಕ ಗಡಿಯನ್ನು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರ ಗಡಿಯೊಂದಿಗೆ ಹಂಚಿಕೊಂಡಿದೆ. ಕರ್ನಾಟಕದ ಉತ್ತರ ತುದಿಯಲ್ಲಿರುವ ಈ ಜಿಲ್ಲೆಯು ಬಿದರಿ ಕರಕುಶಲ ಉತ್ಪನ್ನಗಳಿಗೆ ಹೆಸರುವಾಸಿಯಾಗಿದೆ. ಇತಿಹಾಸ ಪ್ರಸಿದ್ಧವಾದ ಈ ಪ್ರಾಂತ್ಯದಲ್ಲಿ ರಾಷ್ಟ್ರಕೂಟರು, ಚಾಲುಕ್ಯರು, ದೇವಗಿರಿಯ ಯಾದವರು, ಕಾಕತೀಯರು, ಬಿಜಾಪುರದ ಬಹಮನಿ ಸುಲ್ತಾನರು ಮೊದಲಾದ ರಾಜವಂಶಗಳು ಆಳ್ವಿಕೆ ನಡೆಸಿವೆ. ಇಲ್ಲಿನ ಬಸವ ಕಲ್ಯಾಣವು ಚಾಲುಕ್ಯರ ರಾಜಧಾನಿ ಆಗಿತ್ತು. ಇಲ್ಲಿರುವ ಮೈಲಾರ್ ಮಲ್ಲಣ್ಣನ ದೇವಸ್ಥಾನ, ನರಸಿಂಹ ಝೀರಾ ದೇವಾಲಯ, ಮಹಮ್ಮದ್ ಗವಾನನ ಮದ್ರಸಾ, ಚೌಬಾರ ಗೋಪುರ, ಕೋಟೆ ಮೊದಲಾದವುಗಳು ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ. ಸಮಾಜ ಸುಧಾರಕ ಶ್ರೀ ಬಸವಣ್ಣನವರಿಂದ ಸ್ಥಾಪಿಸಲ್ಪಟ್ಟ ಧಾರ್ಮಿಕ ಮತ್ತು ಸಾಮಾಜಿಕ ಚಿಂತನೆಗಳ ಕಮ್ಮಟವಾಗಿದ್ದ ಅನುಭವ ಮಂಟಪ ಇದ್ದ ಬಸವ ಕಲ್ಯಾಣ ಮತ್ತೊಂದು ಪವಿತ್ರ ಕೇಂದ್ರವಾಗಿದೆ.

ಬಹಮನಿ ಮನೆತನದ ಸುಲ್ತಾನ ಆಲ್-ಉದ್-ದೀನ್ ಬಹಮನ್ ಗುಲ್ಬರ್ಗಾದಿಂದ ಬೀದರ್‌ಗೆ ತನ್ನ ರಾಜಧಾನಿಯನ್ನು ವರ್ಗಾಯಿಸಿಕೊಂಡು ಇಲ್ಲಿರುವ ಪ್ರಸಿದ್ಧವಾದ ಕೋಟೆಯನ್ನು ಮತ್ತು ಇದರ ಒಳಗಿರುವ 30ಕ್ಕೂ ಹೆಚ್ಚು ಸ್ಮಾರಕಗಳನ್ನು ನಿರ್ಮಿಸಿದನೆಂದು ತಿಳಿದು ಬರುತ್ತದೆ.

ಬೀದರ್ ನಗರದಲ್ಲಿ ನೀರಿನ ಕೊರತೆ ಇರುವುದರಿಂದ ಇದನ್ನು ನೀಗಿಸಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಹಿಂದೆ ಸುಲ್ತಾನರ ಆಳ್ವಿಕೆಯಲ್ಲಿ ನಗರಕ್ಕೆ ನೀರನ್ನು ಪೂರೈಸಲು ಸುರಂಗ ಮಾರ್ಗವನ್ನು ಮಾಡಲಾಗಿತ್ತು. ಇದನ್ನೇ ಪರಿಷ್ಕರಿಸಿ 'ಖರೇಜ್' ಎಂಬ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಇಂಗುಗುಂಡಿ ಮತ್ತು ಸುರಂಗಮಾರ್ಗದ ಟನಲ್‌ಗಳನ್ನು ಕ್ರಿ.ಶ. 2015-16 ನೆಯ ಸಾಲಿನಲ್ಲಿ ಜಿಲ್ಲಾಡಳಿತ ಯಶಸ್ವಿಯಾಗಿ ಪುನಶ್ಚೇತನಗೊಳಿಸಿದೆ. ಜಿಲ್ಲೆಯಾದ್ಯಂತ ನರೇಗಾ ಮತ್ತು ಕೆರೆ ಸಂಜೀವಿನಿ ಕಾರ್ಯಕ್ರಮದಡಿಯಲ್ಲಿ ಬಾವಿಗಳಲ್ಲಿ ಹೂಳೆತ್ತಿಸಿ, ಸಮರ್ಪಕವಾಗಿ ನೀರು ಬರುವಂತೆ ಮಾಡಲಾಗಿದೆ. ತಂತ್ರಜ್ಞಾನದ ಮಾಹಿತಿ ಪಡೆಯಲು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವಿಜ್ಞಾನ ಕೇಂದ್ರವನ್ನು ನಿರ್ಮಿಸಲಾಗಿದೆ. ಕುಡಿಯುವ ನೀರಿನ ತೊಂದರೆಯಿರುವ 181 ಜನ ವಸತಿಗಳಿಗೆ ನೀರು ದೊರೆಯುವಂತೆ ಮಾಡಲಾಗಿದೆ. ಎನ್.ಆರ್.ಡಿ.ಡಬ್ಲ್ಯೂ.ಪಿ. ಮತ್ತು ಹೆಚ್.ಕೆ.ಡಿ.ಬಿ. ಯೋಜನೆಗಳಡಿಯಲ್ಲಿ ಗ್ರಾಮೀಣ ಶಾಲೆಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಲಾಗಿದೆ. ಅಲ್ಲದೆ ಪರಿಸರ ಮಾಲಿನ್ಯವನ್ನು ಕಾಪಾಡಲು ವನ ಮಹೋತ್ಸವದ ಮೂಲಕ ಕೋಟಿ ಸಸಿ ಬೆಳೆಸಲು ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗಾವಿ ಜಿಲ್ಲೆ
ಭೀಮಗಡ ವನ್ಯಧಾಮದ ಸ್ತಬ್ಧಚಿತ್ರ



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಜಾಂಬೋಟಿ - ಕನಕುಂಬಿ ವಲಯಗಳಲ್ಲಿ **'ಭೀಮಗಡ ವನ್ಯಧಾಮ'** ಇದೆ. ಪಶ್ಚಿಮ ಘಟ್ಟದಲ್ಲಿರುವ ಈ ವನ್ಯಧಾಮವನ್ನು ಕ್ರಿ.ಶ. 2011 ಡಿಸೆಂಬರ್ 1 ರಂದು **'ರಕ್ಷಿತ ಅರಣ್ಯ ಪ್ರದೇಶ'** ಎಂದು ಘೋಷಿಸಲಾಗಿದೆ. ಈ ಅರಣ್ಯವು ಸುಮಾರು 190.43 ಚ.ಮೀ. ಹರಡಿಕೊಂಡಿದೆ. ಸಹ್ಯಾದ್ರಿ ಪರ್ವತದ ರಮಣೀಯವಾದ ಭೂಪ್ರದೇಶದಲ್ಲಿರುವ ಈ ಸುಂದರ ವನ್ಯಧಾಮದ ದೃಶ್ಯವು ನೋಡುಗರ ಕಣ್ಮನ ಸೆಳೆಯುತ್ತದೆ. ಇಳಿಜಾರು ಪ್ರದೇಶದಿಂದ ಕೂಡಿದ ಸಹ್ಯಾದ್ರಿ ತಪ್ಪಲಿನಲ್ಲಿ ಅನೇಕ ಪ್ರಖ್ಯಾತ **'ಬಾರಪಡೆ'** ಗುಹೆಗಳಿವೆ. ತಳೆವಾಡಿ ಅರಣ್ಯ ಪ್ರದೇಶದಲ್ಲಿ ಒಂದು ಮಹಾಗುಹೆ ಮತ್ತು ಹನ್ನೆರಡು ಶೀತಗುಹೆಗಳು ಕಂಡುಬರುತ್ತವೆ. ಈ ಗುಹೆಗಳ ಕಗ್ಗತ್ತಲಿನ ಬಿರುಕುಗಳಲ್ಲಿ ತಲೆಕೆಳಗಾಗಿ ನೇತಾಡುವ ವಿಶೇಷವಾದ ವಿರಳವಾಗಿರುವ ಬಾವಲಿ ಸಂತತಿ ಕಂಡುಬರುತ್ತದೆ. ಕ್ರಿ.ಶ. 1912 ರಲ್ಲಿ ಬ್ರಿಟಿಷ್ ಅಧಿಕಾರಿಯಾದ **'ರೋಟನ್'** ಎಂಬುವವನು ಈ ಬಾವಲಿಗಳನ್ನು ಗುರುತಿಸಿ, ಬೆಳಕಿಗೆ ತಂದನು. ಆದ್ದರಿಂದ ಇವುಗಳನ್ನು **'ರೋಟನ್ ಫ್ರೀ ಟೇಲ್ಡ್ ಬ್ಯಾಟ್'** ಎಂದು ಕರೆಯುತ್ತಾರೆ.

ಛತ್ರಪತಿ ಶಿವಾಜಿ ಮಹಾರಾಜನು ಈ ಪ್ರದೇಶದಲ್ಲಿ ಕೋಟೆಯೊಂದನ್ನು ಕಟ್ಟಿಸಿ, ಅದನ್ನು **'ಭೀಮಗಡ'** ಎಂದು ಕರೆದನು. ಈ ವನ್ಯಧಾಮದಲ್ಲಿ ಹುಲಿ, ಚಿರತೆ, ಆನೆ, ಕರಡಿ, ಜಿಂಕೆ, ಸಾರಂಗ, ನರಿ, ಕಾಡುನಾಯಿ, ಕಾಡುಕೋಣ, ಕಾಳಿಂಗ ಸರ್ಪ ಮುಂತಾದ ಪ್ರಾಣಿಗಳಲ್ಲದೆ ಅಳಿವಿನ ಅಂಚಿನಲ್ಲಿರುವ ವಿವಿಧ ಜಾತಿಯ ಸಸ್ತನಿಗಳು, ಪಕ್ಷಿಗಳು ಮತ್ತು ಸರೀಸೃಪಗಳು ಕಂಡು ಬರುತ್ತವೆ.

ಈ ಅರಣ್ಯ ಪ್ರದೇಶದಲ್ಲಿ ಮಹಾದಾಯಿ, ಮಲಪ್ರಭಾ, ತಿಲಾರಿ, ಕಳಸಾ ಬಂಡೂರಿ ಮೊದಲಾದ ಪ್ರಮುಖ ನದಿಗಳು ಪ್ರವಹಿಸುತ್ತವೆ. ಮಹಾದಾಯಿ ನದಿಯ ಉಗಮಸ್ಥಾನವು ಆಗಿರುವ ಈ ವನ್ಯಧಾಮದ ಇಳಿಜಾರು ಕಣಿವೆಯಲ್ಲಿ ವಜ್ರದ ಹರಳಿನಂತೆ ಕಂಗೊಳಿಸುವ ನಯನಮನೋಹರವಾದ ಜಲಪಾತವಿದೆ.

ಬೆಳಗಾವಿ ಕುಂದಾನಗರಿ ಎಂದು ಪ್ರಸಿದ್ಧವಾಗಿದೆ. 1924 ರಲ್ಲಿ ನಗರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಅಧ್ಯಕ್ಷತೆಯನ್ನು ವಹಿಸಿದಂತಹ ಏಕೈಕ ಕಾಂಗ್ರೆಸ್ ಅಧೀವೇಶನ. ಈ ಸ್ತಬ್ಧಚಿತ್ರವು ಬೆಳಗಾವಿಯ ಪ್ರಾಕೃತಿಕ ಸಿರಿಯಾದ ಭೀಮಗಡ ವನ್ಯಧಾಮದ ಬಗ್ಗೆ ಅರಿವನ್ನು ಉಂಟುಮಾಡುತ್ತದೆ. ಹಸಿರೆ ಉಸಿರು ಎಂಬ ಸಂದೇಶವನ್ನು ಜನರಿಗೆ ತಿಳಿಸುತ್ತದೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಸ್ತಬ್ದಚಿತ್ರ, ಮೈಸೂರು ಜಿಲ್ಲೆ, ಮೈಸೂರು.

ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ

"ಶಿಕ್ಷಕರು ಕಲಿಕೆಯನ್ನು ಅನುಕೂಲಿಸುವ ಉತ್ಸಾಹ – ಮಕ್ಕಳ ಕಲಿಕೆಗೆ ನಿರಂತರ ಪ್ರೋತ್ಸಾಹ"

"ಶಿಕ್ಷಣವು ಜೀವನದ ಅವಿಭಾಜ್ಯ ಅಂಗ; ಅದು ಮಾನವನನ್ನು ಪರಿಪೂರ್ಣತೆ ಹಾಗೂ ಸುಸಂಸ್ಕೃತಿಯತ್ತ ಒಯ್ಯುವ ಸಾಧನ ಮಾರ್ಗ" – ಡಾ. ರಾಧಾಕೃಷ್ಣನ್.



ಶಿಕ್ಷಣವು ಮಾನವನ ಮೂಲಭೂತ ಅಗತ್ಯಗಳಲ್ಲಿ ಒಂದಾಗಿದೆ. ಮಕ್ಕಳ ರಕ್ಷಣೆಯೊಂದಿಗೆ ಶಿಕ್ಷಣದ ಗುಣವರ್ಧನೆಯ ನಮ್ಮೆಲ್ಲರ ಹೊಣೆಯಾಗಿದೆ. ಅರ್ಥಪೂರ್ಣ ಓದು ಮತ್ತು ಬರಹದ ಮೂಲಕ ಮಕ್ಕಳಲ್ಲಿ ಭಾಷಾ ಬೆಳವಣಿಗೆ ಹಾಗೂ ಸಹಜ ಧನಾತ್ಮಕ ಆಸಕ್ತಿಯ ಮೂಲಕ ಗಣಿತವನ್ನು ಕಲಿಸುವ ಉದ್ದೇಶಕ್ಕಾಗಿ ಭಾರತ ಸರ್ಕಾರದೊಡನೆ ಕರ್ನಾಟಕದ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯು ಅನುಷ್ಠಾನಗೊಳಿಸಿರುವ 'ಓದುವ ಹಿರಿಮೆಯೇ ಭಾರತದ ಗರಿಮೆ' (ಪಢೇ ಭಾರತ್; ಬಢೇ ಭಾರತ್) ಎಂಬ ಕಾರ್ಯಕ್ರಮ ಗುಣಾತ್ಮಕ ಶಿಕ್ಷಣದ ಮಹತ್ವವನ್ನು ಸಾರುತ್ತದೆ.

ಮಕ್ಕಳ ಹಕ್ಕು ಕಾಯಿದೆ – 2009 ರನ್ವಯ ಮಕ್ಕಳ ಶಿಕ್ಷಣದ ಹಕ್ಕುಗಳನ್ನು ರಕ್ಷಿಸಿ, ಗುಣಾತ್ಮಕ ಕಲಿಕೆಯಲ್ಲಿ ಮಕ್ಕಳನ್ನು ತೊಡಗಿಸುವಲ್ಲಿ ಇಲಾಖೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಸರ್ವಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕಶಿಕ್ಷಣ ಅಭಿಯಾನ ಕಾರ್ಯಕ್ರಮಗಳು ಶಾಲೆಗೆ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಮೊದಲಾದವುಗಳನ್ನು ಒದಗಿಸುವುದರ ಮೂಲಕ ಉತ್ತಮ ಪರಿಸರ ನಿರ್ಮಿಸಿ, ಗುಣಾತ್ಮಕ ಶಿಕ್ಷಣ ನೀಡಲು ಪೂರಕ ವಾತಾವರಣ ಕಲ್ಪಿಸುತ್ತಿದೆ. ಅಲ್ಲದೆ ಸರ್ಕಾರದಿಂದ ಉಚಿತವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕ, ಸಮವಸ್ತ್ರ, ಬೈಸಿಕಲ್, ವಿದ್ಯಾರ್ಥಿ ವೇತನ, ಷೂ ಮತ್ತು ಸಾಕ್ಸ್ ವಿತರಣೆ, ಮಕ್ಕಳನ್ನು ದೈಹಿಕವಾಗಿ ಸದೃಢಗೊಳಿಸುವ ಸಲುವಾಗಿ ಹಾಗೂ ಗೈರುಹಾಜರಿಯನ್ನು

ತಡೆಗಟ್ಟುವ ಸಲುವಾಗಿ ಕ್ಷೀರಭಾಗ್ಯ, ಅಕ್ಷರ ದಾಸೋಹ, ವೈದ್ಯಕೀಯ ತಪಾಸಣೆ ಇವೇ ಮೊದಲಾದ ಸವಲತ್ತುಗಳನ್ನು ನೀಡಿದೆ. ವಿಕಲಚೇತನ ಮಕ್ಕಳಿಗೆ ಸಮನ್ವಯ ಶಿಕ್ಷಣದ ಮೂಲಕ ವಿಶೇಷ ಅವಕಾಶಗಳನ್ನು ಕಲ್ಪಿಸಿ. ಅಗತ್ಯ ಸಲಕರಣೆಗಳನ್ನು ಪೂರೈಸುತ್ತಿದೆ.

ಶಾಲೆ ಬಿಟ್ಟ ಮಕ್ಕಳನ್ನು ಮುಖ್ಯವಾಹಿನಿಗೆ ತರಲು 'ಚಿಣ್ಣರ ತಂಗುಧಾಮ, ಟೆಂಟ್ ಶಾಲೆ'ಗಳನ್ನು ತೆರೆಯಲಾಗಿದೆ. ಗುಣಾತ್ಮಕ ಶಿಕ್ಷಣವನ್ನು ನೀಡಲು ಮೊರಾರ್ಜಿ ವಸತಿ ಶಾಲೆ, ಕಸ್ತೂರಿ ಬಾ ಗಾಂಧಿ ವಸತಿ ಶಾಲೆ, ಆದರ್ಶ ವಸತಿ ಶಾಲೆ, ಕಿತ್ತೂರು ಚೆನ್ನಮ್ಮ ಶಾಲೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಆಧುನಿಕ ಶಿಕ್ಷಣಕ್ಕೆ ಒತ್ತು ನೀಡುವ ದೃಷ್ಟಿಯಿಂದ ಎಡುಸ್ಯಾಟ್ ಶಿಕ್ಷಣ, ಕಂಪ್ಯೂಟರ್ ಶಿಕ್ಷಣ ಹಾಗೂ ಅಂತರ್ಜಾಲ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಶ್ರೀಮಂತಗೊಳಿಸುವ ದೃಷ್ಟಿಯಿಂದ ಕಾಲಕಾಲಕ್ಕೆ ಪುನಶ್ಚೇತನ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದೆ.

ಈ ಮೇಲಿನ ಎಲ್ಲಾ ಸೌಲಭ್ಯಗಳನ್ನು ಯಶಸ್ವಿಯಾಗಿ ಬಳಸಿಕೊಂಡಿರುವ ಮಾದರಿ ಶಾಲೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗುಂಡ್ಲುಪೇಟೆ, ಈ ಶಾಲೆಯು ಶತಮಾನೋತ್ಸವವನ್ನು ಆಚರಿಸಿ ಇಡೀ ರಾಜ್ಯಕ್ಕೆ ಮಾದರಿಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ
ಪಾರಂಪರಿಕ ತಾಣಗಳ ಸ್ತಬ್ದಚಿತ್ರ





ಬೆಂಗಳೂರು ಗ್ರಾಮಾಂತರ ಜಿಲ್ಲೆಯು ಕ್ರಿ.ಶ. 1986 ರಲ್ಲಿ ಪ್ರತ್ಯೇಕವಾಗಿ ರೂಪುಗೊಂಡಿತು. ನಾಲ್ಕು ತಾಲ್ಲೂಕುಗಳನ್ನು ಒಳಗೊಂಡ ಈ ಜಿಲ್ಲೆಯಲ್ಲಿ ಪಿನಾಕಿನಿ ಮತ್ತು ಅರ್ಕಾವತಿ ನದಿಗಳು ಹರಿಯುತ್ತಿವೆ. ಘಾಟಿ ಸುಬ್ರಹ್ಮಣ್ಯ, ದಕ್ಷಿಣಕಾಶಿ ಶಿವಗಂಗೆ ಬೆಟ್ಟ, ವಿಜಯವಿಠ್ಠಲ ದೇವಾಲಯ, ಅವಿಮುಕ್ತೇಶ್ವರ ದೇವಾಲಯ ಮತ್ತು ದೇವನಹಳ್ಳಿಯ ಟಿಪ್ಪುವಿನ ಕೋಟೆ ಇಲ್ಲಿನ ಪ್ರಸಿದ್ಧ

ಪ್ರೇಕ್ಷಣೀಯ ಸ್ಥಳಗಳಾಗಿವೆ. ಇಲ್ಲಿರುವ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಹೊಸಕೋಟೆಯ ಕೈಗಾರಿಕಾ ಪ್ರದೇಶಗಳು ಅಭಿವೃದ್ಧಿಯ ಸಂಕೇತಗಳಾಗಿವೆ.

ದೇವನಹಳ್ಳಿ ಕೋಟೆ: ಬೆಂಗಳೂರು ನಗರದಿಂದ 30 ಕಿ.ಮೀ. ದೂರದಲ್ಲಿರುವ ದೇವನಹಳ್ಳಿ ಇತಿಹಾಸ ಪ್ರಸಿದ್ಧವಾದ ಸ್ಥಳ. ಇದನ್ನು ದೇವರದೊಡ್ಡಿ, ದೇವನಪುರ ಯೂಸಫಾಬಾದ್ ಎಂದೂ ಕರೆಯಲಾಗುತ್ತಿತ್ತು. ಸುಮಾರು 500 ವರ್ಷಗಳಷ್ಟು ಇತಿಹಾಸ ಹೊಂದಿರುವ ಈ ಕೋಟೆಯು ಆಮೆಯ ಆಕಾರದಲ್ಲಿದೆ. ಕ್ರಿ.ಶ. 1749 ರಲ್ಲಿ ದಳವಾಯಿ ನಂಜರಾಜಯ್ಯನು ಈ ಕೋಟೆಯನ್ನು ವಶಪಡಿಸಿಕೊಂಡನು. ಈ ಯುದ್ಧದಲ್ಲಿ ಬೆಳಕಿಗೆ ಬಂದ ಹೈದರಾಲಿಯು ರಾಜನಾದ ಬಳಿಕ ಈ ಕೋಟೆಯನ್ನು ದುರಸ್ತಿಗೊಳಿಸಿ, ಸಂರಕ್ಷಿಸಿದನು. ಈ ಕೋಟೆಯಲ್ಲಿ ಟಿಪ್ಪು ಸುಲ್ತಾನನು ಜನಿಸಿದ್ದರಿಂದ ಇದನ್ನು **'ರಾಷ್ಟ್ರೀಯ ಸ್ಮಾರಕ'** ಎಂದು ಘೋಷಿಸಲಾಗಿದೆ.

ಶಿವಗಂಗೆ ಬೆಟ್ಟ: ಬೆಂಗಳೂರು ನಗರದಿಂದ ಸುಮಾರು 54 ಕಿ.ಮೀ. ದೂರದಲ್ಲಿ ಶಿವಗಂಗೆ ಬೆಟ್ಟದ ಮೇಲೆ ಶ್ರೀಗಂಗಾಧರೇಶ್ವರ ಮತ್ತು ಶ್ರೀಹೊನ್ನಾದೇವಿ ದೇವಾಲಯಗಳಿವೆ. ಇಲ್ಲಿನ ಶಿವಲಿಂಗದ ಮೇಲೆ ತುಪ್ಪವನ್ನು ಹಾಕಿದರೆ ಅದು ಬೆಣ್ಣೆಯಾಗಿ ಪರಿವರ್ತನೆಗೊಳ್ಳುತ್ತದೆ. ಇಲ್ಲಿಂದ ಶ್ರೀರಂಗಪಟ್ಟಣಕ್ಕೆ ಸುರಂಗ ಮಾರ್ಗವಿದೆ ಎಂಬ ನಂಬಿಕೆ ಇದೆ. ಬೆಟ್ಟವನ್ನು ಏರಿ ಹೋದರೆ ಒಳಕಲ್ಲು ತೀರ್ಥ ಸಿಗುತ್ತದೆ. ಹಾಗೆ ಕಡಿದಾದ ಬೆಟ್ಟವನ್ನು ಏರುತ್ತಾ ಹೋದರೆ ಬಂಡೆಯ ಮೇಲೆ ನಂದಿ ವಿಗ್ರಹವಿದೆ. ಇದನ್ನು ಪ್ರದಕ್ಷಿಣೆ ಹಾಕುವುದು ಒಂದು ಸವಾಲು. ಇಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನ ಮಹಾರಾಣಿ ಶಾಂತಲೆಯು ಸಲ್ಲೇಖನ ವ್ರತದಿಂದ ತನ್ನ ಪ್ರಾಣತ್ಯಾಗ ಮಾಡಿದಳು ಎಂಬ ಇತಿಹಾಸವಿದೆ.

ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ: ಇಲ್ಲಿ ಕ್ರಿ.ಶ. 1922 ರಲ್ಲಿ ದೆಹಲಿ ಮತ್ತು ಕರಾಚಿಗಳ ನಡುವೆ ಮೊದಲ ವಿಮಾನಯಾನ ಪ್ರಾರಂಭವಾಯಿತು. ಈಗ ಇದು ದಕ್ಷಿಣ ಭಾರತದ ಅತ್ಯಂತ ದೊಡ್ಡ ವಿಮಾನ ನಿಲ್ದಾಣವಾಗಿದ್ದು, ದೇಶದ ಎಲ್ಲಾ ಪ್ರಮುಖ ನಗರಗಳಿಗೂ ವಾಯುಯಾನ ಸೌಲಭ್ಯವನ್ನು ವಿಸ್ತರಿಸಲಾಗಿದೆ. ಕ್ರಿ.ಶ. 2008 ರಲ್ಲಿ ಈ ವಿಮಾನ ನಿಲ್ದಾಣವನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಉನ್ನತೀಕರಿಸಿ, ಕ್ರಿ.ಶ. 2013 ರಲ್ಲಿ **'ಶ್ರೀಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ'** ಎಂದು ನಾಮಕರಣ ಮಾಡಲಾಯಿತು.

ಬೆಂಗಳೂರು ನಗರ ಜಿಲ್ಲೆ
ರಾಜ್ಯ ಕೇಂದ್ರ ಗ್ರಂಥಾಲಯ – ಶತಮಾನೋತ್ಸವದ ಸ್ತಬ್ದಚಿತ್ರ



'ಉದ್ಯಾನವನಗಳ ನಗರ' ಎಂದೇ ಪ್ರಸಿದ್ಧವಾಗಿರುವ ಬೆಂಗಳೂರು ನಗರದ ಹೃದಯ ಭಾಗದಲ್ಲಿರುವ ಕಬ್ಬನ್ ಉದ್ಯಾನವನದಲ್ಲಿ ಇತಿಹಾಸ ಪ್ರಸಿದ್ಧವಾದ **'ರಾಜ್ಯ ಕೇಂದ್ರ ಗ್ರಂಥಾಲಯ'** ಇದೆ. ಶತಮಾನೋತ್ಸವವನ್ನು ಆಚರಿಸಿಕೊಂಡಿರುವ ಈ ಗ್ರಂಥಾಲಯವು **'ದಿವಾನ್ ಸರ್.ಶೇಷಾದ್ರಿ ಅಯ್ಯರ್ ಸ್ಮಾರಕ ಭವನ'**ದಲ್ಲಿದೆ. ದಿವಾನ್ ಸರ್.ಶೇಷಾದ್ರಿ ಅಯ್ಯರ್ ಅವರ ನೆನಪಿನಲ್ಲಿ ನಿರ್ಮಾಣವಾಗಿರುವ ಈ ಭವನವು ಶುದ್ಧ ಯೂರೋಪಿಯನ್ ಶೈಲಿಯಲ್ಲಿದೆ. ಭವನದ ಮುಂಭಾಗದಲ್ಲಿರುವ ಗುಲಾಬಿ ಉದ್ಯಾನವನದಿಂದ ಗ್ರಂಥಾಲಯದ ಸೌಂದರ್ಯವು ಇಮ್ಮಡಿಗೊಂಡಿದೆ. ಈ ಭವನದ ನಿರ್ಮಾಣದಲ್ಲಿ ಲಾರ್ಡ್‌ಕರ್ಜನ್ ಅವರ ಪಾತ್ರ ಪ್ರಮುಖವಾಗಿದೆ. ದಿನಾಂಕ: 15.10.1903 ರಲ್ಲಿ ಬ್ರಿಟೀಷ್ ರೆಸಿಡೆಂಟ್ಸರ್ ಸರ್.ಡೊನಾಲ್ಡ್ ರಾಬರ್ಟ್ ಸನ್ ಈ ಭವನ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಐತಿಹಾಸಿಕವಾದ ಈ ಭವನವು ಕ್ರಿ.ಶ. 1908 ರಲ್ಲಿ ಪೂರ್ಣಗೊಂಡಿತು. ಈ ಭವನದ ಮುಂದೆ ದಿನಾಂಕ: 20.11.1913 ರಲ್ಲಿ ವೈಸರಾಯ್ ಹಾರ್ಡಿಂಗ್ ಅವರು ದಿವಾನ್ ಸರ್.ಶೇಷಾದ್ರಿ ಅಯ್ಯರ್ ಅವರ ಪ್ರತಿಮೆಯನ್ನು ಸ್ಥಾಪಿಸಿದರು. ಕ್ರಿ.ಶ. 1914 ರಲ್ಲಿ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯ ಅವರು ಈ ಭವನವನ್ನು ಸಾರ್ವಜನಿಕ ಗ್ರಂಥಾಲಯವನ್ನಾಗಿ ಪರಿವರ್ತಿಸಲು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಹಸ್ತಾಂತರಿಸಿದರು. ಸುಮಾರು 1 ಲಕ್ಷ ರೂಪಾಯಿಗಳ ದೇಣಿಗೆಯಿಂದ ದಿನಾಂಕ: 01.05.1915 ರಂದು ಈ ಭವನದಲ್ಲಿ ಸಾರ್ವಜನಿಕ ಗ್ರಂಥಾಲಯ ಪ್ರಾರಂಭಗೊಂಡಿತು.

ಕ್ರಿ.ಶ. 1920 ರಲ್ಲಿ ಈ ಗ್ರಂಥಾಲಯ ಸರ್ಕಾರದ ಅನುದಾನಕ್ಕೆ ಒಳಪಟ್ಟಿತು. ಕ್ರಿ.ಶ. 1943 ರಲ್ಲಿ 215 ಸದಸ್ಯರನ್ನು ಒಳಗೊಂಡಿದ್ದ ಈ ಗ್ರಂಥಾಲಯದಲ್ಲಿ ಸುಮಾರು 4750 ಪುಸ್ತಕಗಳು ಇದ್ದವು. ಪ್ರಾರಂಭದಲ್ಲಿ ಸರ್ಕಾರ, ಸ್ಥಳೀಯ ಸಂಸ್ಥೆಗಳು ಮತ್ತು ನಾಗರಿಕ ಮಿಲಿಟರಿ ಕೇಂದ್ರಗಳ ಸಂಸ್ಥೆಗಳಿಂದ ಅನುದಾನವನ್ನು ಪಡೆದುಕೊಳ್ಳುತ್ತಿತ್ತು.

ಮಹನೀಯರ ದೂರದೃಷ್ಟಿಯ ಫಲವಾಗಿ ನಿರ್ಮಾಣಗೊಂಡ ಈ ಜ್ಞಾನದೇಗುಲವು ಇಂದು ಲಕ್ಷಾಂತರ ಓದುಗರ ಜ್ಞಾನಕೇಂದ್ರವಾಗಿದೆ. ಅಂತರ್ಜಾಲ, ತಂತ್ರಜ್ಞಾನದ ಬೆಳವಣಿಗೆ, ಇ–ಪುಸ್ತಕ, ಡಿಜಿಟಲ್ ಗ್ರಂಥಾಲಯಗಳ ನಡುವೆಯೂ ಈ ಗ್ರಂಥಾಲಯದ ಜನಪ್ರಿಯತೆ ಕಡಿಮೆಯಾಗಿಲ್ಲ. ಪ್ರಾರಂಭದಲ್ಲಿ ಈ ಗ್ರಂಥಾಲಯದ ಆಡಳಿತವನ್ನು ಮೈಸೂರು ನೋಂದಣಿ ಕಾಯಿದೆ ಅಡಿಯಲ್ಲಿ ಬರುವ ಆಡಳಿತ ಸಂಸ್ಥೆಯು ನಡೆಸುತ್ತಿತ್ತು. ಮಹಾನಿರೀಕ್ಷಕರಾದ ಶ್ರೀ ಕೃಷ್ಣರಾವ್ ಅವರು ಇದರ ಮೊದಲ ಅಧ್ಯಕ್ಷರಾಗಿದ್ದರು. ನಂತರ **'ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯಿದೆ 1965'** ರ ಅಡಿಯಲ್ಲಿ ಕರ್ನಾಟಕ ಸರ್ಕಾರವು ಈ ಗ್ರಂಥಾಲಯವನ್ನು ಕ್ರಿ.ಶ. 1966 ರಲ್ಲಿ ತನ್ನ ಸುಪರ್ದಿಗೆ ಪಡೆದು **'ರಾಜ್ಯ ಕೇಂದ್ರ ಗ್ರಂಥಾಲಯ'** ಎಂದು ಮರುನಾಮಕರಣ ಮಾಡಿತು. ಇದು ಕ್ರಿ.ಶ. 2015 ರಲ್ಲಿ ತನ್ನ ಶತಮಾನೋತ್ಸವವನ್ನು ಆಚರಿಸಿಕೊಂಡಿತು. ಈ ಸಂದರ್ಭದಲ್ಲಿ **'ರಾಜಾರಾಮ್ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ನ್ಯಾಷನಲ್ ಮಿಷನ್ ಆನ್ ಲೈಬ್ರರೀಸ್'** ಇದರ ಗ್ರಂಥಾಲಯ ಆಧುನೀಕರಣ ಯೋಜನೆಯಲ್ಲಿ ನವೀಕರಣಗೊಳಿಸಲಾಗಿದೆ. ಇದು ಜನರ ಜ್ಞಾನಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದರ ಮೂಲಕ ಯಶಸ್ಸಿನತ್ತ ಮುನ್ನಡೆಯುತ್ತಿದೆ.

ಬೆಂಗಳೂರನ್ನು ನಮ್ಮ ರಾಜ್ಯದ ಐ.ಟಿ.ಬಿ.ಟಿ. ನಗರವಾಗಿರುವುದಲ್ಲದೆ, ಉದ್ಯಾನಗಳ ನಗರಿ ಎಂದು ಖ್ಯಾತಿಯನ್ನು ಪಡೆದಿದೆ. ಇಲ್ಲಿಯ ರಾಜ್ಯಕೇಂದ್ರ ಗ್ರಂಥಾಲಯ ಓದುಗರನ್ನು ತನ್ನೆಡೆ ಸೆಳೆಯುವುದರೊಂದಿಗೆ ಜ್ಞಾನದಾಹವನ್ನು ನೀಗಿಸುತ್ತಿದೆ. ಗ್ರಂಥಾಲಯವು ಓದುಗನ ಮನಸ್ಥೈರ್ಯ ವನ್ನು ಹೆಚ್ಚಿಸುತ್ತದೆ ಹಾಗೂ ಒಂದು ದೇವಾಲಯವಿದ್ದಂತೆ. ಈ ಸ್ತಬ್ಧಚಿತ್ರವು ಪ್ರಾಚೀನ ಕಟ್ಟಡದ ಬಗ್ಗೆ ತಿಳಿಸುವುದಲ್ಲದೆ ಗ್ರಂಥಾಲಯಗಳ ಮಹತ್ವವನ್ನು ತಿಳಿಸಿಕೊಡುತ್ತದೆ.

ಮೈಸೂರು ಜಿಲ್ಲೆ
ಮೈಸೂರಿಗೆ ಮಹಾರಾಣಿಯರ ಕೊಡುಗೆಯ ಸ್ತಬ್ದಚಿತ್ರ



ಕರ್ನಾಟಕದ ಇತಿಹಾಸದಲ್ಲಿ **'ಮೈಸೂರು ಒಡೆಯರ್'** ಆಳ್ವಿಕೆಯು ಮಹತ್ವಪೂರ್ಣದ್ದಾಗಿದೆ. ಇವರು ಮೈಸೂರು ನಗರವನ್ನು ಕೇಂದ್ರವನ್ನಾಗಿಟ್ಟುಕೊಂಡು ಮೈಸೂರು ಸಂಸ್ಥಾನವನ್ನು ಮಾದರಿ ಸಂಸ್ಥಾನವನ್ನಾಗಿ ರೂಪಿಸಿ ಸರ್ವಾಂಗೀಣ ಅಭಿವೃದ್ಧಿಗೆ ನೀಡಿದ ಕೊಡುಗೆ ಚಿರಸ್ಮರಣೀಯ ವಾದುದು. ಸಾಮಾಜಿಕ ಸೇವಾಕ್ಷೇತ್ರ ಹಾಗೂ ಸಂಸ್ಥಾನದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮೈಸೂರು ಒಡೆಯರ ಮನೆತನದ ಮಹಾರಾಣಿಯವರುಗಳು ಸಹ ಪ್ರಮುಖ ಪಾತ್ರವನ್ನು ವಹಿಸಿರುವುದು ಗಮನಾರ್ಹವಾದುದು. ಒಡೆಯರ್ ರಾಜವಂಶದ ಮಹಾರಾಣಿ ಯವರುಗಳಾದ ದೊಡ್ಡಮ್ಮಣ್ಣಿ ಅವರು, ಲಿಂಗಾರಾಜಮ್ಮಣ್ಣಿ ಅವರು, ದೇವಾಜಮ್ಮಣ್ಣಿ, ಲಕ್ಷಮ್ಮಣ್ಣಿ ಅವರು, ವಾಣಿ ವಿಲಾಸ ಸನ್ನಿಧಾನ ಅವರು, ಅವರು ಮಹಾರಾಣೀಯರಲ್ಲಿ ಪ್ರಮುಖರಾದವರು.

ಕ್ರಿ.ಶ. 1660 ರಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರ್ ಅವರ ಮಹಾರಾಣಿ ದೊಡ್ಡಮ್ಮಣ್ಣಿ ಅವರ ಪ್ರೇರಣೆಯಿಂದ ಕಾವೇರಿ ನದಿಗೆ ಬಂಗಾರ ದೊಡ್ಡಿ ಅಣೆಕಟ್ಟು ಕಟ್ಟಿ, ನೀರಾವರಿ ಕಾಲುವೆಗಳನ್ನು ನಿರ್ಮಾಣ ಮಾಡಲಾಯಿತು. ಇದು ಕನ್ನಡಿಗರು ಕಾವೇರಿ ನದಿಗೆ ಕಟ್ಟಿದ ಮೊಟ್ಟಮೊದಲ ಅಣೆಕಟ್ಟು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಸಾಕುತಾಯಿಯಾದ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರು ಟಿಪ್ಪು ಸುಲ್ತಾನರ ಗೃಹ ಬಂಧನದಲ್ಲಿದ್ದರೂ ಸಹ ಬ್ರಿಟೀಷರೊಡನೆ ಸಂಪರ್ಕ ಸಾಧಿಸಿ,

ಯದುವಂಶದ ಉತ್ತರಾಧಿಕಾರಿಗೆ ಮೈಸೂರು ರಾಜ್ಯವು ಮರಳಿ ಲಭಿಸುವಂತೆ ಮಾಡಿದ ಧೀಮಂತ ರಾಜಮಾತೆ. ಇವರ ಈ ಕಾರ್ಯವನ್ನು ಮೈಸೂರು ಸಂಸ್ಥಾನ ಮರೆಯುವಂತಿಲ್ಲ. ಅವರು ಕ್ರಿ.ಶ. 1803 ಮತ್ತು 1804 ರಲ್ಲಿ ಮೈಸೂರು ಸಂಸ್ಥಾನವು ಪ್ಲೇಗ್ ಮಹಾಮಾರಿಗೆ ತುತ್ತಾದಾಗ ಜನರು ರೋಗನಿರೋಧಕ ಲಸಿಕೆಯನ್ನು ಹಾಕಿಸಿಕೊಳ್ಳಲು ಸಿದ್ಧರಿರಲಿಲ್ಲ. ಇಂತಹ ಸಂದರ್ಭದಲ್ಲಿ ಮಹಾರಾಣಿ ಅವರು ಸ್ವತಃ ಲಸಿಕೆಯನ್ನು ಹಾಕಿಸಿಕೊಳ್ಳುವುದರ ಮೂಲಕ ಜನರಿಗೆ ಮಾದರಿಯಾದರು. ಇವರ ಈ ಸಮಯಪ್ರಜ್ಞೆಯನ್ನು ಬ್ರಿಟೀಷ್ ರಾಣಿ ಶ್ಲಾಘಿಸಿ, ಗೆಜೆಟ್‌ನಲ್ಲಿ ಪ್ರಕಟಿಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಮಹಾರಾಣಿಯವರಾದ ದೇವರಾಜಮ್ಮಣ್ಣಿ ಮತ್ತು ಲಿಂಗರಾಜಮ್ಮಣ್ಣಿ ಮೈಸೂರಿನ ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ದೇವಾಂಬುಧಿ ಮತ್ತು ಲಿಂಗಾಂಬುಧಿ ಕೆರೆಗಳನ್ನು ಹಾಗೂ ದೇವಾಲಯಗಳನ್ನು ನಿರ್ಮಿಸಿದರು.

ಕ್ರಿ.ಶ. 1894 ರಿಂದ 1902 ರವರೆಗೆ ಮೈಸೂರು ಸಂಸ್ಥಾನವನ್ನು ರಾಜಮಾತೆಯಾಗಿ ಆಳಿದ ವಾಣಿ ವಿಲಾಸ ಸನ್ನಿಧಾನ ಅವರು ಮಾದರಿ ರಾಜಮಾತೆಯಾಗಿ ಕಾರ್ಯನಿರ್ವಹಿಸಿದರು. ಪ್ರಥಮವಾಗಿ ಬಾಲಕಿಯರಿಗಾಗಿ ಪ್ರತ್ಯೇಕ ಶಾಲೆಯನ್ನು ಪ್ರಾರಂಭಿಸಿದರು. ಶಿವನಸಮುದ್ರ ಜಲವಿದ್ಯುತ್ ಯೋಜನೆ, ಮೈಸೂರು ನಗರಕ್ಕೆ ಕುಡಿಯುವ ನೀರಿನ ವಾಣಿ ವಿಲಾಸ ನೀರು ಮತ್ತು ಒಳಚರಂಡಿ ಯೋಜನೆ, ಚಿತ್ರದುರ್ಗ ಮಾರಿಕಣಿವೆ ಯೋಜನೆ ಮೊದಲಾದವು ಇವರ ಕೊಡುಗೆಗಳಾಗಿವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರಿ ರಾಜಕುಮಾರಿ ಕೃಷ್ಣರಾಜಮ್ಮಣ್ಣಿ ಅವರ ನೆನಪಿನಲ್ಲಿ ಭಾರತದ ಮೊಟ್ಟಮೊದಲ ಮೈಸೂರಿನ ಕ್ಷಯರೋಗ ನಿವಾರಕ ಆಸ್ಪತ್ರೆ ನಿರ್ಮಾಣಗೊಂಡಿತು.

ಮಂಡ್ಯ ಜಿಲ್ಲೆ
ಸತ್ಯಾಗ್ರಹ ಸೌಧದ ಸ್ತಬ್ದಚಿತ್ರ



ಕರ್ನಾಟಕ ಸಕ್ಕರೆಯ ನಾಡು ಎಂದೇ ಪ್ರಸಿದ್ಧವಾದ ಜಿಲ್ಲೆ ಮಂಡ್ಯ. ಈ ಜಿಲ್ಲೆಯ ಮದ್ದೂರು ಪಟ್ಟಣದಲ್ಲಿರುವ ಶಿವಪುರದಲ್ಲಿ ಸತ್ಯಾಗ್ರಹಸೌಧ ನಿರ್ಮಾಣಗೊಂಡಿದೆ. ಇದು ಕ್ರಿ.ಶ. 1938 ರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಒಂದು ಸ್ಮಾರಕವಾಗಿ ಅನಾವರಣಗೊಂಡಿದೆ. ಈ ಸ್ಥಳದಲ್ಲಿ ಮಹಾತ್ಮಗಾಂಧೀಜಿ ಅವರ ಅಹಿಂಸಾತ್ಮಕ ಸ್ವಾತಂತ್ರ್ಯ ಚಳವಳಿಯ ಬಗ್ಗೆ ಯೋಜನೆಯನ್ನು ರೂಪಿಸಲು ಸ್ವಾತಂತ್ರ್ಯ ಹೋರಾಟಗಾರರು ಇಲ್ಲಿ ಸಭೆ ಸೇರಿದ್ದರು. ಇದಲ್ಲದೆ ಕಾಂಗ್ರೆಸ್ಸಿನ ಪ್ರಥಮ ಅಧಿವೇಶನವೂ ಸಹ ಇಲ್ಲಿ ನಡೆದು, ರಾಜ್ಯದ ಸತ್ಯಾಗ್ರಹ ಚಳವಳಿಯಲ್ಲಿ ಅಗ್ರಸ್ಥಾನವನ್ನು ಪಡೆಯಿತು.

ಶಿವಪುರಕ್ಕೆ ಅಷ್ಟದಿಕ್ಕುಗಳಿಂದಲೂ ರಸ್ತೆಗಳ ಸೌಲಭ್ಯಗಳಿವೆ. ಮೈಸೂರು – ಬೆಂಗಳೂರು ಹೆದ್ದಾರಿ, ರೈಲು ದಾರಿ, ಕೋಡಿಹಳ್ಳಿ ಕಡೆಯಿಂದ ಬರುವ ಕಾಲುದಾರಿ, ವೈದ್ಯನಾಥಪುರದ ಕಡೆಯಿಂದಬರುವಹೊಳೆ,

ಹನುಮಂತರಾಯ ದೇವಾಲಯದ ರಸ್ತೆ, ಹಲ್ಲೇಗೌಡ ಕೊಪ್ಪದ ಕಡೆಯಿಂದ ಬರುವ ರಸ್ತೆ, ಸಮೀಪದಲ್ಲೇ ಹರಿಯುವ ಶಿಂಷಾ ನದಿ, ಹೀಗೆ ಹಚ್ಚಹಸಿರಿನಿಂದ ಕೂಡಿದ ವ್ಯವಸಾಯದ ಫಲವತ್ತಾದ ಪ್ರದೇಶ ಶಿವಪುರದ ಸೌಂದರ್ಯವನ್ನು ಹೆಚ್ಚಿಸಿದೆ. ಸಾಮಾನ್ಯವಾಗಿ ಇಲ್ಲಿನ ಜನ ಆರ್ಥಿಕವಾಗಿ ಸಬಲರಾಗಿರುವುದರಿಂದ ರಾಷ್ಟ್ರಮಟ್ಟದ ಹೋರಾಟಕ್ಕೆ ಭೂಮಿಕೆಯನ್ನು ಸಿದ್ಧಪಡಿಸುವಲ್ಲಿ ಪ್ರಮುಖ ಪಾತ್ರವಹಿಸಿದರು.

ಮೈಸೂರು ಜಿಲ್ಲಾ ಕಾಂಗ್ರೆಸ್ ಮೈಸೂರಿನ ಹೊರಗೆ ಅಧಿವೇಶನ ಮತ್ತು ಧ್ವಜ ಸತ್ಯಾಗ್ರಹವನ್ನು ನಡೆಸಲು ತೀರ್ಮಾನಿಸಿ, ಮದ್ದೂರಿನ ಬಳಿಯಲ್ಲಿರುವ ಶಿವಪುರವನ್ನು ಆಯ್ಕೆ ಮಾಡಿಕೊಂಡಿತು. ಇದಕ್ಕಾಗಿ ಶಿವಪುರದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ತಿರುಮಲೇ ಗೌಡರ 8 ಎಕರೆ ಜಮೀನಿನ ಮಧ್ಯಭಾಗದಲ್ಲಿ ಧ್ವಜಸ್ತಂಭವನ್ನು ನಿಲ್ಲಿಸಲಾಯಿತು. ಕ್ರಿ.ಶ. 1938 ರ ಏಪ್ರಿಲ್ 9 ರಂದು ನಿಷೇಧಾಜ್ಞೆ ಇದ್ದರೂ ಸಹ ಸುಮಾರು 40 ಸಾವಿರ ಸತ್ಯಾಗ್ರಹಿಗಳು ಇದರಲ್ಲಿ ಭಾಗವಹಿಸಿದರು. ಅಧಿವೇಶನದ ಅಧ್ಯಕ್ಷರಾದ ಶ್ರೀ ಟಿ.ಸಿದ್ಧಲಿಂಗಯ್ಯ ಅವರನ್ನು ಜೋಡೆತ್ತಿನ ಗಾಡಿಯಲ್ಲಿ ಮೆರವಣಿಗೆ ಮಾಡಲಾಯಿತು. ಇದನ್ನು 'ರಾಷ್ಟ್ರಕೂಟ ಸತ್ಯಾಗ್ರಹ' ಎಂದು ಕರೆದರು. ಇಲ್ಲಿ ಹಲವು ನಾಯಕರ ಬಂಧನವಾಯಿತು. ಆದರೂ ಧ್ವಜಾರೋಹಣ ಕಾರ್ಯಕ್ರಮ ನೆರವೇರಿತು. ಕ್ರಿ.ಶ. 1938 ರ ಏಪ್ರಿಲ್ 11 ರಂದು ಮೂರನೆಯ ದಿನ ಶಿವಪುರ ಧ್ವಜ ಸತ್ಯಾಗ್ರಹ ಸಮಾಪ್ತಿಗೊಂಡಿತು.

ಯಾದಗಿರಿ ಜಿಲ್ಲೆ

ಯಾದಗಿರಿ ಕೋಟೆ – ಚಿಂತನಹಳ್ಳಿ ಗವಿಸಿದ್ಧಲಿಂಗೇಶ್ವರದ ಸ್ತಬ್ದಚಿತ್ರ

ಕರ್ನಾಟಕ ರಾಜ್ಯದ ಮೂವತ್ತನೆಯ ಜಿಲ್ಲೆಯಾಗಿ ಯಾದಗಿರಿಯು ಕ್ರಿ.ಶ. 2010 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಹಿಂದೆ ಈ ಪ್ರದೇಶವನ್ನು 'ಯಾದವ' ಎಂಬ ರಾಜವಂಶದವರು ಆಳುತ್ತಿದ್ದರು. ಆನಂತರ ಚಾಲುಕ್ಯರು, ರಾಷ್ಟ್ರಕೂಟರು, ಷಾಹಿಗಳು ಯಾದಗಿರಿಯಲ್ಲಿ ಆಡಳಿತ ನಡೆಸಿದ್ದಾರೆ. ಯಾದಗಿರಿಯ ಹೃದಯಭಾಗದಲ್ಲಿ ಒಂದು ಭವ್ಯವಾದ ಗುಡ್ಡವಿದೆ. ಯಾದವರು ಆಳುತ್ತಿದ್ದ ಈ ನಾಡಿಗೆ 'ಯಾದವಗಿರಿ' ಎಂದು ಇದ್ದದ್ದು ನಂತರ 'ಯಾದಗಿರಿ' ಎಂದು ಹೆಸರಾಗಿದೆ.



ಯಾದಗಿರಿ ಕೋಟೆಯು ಕಲ್ಯಾಣಿ ಚಾಲುಕ್ಯರ ರಚನೆ ಎಂದು ತಿಳಿದು ಬರುತ್ತದೆ. ಆನಂತರದಲ್ಲಿ ಇದನ್ನು ಯಾದವರು ಬಲಪಡಿಸಿದರು. ಬಹುಮನಿ ಸುಲ್ತಾನ್ ಅದಿಲ್ ಶಾಹಿ ಹಾಗೂ ನಿಜಾಮರ ಕಾಲದಲ್ಲಿ ಸಾಕಷ್ಟು ವಿಸ್ತರಿಸಲ್ಪಟ್ಟಿತು. ಇತಿಹಾಸಕಾರರಾದ ಗುಲಾಮ್ ಯಜ್ದಾನಿ ಈ ಕೋಟೆಯ ಬಗ್ಗೆ ಸಮೀಕ್ಷೆಯನ್ನು ನಡೆಸಿದ್ದಾನೆ. ಈ ಕೋಟೆಯಲ್ಲಿ ಹಿಂದೂ, ಜೈನ, ಮುಸ್ಲಿಂ ಹಾಗೂ ಶೈವ ಧರ್ಮಗಳ ಕುರುಹುಗಳಿವೆ. ತೀರ್ಥಂಕರರ ಗವಿಗಳು, ಕೂಷ್ಮಾಂಡಿನಿ ದೇವಿಯ ಉಬ್ಬು ಶಿಲ್ಪವಿರುವ ದೇವಾಲಯ (ಭುವನೇಶ್ವರಿ), ರಾಮಲಿಂಗೇಶ್ವರ ಎಂಬ ಶೈವ ದೇವಸ್ಥಾನ, ಈಶ್ವರ, ಕಾಳಿ ಹಾಗೂ ಆಂಜನೇಯರ ದೇವಸ್ಥಾನಗಳಿವೆ. ಮಸೀದಿ, ಅಕ್ಕತಂಗಿಯರ ಬಾವಿ, ಸಿಡಿಲು ಬಾವಿ, ತೋಪುಗಳು ಸಹ ಸುತ್ತಲೂ ಹಸಿರಿನ ಪರಿಸರದಿಂದ ಕಂಗೊಳಿಸುವ ಈ ಕೋಟೆಯು ಪ್ರವಾಸಿಗರ ಆಕರ್ಷಣೀಯವಾದ ತಾಣವಾಗಿದೆ.

ಯಾದಗಿರಿ ತಾಲ್ಲೂಕಿನ ಕಂದಕೂರ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವ ಚಿಂತನ ಹಳ್ಳಿಯಲ್ಲಿ ಬೆಟ್ಟಗುಡ್ಡಗಳ ನಡುವೆ ಶ್ರೀ ಗವಿಸಿದ್ಧಲಿಂಗೇಶ್ವರ ದೇವಾಲಯವಿದೆ. ಇದು ಪುರಾತನ

ದೇವಾಲಯವಾಗಿದ್ದು, ಮನಮೋಹಕ ತಾಣವಾಗಿದೆ. ದೇವಾಲಯದ ಎದುರು ಶಿವಲಿಂಗವಿದೆ. ಶಿವಲಿಂಗವು ಭವ್ಯವಾದ ಗುಹೆಯಲ್ಲಿ ಸ್ಥಾಪಿತಗೊಂಡಿದೆ. ಶಿವಲಿಂಗದ ಮೇಲೆ ಹರಿಯುವ ಜಲಪಾತದ ದೃಶ್ಯ ವಿಸ್ಮಯಕಾರಿ ಹಾಗೂ ರೋಮಾಂಚನಕಾರಿಯಾಗಿದೆ. ಇಲ್ಲಿ ಪ್ರತೀ ವರ್ಷ ಭರತ ಹುಣ್ಣಿಮೆಯ ಮೊದಲ ದಿನ ವೈಭವದಿಂದ ಜಾತ್ರೆಯು ನಡೆಯುತ್ತದೆ.

ರಾಮನಗರ ಜಿಲ್ಲೆ
ಚನ್ನಪಟ್ಟಣದ ಗೊಂಬೆ ಪರಿಷೆಯ ಸ್ತಬ್ದಚಿತ್ರ



ಮೈಸೂರು ಬೆಂಗಳೂರಿನ ಹೆದ್ದಾರಿಯಲ್ಲಿರುವ ರಾಮನಗರ ಜಿಲ್ಲೆಯ ಚನ್ನಪಟ್ಟಣ ಗೊಂಬೆಗಳ ನಾಡೆಂದು ಪ್ರಸಿದ್ಧಿ ಪಡೆದಿದೆ. ಈ ಚಿನ್ನದ ಗೊಂಬೆಗಳ ನಾಡು ಬೆಂಗಳೂರು ಸಂಸ್ಥಾಪಕ ನಾಡಪ್ರಭು ಕೆಂಪೇಗೌಡರ ಜನ್ಮಸ್ಥಳವಾದ ಮಾಗಡಿ ಈ ಜಿಲ್ಲೆಗೆ ಸೇರಿದೆ. ಇಲ್ಲಿನ ಗೊಂಬೆಗಳಿಗೆ ಸುಮಾರು ಇನ್ನೂರು ವರ್ಷಗಳ ಇತಿಹಾಸವಿದೆ. ಮೂಲತಃ ಪರ್ಷಿಯಾ ದೇಶದ ಈ ಕಲೆಯು ಭಾರತಕ್ಕೆ ಮೈಸೂರಿನ ಅರಸರಾದ ಟಿಪ್ಪು ಸುಲ್ತಾನ್ ಆಡಳಿತಾವಧಿಯಲ್ಲಿ ಪರಿಚಯಿಸಲ್ಪಟ್ಟಿತು. ಮೈಸೂರು ಅರಸರ ಕಾಲದಲ್ಲಿ ಗೊಂಬೆ ತಯಾರಿಕೆಯಲ್ಲಿ ಜಪಾನಿ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕ್ರಿ.ಶ. 1902 ರಲ್ಲಿ ಚನ್ನಪಟ್ಟಣದಲ್ಲಿ ಕುಶಲಕರ್ಮಿ ತರಬೇತಿ ಸಂಸ್ಥೆಯನ್ನು ಆರಂಭಿಸಲಾಯಿತು.

ಹಾಲೆಮರದಿಂದ ತಯಾರಾದ ಗೊಂಬೆಗಳಿಗೆ ಅರಗು ಹಾಗೂ ಬಣ್ಣದಿಂದ ಕೋಟ್ ಮಾಡುತ್ತಾರೆ. ನಂತರ ಗೊಂಬೆಗಳನ್ನು ಎನಾಮಲ್ ಬಣ್ಣದಿಂದ ಅಲಂಕಾರ ಮಾಡುತ್ತಾರೆ. ಹಾಲೆಮರದಿಂದ ತಯಾರಾದ ಈ ಗೊಂಬೆಗಳು ಪರಿಸರ ಸ್ನೇಹಿಯಾಗಿವೆ. ರಾಸಾಯನಿಕವಲ್ಲದ ಹಾಗೂ ವಿಷಕಾರಿಯಲ್ಲದ ಬಣ್ಣಗಳಿಂದ ತಯಾರು ಮಾಡಿರುವುದರಿಂದ ಮಕ್ಕಳಿಗೆ ಈ ಗೊಂಬೆಗಳಿಂದ ಯಾವುದೇ ಹಾನಿಯಾಗುವುದಿಲ್ಲ.

ಚನ್ನಪಟ್ಟಣದ ಕುಶಲಕರ್ಮಿಗಳಿಂದ ತಯಾರಾದ ಆಕರ್ಷಕವಾದ ರಾಂಕಿಂಗ್ ಕುದುರೆ, ಎಗರುವ ಜೋಕರ್, ನೇತಾಡುವ ಕೋತಿಗಳು, ಮಕ್ಕಳ ಆಟದ ಅಡುಗೆಮನೆಯ ಪರಿಕರಿಗಳು, ಗೃಹಬಳಕೆಯ ವಸ್ತುಗಳು, ಬಣ್ಣಬಣ್ಣದ ಬುಗರಿಯಂತಹ ಮನೋರಂಜಕವಾದ ಆಟಿಕೆಗಳು, ದೇವತಾವಿಗ್ರಹಗಳು ಬಾಲವೃದ್ಧರನ್ನು ಮಂತ್ರ ಮುಗ್ಧರನ್ನಾಗಿಸುತ್ತವೆ. ಚಿತ್ತಾಕರ್ಷಕವಾದ ಆಟಿಕೆಗಳು ಅಮೆರಿಕ ಇಂಗ್ಲೆಂಡ್‌ನಂತಹ ದೇಶ–ವಿದೇಶಗಳ ಪ್ರವಾಸಿಗರನ್ನು ಸೆಳೆಯುತ್ತವೆ. ಇಲ್ಲಿ ತಯಾರಾಗುವ ವಸ್ತುಗಳಿಗೆ ಹೊರ ರಾಷ್ಟ್ರಗಳಲ್ಲಿ ಬೇಡಿಕೆ ಇದ್ದು, ರಫ್ತು ಮಾಡಲಾಗುತ್ತಿದೆ.

ಈ ಗೊಂಬೆಗಳನ್ನು ಹ್ಯಾಂಡ್‌ಲೇತ್ ಮತ್ತು ಪವರ್‌ಲೇತ್ ಮೆಷಿನ್‌ಗಳಿಂದ ತಯಾರಿಸಲಾಗುತ್ತದೆ. ಸುಮಾರು ಹತ್ತು ಸಾವಿರ ಕುಶಲ ಕರ್ಮಿಗಳು ಈ ಗುಡಿ ಕೈಗಾರಿಕೆ ಹಾಗೂ ಸಣ್ಣ ಕೈಗಾರಿಕೆಗಳಲ್ಲಿ ಅನೇಕ ವರ್ಷಗಳಿಂದ ನಿರಂತರ ಉತ್ಪಾದನೆಯಲ್ಲಿ ತೊಡಗಿರುತ್ತಾರೆ. ಗಾಂಧಿಜಿಯವರ ಮೂಲ ಶಿಕ್ಷಣದ ಆಧಾರವಾದ ಗ್ರಾಮೋದ್ಯೋಗದ ಕನಸನ್ನು ಚನ್ನಪಟ್ಟಣದ ಗೊಂಬೆಗಳ ಗುಡಿ ಹಾಗೂ ಸಣ್ಣ ಕೈಗಾರಿಕೆ ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದೆ.

ಕ್ರಿ.ಶ. 2006 ರ ಅಂಕಿ–ಅಂಶಗಳ ಪ್ರಕಾರ 6000 ಕ್ಕಿಂತಲೂ ಹೆಚ್ಚು ಜನರು 254 ಗೃಹ ಕೈಗಾರಿಕಾ ಘಟಕಗಳಲ್ಲಿ ಮತ್ತು 50 ಸಣ್ಣ ಕಾರ್ಖಾನೆಗಳಲ್ಲಿ ಗೊಂಬೆಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮವು ಮಾರುಕಟ್ಟೆಯನ್ನು ಒದಗಿಸುವ ಸಹಕಾರ ನೀಡುತ್ತಿದೆ. ಇದಕ್ಕಾಗಿ ಇ–ಕಾಮರ್ಸ್ ತಾಣವನ್ನು ಆರಂಭಿಸಿದೆ. ಇದಲ್ಲದೆ ಹೊಸವಿನ್ಯಾಸಗಳನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಚನ್ನಪಟ್ಟಣ ಟಾಯ್ಸ್ ಮತ್ತು ಹ್ಯಾಂಡಿಕ್ರಾಫ್ಟ್ಸ್, ಶ್ರೀ ಬೀರೇಶ್ವರ ಆರ್ಟ್ಸ್ ಮತ್ತು ಕ್ರಾಫ್ಟ್ಸ್, ನಿಶಿ ಚೌಹಾಣ್ ಅನಿಮಲ್ ಫಾರ್ಮ್ ಮೊದಲಾದ ಸೇವಾ ಸಂಸ್ಥೆಗಳು ಮಾರುಕಟ್ಟೆಯನ್ನು ಒದಗಿಸಲು ನೆರವಾಗುತ್ತಿದೆ.

ಸ್ತಬ್ಧಚಿತ್ರ ಉಪ ಸಮಿತಿ

ಡಾ. ಬಿ.ಆರ್. ಅಂಬೇಡ್ಕರ್ ರವರ 125ನೇ ಜನ್ಮ ಶತಮಾನೋತ್ಸವದ ಸ್ತಬ್ದಚಿತ್ರ



ಡಾ. ಬಿ.ಆರ್.ಅಂಬೇಡ್ಕರ್ ರವರ 125ನೇ ಜನ್ಮದಿನೋತ್ಸವದ ಅಂಗವಾಗಿ ಸ್ತಬ್ಧಚಿತ್ರ ಸಮಿತಿಯು ಅವರನ್ನು ಗೌರಪೂರ್ವಕವಾಗಿ ನೆನಪಿಸಿಕೊಳ್ಳುತ್ತಾ, ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಮೆರವಣಿಗೆಯಲ್ಲಿ ಸ್ತಬ್ಧಚಿತ್ರವನ್ನು ನಿರ್ಮಿಸಿದೆ.

ಸ್ವಾತಂತ್ರ್ಯಪೂರ್ವ ಭಾರತದ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ಮುತ್ಸದ್ಧಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ. ಭೀಮರಾವ್ ರಾಮ್‌ಜಿ ಅಂಬೇಡ್ಕರ್ ರವರು ದೇಶದ ಇಂತಹ ನಾಯಕರಲ್ಲಿ ಒಬ್ಬರಾಗಿದ್ದು, ಭಾರತದ ದೀನ ದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮನುಕುಲದ ಹಕ್ಕುಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ

ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿ ಸಾಧನೆಗಾಗಿ ಮುಡಿಪಾಗಿಟ್ಟರು.

ಡಾ. ಬಿ.ಆರ್.ಅಂಬೇಡ್ಕರ್ ರವರು ಜಾತ್ಯಾತೀತ, ಸಮಾಜವಾದಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವಂತರು, ಪ್ರೌಢ ಲೇಖಕರು, ಕಾನೂನು ಪಂಡಿತರೂ ಹಾಗೂ ಸಂವಿಧಾನ ತಜ್ಞರು ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಆಳವಾದ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲೀಷ್‌ನಲ್ಲಿ ಪ್ರಕಟವಾಗಿದ್ದು ಇವುಗಳಲ್ಲಿ ಜಾತಿ ನಿರ್ಮೂಲನೆ, ಶೂದ್ರರು ಯಾರು-ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು, ರೂಪಾಯಿಯ ಸಮಸ್ಯೆ, ಪಾಕಿಸ್ತಾನ ಅಥವಾ ಭಾರತದ ವಿಭಜನೆ ಪ್ರಮುಖವಾಗಿವೆ. ಬುದ್ಧ ಮತ್ತು ಅವನ ಧರ್ಮ – ಇದು ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೆ ಅವರ ಅಪ್ರಕಟಿತ ಬರಹಗಳೂ ಅಸಂಖ್ಯಾತ.

ರಾಯಚೂರು ಜಿಲ್ಲೆ: ಹಟ್ಟಿ ಚಿನ್ನದ ಗಣಿಯ ಸ್ತಬ್ಧಚಿತ್ರ



'ಹಟ್ಟಿ ಚಿನ್ನದ ಗಣಿ ಕಂಪನಿ'ಯು ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನಲ್ಲಿರುವ 'ಹಟ್ಟಿ' ಗ್ರಾಮದಲ್ಲಿರುವ ಸರ್ಕಾರಿ ಉದ್ಯಮವಾಗಿದೆ. ಹೈದರಾಬಾದ್ ಚಿನ್ನದ

ಗಣಿಗಳಿಂದು 1947 ರಲ್ಲಿ ಸ್ಥಾಪನೆಯಾಗಿದ್ದು, ಹೈದರಾಬಾದ್ ನಿಜಾಮರ ಆಳ್ವಿಕೆಯ ವಿಮೋಚನೆಯ ನಂತರ ಕರ್ನಾಟಕ ಸರ್ಕಾರದ 'ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ' ಎಂದು ಆಯಿತು. ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ಇತರೆ ಸಣ್ಣ ಘಟಕಗಳು ಚಿತ್ರದುರ್ಗ, ಮಾನವಿ ತಾಲ್ಲೂಕಿನ ಹೀರಾಬುದ್ದಿನ್ನಿ ಮತ್ತು ದೇವದುರ್ಗ ತಾಲ್ಲೂಕಿನ ಊಟಿಯಲ್ಲಿಯೂ ಇವೆ. ಕೋಲಾರ ಚಿನ್ನದ ಗಣಿ ಮುಚ್ಚಿದ ನಂತರ ಹಟ್ಟಿ ಚಿನ್ನದ ಗಣಿಯು ದೇಶದಲ್ಲೇ ಅತಿ ಹೆಚ್ಚು ಮತ್ತು ಪ್ರಾಥಮಿಕ ಚಿನ್ನ ಉತ್ಪಾದಿಸುವ ಗಣಿಯಾಗಿದೆ.

ಹಟ್ಟಿ ಚಿನ್ನದ ಗಣಿಯಲ್ಲಿ ಸಾಮ್ರಾಟ ಅಶೋಕನ ಕಾಲದ ಪೂರ್ವದಿಂದಲೂ ಗಣಿಗಾರಿಕೆ ನಡೆಯುತ್ತಿತ್ತು ಎಂಬುದು ತಿಳಿದು ಬರುತ್ತದೆ. ಹಟ್ಟಿ ಗ್ರಾಮದಲ್ಲಿ ಕ್ರಿ.ಶ. 1880 ಕ್ಕಿಂತ ಮೊದಲು ಮಾಡ್ರನ್ ಚಿನ್ನದ ಗಣಿಯು ಮೆ॥ ಜಾನ್ ಟೇಲರ್ ಮತ್ತು ಸನ್ಸ್, ಹೈದ್ರಾಬಾದ್ ಎಂಬ ಹೆಸರಿನಿಂದ ಪ್ರಾರಂಭವಾಗಿ, 1880–1920 ರ ಅವಧಿಯಲ್ಲಿ ಆಧುನಿಕ ಚಿನ್ನದ ಗಣಿಯು ಹೈದ್ರಾಬಾದ್ ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು.

ಭಾರತ ದೇಶವು ಸ್ವತಂತ್ರವಾದ ನಂತರ ಕ್ರಿ.ಶ. 1956 ರಲ್ಲಿ ಚಿನ್ನದ ಗಣಿ ಕಂಪನಿ, ಹೈದ್ರಾಬಾದ್ ಎಂಬುದನ್ನು ಬದಲಾವಣೆ ಮಾಡಿ ಆಗಿನ ಮೈಸೂರು ರಾಜ್ಯ ಸರ್ಕಾರವು (ಈಗಿನ ಕರ್ನಾಟಕ ರಾಜ್ಯ) 'ಹಟ್ಟಿ ಚಿನ್ನದ ಗಣಿ ಕಂಪನಿ ನಿ., ಹಟ್ಟಿ' ಎಂದು ಮರುನಾಮಕರಣ ಮಾಡಿತು. ಕಂಪನಿಯು ಒಟ್ಟು 528.35 ಹೆಕ್ಟೇರ್ ಪ್ರದೇಶವನ್ನು ಗಣಿಗಾರಿಕೆಗಾಗಿ ಹೊಂದಿದ್ದು, ಚಿನ್ನದ ಉತ್ಪಾದನೆ ಚಟುವಟಿಕೆ ನಡೆಸುತ್ತಿದೆ. ಕಂಪನಿಯಲ್ಲಿ ಒಟ್ಟು 4317 ಜನ ಕಾರ್ಮಿಕರು ಉದ್ಯೋಗ ಪಡೆದಿದ್ದು, ದಿನದ 24 ಘಂಟೆಗಳೂ 3 ಪಾಳಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಡೀ ದೇಶದಲ್ಲಿಯೇ ಚಿನ್ನ ಉತ್ಪಾದಿಸುವ ಏಕೈಕ ಕಂಪನಿಯಾಗಿದ್ದು, ಏಷಿಯಾ ಖಂಡದಲ್ಲಿಯೇ ಅತೀ ಹೆಚ್ಚು ಚಿನ್ನ ಉತ್ಪಾದಿಸುವ ಚಿನ್ನದ ಗಣಿ ಎಂಬ ಹಿರಿಮೆಯನ್ನು ಹೊಂದಿರುತ್ತದೆ ಹಾಗೂ ಲಾಭದಲ್ಲಿರುತ್ತದೆ. ಪ್ರತಿದಿನ 910 ಟನ್ ಅದಿರನ್ನು ಸಂಸ್ಕರಿಸಿ ಸುಮಾರು 50 ಗ್ರಾಂ ಚಿನ್ನವನ್ನು ಉತ್ಪಾದಿಸಲಾಗುತ್ತಿದೆ. 1996 ರಲ್ಲಿ "ಕಾರ್ಬನ್ ಇನ್ ಪಲ್ಪ್" ಟೆಕ್ನಾಲಜಿಯನ್ನು ಅಳವಡಿಸಿಕೊಳ್ಳಲಾಯಿತು. 2011–12 ರ ವರ್ಷದಲ್ಲಿ ಒಟ್ಟು 560216 ಟನ್ ಅದಿರನ್ನು ಸಂಸ್ಕರಿಸಿ 2182.57 ಕಿಲೋ ಗ್ರಾಂ ಚಿನ್ನ ಉತ್ಪಾದಿಸಲಾಗಿದೆ.

ಈ ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗುಗಾಲ್ ಎಂಬಲ್ಲಿ ಕೃಷ್ಣಾ ನದಿಗೆ ಅಡ್ಡಲಾಗಿ ಸೇತುವೆ ಮತ್ತು ಅಣೆಕಟ್ಟು ನಿರ್ಮಿಸಲಾಗಿದೆ. ಕ್ರಿ.ಶ. 2012 ರಲ್ಲಿ ಈ ಕಾಮಗಾರಿಯು ಪೂರ್ಣಗೊಂಡಿದೆ. ಇದು 810 ಮೀ. ಎತ್ತರವಿದ್ದು, ಶಹಾಪುರ, ದೇವದುರ್ಗ ತಾಲ್ಲೂಕಿಗೆ ಜನರಿಗೆ ನೀರಾವರಿ

ಸೌಲಭ್ಯವನ್ನು ಕಲ್ಪಿಸಿದೆ. ಅಲ್ಲದೆ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಿಗೆ ರಸ್ತೆ ಸಂಪರ್ಕವನ್ನು ಸಹ ಕಲ್ಪಿಸಿದೆ. ಇದು ಸುತ್ತಮುತ್ತಲಿನ ನಗರಗಳು ಹಾಗೂ ಜಲಾಯನ ಪ್ರದೇಶದ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿದೆ.

ವಿಜಯಪುರ ಜಿಲ್ಲೆ

ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ಸಾಗರ – ಆಲಮಟ್ಟಿ ಜಲಾಶಯದ ಸ್ತಬ್ದಚಿತ್ರ



ವಿಜಯಪುರ ಉತ್ತರ ಕರ್ನಾಟಕ ಪ್ರಸಿದ್ಧವಾದ ಐತಿಹಾಸಿಕ ಜಿಲ್ಲೆಗಳಲ್ಲಿ ಒಂದಾಗಿದೆ. ಇಲ್ಲಿರುವ **'ಗೋಳಗುಮ್ಮಟ'** ಪ್ರಪಂಚದ ಎರಡನೆಯ ಅತಿದೊಡ್ಡ ಗುಮ್ಮಟವಾಗಿದೆ. **'ಪಂಚನದಿಗಳ ಬೀಡು'** ಎಂದೇ ಪ್ರಸಿದ್ಧವಾದ ಈ ಜಿಲ್ಲೆ ಐತಿಹಾಸಿಕವಾಗಿ, ಸಾಹಿತ್ಯವಾಗಿ, ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಸಮೃದ್ಧತೆಯನ್ನು ಹೊಂದಿದೆ. ಇಲ್ಲಿನ ಜನರು ತಮ್ಮ ಜೀವನಕ್ಕೆ ಆಧಾರವಾದ, ಬಂಗಾರದ ಕಣಜವಾದ ಭೂಮಿಯನ್ನು ತ್ಯಾಗ ಮಾಡಿ ಆಲಮಟ್ಟಿ ಜಲಾಶಯ ನಿರ್ಮಾಣಕ್ಕೆ ಸಹಕಾರವನ್ನು ನೀಡಿದ್ದಾರೆ. ಈ ಜಲಾಶಯವು 26 ಕ್ರಸ್ಟ್ ಗೇಟ್‌ಗಳನ್ನು ಹೊಂದಿದ್ದು, 52.25 ಮೀ. ಎತ್ತರ, 1565.15 ಮೀ. ಉದ್ದವಿದೆ.

ಆಲಮಟ್ಟಿ ಜಲಾಶಯದಿಂದ 'ಬರದ ನಾಡು' ಎಂದು ಪ್ರಸಿದ್ಧವಾಗಿರುವ ವಿಜಯಪುರ, ಬಾಗಲಕೋಟೆ, ಕಲಬುರಗಿ, ರಾಯಚೂರು ಜಿಲ್ಲೆಗಳ ಸುಮಾರು 12 ಲಕ್ಷ ಹೆಕ್ಟೇರ್ ಭೂಮಿಗೆ

ವ್ಯವಸಾಯಕ್ಕೆ ನೀರನ್ನು ಒದಗಿಸಲಾಗುತ್ತಿದೆ. ಇದಲ್ಲದೆ 500 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸುವ ಮೂಲಕ ಉತ್ತರ ಕರ್ನಾಟಕದ ಜನರ ಜೀವನಾಡಿ ಎಂಬ ಖ್ಯಾತಿಯನ್ನು ಪಡೆದಿದೆ.

ಕ್ರಿ.ಶ. 1964 ರಲ್ಲಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರು ಈ ಜಲಾಶಯಕ್ಕೆ ಶಿಲಾನ್ಯಾಸ ಮಾಡಿದರು. ನಂತರ ಕ್ರಿ.ಶ. 2006 ರಲ್ಲಿ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಈ ಜಲಾಶಯವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು. ಅಂದು ಈಸ ಜಲಾಶಯಕ್ಕೆ 'ಶ್ರೀ ಲಾಲ್ ಬಹಾದ್ದೂರ್ ಶಾಸ್ತ್ರಿ ಸಾಗರ' ಎಂದು ನಾಮಕರಣ ಮಾಡಲಾಯಿತು. ತ್ರಿಡಿ ಲೋಹದ ನಾಮಫಲಕವನ್ನು ಅಳವಡಿಸಲಾಗಿರುವ ಈ ಜಲಾಶಯವು 'ಲಿಮ್ಕಾ ಬುಕ್ ಆಫ್ ರೆಕಾರ್ಡ್' ಅಲ್ಲಿ ದಾಖಲಾಗಿದೆ. ಈ ಜಲಾಶಯದ ಸುತ್ತಮುತ್ತಲೂ ನೈಸರ್ಗಿಕ ಉದ್ಯಾನವನಗಳನ್ನು ನಿರ್ಮಿಸಲಾಗಿದೆ. ಬೋಟಿಂಗ್ ವ್ಯವಸ್ಥೆ, ಸಂಗೀತ ಕಾರಂಜಿಗಳನ್ನು ಮಾಡಲಾಗಿದೆ. ಅಣೆಕಟ್ಟಿನ ಕೆಳಭಾಗದಲ್ಲಿ ಸುಮಾರು 77 ಎಕರೆ ಭೂ ಪ್ರದೇಶದಲ್ಲಿ ದೆಹಲಿಯ ರಾಷ್ಟ್ರಪತಿ ಭವನದ ಬಳಿಯಿರುವ ಮೊಘಲ್ ಶೈಲಿಯ ಉದ್ಯಾನವನವನ್ನು ಹೋಲುವ ಉದ್ಯಾನವನವನ್ನು ನಿರ್ಮಿಸಿ, 1400 ಜನರಿಗೆ ಆಸನ ವ್ಯವಸ್ಥೆಯನ್ನು ಮಾಡಲಾಗಿದೆ. ಇಲ್ಲಿನ ರಾಕ್ ಗಾರ್ಡನ್, ಕೃಷ್ಣಾ ಗಾರ್ಸನ್ ಮತ್ತು ಲವಕುಶ ಉದ್ಯಾನವನಗಳು ಪ್ರವಾಸಿಗರ ಕಣ್ಮನಗಳನ್ನು ಸೆಳೆಯುತ್ತವೆ.

ಶಿವಮೊಗ್ಗ ಜಿಲ್ಲೆ

ಇಕ್ಕೇರಿ ದೇವಾಲಯ – ಜೋಗ್ ಫಾಲ್ಸ್‌ನ ಸ್ತಬ್ದಚಿತ್ರ



ಶಿವಮೊಗ್ಗ ಕರ್ನಾಟಕದ ಮಲೆನಾಡಿನ ನಿಸರ್ಗ ಸೌಂದರ್ಯದಿಂದ ಕೂಡಿದ ಜಿಲ್ಲೆ. ಸಹ್ಯಾದ್ರಿ ಪರ್ವತ ಶ್ರೇಣಿ, ನದಿ, ಉಪನದಿಗಳು, ದಟ್ಟವಾದ ಅರಣ್ಯ ಸಂಪತ್ತು ಹಾಗೂ ಜೋಗ ಜಲಪಾತ ಇಲ್ಲಿಯ ಪ್ರಕೃತಿ ಸೌಂದರ್ಯವನ್ನು ಇಮ್ಮಡಿಗೊಳಿಸಿವೆ.

ಶಿವಮೊಗ್ಗ ಜಿಲ್ಲೆಯ ಸಾಗರದಿಂದ 3 ಕಿ.ಮೀ. ದೂರದಲ್ಲಿರುವ ಇಕ್ಕೇರಿ, ಕೆಳದಿ ಸಂಸ್ಥಾನದ ಎರಡನೆಯ ರಾಜಧಾನಿ. ಇಕ್ಕೇರಿಯಲ್ಲಿ ಪುರಾಣ ಪ್ರಸಿದ್ಧವಾದ **'ಶ್ರೀ ಅಘೋರೇಶ್ವರ ದೇವಾಲಯ'ಏದೆ**. ಈ ದೇವಾಲಯದ ಪಕ್ಕದಲ್ಲಿ ಎರಡು ಕೆರೆಗಳು ಇರುವುದರಿಂದ ಈ ಊರಿಗೆ **'ಇಕ್ಕೇರಿ'** ಎಂಬ ಹೆಸರು ಬಂದಿದೆ. ಹೊಯ್ಸಳ ಮತ್ತು ಕದಂಬ ಶೈಲಿಯಲ್ಲಿರುವ ಈ ದೇವಾಲಯವನ್ನು ಕೆಳದಿಯ ಅರಸರ ಕಾಲದಲ್ಲಿ **'ಹೊಂಬುಚದ ವೆಂಕಟಯ್ಯ'** ಎಂಬ ಶಿಲ್ಪಿಯು ನಿರ್ಮಿಸಿದನು ಎಂದು ದೇವಾಲಯದ ಬರಹವೊಂದು ತಿಳಿಸುತ್ತದೆ. ಈ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ಮುಖ ಮಂಟಪಗಳಿವೆ. ಎದುರಿಗೆ ನಂದಿಗೆ ಪ್ರತ್ಯೇಕ ಮಂಟಪವಿದೆ. ಗರ್ಭಗೃಹದಲ್ಲಿ ಕಲ್ಲಿನ ಶಿವಲಿಂಗವಿದೆ. ಇಲ್ಲಿ 32 ಕೈಗಳಿರುವ ಶ್ರೀ ಅಘೋರೇಶ್ವರ ಉತ್ಸವಮೂರ್ತಿ ಇದೆ. ದ್ವಾರದ ಎರಡು ಬದಿಗಳಲ್ಲಿ ಶ್ರೀ ಅಘೋರೇಶ್ವರನ ಪರಿವಾರದ ಕೆತ್ತನೆಗಳಿವೆ. ಎಡಭಾಗದಲ್ಲಿ ಮಹಿರ್ಷಮರ್ಧಿನಿ – ಭೈರವ, ಬಲಭಾಗದಲ್ಲಿ ಗಣಪತಿ – ಷಣ್ಮುಖನ ಕೆತ್ತನೆಗಳಿವೆ. ಎದುರಿನ ಮುಖಮಂಟಪ ಕೆತ್ತನೆಯಿರುವ ಕಂಬಗಳ ಆಧಾರದ ಮೇಲೆ ನಿಂತಿದೆ. ದ್ರಾವಿಡ ಶೈಲಿಯ ಕೆಲಸವನ್ನು ಹೊಂದಿದೆ. ದೇವಾಲಯದ ಪಶ್ಚಿಮಭಾಗದಲ್ಲಿ ಅಖಿಲಾಂಡೇಶ್ವರಿ ದೇವಾಲಯವಿದೆ. ದೇವಾಲಯದ ಎದುರು ಕಲ್ಲಿನ ಬೃಹತ್ ನಂದಿ ಇದೆ. ಇದರ ಕಾಲಿನ ಕೆಳಭಾಗದಲ್ಲಿ ನುಸುಳುವಷ್ಟು ಸಣ್ಣಜಾಗವಿದೆ. ಇಲ್ಲಿ ನುಸುಳಿದರೆ ಇಷ್ಟಾರ್ಥ ಪ್ರಾಪ್ತಿಯಾಗುವುದು ಎಂಬ ನಂಬಿಕೆಯಿದೆ.

ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದ ಹೃದಯಭಾಗದಲ್ಲಿ ಶ್ರೀಲಕ್ಷ್ಮೀನರಸಿಂಹ ದೇವಾಲಯವಿದೆ. 13ನೆಯ ಶತಮಾನದಲ್ಲಿ ಹೊಯ್ಸಳ ದೊರೆ ವೀರನರಸಿಂಹನು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಹೊಯ್ಸಳ ಶಿಲ್ಪ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಈ ದೇವಾಲಯವು ನಕ್ಷತ್ರಾಕಾರದಲ್ಲಿ ನಿರ್ಮಾಣಗೊಂಡಿದೆ. ಇಲ್ಲಿ ಲಕ್ಷ್ಮೀನರಸಿಂಹ, ವೇಣುಗೋಪಾಲ, ಪುರುಷೋತ್ತಮ, ಗಣೇಶ ಮತ್ತು ಶಾರದೆ ಸುಂದರವಾದ ಮೂರ್ತಿಗಳಿವೆ.

ಶಿವಮೊಗ್ಗ ಜಿಲ್ಲೆಯ ಗೇರುಸೊಪ್ಪಿನ ಜಲಪಾತ ಅಥವಾ ಜೋಗ್ ಜಲಪಾತ ಭಾರತದ ಎರಡನೆಯ ಅತೀ ಎತ್ತರದ ಜಲಪಾತ. ಇಲ್ಲಿ ಶರಾವತಿ ನದಿಯು ನಾಲ್ಕು ಸೀಳಾಗಿ (ರಾಜ, ರೋರರ್, ರಾಣಿ, ರಾಕೇಟ್) ಸುಮಾರು 292 ಮೀ. ಎತ್ತರದಿಂದ ಭೋರ್ಗರೆಯುತ್ತ ಧುಮ್ಮಿಕ್ಕುವ ದೃಶ್ಯವು ರುದ್ರರಮಣೀಯವಾಗಿದೆ,

ಶಿವಮೊಗ್ಗದ ಕೊರಗರ ನೃತ್ಯವು ಪ್ರಸಿದ್ಧ ಜನಪದ ಕಲೆಯಾಗಿದೆ.

ಹಾವೇರಿ ಜಿಲ್ಲೆ
ಸ್ವಾತಂತ್ರ್ಯ ಹೋರಾಟಗಾರರ (ವೀರಸೌಧ) ಸ್ತಬ್ಧಚಿತ್ರ



ಹಾವೇರಿ ಉತ್ತರ ಕನಾಟಕದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ. ಕ್ರಿ.ಶ. 1997 ರಲ್ಲಿ ಧಾರವಾಡ ಜಿಲ್ಲೆಯಿಂದ 7 ತಾಲ್ಲೂಕುಗಳನ್ನು ಪ್ರತ್ಯೇಕಿಸಿ ಹಾವೇರಿ ಜಿಲ್ಲೆಯಲ್ಲಿ ರಚಿಸಲಾಯಿತು. ಕೃಷಿ ಪ್ರಧಾನವಾದ ಈ ಜಿಲ್ಲೆಯಲ್ಲಿ ವರದಾ ಮತ್ತು ತುಂಗಭದ್ರ ನದಿಗಳು ಪ್ರವಹಿಸುತ್ತವೆ. ಐತಿಹಾಸಿಕವಾಗಿ ತನ್ನದೆಯಾದ ಪರಂಪರೆಯನ್ನು ಹೊಂದಿರುವ ಈ ಜಿಲ್ಲೆಯು ಬ್ಯಾಡಗಿ ಮೆಣಸಿಕಾಯಿಗೆ ಪ್ರಸಿದ್ಧವಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಶ್ರೀಮೈಲಾರ ಮಹಾದೇವಪ್ಪ, ಶ್ರೀವೀರಯ್ಯ ಹಿರೇಮಠ, ಕೊನನೂರಿನ ಮಡಿವಾಳರ ಶ್ರೀ ತಿರಕಪ್ಪ, ಶ್ರೀ ಸಂಗೂರ ಕರಿಯಪ್ಪ ಮತ್ತು ಶ್ರೀಮತಿ ವೀರಮ್ಮ ಮೊದಲಾದವರು ಈ ಜಿಲ್ಲೆಯ ಪ್ರಮುಖರು.

ದೇಶಭಕ್ತಿ ಶ್ರೀಮೈಲಾರ ಮಹಾದೇವಪ್ಪ ಅವರು ಹಾವೇರಿ ಜಿಲ್ಲೆಯ ಮೋಟೆಬೆನ್ನೂರಿನ ರೈತ ಕುಟುಂಬದ ಮಾರ್ತಾಂಡಪ್ಪ ಮತ್ತು ಬಸಮ್ಮನವರ ಪುತ್ರರಾಗಿ 1911 ಜೂನ್ 8 ರಂದು ಜನಿಸಿದರು. ಸ್ವಾತಂತ್ರ್ಯ ಹೋರಾಟಗಾರರ ಮನೆತನದಲ್ಲಿ ಜನಿಸಿದ ಇವರಿಗೆ ದೇಶಭಕ್ತಿ ರಕ್ತಗತವಾಗಿತ್ತು. ಇವರ ತಾಯಿ ಬಸಮ್ಮ ಅವರು ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸಿ, ಸೆರೆಮನೆ ಸೇರಿದ್ದರು. ಮಹಾತ್ಮ ಗಾಂಧೀಜಿ ಅವರು ಉಪಹಾಸ ಸತ್ಯಾಗ್ರಹದಲ್ಲಿ ಭಾಗವಹಿಸಿದಾಗ 19 ವರ್ಷದ ಯುವಕರಾಗಿದ್ದ ಮೈಲಾರ ಮಹಾದೇವಪ್ಪರವರಿಗೂ ಅವರೊಡನೆ ಭಾಗವಹಿಸುವ ಅವಕಾಶವು ದೊರೆಯಿತು.

ಗಾಂಧೀಜಿ ಅವರು ಸತ್ಯಾಗ್ರಹಕ್ಕಾಗಿ ಆರಿಸಿಕೊಂಡ 78 ಸೇನಾನಿಗಳಲ್ಲಿ ಕರ್ನಾಟಕದಿಂದ ಆಯ್ಕೆಯಾದ ಏಕಮಾತ್ರ ಯುವಕ ಇವರೊಬ್ಬರೇ, ದಂಡಿ ಸತ್ಯಾಗ್ರಹದಲ್ಲಿ ಗಾಂಧೀಜಿ ಅವರೊಂದಿಗೆ 25 ದಿನಗಳ ಕಾಲ ಪಾದಯಾತ್ರೆಯನ್ನು ಮಾಡಿ, 241 ಕಿ.ಮೀ. ಸಾಗಿ, ಉಪ್ಪನ್ನು ಉತ್ಪಾದಿಸುವುದರ ಮೂಲಕ ಕಾನೂನು ಭಂಗ ಚಳುವಳಿಗೆ ಸಾಕ್ಷಿಯಾದರು. ಗಾಂಧೀಜಿ ಅವರೊಂದಿಗೆ ಇವರು 6 ತಿಂಗಳ ಕಾಲ ಕಾರಾಗೃಹ ಶಿಕ್ಷೆಯನ್ನು ಅನುಭವಿಸಿದರು. ಕಾರಾಗೃಹದಿಂದ ಹಿಂದಿರುಗಿದಾಗ ಧಾರವಾಡ ಮತ್ತು ಮೋಟೆಬೆನ್ನೂರಿನಲ್ಲಿ ಇವರಿಗೆ ಭವ್ಯಸ್ವಾಗತ ದೊರೆಯಿತು. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಂಡ ಇವರು ತಮ್ಮ ಪತ್ನಿ ಸಿದ್ದಮ್ಮನವರೊಂದಿಗೆ ಬರ್ದೋಲಿಗೆ ಪ್ರಯಾಣ ಬೆಳೆಸಿ, ತಮ್ಮ ಪತ್ನಿಗೂ ಮಹಾತ್ಮರಿಂದ ರಾಷ್ಟ್ರದೀಕ್ಷೆಯನ್ನು ಕೊಡಿಸಿದರು. ಇವರು ಕರ್ನಾಟಕದ ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾಗಿದ್ದು, ಇತಿಹಾಸದಲ್ಲಿ ಅಮರರಾಗಿದ್ದಾರೆ. ಹಾವೇರಿಯಲ್ಲಿ ಹುತಾತ್ಮ ಶ್ರೀ ಮೈಲಾರ ಮಹಾದೇವಪ್ಪ ಅವರ ನೆನೆಪಿಗಾಗಿ ವೀರಸೌಧವನ್ನು ನಿರ್ಮಿಸುವುದರ ಮೂಲಕ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವವನ್ನು ಸಮರ್ಪಿಸಲಾಗಿದೆ.

ಹಾಸನ ಜಿಲ್ಲೆ

ಮಹಾಮಸ್ತಕಾಭಿಷೇಕ – 2018ರ ಮಾದರಿ ಸ್ತಬ್ದಚಿತ್ರ



ಹಾಸನ ಜಿಲ್ಲೆಯು ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯವಾಗಿಯೂ ಹೆಚ್ಚು ಪ್ರಸಿದ್ಧಿ ಪಡೆದ ಜಿಲ್ಲೆಯಾಗಿದೆ. ಕರ್ನಾಟಕವನ್ನು ಆಳಿದ ಅನೇಕ ರಾಜ ಮನೆತನಗಳಲ್ಲಿ ಗಂಗ ವಂಶದವರು ಪ್ರಮುಖರಾದವರು. ಸುಮಾರು ಕ್ರಿ.ಶ. 500 ರಿಂದ 10ನೆಯ ಶತಮಾನದವರೆಗೂ

ಗಂಗರು ಆಳ್ವಿಕೆ ನಡೆಸಿದರು. ಚಾವುಂಡರಾಯನು ತಲಕಾಡಿನ ಗಂಗ ವಂಶದ ದೊರೆಗಳಾದ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿಯಾಗಿದ್ದನು. ಇವನು ಬರೆದ ಅರವತ್ತಮೂರು ಪುಣ್ಯಪುರುಷರ ಚರಿತ್ರ 'ಚಾವುಂಡರಾಯ ಪುರಾಣ' ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕಾಣಿಕೆಯಾಗಿದೆ.

ಚಾವುಂಡರಾಯನು ತನ್ನ ತಾಯಿ ಶ್ರೀಕಾಳಲಾದೇವಿ ಅವರ ಅಭಿಲಾಷೆಯಂತೆ ಶ್ರವಣಬೆಳಗೊಳದ ವಿಂಧ್ಯಗಿರಿ ಬೆಟ್ಟದ ಮೇಲೆ ಭಗವಾನ್ ಶ್ರೀಬಾಹುಬಲಿಯ ಏಕಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸಿದನು. ಸುಮಾರು 58 ಅಡಿಗಳಷ್ಟು ಎತ್ತರವಿರುವ ಈ ಮೂರ್ತಿಯನ್ನು ಅರಿಷ್ಠನೇಮಿ ಎಂಬ ಮಹಾಶಿಲ್ಪಿಯು ನಿರ್ಮಿಸಿದನೆಂದು ತಿಳಿದು ಬರುತ್ತದೆ. ಜೈನ ಆಚಾರ್ಯರಾದ ಶ್ರೀನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಸಾನಿಧ್ಯದಲ್ಲಿ ಕ್ರಿ.ಶ. 981 ರಲ್ಲಿ ಈ ಮೂರ್ತಿಯು ಪ್ರತಿಷ್ಠಾಪನೆಗೊಂಡು, ಅಂದಿನಿಂದ ಮಹಾಮಸ್ತಕಾಷೇಕವು ಪ್ರತೀ 12 ವರ್ಷಗಳಿಗೊಮ್ಮೆ ಜೈನ ಸಂಪ್ರದಾಯದಂತೆ ನಡೆಸಿಕೊಂಡು ಬರಲಾಗುತ್ತಿದೆ. ಶ್ರೀ ಬಾಹುಬಲಿ ಮೂರ್ತಿಗೆ ಹಾಲು, ಅಕ್ಕಿಹಿಟ್ಟು, ಅರಿಶಿನ, ಕಷಾಯ, ಚತಷ್ಕೋನ ಕಳಶ, ಶ್ರೀಗಂಧ, ಚಂದನ, ಅಷ್ಟಗಂಧ, ಕೇಸರಿ, ಸುವರ್ಣವೃಷ್ಟಿ, ಪುಷ್ಪವೃಷ್ಟಿ, ಅರ್ಘ್ಯ ಮೊದಲಾದ ದ್ರವ್ಯಗಳು ಹಾಗೂ ಶಾಂತಿಮಂತ್ರಪಠದೊಂದಿಗೆ ಪೂರ್ಣಕಳಶವನ್ನಿಟ್ಟು, ಮಹಾಮಂಗಳಾರತಿಯೊಂದಿಗೆ ಮಹಾಮಸ್ತ ಕಾಭಿಷೇಕವನ್ನು ನೆರವೇರಿಸಲಾಗುತ್ತದೆ. ಕ್ರಿ.ಶ.2018 ರಲ್ಲಿ ಮುಂದಿನ ಮಹಾಮಸ್ತಕಾಭಿಷೇಕವು ನಡೆಯಲಿದೆ.

ಹೊಯ್ಸಳ ವಂಶದ ಮೂಲ ಪುರುಷನ ಹೆಸರು ಸಳ. ಈಗಿನ ಮೂಡಿಗೆರೆ ತಾಲ್ಲೂಕಿನ ಸೊಸೆಯೂರಿನಲ್ಲಿ (ಇಂದಿನ ಅಂಗಡಿ) ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತನು. ಅಂದು ಅಲ್ಲಿಗೆ ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತ ಮುನಿಯು ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ 'ಹೊಯ್ ಸಳ' ಎಂದು ಆದೇಶವಿತ್ತನು. ಸಳ ಕೂಡಲೇ ಹುಲಿಯನ್ನು ಎದುರಿಸಿ ಅದರ ಗಂಟಲಿನಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೊಯ್ದು ಕೊಂದನು. ಅಂದಿನಿಂದ ಸಳನ ವಂಶಕ್ಕೆ 'ಹೊಯ್ಸಳ' ಎಂಬ ಹೆಸರು ಬಂದಿತು. ಹೊಯ್ಸಳರು ಸಳನು ಹುಲಿಯನ್ನು ಕೊಲ್ಲುತ್ತಿರುವ ದೃಶ್ಯವನ್ನು ತಮ್ಮ ಲಾಂಛನವನ್ನಾಗಿ ಸ್ವೀಕರಿಸಿದರು. ಈಗಿನ ಹಾಸನ ಜಿಲ್ಲೆಯ ಹಳೇಬೀಡು (ದ್ವಾರಸಮುದ್ರ) ಹೊಯ್ಸಳರ ರಾಜಧಾನಿಯಾಗಿತ್ತು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸ್ತಬ್ಧಚಿತ್ರ
ಸರ್ಕಾರಿ ವಸ್ತು ಸಂಗ್ರಹಾಲಯ – ಬೆಂಗಳೂರು




"ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನಗಳ ಆಗರ" ಎಂದೇ ಪ್ರಸಿದ್ಧವಾಗಿರುವ ಬೆಂಗಳೂರು ನಗರದಲ್ಲಿ ವಿಶ್ವವಿಖ್ಯಾತವಾದ **"ವಸ್ತು ಸಂಗ್ರಹಾಲಯ"** ಇದೆ. ಇದು ಭಾರತ ದೇಶದಲ್ಲೇ ಆರನೆಯದಾಗಿದ್ದು, ಕರ್ನಾಟಕದಲ್ಲಿ ಪ್ರಥಮ ಸರ್ಕಾರಿ ವಸ್ತು ಸಂಗ್ರಹಾಲಯವಾಗಿದೆ. ಡಾ. ಎಡ್ವರ್ಡ್ ಗ್ರೀನ್ ಬ್ಯಾಲ್‌ಫರ್ ಎಂಬುವವರು ಇದರ ಸಂಸ್ಥಾಪಕರು. ಇದರ ಕಟ್ಟಡವು ಗ್ರೀಕ್ ರೋಮನ್ನಿನ ಕೊರಂತಿಯನ್ ಕಂಬಗಳ ಶೈಲಿಯಲ್ಲಿದೆ.

ಈ ವಸ್ತು ಸಂಗ್ರಹಾಲಯದಲ್ಲಿ ಪ್ರಾಗೈತಿಹಾಸ ಹಾಗೂ ನೂತನ ಶಿಲಾಯುಗದ ಅವಶೇಷಗಳಿವೆ, ಬ್ರಹ್ಮಗಿರಿ, ಚಂದ್ರವಳ್ಳಿ, ಟಿ.ನರಸೀಪುರ, ಬನವಾಸಿ ಮೊದಲಾದ ಕಡೆಗಳಲ್ಲಿ, ಉತ್ಖನದ ಸಮಯದಲ್ಲಿ ದೊರೆತಿರುವ ಮಡಕೆ ಚುರುಗಳು, ಕಲ್ಲೂಕೊಡಲಿಗಳು, ಅರೆಯುವ ಕಲ್ಲುಗಳು, ಕಪ್ಪು ಮತ್ತು ಕೆಂಪು ಬಣ್ಣದ ಮಣ್ಣಿನ ಪಾತ್ರೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಅಲ್ಲದೆ ಹರಪ್ಪ ಮತ್ತು ಮೊಹೆಂಜೋದಾರೋಗಳಲ್ಲಿ ದೊರೆತಿರುವ ದೇವತೆಗಳ ಶಿರಭಾಗ, ಮಣ್ಣಿನ ಮಣಿಗಳು, ಮಣ್ಣಿನ ಪಾತ್ರೆಗಳು, ಖಡ್ಗಗಳು, ಶಂಖಗಳು, ಜೇಡಿಮಣ್ಣಿನಿಂದ ತಯಾರಿಸಲಾದ ಬುದ್ಧನ ವಿಗ್ರಹಗಳು ಮತ್ತಿತರ ಪ್ರಾಚ್ಯ ಅವಶೇಷಗಳಿವೆ.

ಉತ್ತಮ ಭಾರತ ಶೈಲಿಯ 10 ಮತ್ತು 11ನೆಯ ಶತಮಾನದ ಕುಬೇರ, ತಾರ, ಉಮಾಮಹೇಶ್ವರ, ನಾಟ್ಯ ಗಣಪತಿ, ಬರ್ಮಾದ ಶಾಸನವಿರುವ ಲೋಹದ ಗಂಟೆಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಗುಲ್ಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆತಿರುವ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಆಯತಸ್ತಂಬ, ಸ್ಮಾರಕ ಕಲ್ಲುಗಳು ಮೊದಲಾದ ಶಿಲ್ಪಕಲಾಕೃತಿಗಳಿವೆ. ಗಂಗರ ಕಾಲದ

ದಕ್ಷಿಣಾಮೂರ್ತಿ, ಸಪ್ತಮಾತೃಕೆಯರ ಶಿಲ್ಪಗಳು, ನೊಳಂಬರ ಕಾಲದ ನಾಲ್ಕು ತಲೆಗಳುಳ್ಳ ದುರ್ಗಾದೇವಿ, ಚಾಲುಕ್ಯರ ಕಾಲದ ಶಿಲ್ಪಗಳು, ಕದಂಬರ ಕಾಲದ ಶಿಲ್ಪಗಳು, ಹೊಯ್ಸಳರ ಕಾಲದ ಮತ್ತು ವಿಜಯನಗರ ಕಾಲದ ದೇವಶಿಲ್ಪಗಳಿವೆ.

ಇವುಗಳಲ್ಲಿದೆ ಆಧುನಿಕ ಕಾಲದ ಮೈಸೂರಿನ ಸಾಂಪ್ರದಾಯಿಕ ವರ್ಣಚಿತ್ರಗಳು, ಚಿಕಣಿ ಶೈಲಿಯ ವರ್ಣಚಿತ್ರಗಳು ಪರ್ಶಿಯನ್ ಮತ್ತು ಮೊಘಲರ ಕಾಳದ ವರ್ಣಚಿತ್ರಗಳಿವೆ. ಇದರ ಜೊತೆಗೆ ಮೇಜರ್ ಜನರಲ್ ರಾಸ್ ಇವರಿಂದ ತಯಾರಿಸಿದ ಶ್ರೀರಂಗಪಟ್ಟಣದ ಕೋಟೆಯ ಪಡಿಯಚ್ಚನ್ನು ಸಹ ಇಲ್ಲಿ ಪ್ರದರ್ಶಿಸಲಾಗಿದೆ. ಆಧುನಿಕ ಸಂಗೀತದ ಉಪಕರಣಗಳು ವಸ್ತು ಸಂಗ್ರಹಾಲಯದ ಮೆರಗನ್ನು ಹೆಚ್ಚಿಸಿವೆ.

"ಭಾರತೀಯರು ಮರೆತು ಹೋದ ಭವ್ಯ ಪರಂಪರೆ ಮತ್ತು ಸಂಸ್ಕೃತಿಯನ್ನು ನೆನೆಪಿಸುವ ಸಂಗ್ರಹವೇ ಪುರಾತತ್ವ ಸಂಗ್ರಹಾಲಯ; ಇದು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಕೈಗನ್ನಡಿಯಾಗಿದೆ".

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ಜನತೆಯುತ್ತ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಸ್ತಬ್ದಚಿತ್ರ
ಬ್ಯಾಂಕಿನ ಸೇವಾ ಸೌಲಭ್ಯಗಳು



ಶತಮಾನೋತ್ಸವವನ್ನು ಆಚರಿಸಿಕೊಂಡಿರುವ 'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ನೂರು ವರ್ಷಗಳಿಗೂ ಹೆಚ್ಚು ಕಾಲದಿಂದ ವಿಶ್ವಾಸಾರ್ಹ ಸೇವೆಯನ್ನು ತನ್ನ ಗ್ರಾಹಕರಿಗೆ ಮುಡಿಪಾಗಿಟ್ಟಿದೆ.

ಗ್ರಾಹಕರ "ನಾಳಿನ ಭವ್ಯ ಭವಿಷ್ಯಕ್ಕಾಗಿ" ಅವಿರತ ಶ್ರಮಿಸುತ್ತಿರುವ ಕರ್ನಾಟಕದ ಅತ್ಯಂತ ಜನಪ್ರಿಯ ಬ್ಯಾಂಕ್ ಇದಾಗಿದೆ.

ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರೇರಣೆಯಿಂದ 'ಮೈಸೂರು ಬ್ಯಾಂಕ್' ಸ್ಥಾಪನೆ ಆಯಿತು. ದಿವಾನ್ ಸರ್.ಎಂ. ವಿಶ್ವೇಶ್ವರಯ್ಯ ಅವರ ಅಧ್ಯಕ್ಷತೆಯ ಬ್ಯಾಂಕಿಂಗ್ ಸಮಿತಿಯ ಶಿಫಾರಸ್ಸಿನ ಮೇರೆಗೆ 1913 ಮೇ 19 ರಂದು 'ಬ್ಯಾಂಕ್ ಆಫ್ ಮೈಸೂರು ಲಿ.' (ಈಗಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಸ್ಥಾಪನೆಯಾಯಿತು. ಇವರುಗಳ ದೂರದೃಷ್ಟಿಯ ಫಲವಾಗಿ ವಿಜಯದಶಮಿಯ ದಿನ ಅಂದರೆ 1913 ರ ಅಕ್ಟೋಬರ್ 2 ರಂದು ಆರಂಭಿಕ ಬಂಡವಾಳ ಕೇವಲ ರೂ. 20 ಲಕ್ಷದೊಂದಿಗೆ ಮೈಸೂರು ಬ್ಯಾಂಕ್ ತನ್ನ ವ್ಯವಹಾರವನ್ನು ಪ್ರಾರಂಭಿಸಿತು. ಅಂದು ಸುರಕ್ಷಿತ ಹಣಕಾಸು ಮೂಲಗಳಿಲ್ಲದೆ ಪರದಾಡುತ್ತಿದ್ದ ಹಳೆಯ ಮೈಸೂರು ಭಾಗದ ಸಣ್ಣ ಹಾಗೂ ಮಧ್ಯಮ ವರ್ಗದ ವ್ಯಾಪಾರಿಗಳು, ಉದ್ದಿಮೆದಾರರಿಗೆ ಮೈಸೂರು ಬ್ಯಾಂಕ್ ಸ್ಥಾಪನೆಯು ವರದಾನವಾಯಿತು.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಾರ್ಚ್ 1960 ರಲ್ಲಿ 'ಭಾರತೀಯ ಸ್ಟೇಟ್ ಬ್ಯಾಂಕಿ'ನ ಅಧೀನ ಬ್ಯಾಂಕ್ ಆಯಿತು. ಕ್ರಿ.ಶ. 1975 ರಿಂದ ಭಾರತೀಯ ಸ್ಟೇಟ್ ಬ್ಯಾಂಕಿನ ಸಹವರ್ತಿಯಾಗಿ ಮುಂದುವರೆಯುತ್ತಿದೆ. ಇದು ಸ್ಟೇಟ್ ಬ್ಯಾಂಕ್ ಸಮೂಹದ ಪ್ರಧಾನ ಸಂಸ್ಥೆಯಾದ ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಶೇ. 92.33 ಷೇರುಗಳನ್ನು ಹೊಂದಿದೆ. ಉಳಿದ ಷೇರುಗಳನ್ನು ಖಾಸಗಿ ಷೇರುದಾರರು ಮತ್ತು ಇತರೆ ಸಂಸ್ಥೆಗಳು ಪಡೆದುಕೊಂಡಿವೆ. ಮೈಸೂರು ಬ್ಯಾಂಕ್ ಎಂದು ಜನಪ್ರಿಯವಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಉತ್ತಮ ಗ್ರಾಹಕ ಸೇವೆಗೆ ಹೆಸರುವಾಸಿಯಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪ್ರಾರಂಭವಾದಾಗಿನಿಂದಲೂ ನಿರಂತರವಾಗಿ ಲಾಭಗಳಿಸುತ್ತಿದೆ ಮತ್ತು ಲಾಭಾಂಶವನ್ನು ಪ್ರಕಟಿಸುತ್ತಿದೆ. ಕರ್ನಾಟಕ ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಈ ಬ್ಯಾಂಕ್ ಗಣನೀಯ ಪಾತ್ರವನ್ನು ವಹಿಸಿದೆ. ಇದು ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ದಿವಾನ್ ಸರ್.ಎಂ.ವಿಶ್ವೇಶ್ವರಯ್ಯ ಅವರುಗಳ ಗುರಿಯೂ ಆಗಿತ್ತು.

'ಸ್ಟೇಟ್ ಬ್ಯಾಂಕ್ ಆಫ್ ಮೈಸೂರು' ತನ್ನ ಮೂಲ ವ್ಯವಹಾರವಾದ ಠೇವಣಿ ಸಂಗ್ರಹ, ಸಾಲ ನೀಡಿಕೆ ಜತೆಯಲ್ಲಿ ಗ್ರಾಮೀಣ ಅಭಿವೃದ್ಧಿ ಹಾಗೂ ಕೃಷಿಕ್ಷೇತ್ರಗಳ ಸಮಗ್ರ ಅಭಿವೃದ್ಧಿಗೆ ಹತ್ತಾರು ಯೋಜನೆಗಳನ್ನು ಹಾಕಿಕೊಂಡಿದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹೊಂದಿರುವ 1068

ಶಾಖೆಗಳಲ್ಲಿ 887 ಶಾಖೆಗಳು ಕರ್ನಾಟಕ ರಾಜ್ಯದಲ್ಲೇ ಇರುವುದು, ಅದರಲ್ಲಿ ಮೈಸೂರು ಜಿಲ್ಲೆಯಲ್ಲಿ 76 ಶಾಖೆಗಳಿರುವುದು ಗಮನಾರ್ಹವಾದುದು. ಈ ಬ್ಯಾಂಕ್ ಇದೇ ಅಕ್ಟೋಬರ್ 2 ರ 2016ಕ್ಕೆ 103 ವರ್ಷಗಳನ್ನು ಪೂರೈಸಿ 104 ನೆಯ ವರ್ಷಕ್ಕೆ ಕಾಲಿಟ್ಟಿರುತ್ತದೆ. ಈ ಅಪೂರ್ವ ಸಂದರ್ಭದಲ್ಲಿ ಗ್ರಾಹಕರಿಗೆ ಮತ್ತಷ್ಟು ಸೇವೆ ನೀಡಲು ಸಂಕಲ್ಪ ಮಾಡಿರುವ ಈ ಬ್ಯಾಂಕ್ ಗ್ರಾಹಕರಿಗೆ ಗರಿಷ್ಠ ಬಡ್ಡಿದರದ ವಿಶೇಷ ಠೇವಣಿ ಯೋಜನೆಗಳನ್ನು ಬಿಡುಗಡೆ ಮಾಡಿದೆ.

ಜನರು ತಮ್ಮ ಹಣಕಾಸಿನ ವಹಿವಾಟನ್ನು ಬ್ಯಾಂಕ್‌ಗಳ ಮೂಲಕ ನಡೆಸುತ್ತಾರೆ. ಬ್ಯಾಂಕಿನ ಮೂಲಕ ನಾವು ಹಣಕಾಸಿನ ವಹಿವಾಟನ್ನು ನಡೆಸುವುದರಿಂದ ನಮ್ಮ ಹಣವು ಉಳಿತಾಯವಾಗುವುದಲ್ಲದೆ ಭದ್ರತೆಯನ್ನು ಒದಗಿಸುತ್ತದೆ. ಬ್ಯಾಂಕುಗಳ ಮಹತ್ವವನ್ನು ಈ ಸ್ತಬ್ಧಚಿತ್ರವು ಸಾರುತ್ತದೆ.

ಕಾವೇರಿ ನೀರಾವರಿ ನಿಗಮ (ನಿ.), ಮೈಸೂರು
ಜಲ ಜಾಗೃತಿಯ ಬಗ್ಗೆ – ಜನಾಂದೋಲನದ ಸ್ತಬ್ದಚಿತ್ರ
"ನಾವು ಉಳಿಸಿದರೆ ಜಲವನ್ನು; ಜಲವು ಉಳಿಸುವುದು ನಮ್ಮನ್ನು"



ನೀರನ್ನು **'ಜೀವಜಲ'** ಎಮದು ಕರೆಯುತ್ತೇವೆ. ಸಕಲ ಜೀವಿಗಳಿಗೂ ನೀರೇ ಆಧಾರ. ನೀರಿಲ್ಲದ ಬದುಕನ್ನು ಊಹಿಸುವುದು ಕಷ್ಟ. ಭೂಮಿಯು ನೀರನ್ನು ಹೊಂದಿರುವುದರಿಂದಲೇ ಜೀವಿಗಳುಳ್ಳ ವಿಶಿಷ್ಟವಾದ ಗ್ರಹವಾಗಿದೆ. ಹಿಂದಿಗಿಂತ ಇಂದು ನೀರಿನ ಸಂರಕ್ಷಣೆ ಮತ್ತು ಮಿತಿ ಬಳಕೆ

ಅತ್ಯಗತ್ಯವಾಗಿದೆ. 'ಮುಂದೆ ಜಾಗತಿಕ ಯುದ್ಧಗಳು ಸಂಭವಿಸುವುದಾದರೆ ಅದು ನೀರಿಗಾಗಿಯೇ' ಎಂಬ ಹೇಳಿಕೆ ಎಷ್ಟು ಸತ್ಯ ಎಂದೆನಿಸುತ್ತದೆ.

ನೀರಿನ ಸಂರಕ್ಷಣೆ ಹಾಗೂ ಮಿತ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಅರಣ್ಯ ನಾಶದಿಂದ ಮಳೆ ನೀರು ಭೂಮಿಯೊಳಗೆ ಹಿಂಗದಿರುವುದು, ಮಿತಿ ಮೀರಿದ ಕೊಳವೆ ಬಾವಿಗಳ ತೊಡುವಿಕೆ, ನಗರೀಕರಣ ಮೊದಲಾದ ಕಾರಣಗಳಿಂದ ಭೂಮಿಯ ಅಂತರ್ಜಲ ಕುಸಿಯುತ್ತಿರುವುದರಿಂದ ಇದಕ್ಕೆ ಹೆಚ್ಚಿನ ಗಮನ ನೀಡುವುದು ಅನಿವಾರ್ಯವಾಗಿದೆ.

ನೀರು ಜೀವಿಗಳ ಬದುಕಿಗೆ ಮೂಲ ಆಧಾರ. ನೀರನ್ನು ಮಿತವಾಗಿ ಬಳಸಬೇಕು. ಇದು ಬರಿದಾಗುವುದರಿಂದ ಕುಡಿಯಲು ನೀರಿಲ್ಲದೆ, ಬೆಳೆ ಬೆಳೆಯಲು ನೀರಿಲ್ಲದೆ ಜನರು ಸಂಕಷ್ಟಕ್ಕೀಡಾಗುತ್ತಾರೆ. ಈ ಸ್ತಬ್ಧಚಿತ್ರವು ನೀರಿನ ಮಹತ್ವವನ್ನು ತಿಳಿಸುತ್ತದೆ.

ಅಖಿಲ ಭಾರತ ವಾಕ್ ಮತ್ತು
ಶ್ರವಣ ಸಂಸ್ಥೆಯ ಸ್ತಬ್ದಚಿತ್ರ, ಮೈಸೂರು



ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯು ಈ ಬಾರಿಯ ದಸರಾ ಮಹೋತ್ಸವದಲ್ಲಿ ಸ್ತಬ್ಧಚಿತ್ರೊಂದನ್ನು ರಚಿಸುತ್ತಿದ್ದು ಬಹಳ ಕಲಾತ್ಮಕವಾದದ್ದಾಗಿದೆ.

ಶಬ್ಧ ಎಷ್ಟು ಅವಶ್ಯಕವೋ ಅಷ್ಟಿದ್ದರೆ ಆರೋಗ್ಯಕರ ಪರಿಸರ. ಇಲ್ಲವಾದರೆ ಶಬ್ಧ ಮಾಲಿನ್ಯವಾದಂತಹ ಪರಿಸರ ಮತ್ತು ನೆಮ್ಮದಿ ರಹಿತವಾದಂತಹ ಪರಿಸರದಿಂದ ಬದುಕ ಬೇಕಾಗಬಹುದು.

ಈ ಬಾರಿಯ ಸಂಸ್ಥೆಯು ತನ್ನ 51ನೇ ಸ್ಥಾಪನೆಯನ್ನು ಪೂರೈಸಿದ ಸಂದರ್ಭದಲ್ಲಿ ಜನರಿಗೆ ವಾಕ್ ಮತ್ತು ಶ್ರವಣದೋಷಗಳ ಬಗ್ಗೆ ಅರಿವು ಉಂಟು ಮಾಡುವ ದೃಷ್ಟಿಯಲ್ಲಿ ಅತೀವ ಶಬ್ಧದಿಂದಾಗುವ ಪ್ರತಿಕೂಲಗಳು ಮತ್ತು ಅನಾರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಈ ಬಾರಿಯ ಸ್ತಬ್ಧಚಿತ್ರದ ಮೂಲಕ ಮುಂದಾಗಿದೆ.

ಸ್ತಬ್ಧ ಚಿತ್ರದ ಮುಂಭಾಗದಲ್ಲಿ ಒಂದು ಕಿವಿಯನ್ನು ಜೋಡಿಸಿದ್ದು ಕಿವಿಯ ದ್ವಾರಕ್ಕೆ ಒಂದು ಮುಚ್ಚಳವನ್ನು ಸಿಕ್ಕಿಸಲಾಗಿದೆ. ಈ ಮುಚ್ಚಳವು ಮನುಷ್ಯನ ಚರ್ಮರಹಿತ ಬುರುಡೆಯಂತಿದೆ. ಇದು ಕಿವಿ ಕೇಳದವನ ಬದುಕು ನಿರ್ಜಿವಿ ಎಂಬುದನ್ನು ತೋರುತ್ತದೆ. ಮತ್ತು ವಾಹನದ ಹಿಂಭಾಗದಲ್ಲಿ ಹಿಂದಕ್ಕೆ ಮುಖ ಮಾಡಿ ದೊಡ್ಡ ದೊಡ್ಡ ಧ್ವನಿವರ್ಧಕಗಳನ್ನು ಊದುತ್ತಿರುವ ಒಂದು ಶಬ್ಧ ರಾಕ್ಷಿಸಿಯನ್ನು ರಚಿಸಲಾಗಿದೆ. ಇದರ ಪಕ್ಕದಲ್ಲಿ ಒಂದು ಬುರುಡೆಯಾಕೃತಿಯಿದ್ದು ಅರ್ಧ ನಿರ್ಜೀವ (ಸ್ಕಲ್) ಮತ್ತೊಂದರ್ಧ ಸಜೀವ. ಈ ಶಬ್ಧದಿಂದ ಅರ್ಧ ಬುರುಡೆಯು ನಿರ್ಜೀವವಾಗಿರುವುದು ಮತ್ತೊಂದರ್ಧ ಸಂಸ್ಥೆಯ ಸಹಾಯದಿಂದ ಸಜೀವವಾಗಿರುವುದನ್ನು ತೋರುತ್ತದೆ ಮತ್ತು ಶಬ್ಧ ಮಾಲಿನ್ಯವನ್ನು ಸಾಕು ಮಾಡು ಎಂಬಂತೆ ಕಾಯಯೊಂದು ತಡೆಯುತ್ತಿರುವುದು. ಹಿಂಬದಿಯಲ್ಲಿ ಮಗುವೊಂದು ವಾಕ್ ಮತ್ತು ಶ್ರವಣ ದೋಷದಿಂದ ಮುಕ್ತಗೊಂಡು ಸಂಸ್ಥೆಯ ಆಸರೆಯಲ್ಲಿ ಸ್ವತಂತ್ರವಾಗಿ ಶವ್ರಣವನ್ನು ಗ್ರಹಿಸುತ್ತಿರುವಂತೆ ರಚಿಸಲಾಗಿದದು ಇಲ್ಲಿ ಎರಡು ಕೈಗಳು ಸಂಸ್ಥೆಯನ್ನು ಪ್ರತಿನಿಧಿಸಿದ್ದು ಆಶ್ರಯ ನೀಡಿರುವಂತೆ ರಚಿಸಲಾಗಿದೆ. ಹಿಂಬದಿಯಲ್ಲಿ ಮಕ್ಕಳು ಆರೋಗ್ಯವಾಗಿದ್ದರೆ ಸುಖಸಾಗರ ಎಂಬಂತೆ ಒಂದು ಮನೆ ಮತ್ತು ಸಂಸಾರವನ್ನು ಚಿತ್ರಿಸಲಾಗಿದೆ. ಮತ್ತು ಎರಡು ಬದಿಗಳಲ್ಲಿ ಸಂಸ್ಥೆಯ ಮಾಹಿತಿ ಫಲಕಗಳು ಮತ್ತು ಸಂಸ್ಥೆಯ 51 ವರ್ಷಗಳ ಸಾಂಕೇತಿಕವಾಗಿ ಸಂಸ್ಥೆಯ ಚಿಹ್ನೆಯನ್ನು ರಚಿಸಲಾಗಿದೆ. ಒಟ್ಟಾರೆ ಸ್ತಬ್ಧ ಚಿತ್ರವು ಬಹಳ ವಿಶೇಷವಾಗಿ ಮೂಡಿ ಬಂದಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ.ನ ಸ್ತಬ್ದಚಿತ್ರ
ಪರಿಸರಸ್ನೇಹಿ ಇಂಧನ

ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. ಭಾರತ ಸರ್ಕಾರದ ಸೌಮ್ಯಕ್ಕೆ ಒಳಪಟ್ಟ ಒಂದು ಸಂಸ್ಥೆಯಾಗಿದೆ. ಇದು ಭಾರತದ ಸಾರ್ವಜನಿಕ ಕ್ಷೇತ್ರದ 'ನವರತ್ನ' ಉದ್ಯಮಗಳಲ್ಲಿ ಒಂದಾಗಿದೆ. ಪಾರ್ಚೂನ್ ಗ್ಲೋಬಲ್ 500 ಉದ್ಯಮಗಳ ಪಟ್ಟಿಯಲ್ಲಿ ತನ್ನ ಹೆಸರನ್ನು ದಾಖಲಿಸಿದೆ.

'ಬರ್ಮಾ ಷೆಲ್' ಕಂಪನಿಯನ್ನು ಭಾರತ ಸರ್ಕಾರವು 24ನೆಯ ಜನವರಿ 1976 ರಲ್ಲಿ ಪಡೆದುಕೊಂಡು 'ಭಾರತ್ ರಿಫೈನರೀಸ್ ಲಿ.' ಎಂದು ನಾಮಕರಣ ಮಾಡಿತು. ಆನಂತರ ಒಂದನೆಯ ಆಗಸ್ಟ್ 1977 ರಲ್ಲಿ 'ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ.' ಎಂದು ಮರುನಾಮಕರಣ ಮಾಡಿತು. ಬಾಂಬೆಹೈ ಪ್ರದೇಶದಲ್ಲಿ ಹೊಸದಾಗಿ ದೊರೆತ ಪೆಟ್ರೋಲಿಯಂ ಕಚ್ಚಾ ತೈಲವನ್ನು ಸಂಸ್ಕರಿಸಲು ಕಾರ್ಯೋನ್ಮುಖವಾದ ಮೊಟ್ಟಮೊದಲ ಭಾರತೀಯ ಸಂಸ್ಥೆ ಇದಾಗಿದೆ.



ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಲಿ. ನ ಸಂಶೋಧನಾ ಮತ್ತು ಅಭಿವೃದ್ಧಿ ವಿಭಾಗವು ಮಣಿಯಿಂದ ಹೊರಹೊಮ್ಮುವ ಅನಿಲ ಮಾಲಿನ್ಯ. ಕೈಗಾರಿಕೆ ಮತ್ತು ವಾಹನಗಳಿಂದ ಉಂಟಾಗುವ ಹೊಗೆ ಮಾಲಿನ್ಯ, ಲೋಹ ಕತ್ತರಿಸುವ ಕಾರ್ಖಾನೆಗಳಿಂದಾಗುವ ಮಾಲಿನ್ಯಗಳನ್ನು ತಡೆಗಟ್ಟಲು ವಿವಿಧ ಬಗೆಯ ಪರಿಹಾರೋಪಾಯಗಳನ್ನು ಉಂಟಾಗುವ ಹೊಗೆ ಮಾಲಿನ್ಯ, ಲೋಹ ಕತ್ತರಿಸುವ ಕಾರ್ಖಾನೆಗಳಿಂದಾಗುವ ಮಾಲಿನ್ಯಗಳನ್ನು ತಡೆಗಟ್ಟಲು ವಿವಿಧ ಬಗೆಯ ಪರಿಹಾರೋಪಾಯಗಳನ್ನು ಕಂಡುಹಿಡಿಯುವ ಕಡೆಗೆ ಕಾರ್ಯೋನ್ಮುಖವಾಗಿ ಯಶಸ್ವಿಯಾಗಿದೆ. ಇದು

ಲೋಹ ಕತ್ತರಿಸುವ ಕಾರ್ಖಾನೆಗಳಲ್ಲಿ ಉಂಟಾಗುವ ವಿವಿಧ ಬಗೆಯ ಅಪಘಾತ ಮತ್ತು ಮಾಲಿನ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸುವ ಸುರಕ್ಷಿತ ಭಾರತ್ ಮೆಟಲ್ ಹೆವಿ ಗ್ಯಾಸ್ ಉತ್ಪಾದನೆ ಮಾಡುವ ಪ್ರಮುಖ ಸಂಸ್ಥೆಯಾಗಿದೆ.

'Energising Lives' ಎಂಬುದು ಈ ಸಂಸ್ಥೆಯ ಧ್ಯೇಯವಾಗಿದೆ. ಇಂದು ಪ್ರಪಂಚವು ಜಾಗತಿಕ ತಾಪಮಾನದಿಂದಾಗಿ ಹಿಮನದಿಗಳ ಕರಗುವಿಕೆ, ಸಮುದ್ರ ಮಟ್ಟದ ಏರುವಿಕೆ ಮೊದಲಾದ ವಿಕೋಪಗಳಿಂದಾಗಿ ಅಪಾಯದಲ್ಲಿದೆ. ಆದ್ದರಿಂದ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಪರಿಸರಸ್ನೇಹಿ ಇಂಧನವನ್ನು ಉತ್ಪಾದಿಸುವುದರ ಮೂಲಕ ಸಮಾಜಕ್ಕೆ ಒಳಿತನ್ನು ಮಾಡುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ.

ಈ ಸಂಸ್ಥೆಯು ಪರಿಸರ ಸ್ನೇಹಿಯಾದ 'Speed' ಎಂಬ ಹೆಸರಿನ ಪೆಟ್ರೋಲನ್ನು ಬಿಡುಗೊಳಿದೆ. ಇದು ಯಂತ್ರದ ಕಾರ್ಯಕ್ಷಮತೆ ಹೆಚ್ಚಿಸುವುದಕ್ಕೆ, ಪರಿಸರ ಮಾಲಿನ್ಯವನ್ನು ತಡೆಗಟ್ಟುವುದಕ್ಕೆ, ವಾಹನಗಳು ಎಂಜಿನ್ ದೀರ್ಘಕಾಲ ಬಾಳಿಕೆಗೆ, ಎಂಜಿನಲ್ಲಿ ಕಲ್ಮಶಗಳು ಸಂಗ್ರಹಗೊಳ್ಳದಂತೆ ತಡೆಗಟ್ಟುವಿಕೆಗೆ, ವಾಹನ ನಿರ್ವಹಣಾ ವೆಚ್ಚವನ್ನು ಕನಿಷ್ಠಗೊಳಿಸುವುದಕ್ಕೆ ಹಾಗೂ ವಾಹನ ಚಾಲನೆಯನ್ನು ಸುಗಮಗೊಳಿಸುವುದಕ್ಕೆ ಬಹು ಸಹಕಾರಿಯಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು.

ಡಿ.ದೇವರಾಜ ಅರಸು ಜನ್ಮಶತಮಾನೋತ್ಸವದ ಸ್ತಬ್ದಚಿತ್ರ



ಕರ್ನಾಟಕದಲ್ಲಿ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದವರಲ್ಲಿ ಶ್ರೀ ಡಿ.ದೇವರಾಜ ಅರಸು ಅವರು ಪ್ರಮುಖರಾದವರು. ಇವರು ದಿನಾಂಕ: 20.08.1915 ರಲ್ಲಿ ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ ಜನಿಸಿದರು. ಕರ್ನಾಟಕ ಸರ್ಕಾರವು ಸಾಮಾಜಿಕ ಸುಧಾರಣೆಯ ಹರಿಕಾರ ಎಂದೇ ಜನಪ್ರಿಯರಾದ ಡಿ.ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವ ಸಮಾರಂಭವನ್ನು ದಿನಾಂಕ: 20.08.2015 ರಂದು ಮೈಸೂರಿನಲ್ಲಿ ಗೌರವಾದರಗಳಿಂದ ಆಚರಿಸಿ, ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಲವಾರು ಜನಪ್ರಿಯ ಯೋಜನೆಗಳನ್ನು ಘೋಷಿಸಿತು.

ಕನ್ನಡನಾಡು ಕಂಡ ಅಪರೂಪದ ನೇತಾರರಾದ ಇವರು ಅಪ್ರತಿಮ ರಾಜಕಾರಣಿಯಾಗಿದ್ದರು. ಹಿಂದುಳಿದ ಬಡಜನರ ಪುರೋಭಿವೃದ್ಧಿಗಾಗಿ ಹಲವಾರು ದಿಟ್ಟಕ್ರಮಗಳನ್ನು ಕೈಗೊಂಡರು. ಸುಮಾರು 8 ವರ್ಷಗಳ ಕಾಲ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ. ಒಂದರ್ಥದಲ್ಲಿ ಅದು ಮೌನ ಸಾಮಾಜಿಕ ಕ್ರಾಂತಿಯೇ ಆಗಿತ್ತು. ಭೂಸಾಧಾರಣೆ ಕಾಯಿದೆಯನ್ನು ಜಾರಿಗೆ ತರುವುದರ ಮೂಲಕ ಮೂಕ ಬಾಯಿಗೆ ದನಿಯಾದರು. **'ಉಳುವವನೇ ಹೊಲದೊಡೆಯ'** ನಾಗುವ ದಿಸೆಯಲ್ಲಿ ದಿಟ್ಟ ಹೆಜ್ಜೆ ಇಟ್ಟರು. ಕೆಳಸ್ತರದ ಜನತೆ ಸ್ವಾಭಿಮಾನ, ಸ್ವಾತಂತ್ರ್ಯದಿಂದ ಬದುಕಲು ನಾಂದಿ ಹಾಡಿದರು. ಬಡ ಗೇಣೀದಾರರ ಭಾಗ್ಯದಬಾಗಿಲು ತೆರೆದರು. ಜೀತದಾಳುಗಳಿಗೆ ಮುಕ್ತಿ ನೀಡಿದರು. ದೀನ ದಲಿತರ ಬಾಳಿಗೆ ಬೆಳಕಾದರು.

ಕರ್ನಾಟಕದ ಸರ್ವತೋಮುಖ ಏಳಿಗೆಗಾಗಿ ಸಣ್ಣನೀರಾವರಿ ಯೋಜನೆ, ಕಾಳಿ ಯೋಜನೆ, ವಿದ್ಯುತ್ ಯೋಜನೆ, ಭಾಗ್ಯಜ್ಯೋತಿ ಯೋಜನೆ, ಉಚಿತ ನಿವೇಶನ ಹಂಚಿಕೆ, ವೃದ್ಧಾಪ್ಯವೇತನ ನೀಡಿಕೆ 20 ವರ್ಷ ಸೇವೆ ಸಲ್ಲಿಸಿದ ಸರ್ಕಾರಿ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆ, ವಿದ್ಯಾರ್ಥಿ ನಿಲಯಗಳ ಸ್ಥಾಪನೆ, ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣ ಮೊದಲಾದ ಹಲವಾರು ಪ್ರಗತಿಪರ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದರು. ಕನ್ನಡ ಭಾಷಾಪ್ರೇಮಿಯಾಗಿದ್ದ ಇವರು ಕ್ರಿ.ಶ. 1973 ರಲ್ಲಿ ವಿಶಾಲ ಮೈಸೂರು ರಾಜ್ಯವನ್ನು **'ಕರ್ನಾಟಕ ರಾಜ್ಯ'** ಎಂದು ಮರುನಾಮಕರಣ ಮಾಡಿದರು.

ಡಿ.ದೇವರಾಜ ಅರಸು ಅವರ ಶತಮಾನೋತ್ಸವದ ಆಚರಣೆಯ ಸಂದರ್ಭದಲ್ಲಿ ಅವರ ಹುಟ್ಟೂರು ಕಲ್ಲಹಳ್ಳಿಯನ್ನು ಮಾದರಿ ಗ್ರಾಮವನ್ನಾಗಿ ಮಾಡಿ, ಅವರ ಮನೆಯನ್ನು ಸಂರಕ್ಷಿಸಿ, ಸಂಗ್ರಹಾಲಯವನ್ನಾಗಿ ಮಾಡಲು ನಿರ್ಧರಿಸಿದೆ. ಅಲ್ಲದೆ ವಿದ್ಯಾಸಿರಿ ಯೋಜನೆ, ಅರಸು ಸಮುದಾಯ ಭವನಗಳ ನಿರ್ಮಾಣ, ವಿದ್ಯಾರ್ಥಿ ನಿಲಯಗಳ ಕಟ್ಟಡಗಳ ನಿರ್ಮಾಣ ಹಾಗೂ

ಮೂಲಭೂತ ಸೌಕರ್ಯಗಳ ಪೂರೈಕೆಗೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ನಿರ್ಧರಿಸಿದೆ. ಈ ಮೂಲಕ ಡಿ.ದೇವರಾಜ ಅರಸು ಅವರ ಹೆಸರನ್ನು ಚಿರಸ್ಥಾಯಿಯನ್ನಾಗಿಸಲು ಕ್ರಮಕೈಗೊಂಡಿದೆ.

(ಕರ್ನಾಟಕ) ಅರಣ್ಯ ಇಲಾಖೆ, ವನ್ಯಜೀವಿ ವಿಭಾಗ, ಮೈಸೂರು.
ಅರಣ್ಯ ಸಂರಕ್ಷಣೆಯ ಸ್ತಬ್ದಚಿತ್ರ

ಪ್ರಾಚೀನ ಕಾಲದಿಂದಲೂ ಮಾನವನ ಜೀವನಕ್ಕೂ ಅರಣ್ಯಕ್ಕೂ ಅವಿನಾಭಾವ ಸಂಬಂಧವಿದೆ. 'ಕಾಡಿದ್ದರೆ ನಾಡು' ಎಂಬ ಮಾತು ಜನಜನಿತವಾಗಿದೆ. ಈ ಜಗತ್ತಿನಲ್ಲಿ ಬದುಕುವ ಹಕ್ಕು ಮಾನವನಿಗಷ್ಟೆ ಅಲ್ಲ ಪ್ರಾಣಿಪಕ್ಷಿಗಳಿಗೂ ಇದೆ. ಅಷ್ಟೇ ಏಕೆ ವಿಶ್ವದಲ್ಲಿ ಜೀವ ಸಂಕುಲದ ಅಸ್ತಿತ್ವದಷ್ಟೇ ಸಸ್ಯ ಸಂಕುಲದ ಅಸ್ತಿತ್ವವು ಅಷ್ಟೇ ಮುಖ್ಯವಾಗಿದೆ. ಪರಿಸರದಲ್ಲಿ ಇವುಗಳ ಸಮತೋಲನ ಬಹಳ ಮುಖ್ಯ. ಇದರಲ್ಲಿ ಏರುಪೇರು ಉಂಟಾದರೆ ಭೂಮಿಯ ಅಸ್ತಿತ್ವಕ್ಕೆ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ಪರಿಸರದ ಸಮತೋಲನವನ್ನು ಕಾಪಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಹಾಗೂ ಮುಂದಿನ ಪೀಳಿಗೆಗೆ ಇವುಗಳನ್ನು ಸಂರಕ್ಷಿಸಿ ಬಳುವಳಿಯಾಗಿ ನೀಡುವುದು ನಮ್ಮ ಜವಾಬ್ದಾರಿಯೂ ಹೌದು. ಅದಕ್ಕಾಗಿ ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆ ಹಿಂದಿಗಿಂತ ಇಂದು ಅತ್ಯಗತ್ಯವಾಗಿ ಆಗಬೇಕಾಗಿದೆ.



ಕರ್ನಾಟಕವು ಸಹ ಅಪೂರ್ವವಾದ ಸಸ್ಯ ಸಂಪತ್ತು ಹಾಗೂ ಪ್ರಾಣಿ ಸಂಪತ್ತುಗಳನ್ನು ಹೊಂದಿರುವ ರಾಜ್ಯವಾಗಿದೆ. ಇಲ್ಲಿ ಅನೇಕ ರೀತಿಯ ಸಸ್ಯಗಳ ಮತ್ತು ವನ್ಯಜೀವಿಗಳ ಪ್ರಭೇದಗಳನ್ನು ಕಾಣಬಹುದಾಗಿದೆ. ವಿಶೇಷವಾಗಿ ಹೆಚ್ಚಿನ ಸಂಖ್ಯೆಯ ಹುಲಿಗಳನ್ನು ಹಾಗೂ ಏಷ್ಯನ್ ಮಾದರಿಯ ಆನೆಗಳನ್ನು ಕಾಣಬಹುದಾಗಿದೆ. ಇವುಗಳ ಸಂರಕ್ಷಣೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿ, ರಾಷ್ಟ್ರೀಯ ಉದ್ಯಾನವನ ಎಂದು ಘೋಷಿಸಿ, ಸಂರಕ್ಷಿಸಲಾಗಿದೆ.

'ಹಸಿರೇ ಉಸಿರು', 'ಕಾಡು ಬೆಳೆಸಿ – ನಾಡು ಉಳಿಸಿ', 'ಮನೆಗೊಂದು ಮರ – ಊರಿಗೊಂದು ವನ', ಮರವಿದ್ದರೆ ಮಳೆ – ಮಳೆಯಿದ್ದರೆ ಬೆಳೆ' ಮೊದಲಾದ ಘೋಷಣೆಗಳು ಪರಿಸರದ ಸಂರಕ್ಷಣೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತದೆ. ಮಾನವನ ಅತಿಯಾದ ಸ್ವಾರ್ಥದ ಫಲವಾಗಿ ಅರಣ್ಯವು ಕ್ಷೀಣಿಸುತ್ತಿದೆ. ಇದರಿಂದ ಪ್ರಕೃತಿಯಲ್ಲಿ ಅಸಮತೋಲನ ಉಂಟಾಗಿ ಅತಿವೃಷ್ಠಿ–ಅನಾವೃಷ್ಠಿ ಉಂಟಾಗುತ್ತಿದೆ. ಮಾನವನ ಜೀವನ ದುಸ್ತರವಾಗುತ್ತಿದೆ. ನಾವು ಈ ಬಗ್ಗೆ ಎಚ್ಚರ ವಹಿಸದಿದ್ದರೆ ಜಗತ್ತಿಗೆ ಉಳಿಗಾಲವಿಲ್ಲ. ಆದ್ದರಿಂದ ವಿದ್ಯಾರ್ಥಿಗಳಲ್ಲಿ, ಯುವಜನರಲ್ಲಿ, ಪ್ರತಿಯೊಬ್ಬ ನಾಗರಿಕರಲ್ಲೂ ಜಾಗೃತಿ ಮೂಡಿಸಿ, ನಮ್ಮೆಲ್ಲರ ಅಮೂಲ್ಯ ಸಂಪತ್ತಾಗಿರುವ ಅರಣ್ಯವನ್ನು ಸಂರಕ್ಷಿಸಿ, ಪೋಷಿಸಿ, ಉಳಿಸಬೇಕಾಗಿದೆ.

ಈ ಸ್ತಬ್ಧಚಿತ್ರವು ಅರಣ್ಯ ಸಂಪತ್ತಿನ ಮಹತ್ವವನ್ನು ತಿಳಿಸುತ್ತದೆ. ಪರಿಸರವನ್ನು ಅನುಸರಿಸಬೇಕೆ ಹೊರತು ಅನುಭವಿಸಬಾರದು. ಪ್ರಕೃತಿ ಮುನಿದರೆ ಮನುಷ್ಯನ ಸಂಕುಲವೇ ನಾಶವಾಗುತ್ತದೆ ಎಂಬ ಅರಿವನ್ನು ಈ ಸ್ತಬ್ಧಚಿತ್ರವು ಉಂಟುಮಾಡುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು.

ಅನುಭವ ಮಂಟಪದ ಸ್ತಬ್ದಚಿತ್ರ



'ಅನುಭವ ಮಂಟಪ' – ಬೀದರ ಜಿಲ್ಲೆಯ ಕಲ್ಯಾಣ ಪಟ್ಟಣದಲ್ಲಿ ಕಲಚೂರ್ಯ ಅರಸನಾದ ಬಿಜ್ಜಳನ ಮುಖ್ಯಮಂತ್ರಿಯಾಗಿದ್ದ ಬಸವಣ್ಣನು ಸ್ಥಾಪಿಸಿದ ಒಂದು ತತ್ವ ಜಿಜ್ಞಾಸೆ ಸಂಸ್ಥೆ. ಇದು ಪ್ರಾಯಶಃ ಕ್ರಿ.ಶ. ಸುಮಾರು 1160 ರಲ್ಲಿ ಕಲ್ಯಾಣ ಪಟ್ಟಣದ ತ್ರಿಪುರಾಂತಕ ಕೆರೆಯ ಮೇಲಿನ ತ್ರಿಪುರಾಂತಕರ ಗುಡ್ಡದಲ್ಲಿ ಸ್ಥಾಪಿಸಲ್ಪಟ್ಟಿತ್ತು ಎಂದು ಇತಿಹಾಸಕಾರರು ಹೇಳುತ್ತಾರೆ. ಇದರ ಅಧ್ಯಕ್ಷ ಪೀಠವನ್ನು 'ಶೂನ್ಯ ಸಿಂಹಾಸನ' ಎಂದು ಕರೆಯುತ್ತಾರೆ. ಇದರ ಮೊದಲ ಅಧ್ಯಕ್ಷ ಅಲ್ಲಮ ಪ್ರಭುದೇವ, ಕಾರ್ಯದರ್ಶಿ ಚೆನ್ನಬಸವಣ್ಣ, ಸದಸ್ಯರು ಅಖಿಲ ಭಾರತದ ಶರಣರು. ಇದು ನಾಲ್ಕು ಮಹಾದ್ವಾರ, 36 ಕಂಬಗಳಿಂದ ಕೂಡಿತ್ತು ಎಂದು ತಿಳಿದು ಬರುತ್ತದೆ.

ಅನುಭವ ಮಂಟಪದಲ್ಲಿ ಮಡಿವಾಳ ಮಾಚೀದೇವ, ಅಂಬಿಗರ ಚೌಡಯ್ಯ, ಮೋಳಿಗೆ ಮಾರಯ್ಯ, ಅಯ್ದಕ್ಕಿ ಮಾರಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಸೊನ್ನಲಿಗೆ ಸಿದ್ಧರಾಮ, ಮುಕ್ತಾಯಕ್ಕ, ಅಯ್ದಕ್ಕಿ ಲಕ್ಕಮ್ಮ, ಉರಿಲಿಂಗಪೆದ್ದಿ ಮೊದಲಾದ ಸಮಾಜದ ವಿವಿಧ ವರ್ಗಗಳ ಪುರುಷರು ಮತ್ತು ಮಹಿಳೆಯರು ಸಮಾನವಾಗಿ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ವಿಷಯಗಳ ಚರ್ಚೆಯಲ್ಲಿ ಭಾಗವಹಿಸಿ, ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ದಾಖಲಿಸುತ್ತಿದ್ದರು ಎಂಬುದು ವಿಶೇಷ ಸಂಗತಿಯಾಗಿದೆ.

ಅಲ್ಲಮ ಪ್ರಭುದೇವ: ಅನುಭವ ಮಂಟಪದ ಶೂನ್ಯ ಸಿಂಹಾಸನದ ಮೊದಲ ಅಧ್ಯಕ್ಷ. ಈತನು ಹನ್ನೆರಡನೆಯ ಶತಮಾನದಲ್ಲಿ ಬಳ್ಳಿಗಾವೆಯಲ್ಲಿ ಜನಿಸಿದರು. ಇವನು ಅಂದಿನ ಯಾವುದೇ ಧರ್ಮ, ಮತ ಸಿದ್ಧಾಂತ, ಸಂಪ್ರದಾಯಗಳ ಕಡೆಗೆ ಒಳಪಟ್ಟವನಲ್ಲ. ಅವೆಲ್ಲವನ್ನು ತನ್ನ ನೇರ ಹಾಗೂ ಖಚಿತ ವಿಮರ್ಶೆಗೆ ಗುರಿಪಡಿಸಿದವನಾಗಿದ್ದಾನೆ. ಬಸವಣ್ಣನ ವಿಚಾರ ಕ್ರಾಂತಿಗೆ ತನ್ನ ಜ್ಞಾನ, ವೈರಾಗ್ಯಗಳ ಕಾಮತಿಯನ್ನಿತ್ತು ಮುನ್ನಡೆಸಿದವನು. ಪ್ರಭುದೇವನ ವ್ಯಕ್ತಿತ್ವ ಮತ್ತು ವಚನ ರಚನೆ ಕನ್ನಡ ವಾಙ್ಮಯ ಲೋಕಕ್ಕಲ್ಲದೆ ಭಾರತೀಯ ಹಾಗೂ ಜಾಗತಿಕ ಸಾಹಿತ್ಯಕ್ಕೆ ಅಸಾಧಾರಣ ಕೊಡುಗೆಯಾಗಿದೆ.

ಬಸವಣ್ಣ: ಹನ್ನೆರಡನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ಮನುಕುಲದ ಉದ್ಧಾರಕ್ಕಾಗಿ ಎಲ್ಲಾ ರಂಗದಲ್ಲಿಯೂ ಕ್ರಾಂತಿಗೈದ ಮಹಾಪುರುಷ. ಸಮಾಜದಲ್ಲಿನ ಅನಿಷ್ಟಗಳನ್ನು ತೆಗೆದು ಹಾಕಲು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಜನಜಾಗೃತಿಯನ್ನು ಉಂಟು ಮಾಡಿದ ಮಹಾ ಮಾನವತಾವಾದಿ. ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯ ಇಂಗಳೇಶ್ವರದಲ್ಲಿ ಜನಿಸಿ, ಕೂಡಲ ಸಂಗಮದ ಜಾತವೇ ಮುನಿಗಳಿಂದ ದೀಕ್ಷೆಯನ್ನು ಪಡೆದು, ಕಲ್ಯಾಣದಲ್ಲಿ ಬಿಜ್ಜಳನ ಪ್ರಧಾನಮಂತ್ರಿಯಾಗಿ ಕಾಯಕದಲ್ಲಿ ನಿರತವಾಗಿ, ಅನುಭವ ಮಂಟಪವನ್ನು

ಸ್ಥಾಪಿಸಿ, ಎಲ್ಲಾ ವರ್ಗದ ಜನರಿಗೆ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಚಿಂತನೆ ಮಾಡಲು ಅನುವು ಮಾಡಿಕೊಟ್ಟ ಶರಣಶ್ರೇಷ್ಠ ಬಸವಣ್ಣ.

ಅಕ್ಕ ಮಹಾದೇವಿ: ಅಕ್ಕ ಕನ್ನಡ ಸಾಹಿತ್ಯದ ಪ್ರಪ್ರಥಮ ಕವಯಿತ್ರಿ, ಉಡುತಡಿಯಲ್ಲಿ ಜನಿಸಿ, ಚೆನ್ನಮಲ್ಲಿಕಾರ್ಜುನನನ್ನು ತನ್ನ ಪತಿಯೆಂದು ಸ್ವೀಕರಿಸಿ, ಕಲ್ಯಾಣದಲ್ಲಿ ಶರಣರೊಡನೆ ಆಧ್ಯಾತ್ಮಿಕ ನಿಲುವುಗಳ ಬಗೆಗೆ ಚರ್ಚಿಸಿ, ಶ್ರೀಶೈಲದ ಬಳಿಯ ಕದಳಿ ವನದಲ್ಲಿ ಐಕ್ಯಗೊಂಡ ಮಹಾ ವೈರಾಗ್ಯ ಮೂರ್ತಿ, ಈಕೆಯ ವಚನದಲ್ಲಿ ಸಮಾಜ ವಿಮರ್ಶೆಗಿಂತ ಸ್ವವಿಮರ್ಶೆ ಹೆಚ್ಚಾಗಿ ಕಂಡುಬರುತ್ತದೆ.

ವಚನಕಾರರು ಸಮಾಜದ ಓರೆಕೋರೆಗಳನ್ನು ತಿದ್ದಿ ಸರಳವಾಗಿ ಸಾಮಾನ್ಯರಿಗೂ ಅರ್ಥವಾಗುವಂತೆ ವಚನಗಳನ್ನು ರಚಿಸಿ ಈ ಮೂಲಕ ಜಾತಿಯತೆ, ಮೂಢನಂಬಿಕೆಗಳ ವಿರುದ್ಧವಾಗಿ ಹೋರಾಡಿ ಸ್ತ್ರೀ ಸಮಾನತೆ ಹಾಗೂ ಕಾಯಕ ಮಹತ್ವವನ್ನು ಜಗತ್ತಿಗೆ ಸಾರಿದರು. ಈ ಸ್ತಬ್ಧಚಿತ್ರವು ಸಮಾಜದ ನಾಗರೀಕರಲ್ಲಿ ಸಮಾನತೆ, ಸೋದರಭಾವ ಉಂಟುಮಾಡಿ ಮೂಢನಂಬಿಕೆ, ಜಾತೀಯತೆ ಮತ್ತು ಅನಕ್ಷರತೆಯನ್ನು, ಸ್ತ್ರೀ ಶೋಷಣೆಯನ್ನು ಹೋಗಲಾಡಿಸಲು ಜನರಲ್ಲಿ ಅರಿವನ್ನು ಉಂಟುಮಾಡಲು ಈ ಸ್ತಬ್ಧಚಿತ್ರ ಸಹಕಾರಿಯಾಗಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮೈಸೂರು
ಮಕ್ಕಳ ರಕ್ಷಣೆ ನಮ್ಮೆಲ್ಲರ ಹೊಣೆಯ ಸ್ತಬ್ದಚಿತ್ರ



ಮಕ್ಕಳಿಗೆ ರಕ್ಷಣೆ ನೀಡುವುದು ಪೋಷಕರ, ಸಂಬಂಧಿಕರ, ಅಧಿಕಾರಿಗಳ, ಜನಪ್ರತಿನಿಧಿಗಳ, ಸ್ವಯಂ ಸೇವಾ ಸಂಸ್ಥೆಗಳ ಹಾಗೂ ಪ್ರತಿಯೊಬ್ಬ ನಾಗರಿಕನ ಆದ್ಯಕರ್ತವ್ಯ ಮತ್ತು

ಜವಾಬ್ದಾರಿಯಾಗಿರುತ್ತದೆ. ವಿಶ್ವದಲ್ಲಿ ಪ್ರತಿಯೊಂದು ಮಗುವಿಗೂ ಸಂತೋಷವಾಗಿ ಬದುಕುವ ಹಕ್ಕುಗಳಿವೆ. ರಕ್ಷಿತ ವಾತಾವರಣದಲ್ಲಿ ಯಾವುದೇ ತಾರತಮ್ಯವಿಲ್ಲದೆ ಬಾಲ್ಯವನ್ನು ಸಂತಸದಿಂದ ಅನುಭವಿಸಬೇಕು. ಇದಕ್ಕಾಗಿ ವಿಶ್ವ ಸಂಸ್ಥೆಯು ಕ್ರಿ.ಶ. 1989 ರಲ್ಲಿ **ಮಕ್ಕಳ ಹಕ್ಕುಗಳ ಒಡಂಬಡಿಕೆ**ಯನ್ನು ಜಾರಿಗೆ ತಂದಿತು. ಇದರನ್ವಯ **'ಮಕ್ಕಳ ಹಕ್ಕುಗಳು'** ಎಂಬುವುದರ ಬಗ್ಗೆ ಕ್ರಿ.ಶ. 1989 ನವೆಂಬರ್ 29 ರಂದು ಬಹುತೇಕ ರಾಷ್ಟ್ರಗಳು ಒಪ್ಪಿಕೊಂಡು ಒಡಂಬಡಿಕೆಗೆ ಸಹಿ ಹಾಕಿದವು. ಭಾರತವು ಸಹ ಕ್ರಿ.ಶ. 1992 ಡಿಸೆಂಬರ್ 11 ರಂದು ಈ ಒಡಂಬಡಿಕೆಗೆ ಸಹಿ ಹಾಕಿತು. ಮಕ್ಕಳಿಗೆ ವ್ಯವಸ್ಥಿತವಾದ ರಕ್ಷಣಾ ಜಾಲ ನಿರ್ಮಿಸುವ ಉದ್ದೇಶದಿಂದ **'ಮಕ್ಕಳ ರಕ್ಷಣಾ ಯೋಜನೆ'ಯು** ಕ್ರಿ.ಶ. 2010 ರಲ್ಲಿ ಭಾರತ ದೇಶದಾದ್ಯಂತ ಪ್ರಾರಂಭವಾಗಿ, ಮಕ್ಕಳ ಹಕ್ಕುಗಳನ್ನು ರಕ್ಷಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿದೆ.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಆಶ್ರಯವಿಲ್ಲದೆ ಅನಾಥರಾಗಿ, ಬೀದಿ ಮಕ್ಕಳಾಗಿ, ಸಾಗಾಣಿಕೆಗೆ ಒಳಗಾಗಿ, ಬಾಲ ಕಾರ್ಮಿಕರಾಗಿ, ಬಾಲ್ಯವೇಶ್ಯೆಯರಾಗಿ, ಲೈಂಗಿಕ ದೌರ್ಜನ್ಯ ಹಾಗೂ ಶೋಷಣೆಯಿಂದ ಸಾವಿಗೆ ತುತ್ತಾಗುತ್ತಿದ್ದಾರೆ. ಅಲ್ಲದೆ ಮನೆಯ ಒಳಗೆ – ಹೊರಗೆ, ಶಾಲೆ, ಕೆಲಸ ಮಾಡುವ ಸ್ಥಳ, ಸಾರ್ವಜನಿಕ ಸ್ಥಳ, ಮೊದಲಾದ ಕಡೆಗಳಲ್ಲಿ ಪರಿಚಿತ ಹಾಗೂ ಅಪರಿಚಿತರಿಂದ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಇದರ ನಿವಾರಣೆಗಾಗಿ **'ಬಾಲ ನ್ಯಾಯ ಕಾಯಿದೆ – 2000 (ರಕ್ಷಣೆ ಮತ್ತು ಪೋಷಣೆ)**ಯನ್ನು **ಕ್ರಿ.ಶ. 2006 ರಲ್ಲಿ ತಿದ್ದುಪಡಿ** ಮಾಡಿ, ಸಂಪೂರ್ಣವಾಗಿ ಜಾರಿಗೊಳಿಸಲಾಗಿದೆ. ಈ ಯೋಜನೆಯ ಅಂಗಸಂಸ್ಥೆಗಳಾಗಿ **ಬಾಲ ನ್ಯಾಯ ಮಂಡಳಿ, ಮಕ್ಕಳ ಕಲ್ಯಾಣ ಸಮಿತಿ, ಮಕ್ಕಳ ಸಹಾಯವಾಣಿ–1098, ಕಾಣೆಯಾದ ಮಕ್ಕಳ ಬ್ಯೂರೋ, ಸುಧಾರಣಾ ಸಂಸ್ಥೆಗಳು, ದತ್ತುಸ್ವೀಕಾರ ಕೇಂದ್ರಗಳು, ಮಕ್ಕಳ ವಿಶೇಷ ಪೊಲೀಸ್ ಘಟಕಗಳು** ಕಾರ್ಯನಿರತವಾಗಿವೆ.

ಮಕ್ಕಳ ಮೇಲಿನ ಶೋಷಣೆ ಮತ್ತು ದೌರ್ಜನ್ಯವನ್ನು ತಡೆಗಟ್ಟಲು, **ಪ್ರಸವ ಪೂರ್ವಲಿಂಗಪತ್ತೆ ಕಾಯಿದೆ, ಲೈಂಗಿಕ ದೌರ್ಜನ್ಯ ತಡೆ ಕಾಯಿದೆ, ಬಾಲ ಕಾರ್ಮಿಕ ಪದ್ಧತಿ ನಿಷೇಧ ಕಾಯಿದೆ, ಬಾಲ್ಯ ವಿವಾಹ ನಿಷೇಧ ಕಾಯಿದೆ, ಮಕ್ಕಳ ಅನೈತಿಕ ಸಾಗಾಣಿಕೆ ಕಾಯಿದೆ**ಗಳನ್ನು ಜಾರಿಗೊಳಿಸುವುದರ ಮೂಲಕ ಹಲವಾರು ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈ ಕಾಯಿದೆಗಳ ಅನ್ವಯ ಮಕ್ಕಳ ಮೇಲೆ ಶೋಷಣೆ ಮತ್ತು ದೌರ್ಜನ್ಯವನ್ನು ಎಸಗುವ **ಅಪರಾಧಿಗಳಿಗೆ ದಂಡ ವಿಧಿಸುವುದರೊಂದಿಗೆ ಗರಿಷ್ಠ 10 ವರ್ಷಗಳವರೆಗೆ ಕಾರಾಗೃಹ ವಾಸ ಶಿಕ್ಷೆಯನ್ನು** ವಿಧಿಸಲಾಗುತ್ತದೆ. ಈ ಕಾಯಿದೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಶಾಸಕಾಂಗ, ನ್ಯಾಯಾಂಗಗಳು ಹಾಗೂ ಕಾರ್ಯಾಂಗವೂ ನಾಗರಿಕರ

ಜೊತೆಗೆ ಕೈಜೋಡಿಸಿ ಕಾರ್ಯ ಪ್ರವೃತ್ತರಾಗ ಬೇಕಾಗಿದ್ದು ಈ ಮೂಲಕ ಮಕ್ಕಳ ಬಾಲ್ಯವನ್ನು ಹಸನಾಗಿಸಿ, ದೇಶದ ಭವಿಷ್ಯವನ್ನು ಉಜ್ವಲಗೊಳಿಸಬೇಕಾಗಿದೆ.

ಮಡಿಕೇರಿಯಲ್ಲಿ ದಸರಾ ಸ್ತಬ್ಧಚಿತ್ರಗಳು

ಕರ್ನಾಟಕದ ಇತಿಹಾಸದಲ್ಲಿ ಕೊಡಗಿಗೆ ವಿಶೇಷವಾದ ಸ್ಥಾನವಿದೆ. ಇತ್ತೀಚೆಗೆ ಮಡಿಕೇರಿಯಲ್ಲಿ ಆಚರಿಸಲಾಗುತ್ತಿರುವ ದಸರಾ ಬಹಳ ಪ್ರಸಿದ್ಧಿ ಪಡೆಯುತ್ತಿದೆ. ವಿಜಯ ದಶಮಿಯಂದು ರಾತ್ರಿಯಿಡೀ ನಡೆಯುವ ದಸರಾ ಉತ್ಸವ ಭವ್ಯವಾಗಿರುತ್ತಿದ್ದು, ರಾಜ್ಯದಾದ್ಯಂತ ಜನರನ್ನು ಆಕರ್ಷಿಸುತ್ತಿದೆ. ಮಡಿಕೇರಿ ದಸರಾಕ್ಕೆ 150 ವರ್ಷಗಳ ಇತಿಹಾಸವಿರುವುದು ಕಂಡುಬರುತ್ತದೆ. ಸುಮಾರು 150 ವರ್ಷಗಳ ಹಿಂದೆ ಕೊಡಗಿನಲ್ಲಿ ಭಯಂಕರವಾದ ಅನೇಕ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡವು. ಆ ಸಮಯದಲ್ಲಿ ಆರ್ಥಿಕ ಸಮಸ್ಯೆಯೂ ತಲೆದೋರಿತ್ತು. ಜನರು ಬಹಳ ಕಷ್ಟ ನಷ್ಟ ಅನುಭವಿಸಿದ್ದರು. 'ಕಷ್ಟದ ಸಮಯದಲ್ಲಿ ಜನರು ಸಾಮಾನ್ಯವಾಗಿ ದೇವರಮೊರೆ ಹೋಗುವಂತೆ' ಅಲ್ಲಿನ ಜನರು ಮಡಿಕೇರಿ ನಗರದಲ್ಲಿರುವ ನಾಲ್ಕು ಶಕ್ತಿದೇವತೆಗಳನ್ನು ಕರಗದ ಉತ್ಸವದ ರೂಪದಲ್ಲಿ ದೊಡ್ಡಪೇಟೆಗೆ ತಂದು ನಗರಪ್ರದಕ್ಷಿಣೆ ಮಾಡಿಸುವ ಸಂಕಲ್ಪ ಮಾಡಿದಂತೆ ಕಂಡುಬರುತ್ತದೆ.

ಮಡಿಕೇರಿ ನಗರದಲ್ಲಿ 'ಕಂಚಿ ಕಾಮಾಕ್ಷಿಯಮ್ಮ', 'ದಂಡಿನ ಮಾರಿಯಮ್ಮ', 'ಕೋಟೆ ಮಾರಿಯಮ್ಮ' ಹಾಗೂ 'ಚೌಟಿ ಮಾರಿಯಮ್ಮ' ಎಂಬ ನಾಲ್ಕು ಶಕ್ತಿದೇವತೆಗಳ ದೇವಸ್ಥಾನಗಳಿವೆ. ಇವು ಮಾರಿಯಮ್ಮನ ದೇವಸ್ಥಾನಗಳು, ಕರ್ನಾಟಕದಲ್ಲಿ ಸಾಮಾನ್ಯವಾಗಿ 'ಮಾರಮ್ಮ ದೇವಾಲಯ'ಗಳಿದ್ದರೆ, ಕೊಡಗಿನಲ್ಲಿ 'ಮಾರಿಯಮ್ಮನ ದೇವಾಲಯ'ಗಳಿವೆ. 'ಮಾರಿಯಮ್ಮ' ಎಂದು ಮಾರಮ್ಮನನ್ನು ಕರೆಯುವ ವಾಡಿಕೆ ಇರುವುದು ತಮಿಳುನಾಡಿನಲ್ಲಿ. ಹೀಗಿರುವುದರಿಂದ ತಮಿಳುನಾಡಿಗೂ ಕೊಡಗಿಗೂ ಎಲ್ಲಿಯ ಸಂಬಂಧ? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

ಸ್ಥಳೀಯರು ತಿಳಿಸುವ ಪ್ರಕಾರ ಕೊಡಗು ವಿಶೇಷ ಹವಾಮಾನ ಹೊಂದಿರುವ ಪ್ರದೇಶ. ಇಲ್ಲಿ ಮಳೆಯೂ ಜಾಸ್ತಿ, ಚಳಿಯೂ ಜಾಸ್ತಿ. ಈ ಕಾರಣದಿಂದ ಹೊರಗಿನವರು ಬಂದರೆ ಇಲ್ಲಿಯ ಹವೆಗೆ ಒಗ್ಗಿಕೊಳ್ಳುವುದು ಕಷ್ಟ. ಕೊಡಗಿನಲ್ಲಿ ಹೇರಳವಾದ ಕಾಫಿ ತೋಟಗಳಿವೆ. 'ಇಲ್ಲಿಗೆ ಅಗತ್ಯವಾದ ಕೂಲಿ ಕಾರ್ಮಿಕರು ಪೂರ್ಣವಾಗಿ ಕೊಡಗಿನಲ್ಲಿ ಲಭ್ಯವಾಗುವುದಿಲ್ಲ. ಹೊರಗಿನಿಂದ ಬರುವವರಿಗೆ ಇಲ್ಲಿಯ ಹವೆ ಹೊಂದಾಣಿಕೆಯಾಗದೆ ಕಾಯಿಲೆಗೆ ತುತ್ತಾಗುತ್ತಾರೆ'. ಇಂತಹ ಒಂದು ಸಮಸ್ಯೆ ಬಹಳ ಹಿಂದಿನಿಂದಲೂ ಇದೆ. ಆದರೆ ಯಾವಾಗಲೋ 'ತಮಿಳುನಾಡಿನಿಂದ ವಲಸೆ ಬಂದ ಜನ, ಅದು

ಹೇಗೋ ಇಲ್ಲಿಯ ಹವೆಗೆ ಹೊಂದಿಕೊಂಡರು. ಅವರು ಕಾಫಿತೋಟಗಳ ಕೂಲಿಗಳಾಗಿ ಕೆಲಸ ನಿರ್ಮಿಸಿ ಇಲ್ಲಿಯೇ ನೆಲೆಸಿದರು'.

ತಮಿಳು ಜನರ ಸ್ವಭಾವ ಎಂದರೆ ಭಾಷೆಯ ಆಧಾರದ ಮೇಲೆ ಬೇಗ ಒಂದುಗೂಡುತ್ತಾರೆ. ಹೀಗೆ ಒಂದುಗೂಡಿದಾಗ ಅಲ್ಲಿ ಒಂದು ಸಣ್ಣದಾದ ತಮಿಳರ ವಸಾಹತು ನಿರ್ಮಾಣವಾಗುತ್ತದೆ. ಅವರು ಕೇವಲ ಬಿಡಿಬಿಡಿ ಜನರಾಗಿ ಇಲ್ಲಿಗೆ ಬರದೆ ಅಲ್ಲಿನ ಸಂಸ್ಕೃತಿಯನ್ನು ಹೊತ್ತು ತರುತ್ತಾರೆ. ಅವರು ಗುಂಪು ಸೇರಿದೆಡೆ ಅವರದ್ದೇ ಆದ ಪೂಜೆ, ಹಬ್ಬ, ಹರಿದಿನಗಳನ್ನು ಆಚರಿಸುತ್ತಾರೆ. 'ಮಾರಮ್ಮನ ದೇವಸ್ಥಾನ' ಅವರ ಪ್ರಥಮ ಆದ್ಯತೆಯಾಗಿ ಕಂಡುಬರುತ್ತದೆ. ಅದರಲ್ಲೂ ಅನಾರೋಗ್ಯಪೀಡಿತ ಪ್ರದೇಶಗಳಲ್ಲಿ ಅದರ ನಿವಾರಣೆಗಾಗಿ ಅವರು ಮಾರಿಯಮ್ಮನ ಮೊರೆ ಹೋಗುತ್ತಾರೆ. ಅಲ್ಲಲ್ಲಿ ಮಾರಿಯಮ್ಮನ ದೇವಾಲಯ ಸ್ಥಾಪಿಸುತ್ತಾರೆ.

ಇದೇ ಪದ್ಧತಿ ಕೊಡಗಿನಲ್ಲೂ ಬಂದಿದೆ. ತಮಿಳು ಕೂಲಿಕಾರ್ಮಿಕರು ಮಡಿಕೇರಿಯ ವಿವಿಧ ಭಾಗಗಳಲ್ಲಿ ತಮ್ಮ ನೆಲೆ ಸ್ಥಾಪಿಸಿಕೊಳ್ಳುವುದರ ಜೊತೆಗೆ ಮೇಲೆ ಹೇಳಿದಂತೆ ಕಂಚಿ ಕಾಮಾಕ್ಷಿಯಮ್ಮ, ದಂಡಿನ ಮಾರಿಯಮ್ಮ, ಕೋಟೆ ಮಾರಿಯಮ್ಮ ಹಾಗೂ ಕುಂದೂರು ಮೊಟ್ಟೆ ಚೌಟಿ ಮಾರಿಯಮ್ಮ ಎಂಬ ಮಾರಿಯಮ್ಮನ ದೇವಸ್ಥಾನಗಳನ್ನು ನಿರ್ಮಿಸಿದರು. ತಮಿಳರು ಅವುಗಳಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಇದನ್ನು ಅಲ್ಲಿನ ಕೊಡಗಿನವರೂ ಅನುಸರಿಸಿದ ಪರಿಣಾಮ ಅವು ಮಡಿಕೇರಿಯ ಮಾರಿಯಮ್ಮನ ದೇವಾಲಯಗಳಾಗಿ ಮಾರ್ಪಾಟು ಹೊಂದಿದವು. ಇವುಗಳನ್ನು ಶಕ್ತಿದೇವತೆಗಳಂತೆ ಆರಾಧಿಸುವುದು ಪ್ರಾರಂಭವಾಯಿತು ಎಂದು ತಿಳಿದುಬರುತ್ತದೆ.

ಈಗಾಗಲೇ ತಿಳಿಸಿರುವಂತೆ ಸುಮಾರು 150 ವರ್ಷಗಳ ಹಿಂದೆ ಸಾಂಕ್ರಾಮಿಕ ರೋಗಗಳು ಮಡಿಕೇರಿಯಲ್ಲಿ ಜಾಸ್ತಿಯಾದಾಗ ಮಡಿಕೇರಿ ಜನರು ಈ ನಾಲ್ಕು ಶಕ್ತಿದೇವತೆಗಳ ಮೆರವಣಿಗೆ ಮಾಡಿ, ಇಂತಹ ಸಾಂಕ್ರಾಮಿಕ ರೋಗಗಳಿಂದ ಆ ದೇವಿ ಮುಕ್ತಿನೀಡಲಿ ಎಂದು ಪ್ರಾರ್ಥಿಸಿ, ಅವುಗಳನ್ನು ನಗರದ ಎಲ್ಲೆಡೆ ಪ್ರದಕ್ಷಿಣೆ ಮಾಡುವ ಸಂಪ್ರದಾಯವನ್ನು ಜಾರಿಗೆತಂದರು ಎಂದು ಕಂಡುಬರುತ್ತದೆ. ನವರಾತ್ರಿಯ ಸಮಯದಲ್ಲಿ ಇಡೀ ದೇಶದಲ್ಲಿ ಹಿಂದುಗಳು ದುರ್ಗಿಯನ್ನು, ಮಾರಿಯಮ್ಮನನ್ನು ಆರಾಧಿಸುವ ಪದ್ಧತಿ ನಡೆದುಕೊಂಡು ಬಂದಿದೆ. ಬಹುಶಃ ಇದೇ ಪದ್ಧತಿ ಮಡಿಕೇರಿಯಲ್ಲೂ ನಡೆಯುತ್ತಿದೆ. ದುರ್ಗೆ, ಚಾಮುಂಡಿ, ಮಾರಿಯಮ್ಮ ಇವೆಲ್ಲಾ ದೇವಿಯ ವಿವಿಧ ರೂಪಗಳೇ ಆಗಿರುವುದರಿಂದ ಇಲ್ಲಿ ನವರಾತ್ರಿ ಸಮಯದಲ್ಲಿ ವಿಶೇಷ ಪೂಜೆಗಳು ನಡೆಯುತ್ತಿದ್ದುದು ಕಂಡುಬರುತ್ತದೆ. ಇದು ಕಾಲಕ್ರಮದಲ್ಲಿ ದಸರಾ ರೂಪದಲ್ಲಿ ಬದಲಾವಣೆ ಹೊಂದಿ, ಇಂದು 'ಮಡಿಕೇರಿ ದಸರಾ' ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಿದೆ.

ನಾಗರಿಕತೆ ಬೆಳೆದಂತೆ ಆಚರಣೆಯಲ್ಲೂ ಸಹಜವಾದ ಬದಲಾವಣೆ ಕಂಡುಬಂದಿರುತ್ತದೆ. ಆರಂಭದಲ್ಲಿ ನಾಲ್ಕು ಮಾರಿಯಮ್ಮ ದೇವಸ್ಥಾನಗಳ ನಾಲ್ಕು ಕರಗಗಳು ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದವು. ನಂತರ ನಗರದ ಉಳಿದ ಪ್ರಮುಖ ದೇವಸ್ಥಾನಗಳಿಂದಲೂ ಕರಗಗಳು ಇದರೊಟ್ಟಿಗೆ ಕೂಡಿಕೊಳ್ಳಲು ಪ್ರಾರಂಭಿಸಿದವು. ಇಂದು ನಗರದಲ್ಲಿ ಹತ್ತು ಕರಗಗಳು ಒಟ್ಟಿಗೆ ಸೇರುತ್ತವೆ. ಕರಗಗಳು 'ಮಂಟಪ'ಗಳಾಗಿ ಬದಲಾಗಿವೆ. ಇವು ನವೀನ ತಂತ್ರಗಳನ್ನು ಬಳಸಿಕೊಂಡು ಆಕರ್ಷಕ ಸ್ತಬ್ಧ ಚಿತ್ರಗಳಾಗಿ ರೂಪುಗೊಂಡು 'ದಶಮಂಟಪ'ಗಳ ಮೆರವಣಿಗೆ ಎಂಬ ಹೆಸರು ಪಡೆದಿದೆ. ಆರಂಭದಲ್ಲಿ ಪಲ್ಲಕ್ಕಿಯಲ್ಲಿ ದೇವರ ಮೆರವಣಿಗೆ ನಡೆಯುತ್ತಿತ್ತು. ನಂತರ ಪಲ್ಲಕ್ಕಿಯಿಂದ ಮಣಿಮಂಟಪ, ಮಣಿಮಂಟಪದಿಂದ ಮೋಟಾರು ಗಾಡಿಯಲ್ಲಿ ಮಂಟಪ ಹೊರಡಿಸುವಂತಹ ಬದಲಾವಣೆ ಆಗಿದೆ. ಆರಂಭದಲ್ಲಿ ದೇವರ ಫೋಟೋಗಳಿದ್ದದ್ದು, ಪೇಪರ್ ಮೌಲ್ಡಿಂಗ್‌ನಲ್ಲಿ ದೇವತೆಗಳ ಬೊಂಬೆ ರಚನೆಗೆ ಬದಲಾಯಿತು. 'ದೊಂದಿ'ಯೊಂದಿಗೆ ಆರಂಭವಾಗುತ್ತಿದ್ದ ಮೆರವಣಿಗೆ ಕ್ರಮೇಣ ಗ್ಯಾಸ್‌ಲೈಟ್ ಬೆಳಕು ಕಂಡಿತು. ನಂತರ ವಿದ್ಯುತ್ ದೀಪಗಳು ಬಂದಿದ್ದು, ಇಂದು ವಿಜಯದಶಮಿಯಂದು ದಶಮಂಟಪಗಳು ವಿದ್ಯುತ್ ಅಲಂಕಾರದಿಂದ ಕಂಗೊಳಿಸುತ್ತವೆ. ಇದರೊಡನೆ ಜನಪದ ನೃತ್ಯಗಳು, ನಾದಸ್ವರದೊಂದಿಗೆ ಪಾಶ್ಚಾತ್ಯ ವಾದ್ಯಗೋಷ್ಠಿಗಳು ಸೇರುತ್ತಿದ್ದು, ಮತ್ತಷ್ಟು ಆಧುನಿಕತೆಗೆ ತೆರೆದುಕೊಳ್ಳಲು ಮಡಿಕೇರಿ ದಸರಾ ಸರ್ವವಿಧದಲ್ಲೂ ಸಜ್ಜಾಗಿದೆ.

ಮಡಿಕೇರಿ ದಸರಾ ಉತ್ಸವವನ್ನು ವಿಜೃಂಭಣೆಯಿಂದ ಹಾಗೂ ಶಿಸ್ತುಬದ್ಧವಾಗಿ ನಡೆಸುವ ಸಲುವಾಗಿ 'ಮಡಿಕೇರಿ ನಗರ ದಸರಾಸಮಿತಿ' 1987 ರಲ್ಲಿ ಅಸ್ತಿತ್ವಕ್ಕೆ ಬಂದಿತು. ಈ ಸಮಿತಿಯ ನೋಂದಾಯಿತ ಸಮಿತಿಯಾಗಿದ್ದು, ಮಡಿಕೇರಿಯ ಪುರಸಭಾ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಈ ಸಮಿತಿಯ 'ಉತ್ಸವದ ದೃಷ್ಟಿಯಿಂದ ಬೈಲಾ ನಿಯಮ ಹಾಗೂ ನಿಬಂಧನೆಗಳನ್ನು ರಚಿಸಿ', ಮುದ್ರಿತ ಪ್ರತಿಗಳನ್ನು ಸಿದ್ಧಪಡಿಸಿದೆ. ಈ ಬೈಲಾಗೆ 1997 ರಲ್ಲಿ ತಿದ್ದುಪಡಿಯೂ ಆಗಿದೆ. ಈ ಬೈಲಾ ನಿಯಮಾವಳಿಯಂತೆ ಪುರಸಭೆಯ ಅಧ್ಯಕ್ಷರೇ ದಸರಾಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಒಂದು ವೇಳೆ ಪುರಸಭಾ ಸಮಿತಿಯ ಅವಧಿ ಮುಗಿದು ತಕ್ಷಣ ಚುನಾವಣೆ ನಡೆಯದೆ ಆಡಳಿತಾಧಿಕಾರಿಗಳ ನೇಮಕವಾದರೆ ಆಡಳಿತಾಧಿಕಾರಿಯು ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಇದರ ಕಾರ್ಯಾಧ್ಯಕ್ಷರಾಗಿ ಸಾರ್ವಜನಿಕ ಕ್ಷೇತ್ರದಿಂದ ಒಬ್ಬರನ್ನು ಆರಿಸಲಾಗುತ್ತದೆ. ಅವರು ದೇವಾಲಯದ ಸಾರ್ವಜನಿಕ ಕ್ಷೇತ್ರದಲ್ಲಿ ಮಾನ್ಯತೆ ಪಡೆದವರಾಗಿರಬೇಕು.

ದಸರಾ ಉತ್ಸವದಲ್ಲಿ ದಶಮಂಟಪಗಳ ಶೋಭಾಯಾತ್ರೆ ನಡೆಯುತ್ತದೆ. ರಾತ್ರಿ ನಡೆಯುವ ಉತ್ಸವದಲ್ಲಿ ದಶಮಂಟಪಗಳ ಶೋಭಾಯಾತ್ರೆ ನಡೆಯುತ್ತದೆ. ರಾತ್ರಿ ನಡೆಯುವ ಈ ಶೋಭಾಯಾತ್ರೆಯಲ್ಲಿ ಮಡಿಕೇರಿ ನಗರಕ್ಕೆ ಕಿನ್ನರ ಲೋಕದ ಮೆರಗು ನೀಡುತ್ತದೆ. ಮೆರವಣಿಗೆ ವೀಕ್ಷಿಸಲು ಸಾವಿರಾರು ಜನರು ಸೇರುತ್ತಾರೆ. ಇಲ್ಲಿನ ಮೆರವಣಿಗೆಗೆ ತರುವ ಮಂಟಪಗಳಿಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಲಾಗುತ್ತದೆ. ನವರಾತ್ರಿಯಲ್ಲಿ ನಡೆಯುವ ಈ ಮಂಟಪಗಳ ತಯಾರಿಗೆ ಸಾಕಷ್ಟು ಮುಂಚೆಯೇ ಕೆಲಸ ಪ್ರಾರಂಭಿಸಲಾಗಿರುತ್ತದೆ. ವರ್ಷದಿಂದ ವರ್ಷಕ್ಕೆ ಇವು ಆಕರ್ಷಣೀಯವಾಗಲು ಪೈಪೋಟಿ ನಡೆಸುತ್ತವೆ.

ಇಲ್ಲಿ ಒಂದು ಅಂಶವನ್ನು ಗಮನಿಸಬಹುದು. ದಸರಾ ಉತ್ಸವಕ್ಕೆ ಎಷ್ಟೇ ಆಧುನಿಕ ಮೆರಗು ಬಂದರೂ ಸಹಾ ಮೆರವಣಿಗೆಯಲ್ಲಿ ಭಾಗವಹಿಸುವ ದಶಮಂಟಪಗಳನ್ನು ಪುರಾಣದ ಕಥೆಗಳನ್ನು ಆಧರಿಸಿಯೇ ತಯಾರಿಸಲಾಗುತ್ತದೆ. ಮಂಟಪಕ್ಕೆ ಆಧುನಿಕತೆಯನ್ನು ಜೋಡಿಸ ಲಾಗುತ್ತದೆ. ಅಷ್ಟರಮಟ್ಟಿಗೆ ಇದು ತನ್ನ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದೆ. ಈ ರೀತಿಯಲ್ಲಿ ಮಡಿಕೇರಿ ದಸರಾ ಉತ್ಸವ ಜನಮನ್ನಣೆಗೆ ಪಾತ್ರವಾಗಿದೆ. ಮೈಸೂರಿನಲ್ಲಿ ದಸರಾ ಮೆರವಣಿಗೆ ಸಂಜೆಯೊಳಗೆ ಮುಕ್ತಾಯವಾಗುವುದರಿಂದ ಸಾಕಷ್ಟು ಜನರು ಮೈಸೂರು ದಸರಾ ನೋಡಿದ ನಂತರ ಮಡಿಕೇರಿಗೆ ತೆರಳಿ ಮಡಿಕೇರಿ ದಸರಾವನ್ನು ವೀಕ್ಷಿಸುತ್ತಾರೆ. ಈ ರೀತಿ ಇದು ಜನಾಕರ್ಷಕ ಉತ್ಸವವಾಗಿ ಕಂಡುಬರುತ್ತದೆ. ಇತ್ತೀಚೆಗೆ ಮೈಸೂರು ಮಡಿಕೇರಿ ರಸ್ತೆ ಉತ್ತಮವಾಗಿ ಅಭಿವೃದ್ಧಿಯಾಗಿರುವುದರಿಂದ ಪ್ರಯಾಣವೂ ಹಿತಕರವಾಗಿರುತದೆ.

ಮಡಿಕೇರಿ ದಸರಾ ದಶಮಂಟಪಗಳು

ಮಡಿಕೇರಿ ದಸರಾ ಎಂದಾಕ್ಷಣಾ ಜಗಮಗಿಸುವ ವಿದ್ಯುತ್ ಬೆಳಕಿನ ಶೋಭಾಯಾತ್ರೆಯಲ್ಲಿ ಸಾಗುವ ದಶಮಂಟಪಗಳು ಹಾಗೂ ನಾಲ್ಕು ಶಕ್ತಿದೇವತೆಯ ಕರಗಳನ್ನು ನಮ್ಮ ಕಣ್ಮುಂದೆ ಹಾದು ಹೋಗುತ್ತದೆ.

ಹಾಗೆ ನೋಡಿದರೆ ದಸರಾದಲ್ಲಿ ಪಾಲ್ಗೊಳ್ಳುವ ದಶಮಂಟಪಗಳು ದಶ ದೇವಾಲಯಗಳನ್ನು ಪ್ರತಿನಿಧಿಸುತ್ತವೆ. ಪ್ರತಿ ದೇವಾಲಯಗಳು ಕೂಡ ಧಾರ್ಮಿಕ ಹಿನ್ನಲೆಯನ್ನು ಹೊಂದಿದ್ದು, ಈ ದೇಗುಲಗಳ ಕಾರ್ಯಕರ್ತರು ಹಗಲಿರುಳು ಎನ್ನದೆ ಬೆವರು ಸುರಿಸಿ ಶ್ರಮಪಟ್ಟು ನಿರ್ಮಿಸಿದ ಮಂಟಪಗಳೇ ಮಡಿಕೇರಿ ದಸರಾದ ಪ್ರಮುಖ ಆಕರ್ಷಣೆ ಎಂದರೆ ತಪ್ಪಾಗಲಾರದು. ಈ

ದೇವಾಲಯಗಳ ಕಾರ್ಯಕರ್ತರ ಶ್ರಮದ ಪ್ರತಿಫಲದಿಂದ ದಸರಾ ದಿನಂದು ಮಡಿಕೇರಿ ಝುಗಝುಗಿಸುವ ಬೆಳಕಿನ ನಗರವಾಗಿ ಸ್ವರ್ಗಲೋಕವೇ ಧರೆಗಿಳಿದು ಬಂದಂತೆ ಕಂಗೋಲಿಸುತ್ತದೆ.

ದಶದೇಗುಲಗಳು.... ದಶಮಂಟಪಗಳೂ.... ಮಡಿಖೇರಿ ದಸರಾಕ್ಕೆ ಕಳೆಕಟ್ಟುವಲ್ಲಿ ನಗರದಲ್ಲಿರುವ ಪ್ರಮುಖ ಹತ್ತು ದೇವಾಲಯಗಳು ಕಾರಣವಾಗಿವೆ. ಈ ದೇವಾಲಯಗಳ ವತಿಯಿಂದ ನಿರ್ಮಿಸಲಾಗುವ ಭವ್ಯಮಂಟಪಗಳೇ ದಸರಾದ ಪ್ರಮುಖ ಆಕರ್ಷಣೆಗಳಾಗಿವೆ.

ದಸರಾ ಆರಂಭವಾಗಲು ಮೂರ್ನಾಲ್ಕು ತಿಂಗಳು ಇರುವಂತೆಯೇ ದೇವಾಲಯದ ಮಂಟಪಗಳ ಸಮಿತಿಯ ಸದಸ್ಯರು ಮಂಟಪವನ್ನು ಅದ್ಧೂರಿಯಾಗಿ ತಯಾರು ಮಾಡುವ ಸಿದ್ಧತೆಯಲ್ಲಿ ತೊಡಗುತ್ತಾರೆ. ಊರೂರು ಸುತ್ತಿ ಜನರಿಂದ ತನು ಮನ ಧನದ ಸಹಾಯ ಪಡೆಯುತ್ತಾರೆ. ಬಳಿಕ ಪೌರಾಣಿಕ ಕಥಾ ಹಂದರಲ್ಲಿ ದೇವರ ಹಾಗೂ ದಾನವರ ಕಲಾಕೃತಿಗಳನ್ನು ಸಂಬಂಧಿಸಿದ ನುರಿತ ಕಲಾವಿದರಿಂದ ತಯಾರು ಮಾಡುತ್ತಾರೆ. ಆ ನಂತರ ಅದಕ್ಕೆ ಬೇಕಾದ ಚಲನವಲನಕ್ಕೋಸ್ಕರ ತಂತ್ರಜ್ಞರ ಸಹಾಯ ಪಡೆಯುತ್ತಾರೆ. ದೂರದ ದಿಂಡಿಗಲ್ಲಿನಿಂದ ಲೈಂಟಿಂಗ್, ಕೇರಳದ ಪೂಕೋಡಿನಿಂದ ಬ್ಯಾಂಡನ್ನು ಕರೆಸಲಾಗುತ್ತದೆ. ಹೀಗೆ ಸುಮಾರು 5 ರಿಂದ 10 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತಯಾರಾದ ಮಂಟಪಗಳು ದಸರಾ ದಿನದಂದು ನಡೆಯುವ ಶೋಭಾಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದ್ದರೆ ಅದನ್ನು ಹತ್ತಿರದಿಂದ ವೀಕ್ಷಿಸಿದ ಪ್ರತಿಯೊಂದು ದೇವಲೋಕವೇ ಧರೆಗಿಳಿದು ಬಂದಿದೆಯೇನೋ ಎಂಬಂತೆ ಭಾಸವಾಗದಿರದು.

ಇನ್ನು ಮಡಿಕೇರಿ ದಸರಾ ಶೋಭಯಾತ್ರೆಯಲ್ಲಿ ಪಾಲ್ಗೊಳ್ಳುವ ಶ್ರೀ ಪೇಟೆ ರಾಮಮಂದಿರ, ಶ್ರೀಕೋಟೆಮಾರಿಯಮ್ಮ, ಶ್ರೀ ಕಂಚಿಕಾಮಾಕ್ಷಿಯನ್ನು ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ಶ್ರೀ ದಂಡಿನ ಮಾರಿಯಮ್ಮ, ಶ್ರೀ ಕೋದಂಡರಾಮ ಮಂದಿರ, ಶ್ರೀ ಚೌಡೇಶ್ವರಿ, ಶ್ರೀ ದೇಚೂರು ರಾಮಮಂದಿರ, ಕರವಲೆ ಬಾಡಗದ ಶ್ರೀ ಭಗವತಿ ಹಾಗೂ ಶ್ರೀ ಕೋಟೆಗಣಪತಿ ದೇವಾಲಯಗಳ ದಶಮಂಟಪಗಳ ದೇಗುಲಗಳಿಗೂ ತನ್ನದೇ ಆದ ಇತಿಹಾಸವಿರುವುದನ್ನು ನಾವು ಕಾಣಬಹುದು.

ಪೇಟೆ ಶ್ರೀರಾಮಮಂದಿರ: ಮಡಿಕೇರಿ ನಗರದ ಕಾಲೇಜು ರಸ್ತೆಯಿಂದ ಹಿಲ್ ರಸ್ತೆಗೆ ಹೊಂದಿಕೊಂಡಂತೆ ಹೃದಯಭಾಗದಲ್ಲಿರುವ ಪೇಟೆ ಶ್ರೀರಾಮಮಂದಿರವು ಸುಮಾರು 188ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿದೆ. 1824 ರಲ್ಲಿ ನವರಾತ್ರಿ ಸಂದರ್ಭ ಕರಗವನ್ನು ಕೊಡರಿಸಲು ವಿಷ್ಣು ದೇವಾಲಯವಿಲ್ಲದ ಸಂದರ್ಭ ಪೂಜಾ ಕೈಂಕರ್ಯಗಳನ್ನು ನೆರವೇರಿಸಲು ಪೂಜಾಮಂದಿರವನ್ನು ಕಟ್ಟಲಾಗಿದ್ದು, ಅಂದು ಶ್ರೀ ರಾಮನ ಚಿತ್ರಪಟವನ್ನಿಟ್ಟು ಪೂಜಿಸಲಾಗಿತ್ತು.

(ಪಟ ಈಗಲೂ ಇಲ್ಲಿರುವುದನ್ನು ಕಾಣಬಹುದು.) ದಸರಾ ಆಚರಣೆಗೆಂದು ನಿರ್ಮಾಣಗೊಂಡ ಪೂಜಾ ಮಂದಿರ 1930 ರವರೆಗೂ ಭಜನಾಮಂದಿರವಾಗಿಯೇ ಮುಂದುವರೆದಿತ್ತು. ಆ ದಿನಗಳಲ್ಲಿ ಇದನ್ನು ಶ್ರೀರಾಮ ಭಜನಾ ಮಂದಿರ ಎಂದೇ ಕರೆಯಲಾಗುತ್ತಿತ್ತು. ನಂತರದ ದಿನಗಳಲ್ಲಿ ಪೇಟೆಯ ಮಧ್ಯದಲ್ಲಿದ್ದುದರಿಂದಲೋ ಏನೋ ಪೇಟೆ ರಾಮಮಂದಿರ ಎಂದೇ ಹೆಸರಾಯಿತು. ಕ್ರಮೇಣ ಅಭಿವೃದ್ಧಿಯಾಗುತ್ತಾ ಸಾಗಿದೆ. 1942 ರಲ್ಲಿ ಭಕ್ತಾಧಿಯೊಬ್ಬರು ಇಲ್ಲಿಗೆ ರಂಗೂನ್ನಿಂದ ತಂದ ಬುದ್ಧನ ವಿಗ್ರಹವೊಂದನ್ನು ಅಪಹರಿಸಿದ್ದಾರೆ. ದೇವಾಲಯದ ಮುಂಭಾಗದಲ್ಲಿ ಸ್ಥಾಪಿತಗೊಂಡಿರುವ ವಿಗ್ರಹ ಅಮೃತಶಿಲೆಯಲ್ಲಿ ಸ್ಥಾಪಿತಗೊಂಡಿದೆ. 1967 ರಲ್ಲಿ ದೇವಾಲಯಕ್ಕೆ ಭವ್ಯವಾದ ಗೋಪುರವನ್ನು ನಿರ್ಮಿಸಲಾಯಿತು. ಮಂದಿರದ ದೇಖಾರೇಖಿಯ ಜವಾಬ್ದಾರಿಯನ್ನು ನಾಯ್ಡು ಮತ್ತು ಮೊದಲಿಯಾರ್ ಕುಟುಂಬಸ್ಥರು ನಿರ್ವಹಿಸುತ್ತಾ ಬಂದಿದ್ದಾರೆ.

ದಸರಾ ದಿನದಂದು ಇಲ್ಲಿನ ದೇವಾಲಯದಲ್ಲಿ ಪೂಜಿಸಲ್ಪಟ್ಟ ಕಳಶ ಮೆರವಣಿಗೆ ಹೊರಡುವುದರೊಂದಿಗೆ ದಸರಾ ಶೋಭಾಯಾತ್ರೆಗೆ ಚಾಲನೆ ದೊರೆಯುತ್ತದೆ. ಅಲ್ಲಿಂದ ಹೊರಡುವ ಪೇಟೆ ಶ್ರೀ ರಾಮಮಂದಿರದ ಮಂಟಪ ನಾಲ್ಕು ಕರಗಗಳ ದೇವಾಲಯಗಳಿಗೆ ಸಾಗಿ ಪೂಜೆ ಸ್ವೀಕರಿಸಿ ಕರಗಗಳೊಂದಿಗೆ ಬನ್ನಿಮಂಟಪಕ್ಕೆ ತೆರಳಿ ಬನ್ನಿಕಡಿಯಲಾಗುತ್ತದೆ.



ಕಥೆ	:	ತಿರುಪತಿಗೆ ತಿಮ್ಮಪ್ಪನ ದರ್ಶನ
ಅಧ್ಯಕ್ಷ	:	ಇಂದ್ರಜಿತ್ ಡಿ.
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ಬಾಲು ಎಲೆಕ್ಟ್ರಿಕಲ್ಸ್ ದಿಂಡಿಗಲ್
ಒಟ್ಟು ಕಲಾಕೃತಿಗಳು	:	7
ಒಟ್ಟು ವೆಚ್ಚ	:	6.5 ಲಕ್ಷ
ಒಟ್ಟು ಸದಸ್ಯರು	:	100
ವೇದಿಕೆಯ ಸೆಟ್ಟಿಂಗ್	:	ವಿಶ್ವನಾಥ ಮತ್ತು ತಂಡ, ಮಡಿಕೇರಿ
ಚಿತ್ರ ಸೃಷ್ಟಿ	:	ಮಧುಕರ ಬೆಂಗಳೂರು

ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ: ಮಡಿಕೇರಿಯ ರಾಜಾಸೀಟ್ ಬಳಿಯಿರುವ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯನ್ನು ದೇವಾಲಯವು ಕೊಡಗಿನ ಅರಸರ ಕಾಲದಲ್ಲಿ ಯಾವುದೇ ರೀತಿಯ ರೋಗ ರುಜಿನ, ಅನಿಷ್ಟ, ವಿಪತ್ತುಗಳು ಸಂಭವಿಸದಂತೆ ನಾಡನ್ನು ರಕ್ಷಿಸಲು ನಾಲ್ಕು ಶಕ್ತಿದೇವತೆಗಳ ಪೈಕಿ ಹಿರಿಯಳಾದ ಶ್ರೀ ಚೌಟಿ ಮಾರಿಯಮ್ಮಳನ್ನು ಪ್ರತಿಷ್ಠಾಪಿಸಲಾಗಿದೆ ಎಂದು ಹೇಳಲಾಗುತ್ತಿದೆ. ಹಿಂದೆ ರಾಜನ ಕಾಲದಲ್ಲಿ ವೀರನೂ ಸೇನಾಧಿಪತಿಯೂ ಆಗಿದ್ದ ಅಪ್ಪಚ್ಚಿರ ಮಂದಣ್ಣ ಎಂಬಾತ ಈ ದೇವಾಲಯದ ಮೂಲಕ ಹಾದು ಹೋಗುವಾಗ ದೇವರನ್ನು ಓಡಿಸಿ ದೇವರಿಗೆ ಅಪಹರಿಸಿದ ನೈವೈದ್ಯ ಹಾಗೂ ಎಡೆಯನ್ನು ತಿನ್ನುತ್ತಿದ್ದನಂತೆ. ಈತನ ಉಪಟಳದಿಂದ ಮುಕ್ತಿ ಹೊಂದಲು ದೇವಿ ಪಕ್ಷಿಯ ರೂಪ ತಾಳಿ ಆತನನ್ನು ಸಂಹರಿಸಿದಳು ಎಂಬ ರೋಚಕ ಕಥೆಯೂ ಇದೆ.

ಈ ದೇವಾಲಯದಲ್ಲಿಯೂ ಯಾದವಕುಲದವರೇ ಪೂಜೆ ಪುರಸ್ಕಾರ ನೆರವೇರಿಸುತ್ತಾ ಬಂದಿದ್ದಾರೆ. ದೇವಾಲಯದಿಂದ ಕರಗ ಹಾಗೂ ಮಂಟಪ ಎರಡನ್ನೂ ಹೊರಡಿಸಲಾಗುತ್ತಿದ್ದು, ದಸರಾ ದಿನದಂದು ಪೇಟೆ ಶ್ರೀ ರಾಮಮಂದಿರದಿಂದ ಕಳಶ ಹೊತ್ತ ಮಂಟಪ ಮೊಟ್ಟ ಮೊದಲ ಬಾರಿಗೆ ಈ ದೇವಾಲಯಕ್ಕೆ ಆಗಮಿಸಿ ಕಳಶಕ್ಕೆ ಪೂಜೆ ಸಲ್ಲಿಸಿದ ಬಳಿಕ ಇತರೆ ದೇವಾಲಯಕ್ಕೆ ತೆರಳುತ್ತದೆ.



ಕಥೆ	:	ಮೂಷಿಕಾಸುರನರ ಗರ್ವಭಂಗ
ಅಧ್ಯಕ್ಷ	:	ಪಿ.ಟಿ.ಉನ್ನಿಕೃಷ್ಣ
ಸ್ಟೂಡಿಯೋ ಸೆಟ್ಟಿಂಗ್	:	ನವೀನ್ ಸೌಂಡ್ಸ್ ಮತ್ತು ಲೈಟಿಂಗ್ ದಾವಣಗೆರೆ
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ಹೊಸ ಮಾತಾ ಎಲೆಕ್ಟ್ರಿಕಲ್ಸ್ ದಿಂಡಿಗಲ್
ವಿಶೇಷ ಪರಿಣಾಮಗಳು	:	ಅರುಣ್ ಮತ್ತು ತಂಡ
ಒಟ್ಟು ಕಲಾಕೃತಿಗಳು	:	17
ಒಟ್ಟು ವೆಚ್ಚ	:	17 ಲಕ್ಷ
ಒಟ್ಟು ಸದಸ್ಯರು	:	300
ವೇದಿಕೆಯ ಸೆಟ್ಟಿಂಗ್	:	ಎ.ಆರ್.ಮಂಜುನಾಥ್ ಮತ್ತು ತಂಡ
ಚಿತ್ರ ಸೃಷ್ಟಿ	:	ವಿಟ್ಲ ಮತ್ತು ತಂಡ
ವಸ್ತ್ರ ವಿನ್ಯಾಸ	:	ಖಾದರ್ ಮತ್ತು ತಂಡ

ಶ್ರೀ ದಂಡಿನ ಮರಿಯಮ್ಮ: ಸುಮಾರು 165 ವರ್ಷಗಳ ಇತಿಹಾಸ ಹೊಂದಿರುವ ಶ್ರೀ ದಂಡಿನ ಮಾರಿಯಮ್ಮ ದೇವಾಲಯವು ಮಡಿಕೇರಿ ಕೋಟೆಯ ಬಲಭಾಗದಲ್ಲಿದೆ. ಇದು ಕೊಡಗಿನ ರಾಜರು ಪ್ರತಿಷ್ಠಾಪಿಸಿದ್ದ ನಾಲ್ಕು ಶಕ್ತಿಇದೇವತೆಗಳಲ್ಲಿ ಒಂದಾಗಿದೆ. ಶ್ರೀ ಮಾರಿಯಮ್ಮ 1836 ರಲ್ಲಿ ಪ್ರತಿಷ್ಠಾಪನೆಗೊಂಡಳೆಂದು ಹೇಳಲಾಗುತ್ತದೆ. ಹಿಂದೆ ರಾಜನ ಕಾಲದಲ್ಲಿ ದಂಡಿಗೆ (ಯುದ್ಧಕ್ಕೆ)

ಹೊರಡುವಾಗಿ ಈ ದೇವಿಯ ಅಪ್ಪಣೆ ಪಡೆದು ಹೊರಡುತ್ತಿದ್ದನೆಂದು ಅದರಿಂದ ಈ ದೇವಿಗೆ ದಂಡಿನಮಾರಿಯಮ್ಮ ಎಂಬ ಹೆಸರು ಬಂತೆಂದು ಹೇಳಲಾಗುತ್ತಿದೆ. ಪಾರ್ವತಿ ಸ್ವರೂಪಿಯಾದ ದೇವಿಯ ಕೈಯಲ್ಲಿ ತ್ರಿಶೂಲ ಮತ್ತು ಡಮರುಗಳ ಇನ್ನಿತರ ಆಯುಧಗಳನ್ನು ಕೈಯಲ್ಲಿಡಿದುಕೊಂಡು ಶೋಭಿಸುತ್ತಿದ್ದಾಳೆ. ಈ ದೇವಾಲಯವನ್ನು ಇತ್ತೀಚೆಗಿನ ವರ್ಷಗಳಲ್ಲಿ ಸುಮಾರು 30 ಲಕ್ಷ ರೂಪಾಯಿಗೂ ಹೆಚ್ಚು ವೆಚ್ಚ ಮಾಡಿ ಅಭಿವೃದ್ಧಿಗೊಳಿಸಲಾಗಿದೆ.

ಇಲ್ಲಿ ನವಶಕ್ತಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದ್ದು, ನವವಿಗ್ರಹಗಳಿರುವ ಕೊಡಗಿನ ಏಕೈಕ ದೇವಾಲಯ ಇದಾಗಿದೆ. ಅಲ್ಲದೆ ಗರ್ಭಗುಡಿಯ ಕ್ರಿಯಾ ಶಕ್ತಿ, ಜ್ಞಾನ ಶಕ್ತಿ, ವಿದ್ಯಾಶಕ್ತಿ ಎಂಬ ತ್ರಿಶಕ್ತಿಗಳಿಂದ ಆವೃತ್ತವಾಗಿರುವುದರಿಂದ ಮಹಾಪೂಜೆ ವೇಳೆಗೆ ಗರ್ಭಗುಡಿಗೆ ಪ್ರದಕ್ಷಿಣೆಯನ್ನು ಇಲ್ಲಿ ಹಾಕುವಂತಿಲ್ಲ. ದೇಗುಲದ ನಿತ್ಯ ಪೂಜೆಗಳನ್ನು ಯಾದವ ಜನಾಂಗದ ಅರ್ಚಕರೇ ನಡೆಸಿಕೊಂಡು ಬರುತ್ತಿದ್ದಾರೆ. ಈ ದೇಗುಲದಿಂದ ಭವ್ಯ ಮಂಟಪ ಶೋಭಯಾತ್ರೆಯಲ್ಲಿ ಪಾಲ್ಗೊಳ್ಳುತ್ತದೆ. ಕರಗವು ನಗರ ಪ್ರದಕ್ಷಿಣೆ ಹಾಕಿ ದಸರಾ ದಿನದಂದು ಪೇಟೆ ಶ್ರೀ ರಾಮಮಂದಿರದ ಮಂಟಪಕ್ಕೆ ಪೂಜೆ ಸಲ್ಲಿಸಿದ ನಂತರ ಕರಗವು ಬನ್ನಿ ಮಂಟಪಕ್ಕೆ ಬನ್ನಿ ಕಡಿಯಲು ತೆರಳುತ್ತದೆ.



ಕಥೆ	:	ದೇವಿಭ್ರಮರಾಂಬಿಕೆ ಮಾತೆಯ ಅರುಣಾಸುರ ಸಂಹಾರ ಸಂಹಾರ
ಅಧ್ಯಕ್ಷ	:	ಎಂ.ಎಲ್.ಸತೀಶ

ಸ್ಟೂಡಿಯೋ ಸೆಟ್ಟಿಂಗ್	:	ಡಿ.ಕೆ. ಪ್ರೊ. ಬೆಂಗಳೂರು
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ಜೇಮ್ಸ್ ಲೈಟಿಂಗ್ ದಿಂಡಿಗಲ್
ಒಟ್ಟು ಕಲಾಕೃತಿಗಳು	:	18
ಒಟ್ಟು ವೆಚ್ಚ	:	6 ಲಕ್ಷ
ಒಟ್ಟು ಸದಸ್ಯರು	:	200
ವೇದಿಕೆಯ ಸೆಟ್ಟಿಂಗ್ ಮತ್ತು ಚಲುವಳಿಗಳು	:	ದೇವಾಲಯ ಕಮಿಟಿ ಮತ್ತು ತಂಡ
ಡ್ರಾಕ್ಕರ್ ಸೆಟ್ಟಿಂಗ್	:	ಆನಂದ ಮತ್ತು ತಂಡ
ವಿಶೇಷ ಎಫೆಕ್ಟ್ ಮತ್ತು ಫೈರ್ ವರ್ಕ್ಸ್	:	ಫೈರ್ ವರ್ಲ್ಡ್, ಬೆಂಗಳೂರು
ಧ್ವನಿಗಳು	:	ಡಿ.ಕೆ. ಬೆಂಗಳೂರು, ಶಿವಾಜಿ ನಾಸಿಕ್ ಬ್ಯಾಂಡ್ ಸುಳ್ಯ

ಶ್ರೀ ಕಂಚಿಕಾಮಾಕ್ಷಿಯಮ್ಮ: ಮಡಿಕೇರಿ ಗೌಳಿಬೀದಿಯಲ್ಲಿರುವ ನಾಲ್ಕು ಕರಗ ದೇವಾಲಯಗಳ ಪೈಕಿ ಶ್ರೀ ಕಂಚಿಕಾಮಾಕ್ಷಿಯಮ್ಮ ದೇವಾಲಯವೂ ಒಂದಾಗಿದೆ. ದೇವಿಯು ಇಲ್ಲಿ ಸೌಮ್ಯ ಹಾಗೂ ಉಗ್ರ ರೂಪಿಣಿಯಾಗಿ ನೆಲೆ ನಿಂತಿದ್ದಾಳೆ. ಈ ದೇವಾಲಯಕ್ಕೆ ಸುಮಾರು 254 ವರ್ಷಗಳ ಇತಿಹಾಸವಿದೆ. ಕೊಡಗಿನ ರಾಜರಿಂದ ನೆಲೆನಿಂತ ಶಕ್ತಿ ದೇವತೆ ಇದಾಗಿದೆ. ಹಿಂದೆ ತಮಿಳುನಾಡಿನಿಂದ ಗೌಳಿ ಜನಾಂಗದವರು ಮಡಿಕೇರಿಗೆ ಬಂದು ನೆಲೆಸಿದಾಗ ಅವರೊಂದಿಗೆ ಬಂದು ಶ್ರೀ ಕಂಚಿಕಾಮಾಕ್ಷಿಯಮ್ಮ ನೆಲೆನಿಂತಳು ಎಂದು ಹೇಳಲಾಗುತ್ತದೆ. ಮೊದಲಿಗೆ ಈ ದೇವಾಲಯವು ಪುಟ್ಟ ಗುಡಿಸಲಾಗಿ ಮಣ್ಣಿನಗೋಡೆಯಿಂದ ಕೂಡಿತ್ತು. ನಂತರದ ದಿನಗಳಲ್ಲಿ ದೇವಾಲಯ ಹಲವು ಮಾರ್ಪಾಡುಗಳನ್ನು ಕಂಡಿದ್ದು, ರಾಜಗೋಪುರ ನಿರ್ಮಾಣ ಮಾಡಲಾಗಿದ್ದು, ಈ ಗೋಪುರ ಹೊಯ್ಸಳ ಶೈಲಿಯಲ್ಲಿದೆ. ಇತ್ತೀಚೆಗೆ ದೇಗುಲದಲ್ಲಿ ಕಂಚಿಕಾಮಾಕ್ಷಿಯನ್ನು ಹಗೂ ಉಗ್ರರೂಪಿ ಮುತ್ತುಮಾರಿಯಮ್ಮನಿಗೆ ಪ್ರತ್ಯೇಕ ಗರ್ಭಗುಡಿಗಳನ್ನು ನಿರ್ಮಿಸಲಾಗಿದೆ. ಇಲ್ಲಿಯೂ ಕೂಡ ಯಾದವ ಜನಾಂಗದವರೇ ಪೂಜೆ ಪುರಸ್ಕಾರವನ್ನು ನೆರವೇರಿಸುತ್ತಿದ್ದಾರೆ. ಈ ದೇವಾಲಯದಿಂದ ಕರಗ ಹಾಗೂ ಮಂಟಪವನ್ನು ಹೊರಡಿಸಲಾಗುತ್ತದೆ.



ಕಥೆ	:	ಗಣಪತಿಯಿಂದ ಗಜಾಸುರನಾ ವಧೆ
ಅಧ್ಯಕ್ಷ	:	ಕೆ.ಟಿ.ಪ್ರಶಾಂತ್
ಸ್ಟೂಡಿಯೋ ಸೆಟ್ಟಿಂಗ್	:	ಆರ್ವಿಸ್ ಸ್ಟೂಡಿಯೋಸ್
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ಡೇವಿಡ್ ಲೈಟಿಂಗ್ಸ್ ದಿಂಡಿಗಲ್
ಸೌಂಡ್ಸ್ ಮತ್ತು ಪೈರ್	:	ಏಷ್ಯಾನಟ್ ಧ್ವನಿ ಎಂಜಿನಿಯರ್ (ಹೊಸ ಆರೋಹಿತವಾದ ಬಿಲ್ಲು ಪರಿಚಯಿಸುತ್ತಿದ್ದೇವೆ)
ಒಟ್ಟು ಕಲಾಕೃತಿಗಳು	:	22
ಒಟ್ಟು ವೆಚ್ಚ	:	22 ಲಕ್ಷ
ಒಟ್ಟು ಸದಸ್ಯರು	:	200
		ಶೋಮ್ಯಾನ್ ಸೃಷ್ಟಿ ಮೂಲಕ ಮೂವ್ಮೆಂಟ್
ವೇದಿಕೆಯ ಸೆಟ್ಟಿಂಗ್	:	ಶೋಮ್ಯಾನ್ ಸೃಷ್ಟಿ

ಶ್ರೀ ಕೋಟೆ ಮಾರಿಯಮ್ಮ: ಕೋಟೆಯ ರಕ್ಷಣೆಗೆ ನಾಲ್ಕು ದಿಕ್ಕಿನಲ್ಲಿ ರಾಜರ ಕಾಲದಲ್ಲಿ ಪ್ರತಿಷ್ಠಾಪಿಸಲಾದ ನಾಲ್ಕು ಶಕ್ತಿ ದೇವತೆಗಳಲ್ಲಿ ಪೆನ್ಸರ್ ಲೈನ್ಸ್‌ನಲ್ಲಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯವೂ ಒಂದಾಗಿದೆ. ಲಕ್ಷ್ಮಿ, ಸರಸ್ವತಿ, ಪಾರ್ವತಿ ಹಾಗೂ ದುರ್ಗಿಯೂ ಆಗಿರುವ ಶ್ರೀ ಕೋಟೆ ಮಾರಿಯಮ್ಮ ದೇವಾಲಯಕ್ಕೆ ಸುಮಾರು ಎರಡು ಶತಮಾನಗಳ ಇತಿಹಾಸವಿರುವುದನ್ನು ನಾವು ಕಾಣಬಹುದು.



ಕಥೆ	:	ಮಹಾಗಣಪತಿಯಿಂದ ಶತಮಹಿಷಿ ಮತ್ತು ತಲ್ಪಸುರ ವಧೆ
ಅಧ್ಯಕ್ಷ	:	ಮಂಜುನಾಥ ಮತ್ತು ರವಿಕುಮಾರ್
ಸ್ಟೂಡಿಯೋ ಸೆಟ್ಟಿಂಗ್	:	ಬೆಂಗಳೂರು
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ದಿಂಡಿಗಲ್
ಒಟ್ಟು ಕಲಾಕೃತಿಗಳು	:	16
ಒಟ್ಟು ವೆಚ್ಚ	:	20 ಲಕ್ಷ
ಒಟ್ಟು ಸದಸ್ಯರು	:	300
ಮೂವ್ಮೆಂಟ್ ಸಮಿತಿ	:	ಪ್ರಸಾದ್ ಆಚಾರ್ಯ, ಮೊಹಮದ್ ರಫೀಕ್, ಜಗದೀಶ್
ವೇದಿಕೆಯ ಸೆಟ್ಟಿಂಗ್, ವಿಶೇಷ ಪರಿಣಾಮಗಳು	:	ಮಸೂದ್ ಹೈದರಾಬಾದ್
ಚಿತ್ರ ವಸ್ತ್ರ ವಿನ್ಯಾಸ	:	ವಿಕ್ರಮ ಅಲಂಕಾರಗಳು

ಕೋಟೆ ಶ್ರೀ ಗಣಪತಿ: ಮಡಿಕೇರಿ ಅರಮನೆ ಸಮೀಪದ ಶ್ರೀ ಕೋಟೆ ಗಣಪತಿ ದೇವಾಲಯವು ಕೊಡಗು ರಾಜರ ಕಾಲದಲ್ಲಿ ನಿರ್ಮಿಸಲ್ಪಟ್ಟ ಇತಿಹಾಸ ಪ್ರಸಿದ್ಧ ದೇವಾಲಯವಾಗಿದೆ. ದೇವಾಲಯ ಹಾಗೂ ಗೋಪುರ ಚಿಕ್ಕದಾಗಿದ್ದರೂ ಶಕ್ತಿ ಮಾತ್ರ ದೊಡ್ಡದಾಗಿದೆ. ಇಲ್ಲಿ ಕೈಮುಗಿದು ಪ್ರಾರ್ಥಿಸಿಕೊಂಡರೆ ಇಷ್ಟಾರ್ಥಗಳು ನೆರವೇರುತ್ತವೆ ಎಂಬ ನಂಬಿಕೆಯಿದೆ. ಇಲ್ಲಿ ಹರಕೆಯಾಗಿ ಈಡುಗಾಯಿಯನ್ನು ಸಲ್ಲಿಸಲಾಗುತ್ತದೆ. ಕೋಟೆ ಗಣಪತಿ ದಸರಾ ಸಮಿತಿಯ ಗಣಪತಿ ದೇವರ ಪೌರಾಣಿಕ ಕಥೆಗಳಿಗೆ ಸಂಬಂಧಿಸಿದ ಕಲಾಕೃತಿಗಳ ಮಂಟಪವನ್ನು ನಿರ್ಮಿಸಿ ಶೋಭಾ ಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದೆ.



ಕಥೆ	:	ಮಯೂರೇಶ್ವರನಿಂದ ಸಿಂಧು ದೈತ್ಯ ರಾಜನ ಸಂಹಾರ
ಅಧ್ಯಕ್ಷ	:	ಎಸ್.ಎ.ಸೂರಜ್ ಕುಡೇಟಕರ್ ಮತ್ತು ಅರ್ಬಿಪ್ರವೀಣ್ ಆಚಾರ್ಯ
ಸ್ಟೂಡಿಯೋ ಸೆಟ್ಟಿಂಗ್	:	ಲೋಕೇಶ್ ಪೂಚರ್ ಮದುವೆ ಎವೇಟ್ಸ್ ಮಡಿಕೇರಿ
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ನಜೀರ್, ಪೂಜಾ ಲೈಟಿಂಗ್ ಮಡಿಕೇರಿ
ಒಟ್ಟು ಕಲಾಕೃತಿಗಳು	:	21
ಒಟ್ಟು ವೆಚ್ಚ	:	19.5 ಲಕ್ಷ
ಒಟ್ಟು ಸದಸ್ಯರು	:	350
ಮೂವ್ಮೆಂಟ್ ವೇದಿಕೆಯ ಸೆಟ್ಟಿಂಗ್	:	ಹೊನ್ನಪ್ಪ ಮತ್ತು ತಂಡ
ವಿಶೇಷ ಪರಿಣಾಮಗಳು	:	ಮಿಚೆಲ್, ಅಮೇರಿಕಾ
ಫೈರ್ ವರ್ಕ್ಸ್	:	ಚೇತನ್ ಆರ್ಜೆ ಪೈಲ್, ಬೆಂಗಳೂರು
ಧ್ವನಿಗಳು	:	ಉಮೇಶ್ ಸೌಂಡ್ ವಿಶ್ವ, ಬೆಂಗಳೂರು
ಡ್ರಾಕ್ಕರ್ ಸೆಟ್ಟಿಂಗ್‌ಗಳು	:	ಸೋಮ ಮಡಿಕೇರಿ

ಶ್ರೀ ದೇಚೂರು ರಾಮಮಂದಿರ: ದೇಚೂರು ಶ್ರೀ ರಾಮಮಂದಿರಕ್ಕೆ ಸಶತಮಾನಗಳ ಇತಿಹಾಸವಿದೆ. ರಾಮಾಂಜನೇಯ ಸೇರಿದಂತೆ ಹಲವು ದೇವರ ಪಟಗಳೊಂದಿಗೆ ಭಜನಾ ಮಂದಿರವಾಗಿದ್ದುದನ್ನು ಅಭಿವೃದ್ಧಿಗೊಳಿಸಲಾಗಿದೆ. ಪ್ರಸ್ತುತ ಶ್ರೀ ರಾಮ ವಿದ್ಯಾಗಣಪತಿ ದೇವಸ್ಥಾನ ಎಂದು ಸಕರೆಯಲಾಗುತ್ತಿದೆ. ಈ ದೇವಾಲಯದಿಂದ ಮೊದಲ ಬಾರಿಗೆ 12 ಅಥವಾ 16 ಕಂಬಗಳ ಮಣಿಮಂಟಪಗಳೊಂದಿಗೆ ದಸರಾ ಮಂಟಪವನ್ನು ಹೊರಡಿಸಲು ಆರಂಭಿಸಲಾಯಿತು. ಸುಂದರ ಕೆತ್ತನೆಯ ಕಂಬಗಳಿಗೆ ಮದ್ರಾಸಿನಿಂದ ತರಲಾಗುತ್ತಿದ್ದ ನೀಲಿ, ಹಸಿರು, ಬಿಳಿ ಮಣಿಗಳನ್ನು ಪೋಣಿಸಿ ಮಂಟಪವನ್ನು ನಿರ್ಮಿಸಲಾಗುತ್ತಿತ್ತು. ಅಲ್ಲದೆ ಮಂಟಪದ ನಾಲ್ಕು ಮೂಲೆಗಳಿಗೆ ತಂಡಮಾಲೆಗಳನ್ನು ಅಲಂಕರಿಸಲಾಗುತ್ತಿತ್ತು. ಈ ಸುಂದರ ಮಂಟಪದೊಳಗೆ ದೇವರ ಪಟವನ್ನಿಟ್ಟು ಹಾಗೂ ಚಾಮರ ಬೀಸಲು ಪುಟಾಣಿ ಬಾಲಕಿಯನ್ನು ಕೂರಿಸಿ ಎಂಟು ಮಂದಿ ಮಂಟಪವನ್ನು ಹೊತ್ತು ಸಾಗುತ್ತಿದ್ದರು. ಈಗ ಈ ದೇವಾಲಯದಿಂದ ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ಮಂಟಪವನ್ನು ತಯಾರು ಮಾಡಲಾಗುತ್ತಿದ್ದು ಹಲವು ಬಾರಿ ಬಹುಮಾನಗಳನ್ನು ತನ್ನದಾಗಿಸಿಕೊಂಡಿದೆ.



ಕಥೆ : ವರಹಾ ರೂಪ ಆಂಜನೇಯದಿಂದ ವಿರೂಪಾಕ್ಷ ರಾಕ್ಷಸನ ಸಂಹಾರ ಮತ್ತು ಆಂಜನೇಯನ ವಿಶ್ವರೂಪ ದರ್ಶನ

ಅಧ್ಯಕ್ಷ	:	ತೀರ್ಥನಂದ, ಸಮಿತಿ ಸದಸ್ಯರು
ಸ್ಟೂಡಿಯೋ ಸೆಟ್ಟಿಂಗ್	:	ಸ್ವಾಗತ ಲೈಟಿಂಗ್ ಮಡಿಕೇರಿ
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ದಿಂಡಿಗಲ್
ಒಟ್ಟು ಕಲಾಕೃತಿಗಳು	:	11
ಒಟ್ಟು ವೆಚ್ಚ	:	8 ಲಕ್ಷ
ಒಟ್ಟು ಸದಸ್ಯರು	:	60
ವೇದಿಕೆಯ ಸೆಟ್ಟಿಂಗ್	:	ಸಮಿತಿ ಸದಸ್ಯರು

ಶ್ರೀ ಚೌಡೇಶ್ವರಿ: ಮಡಿಕೇರಿಯ ಬಳಿಯಿರುವ ಶ್ರೀ ಚೌಡೇಶ್ವರಿ ದೇವಾಲಯವನ್ನು ಕೊಡಗಿನ ರಾಜನಾಗಿದ್ದ ಲಿಂಗರಾಜನು ನಿರ್ಮಿಸಿದನು ಎಂದು ಹೇಳಲಾಗಿದೆ. ಇದಕ್ಕೆ ಸಾಕ್ಷಿ ಎಂಬಂತೆ ದೇವಾಲಯದ ಪ್ರವೇಶ ದ್ವಾರಗಳ ಬಳಿಯಿರುವ ಮೆಟ್ಟಿಲುಗಳ ಮೇಲೆ ಲಿ ಎಂಬ ಕೆತ್ತನೆಯಿದೆ. ಈ ದೇವಾಲಯವನ್ನು ಮೊದಲ ಶಂಕರಗುಡಿ ಎಂದು ಕರೆಯಲಾಗುತ್ತಿತ್ತಂತೆ. 1964 ರಲ್ಲಿ ದೇವಾಲಯದಲ್ಲಿ ಮೂಲ ವಿಗ್ರಹ ಪ್ರತಿಷ್ಠಾಪನೆಗೊಂಡಿತು. 1966 ರಲ್ಲಿ ಚೌಡೇಶ್ವರಿ ವಿಗ್ರಹದೊಂದಿಗೆ ಗರ್ಭಗುಡಿಗೆ ಹೊಂದಿಕೊಂಡಂತೆ ಎಡ-ಬಲಗಳಲ್ಲಿ ರಾಮ ಮತ್ತು ಸತ್ಯನಾರಾಯಣ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ. ನವರಾತ್ರಿಯ ಮೊದಲ ದಿನ ಪಂಪಿನ ಕೆರೆಯಿಂದ ಹೊರಟ ನಾಲ್ಕು ಕರಗಗಳು ಇಲ್ಲಿಗೆ ಬಂದು ಪೂಜೆ ಸಲ್ಲಿಸಿ ಮುಂದೆ ಸಾಗುವುದು ಪ್ರತೀತಿಯಾಗಿದೆ. ಶ್ರೀ ಚೌಡೇಶ್ವರಿ ಬಾಲಕ ಭಕ್ತಮಂಡಳಿ ವತಿಯಿಂದ 1962 ರಿಂದ ದಸರಾ ಶೋಭಯಾತ್ರೆಯಲ್ಲಿ ಪಾಲ್ಗೊಳ್ಳುತ್ತಿದೆ.



ಕಥೆ	:	ಸಂಕಷ್ಟಹರ ಗಣಪತಿಯ ಪೂಜೆಯೊಂದಿಗೆ ಮಹದೇವನಿಂದ ಸತ್ರಿಪುರಾಸುರ ಸಂಹಾರ
ಅಧ್ಯಕ್ಷ	:	ನವೀನಕುಮಾರ ಮತ್ತು ಮಂಜುನಾಥ
ಸ್ಟೂಡಿಯೋ ಸೆಟ್ಟಿಂಗ್	:	ಬೆಂಗಳೂರು
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ದಿಂಡಿಗಲ್
ಒಟ್ಟು ಕಲಾಕೃತಿಗಳು	:	25
ಒಟ್ಟು ವೆಚ್ಚ	:	15–16 ಲಕ್ಷ
ಒಟ್ಟು ಸದಸ್ಯರು	:	150
ವೇದಿಕೆಯ ಸೆಟ್ಟಿಂಗ್	:	ಶಶಿ, ಜಾಣು ಮತ್ತು ತಂಡ
ಡ್ರಾಕ್ಕರ್ ಸೆಟ್ಟಿಂಗ್	:	ಶೇಖರ ರಾಖ ಮತ್ತು ತಂಡ
ಮೂವ್ಮೆಂಟ್ ಸಮಿತಿ	:	ಜಯರಾಮ್ ಆಚಾರ್ಯ, ಲಕ್ಷ್ಮಣ್ ಆಚಾರ್ಯ, ಹರೀಶ್ ಭೀಮಯ್ಯ ಮತ್ತು ತಂಡ
ಪೈರ್ ವರ್ಕ್ಸ್	:	ಟೆಕ್ಕೋ ಪೈಲ್, ಬೆಂಗಳೂರು
ಸೌಂಡ್ಸ್	:	ವಿಶ್ವದ ಸೌಂಡ್ಸ್, ಬೆಂಗಳೂರು
ಚಿತ್ರ ಸೃಷ್ಟಿ	:	ಮಹದೇವಪ್ಪ ಮತ್ತು ಸನ್ಸ್ ಉದ್ಬೂರ್

ಶ್ರೀ ಕೋದಂಡರಾಮ: ಮಲ್ಲಿಕಾರ್ಜುನ ನಗರದಲ್ಲಿರುವ ಶ್ರೀ ಕೋದಂಡರಾಮ ಮಂದಿರವು ಶ್ರೀ ಕೆ.ಎನ್. ಬೋಪಯ್ಯನವರ ಮಾರ್ಗದರ್ಶನದಲ್ಲಿ ನಿಂಗಪ್ಪ, ದೊಡ್ಡಯ್ಯ, ಕದರಯ್ಯ, ನಿಂಘಮ್ಮ, ನಾಗಯ್ಯ ಮುಂತಾದ ಹಿರಿಯರು ಒಂದೆಡೆ ಸೇರಿ ಇಲ್ಲಿನ ಜನತೆಗೆ ಪೂಜೆ ಪುರಸ್ಕಾರವನ್ನು ನೆರವೇರಿಸಲು ಅನುಕೂಲ ಮಾಡಿಕೊಂಡ ಉದ್ದೇಶದಿಂದ ನಿರ್ಮಿಸಿದ ದೇವಾಲಯವಾಗಿದೆ. ಆದರೆ ಈ ದೇವಾಲಯ ನಿರ್ಮಾಣದ ಹಿಂದೆ ಮಡಿಕೇರಿ ತೋಟಗಾರಿಕಾ ಇಲಾಖೆಯಲ್ಲಿ ಫೀಲ್ಡ್ ಅಸಿಸ್ಟೆಂಟ್ ಆಗಿದ್ದ ನಿಂಗಪ್ಪನವರ ಶ್ರಮ ಇರುವುದನ್ನು ನಾವು ಕಾಣಬಹುದು. 1977 ರಲ್ಲಿ ಈ ದೇವಾಲಯ ನಿರ್ಮಾಣವಾದಾಗ ಚಿತ್ರಪಟವನ್ನಿಟ್ಟುಕೊಂಡು ಪೂಜೆ ನೆರವೇರಿಸಲಾಗುತ್ತಿತ್ತು. ಬಳಿಕ ಮೈಸೂರಿನ ಆಲನಹಳ್ಳಿಯ ಶಿಲ್ಪಿಗಳಿಂದ ಸುಂದರವಾದ ಕೋದಂಡಧಾರಿ ರಾಮ ಜೊತೆಗೆ ಸೀತಾ, ಲಕ್ಷ್ಮಣ, ಆಂಜನೇಯ ಅಲ್ಲದೆ ವಿನಾಯಕ ವಿಗ್ರಹವನ್ನು ಕಪ್ಪು ಕಲ್ಲಿನಿಂದ ನಿರ್ಮಿಸಿ ಪ್ರತಿಷ್ಠಾಪಿಲಾಯಿತು. ಅಲ್ಲದೆ ಅದೇ ವರ್ಷವೇ ದಸರಾ ಶೋಭಯಾತ್ರೆಯಲ್ಲಿ ದೇವಾಲಯದಿಂದ ಮಂಟಪ ಹೊರಡಿಸಲು ಆರಂಭಿಸಲಾಯಿತು.



ಕಥೆ	:	ಕಾಳಿ ಮೊತೆಯಿಂದ ರಕ್ತ ಬೀಜಾಸುರನ ವಧೆ
ಅಧ್ಯಕ್ಷ	:	ಭರತ್, ಸುಧಾಕರ್
ಸ್ಟೂಡಿಯೋ ಸೆಟ್ಟಿಂಗ್	:	ಸ್ವಾಮಿ, ಬೆಂಗಳೂರು
ಆರ್ಚ್ ಮೂಲಕ ಲೈಟಿಂಗ್ ಬೋರ್ಡ್	:	ರಾಜಶೇಖರ್, ವಿದ್ಯುತ್, ದಿಂಡಿಗಲ್
ಒಟ್ಟು ಕಲಾಕೃತಿಗಳು	:	16
ಒಟ್ಟು ವೆಚ್ಚ	:	17 ಲಕ್ಷ
ಒಟ್ಟು ಸದಸ್ಯರು	:	300
ವೇದಿಕೆಯ ಸೆಟ್ಟಿಂಗ್	:	ವಿಶ್ವನಾಥ ಮತ್ತು ತಂಡ
ಡ್ರಾಕ್ಕರ್ ಸೆಟ್ಟಿಂಗ್	:	ಹೇಮರಾಜು ಮತ್ತು ತಂಡ
ಫೈರ್ ವರ್ಕ್ಸ್	:	ಚೇತನ, ಬೆಂಗಳೂರು
ಧ್ವನಿಗಳು	:	ಮೋಹನ್, ಬೆಂಗಳೂರು



ಸುಮಾರು 30 ವರ್ಷಗಳಿಂದಲೂ ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಎಂಬ ಊರಿನಲ್ಲಿಯೂ ದಸರಾ ಉತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಅಲ್ಲಿ ತಾಲ್ಲೂಕು ಮಟ್ಟದಲ್ಲಿ ಉತ್ಸವದ ಆಚರಣೆಯಾಗುತ್ತಿದೆ. ಅಲ್ಲಿಯೂ ಸಹಾ 'ರಾತ್ರಿಯ ಸಮಯದಲ್ಲಿ ದಸರಾ ಮೆರವಣಿಗೆ ಮಡಿಕೇರಿ ದಸರಾದಂತೆಯೇ ನಡೆಯುತ್ತದೆ'. ಇಲ್ಲಿಯೂ ಇತ್ತೀಚೆಗೆ ಮಡಿಕೇರಿ ದಸರಾದಲ್ಲಿ ಆಚರಿಸಲಾಗುತ್ತಿರುವಂತೆ ವಿಜಯದಶಮಿಯಂದು ರಾತ್ರಿಯಲ್ಲಿ ದಸರಾ ಮೆರವಣಿಗೆ ನಡೆಯುತ್ತದೆ. ಇಲ್ಲಿಯೂ ದಶ ಮಂಟಪಗಳನ್ನು ಆಧುನಿಕ ಶೈಲಿಯಲ್ಲಿ ನಿರ್ಮಿಸಿ ಮೆರವಣಿಗೆ ಮಾಡಲಾಗುತ್ತಿದೆ. ಇದೂ ಸಹಾ ಸ್ಥಳೀಯ ಜನರನ್ನು ವಿಶೇಷವಾಗಿ ಆಕರ್ಷಿಸುತ್ತಿದೆ.

ಮಂಗಳೂರು ದಸರಾ ಸ್ತಬ್ಧಚಿತ್ರ



ಮೈಸೂರು ದಸರಾ ಉತ್ಸವದ ಆಕರ್ಷಣೆ ಜಾಸ್ತಿಯಾದಂತೆಯೇ ರಾಜ್ಯ ಹಲವಾರು ಭಾಗಗಳಲ್ಲೂ ವಿವಿಧ ರೀತಿಯಲ್ಲಿ ದಸರಾ ಆಚರಣೆ ನಡೆಯುತ್ತಿವೆ.

ಅದೇ ರೀತಿ ಮಂಗಳೂರಿನಲ್ಲಿ ಇತ್ತೀಚೆಗೆ ದಸರಾ ಉತ್ಸವದ ಆಚರಣೆ ಎಲ್ಲರ ಗಮನ ಸೆಳೆಯುತ್ತದೆ. ಅಲ್ಲಿನ ಕದಿ ಗೋಕರ್ಣನಾಥ ದೇವಾಲಯವು ದಸರಾ ಆಚರಣೆಯ ಕೇಂದ್ರಬಿಂದುವಾಗಿದೆ. ಇಲ್ಲಿ ನಡೆಯುವ ದಸರಾ ಮೆರವಣಿಗೆ ಎಲ್ಲರ ಗಮನ ಸೆಳೆಯುತ್ತಿದೆ. ಮಂಗಳಾದೇವಿ ದೇವಸ್ಥಾನದಲ್ಲೂ ನವರಾತ್ರಿಯ ಸಮಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯುತ್ತವೆ.

ಮಂಗಳೂರು ಕುದ್ರೋಳಿ ದೇವಸ್ಥಾನವನ್ನು 1991 ರಲ್ಲಿ ನವೀಕರಣ ಮಾಡಲಾಗಿದೆ. ಮಾಜಿ ಕೇಂದ್ರ ಸಚಿವರೊಬ್ಬರ ನೇತೃತ್ವದಲ್ಲಿ ನವೀಕರಣ ಕಾರ್ಯನಡೆಸಿದ್ದು ಇಂದು ನವನಾಗರಿಕತೆಯ ಆವಿಷ್ಕಾರಗಳನ್ನು ದೇವಸ್ಥಾನ ತನ್ನದಾಗಿಸಿಕೊಂಡಿದೆ. ಇಂದು ಅವರ ನೇತೃತ್ವದಲ್ಲಿಯೇ ದಸರಾ ಉತ್ಸವ ನಡೆಯುತ್ತಿದೆ. ದಸರಾದಲ್ಲಿ ನಡೆಯುವ ಶೋಭಾಯಾತ್ರೆ ವರ್ಣರಂಜಿತವಾಗಿರುತ್ತದೆ. ಬ್ರಹ್ಮಶ್ರೀ ನಾರಾಯಣಗುರು ರವರು ಶತಮಾನಗಳ ಹಿಂದೆಯೇ ಕುದ್ರೋಳಿಯಲ್ಲಿ ಶ್ರೀಗೋಕರ್ಣನಾಥ ದೇವಾಲಯವನ್ನು ಸ್ಥಾಪಿಸಿದ್ದರು.

ನವರಾತ್ರಿಯ ಸಮಯದಲ್ಲಿ ನವದುರ್ಗೆಯರ ಪ್ರತಿಷ್ಠೆಯ ಸಹಿತ ದಸರಾ ಉತ್ಸವದ ಆಚರಣೆ ನಡೆಯುವುದು ಇಲ್ಲಿನ ವಿಶೇಷ. 'ಒಂಭತ್ತು ಶಕ್ತಿ ದೇವತೆಯ ರೂಪಗಳಾದ ಶೈಲಪುತ್ರಿ, ಬ್ರಹ್ಮಚಾರಣಿ, ಚಂದ್ರಘಂಟಾ, ಕೂಷ್ಮಾಂಡಿನಿ, ಸ್ಕಂದಮಾತಾ ಕಾತ್ಯಾಯಿನೀ, ಮಹಾಕಾಳಿ, ಮಹಾಗೌರಿ ಮತ್ತು ಸಿದ್ಧಿಧಾತ್ರಿಯರ ಆರಾಧನೆ ಇಲ್ಲಿ ನಡೆಯುತ್ತದೆ. ಶ್ರೀದೇವಿ ಮತ್ತು ಮಹಾಗಣಪತಿಯ ಪ್ರತಿಷ್ಠಾಪನೆಯ ಮೂಲಕ ಕಾರ್ಯಕ್ರಮ ಆರಂಭವಾಗುತ್ತದೆ.

ವಿಜಯದಶಮಿಯಂದು ಶ್ರೀ ಶಾರದೆಯ ಶೋಭಾಯಾತ್ರೆ ನಡೆಯುತ್ತದೆ. ಈ ಯಾತ್ರೆಯ ರಾತ್ರಿ ದೇವಸ್ಥಾನದಿಂದ ಹೊರಟು ನಗರದೆಲ್ಲೆಡೆ ಸಾಗಿ ಮರುದಿನ ಮುಂಜಾನೆ ಕ್ಷೇತ್ರವನ್ನು ವಾಪಸ್ಸು ತಲುಪಿ ಮುಕ್ತಾಯವಾಗುತ್ತದೆ. ಶೋಭಾಯಾತ್ರೆಯು ಸಾಮಾನ್ಯವಾಗಿ ಕಂಭಳರಸ್ತೆ, ಮಣ್ಣಗುಡ್ಡೆ, ಲೇಡಿಹಿಲ್ ಸರ್ಕಲ್, ಲಾಲ್‌ಭಾಗ್, ಪಿವಿಎಸ್ ವೃತ್ತ, ನವಭಾರತ ವೃತ್ತ, ಕೆಎಸ್ ರಾವ್ ರಸ್ತೆ, ಹಂಪನ ಕಟ್ಟೆ, ಗಣಪತಿ ಹೈಸ್ಕೂಲ್ ರಸ್ತೆ, ವೆಂಕಟರಮಣ ದೇವಸ್ಥಾನದ ಮುಂಭಾಗದ ರಥಬೀದಿ, ಚಿತ್ರ ಟಾಕೀಸ್ ಮೂಲಕ ವಾಪಸ್ಸಾಗುತ್ತದೆ. ಈ ಮೆರವಣಿಗೆಯಲ್ಲಿ 'ಶ್ರೀ ಶಾರದಾಮಾತೆ, ವಿಘ್ನೇಶ್ವರ, ನವದುರ್ಗೆಯರ ಹಾಗೂ ಧಾರ್ಮಿಕ ಸಾಂಸ್ಕೃತಿಕ ಹಾಗೂ ಪ್ರಾಕೃತಿಕ ಸಂದೇಶಗಳನ್ನು ಬೀರುವ ಸ್ತಬ್ಧಚಿತ್ರಗಳು, ಹುಲಿವೇಷ, ಕಲ್ಲಡ್ಕದ ಗೊಂಬೆ ಬಳಗ, ಆಂಧ್ರಪ್ರದೇಶದ ವೆಸ್ಟ್‌ಗೋದಾವರಿ ಜಿಲ್ಲೆಯ ಬಾಲಮುರುಳಿಕರಷ್ಣ ಕೋಲಾಟ, ಡೊಳ್ಳುಕುಣಿತ, ನಂದಿ ಧ್ವಜ ಹಾಗೂ ಇತರ ವೇಷಧಾರಿಗಳು ಇರುತ್ತಾರೆ. ಮೆರವಣಿಗೆಯು ದೇವಸ್ಥಾನಕ್ಕೆ ಸಾಮಾನ್ಯವಾಗಿ ಬೆಳಿಗ್ಗೆ 6 ಘಂಟೆಗೆ ಹಿಂದಿರುಗುತ್ತದೆ. ನಂತರ ದೇವಸ್ಥಾನದ ಆವರಣದಲ್ಲಿರುವ ಕೊಳದಲ್ಲಿ ಶಾರದಾಮಾತೆ ಹಾಗೂ ನವದುರ್ಗೆಯರ ವಿಸರ್ಜನೆ ನಡೆಯುತ್ತದೆ.

ಅಧ್ಯಾಯ – 12

ಸ್ತಬ್ಧಚಿತ್ರಗಳ ತಯಾರಿಯಲ್ಲಿ ಸರ್ಕಾರ, ಸಂಘ ಸಂಸ್ಥೆಗಳ ಪಾತ್ರ

ಸ್ತಬ್ಧಚಿತ್ರಗಳ ತಯಾರಿ–ಬಳಕೆ–ಪ್ರದರ್ಶನದ ಸಂದರ್ಭದಲ್ಲಿ ಸರ್ಕಾರ ಪ್ರಮುಖ ಪಾತ್ರವಹಿಸುತ್ತದೆ.

ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವದಲ್ಲಿ ಸ್ತಬ್ಧಚಿತ್ರಗಳ ಪ್ರದರ್ಶನಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಇದರಿಂದ ನಮ್ಮ ದೇಶದ ವೈವಿಧ್ಯತೆಯನ್ನು ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ತಬ್ಧಚಿತ್ರಗಳ ಮುಖೇನ ಪ್ರದರ್ಶನ ಸಾಧ್ಯವಾಗಿದೆ. ಹಲವು ಸ್ತಬ್ಧಚಿತ್ರ ಕಲಾವಿದರು ತಮ್ಮ ಕಲಾ ಚತುರತೆಯನ್ನು ತೋರಿಸಲು ವೇದಿಕೆ ಒದಗಿಸಿದೆ. ಉತ್ತಮವಾಗಿ ಮೂಡಿಬಂದ ಸ್ತಬ್ಧಚಿತ್ರಗಳಿಗೆ ಬಹುಮಾನ ನೀಡುತ್ತಾರೆ. ಸ್ತಬ್ಧಚಿತ್ರವನ್ನು ತಯಾರಿಸಿದ ಕಲಾವಿದರಿಗೂ ಬಹುಮಾನ ಪ್ರಶಸ್ತಿ ಫಲಕವನ್ನು ನೀಡುತ್ತಾರೆ. ಇದರಿಂದ ಸ್ತಬ್ಧಚಿತ್ರ ಕಲಾವಿದರಿಗೆ ಸಮಾಜದಲ್ಲಿ ಉತ್ತಮ ಗೌರವ ಸ್ಥಾನಮಾನಗಳು ಅವಕಾಶಗಳು ದೊರೆಯುತ್ತಿರುವುದು ಉಂಟು.

ಮೈಸೂರು ದಸರಾದಲ್ಲಿ ಸ್ತಬ್ಧಚಿತ್ರಗಳನ್ನು ಪ್ರದರ್ಶಿಸುವುದನ್ನು ನಾವು ಕಾಣಬಹುದು. ಸರ್ಕಾರವು ಎಲ್ಲಾ ಜಿಲ್ಲೆಗಳ ವಿಶೇಷತೆಯ ಸ್ತಬ್ಧಚಿತ್ರಗಳನ್ನು ತಯಾರಿಸಿ ಇಲ್ಲಿ ಪ್ರದರ್ಶಿಸುತ್ತಾರೆ. ವಿವಿಧ ಜಿಲ್ಲೆಗಳ ವಿಶೇಷತೆಯನ್ನು ತಿಳಿಯಲು ಸಹಾಯಕಾರಿಯಾಗುತ್ತದೆ. ಉತ್ತಮವಾಗಿ ಮೂಡಿಬಂದ ಸ್ತಬ್ಧಚಿತ್ರ ತಯಾರಿಸಿದ ಕಲಾವಿದರಿಗೆ ಬಹುಮಾನವನ್ನು ನೀಡಿ ಪುರಸ್ಕರಿಸಲಾಗುತ್ತದೆ.

ಸರ್ಕಾರವು ಸ್ತಬ್ಧಚಿತ್ರವನ್ನು ತಯಾರಿಸಲು ಅನುದಾನ ಬಿಡುಗಡೆ ಮಾಡುತ್ತಿದೆ. ಒಂದು ಸ್ತಬ್ಧಚಿತ್ರ ತಯಾರಿಸಲು ಬೇಕಾದ ಅನುಧಾನವನ್ನು ಮಾದರಿಯನ್ನು ಆಧರಿಸಿ ಅದರ ತಯಾರಿ ವೆಚ್ಚವನ್ನು ತೀರ್ಮಾನಿಸುತ್ತಾರೆ. ಇದರಿಂದ ಟೆಂಡರ್ ಪಡೆದ ಸ್ತಬ್ಧಚಿತ್ರ ಕಲಾವಿದರಿಗೆ ಯಾವುದೇ ಅನ್ಯಾಯವಾಗದೆ ಸಮರ್ಪಕ ಹಣ ಸಿಗುತ್ತದೆ.

ಸರ್ಕಾರವು ವಿವಿಧ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭದಲ್ಲಿ ಸ್ತಬ್ಧಚಿತ್ರಗಳನ್ನು ಬಳಸುವುದರಿಂದ ಇಂದು ಸ್ತಬ್ಧಚಿತ್ರ ತಯಾರಿಕರಿಗೆ ಉದ್ಯೋಗದ ಸಮಸ್ಯೆ ಇಲ್ಲ. ಹಲವು ಕಲಾವಿದರಿಗೆ ಉದ್ಯೋಗಿ ದೊರೆತು, ಉತ್ತಮ ಜೀವನ ನಿರ್ವಹಣೆಯನ್ನು ನಡೆಸಿಕೊಂಡು ಹೋಗುತ್ತಿರುವುದನ್ನು ಕಾಣಬಹುದು. ಹಾಗೆ ಸರ್ಕಾರವು ಸ್ತಬ್ಧಚಿತ್ರಗಳ ತಯಾರಿ ಪ್ರದರ್ಶನಕ್ಕೆ ಅವಕಾಶ ಮಾಡಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ.

ಸಂಘ ಸಂಸ್ಥೆಗಳು ಪರಸ್ಪರ ಸುಖ ಶಾಂತಿಯನ್ನು ಬಯಸುವುದುರ ಮೂಲಕ ಏಳಿಗೆಯನ್ನು ಬಯಸುವುದರ ಮೂಲಕ ತನ್ನ ಏಳಿಗೆಯನ್ನು ಸಾಧಿಸಿಕೊಳ್ಳಲು ಸಂಘ ಸಂಸ್ಥೆಗಳ ಪ್ರಮುಖ ಪಾತ್ರವಹಿಸುತ್ತದೆ. ಆಗೆಯೇ ಸರ್ಕಾರದೊಂದಿಗೆ ಸಂಘ ಸಂಸ್ಥೆಗಳು ಕೈ ಜೋಡಿಸಿದಾಗ ಮಾತ್ರ ಯಾವುದೇ ಕಾರ್ಯಗಳು ಯಶಸ್ವಿಯಾಗುವುದು. ಸ್ತಬ್ಧಚಿತ್ರಗಳ ತಯಾರಿ ಪ್ರದರ್ಶನಕ್ಕೆ ಸಂಘ ಸಂಸ್ಥೆಗಳು ಪ್ರಮುಖ ಪಾತ್ರವಹಿಸುತ್ತವೆ.

ಸಂಘ ಸಂಸ್ಥೆಗಳು ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುವಾಗ ಕಾರ್ಯಕ್ರಮದ ಉದ್ದೇಶವನ್ನು ಪಟ್ಟಿಮಾಡಿಕೊಂಡು ಜನರಲ್ಲಿ ಕಾರ್ಯಕ್ರಮದ ಅರಿವನ್ನುಂಟು ಮಾಡಲು ಪ್ರಮುಖವಾಗಿ ಬಳಸುವ ಸಾಧನವೆ ಸ್ತಬ್ಧಚಿತ್ರ.

ಶಾಲೆಗಳಲ್ಲಿ ಕೈಗೊಳ್ಳುವ ಗಣರಾಜ್ಯೋತ್ಸವ, ಕನ್ನಡರಾಜ್ಯೋತ್ಸವ, ಜಯಂತಿಗಳ ಆಚರಣೆಗಳ ಸಂದರ್ಭದಲ್ಲಿ ಸ್ತಬ್ಧಚಿತ್ರಗಳನ್ನು ಬಳಸುತ್ತಾರೆ. ವಿವಿಧ ಶಾಲೆಗಳು ಒಂದೇ ಕಡೆ ಸೇರಿ ಕಾರ್ಯಕ್ರಮಗಳನ್ನು ನಡೆಸುವುದು ಉಂಟು. ಆ ಸಂದರ್ಭದಲ್ಲಿ ಎಲ್ಲಾ ಶಾಲೆಯವರು ತಾವು ತಯಾರಿಸಿ ಪ್ರದರ್ಶನಕ್ಕೆ ತಂದ ಸ್ತಬ್ಧಚಿತ್ರವನ್ನು ಪ್ರದರ್ಶಿಸುತ್ತಾರೆ. ಉತ್ತಮವಾಗಿ ಮೂಡಿಬರುವ ಸ್ತಬ್ಧಚಿತ್ರಗಳಿಗೆ ಬಹುಮಾನ ನೀಡುತ್ತಾರೆ. ಇದರಿಂದ ಸ್ತಬ್ಧಚಿತ್ರಗಳ ತಯಾರಕರ ಮನೋಸ್ಥೈರ್ಯ ಹೆಚ್ಚಾಗುತ್ತದೆ. ಜೊತೆಗೆ ಸ್ತಬ್ಧಚಿತ್ರಗಳ ತಯಾರಿ, ಪ್ರದರ್ಶನದ ಮಹತ್ವ ಎಲ್ಲರಿಗೂ ತಿಳಿಯುತ್ತದೆ.

ಶರಣರ, ಸಂತರ, ಸ್ವಾತಂತ್ರ್ಯ ಹೋರಾಟಗಾರರ ಜಯಂತಿಗಳನ್ನು ಆಚರಿಸುವ ಸಂದರ್ಭದಲ್ಲಿ ಸಂಘ ಸಂಸ್ಥೆಗಳು ಸ್ತಬ್ಧಚಿತ್ರಗಳನ್ನು ತಯಾರಿಸಿ ಜನರಲ್ಲಿ ಶರಣರ, ಸಂತರ ಬಗ್ಗೆ ಅರಿವನ್ನುಂಟು ಮಾಡಿರುತ್ತವೆ. ಬಸವಣ್ಣ, ಸರ್ವಜ್ಞ, ಸ್ವಾಮಿ ವಿವೇಕಾನಂದ, ರಾಮಕೃಷ್ಣ ಪರಮಹಂಸ, ಗಾಂಧೀಜಿ, ಅಂಬೇಡ್ಕರ್ ಮುಂತಾದ ಮಹನೀಯರ ಸ್ತಬ್ಧಚಿತ್ರವನ್ನು ತಯಾರಿಸಿ ಅವರ ಸಾಧನೆಗಳನ್ನು ಜನರಲ್ಲಿ ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಸಂಘ ಸಂಸ್ಥೆಗಳು ಹಲವು ಸ್ತಬ್ಧಚಿತ್ರ ತಯಾರಕ ಕಲಾವಿದರನ್ನು ಗುರುತಿಸಿ ಅವರಿಗೆ ಹಲವು ಪ್ರಶಸ್ತಿ, ಪ್ರೋತ್ಸಾಹಧನಗಳನ್ನು ನೀಡುವುದನ್ನು ಕಾಣಬಹುದು. ಅವರು ತಯಾರಿಸುವ ಸ್ತಬ್ಧಚಿತ್ರಗಳಿಗೆ ಸಹಾಯಧನ ಒದಗಿಸುವುದರ ಜೊತೆಗೆ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿರುವುದನ್ನು ಕಾಣಬಹದು.

ಹಾಗೆ ಸಂಘ ಸಂಸ್ಥೆಗಳು ಸ್ತಬ್ಧಚಿತ್ರಗಳ ತಯಾರಿ ಪ್ರದರ್ಶನಕ್ಕೆ ಹಾಗೂ ಸ್ತಬ್ಧಚಿತ್ರ ಕಲಾವಿದರಿಗೆ ಪ್ರೇರಣೆಯನ್ನುಂಟು ಮಾಡಿದೆ.

ಅಧ್ಯಾಯ – 13

ಸ್ತಬ್ಧಚಿತ್ರ ಕಲಾವಿದರ ಪರಿಚಯ

ಕಲಾನಿರ್ದೇಶಕರು – ಬಿ. ಶಶಿಧರ್ ಅಡಪ



ಜನನ: 01.09.1955
ಸ್ಥಳ: ಮಂಗಳೂರು, ಕರ್ನಾಟಕ

ಖ್ಯಾತ ಕಲಾವಿದರು ಹಾಗೂ ಪ್ರತಿರೂಪಿ ಸಂಸ್ಥೆಯ ಮುಖ್ಯಸ್ಥರು, ರಂಗವಿನ್ಯಾಸಕರು ಆಗಿದ್ದಾರೆ. ಬಿ.ವಿ.ಕಾರಂತರು, ಶಂಕರ್‌ನಾಗ್, ಎಂ.ಎಸ್.ಸತ್ಯ, ಸಿ.ಜಿ.ಕೃಷ್ಣಸ್ವಾಮಿ, ಬಿ.ಜಯಶ್ರೀ ಇನ್ನು ಮುಂತಾದ ರಂಗಭೂಮಿ ನಿರ್ದೇಶಕರೊಂದಿಗೆ ಕೆಲಸ ಮಾಡಿದ್ದಾರೆ.

ಟಿ.ಎಸ್. ನಾಗಭರಣ, ಗಿರೀಶ್ ಕಾಸರವಳ್ಳಿ, ಟಿ.ಎನ್. ಸೀತಾರಾಮ್, ಮಣಿರತ್ನಂ, ಯೋಗರಾಜ್‌ಭಟ್ ಇನ್ನು ಮುಂತಾದ ಪ್ರಸಿದ್ಧ ಸಿನಿಮಾ ನಿರ್ದೇಶಕರ ಸಿನಿಮಾಗಳಲ್ಲಿ ಕಲಾ ನಿರ್ದೇಶಕರಾಗಿ ಕೆಲಸ ಮಾಡಿ ತಮ್ಮ ಛಾಪನ್ನು ಮೂಡಿಸಿದ್ದಾರೆ.

ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕರ್ನಾಟಕ ಸ್ತಬ್ಧಚಿತ್ರಗಳು ಭಾಗವಹಿಸುವಲ್ಲಿ ಇವರ ಪಾತ್ರ:

ಕರ್ನಾಟಕದ ಸ್ತಬ್ಧಚಿತ್ರಗಳು ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥಸಂಚಲದಲ್ಲಿ ಭಾಗವಹಿಸುವಲ್ಲಿ ಪ್ರಮುಖ ಕಾರಣಕರ್ತರು ಶಶಿಧರ್ ಅಡಪ ರವರು. ಇವರ ಕಲಾ ನಿರ್ದೇಶನದಲ್ಲಿ ಮೂಡಿಬಂದ ಸ್ತಬ್ಧಚಿತ್ರಗಳು ಪಥಸಂಚಲನದಲ್ಲಿ ಭಾಗವಹಿಸಿರುವುದಲ್ಲದೆ ಬಹುಮಾನ ಪಡೆದು ದೇಶ, ವಿದೇಶಗಳಲ್ಲಿ ಅಪಾರ ಮೆಚ್ಚುಗೆಗಳಿಸಿದೆ.

2014 ರ ಅಪ್ರತಿಮ ವೀರ ಟಿಪ್ಪು ಸುಲ್ತಾನ ಸ್ತಬ್ಧಚಿತ್ರ

2015 ರ ಚನ್ನಪಟ್ಟಣದ ಗೊಂಬೆಗಳ ಕಲರವದ ಸ್ತಬ್ಧಚಿತ್ರ

2016 ರ ಕೊಡಗಿನ ಸ್ತಬ್ಧಚಿತ್ರ

2017 ರ ಜನಪದ ಕಲೆಯ ಸ್ತಬ್ಧಚಿತ್ರ

ಸತತ ಏಳು ಬಾರಿ ಕರ್ನಾಟಕ ಸ್ತಬ್ಧಚಿತ್ರಗಳು ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಿದ ಏಕೈಕ ರಾಜ್ಯ ಕರ್ನಾಟಕ ಈ ಸಾಧನೆ ಮಾಡಲು ಶಶಿಧರ್ ಅಡಪ ರವರ ಆಸಕ್ತಿ, ಕಲಾ ನಿರ್ದೇಶನವು ಒಂದು.

ಚಲನಚಿತ್ರ:

ಶಶಿಧರ್ ಅಡಪ ರವರು ಕನ್ನಡದಲ್ಲಿ 45 ಕ್ಕೆ ಹೆಚ್ಚು ಸಿನಿಮಾಗಳಗೆ ಕಲಾನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಅದರ ಜೊತೆಗೆ ತಮಿಳು, ಹಿಂದಿ, ಫ್ರೆಂಚ್ ಸಿನಿಮಾಗಳಿಗೂ ಕಲಾನಿರ್ದೇಕರಾಗಿ ಕೆಲಸ ಮಾಡಿರುತ್ತಾರೆ. ಸಂಕ್ರಾಂತಿ, ಜಾಕಿ, ಪಂಚರಂಗಿ, ಕಡ್ಡಿಪುಡಿ, ದೊಡ್ಡ ಮನೆ ಹುಡುಗ ಹಾಗೆ ಜನಪ್ರಿಯ ಸಿನಿಮಾಗಳಿಗೆ ಕಲಾನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಹಿಂದಿಯಲ್ಲಿ 2012 ರಲ್ಲಿ ತಲಾಷ್–ದ Answer Lies Within ಸಿನಿಮಾಕ್ಕೆ ಕಲಾನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಇತ್ತೀಚೆಗೆ ಬಂದ ಉಪ್ಪಿನ ಕಾಗದ ಸಿನಿಮಾಕ್ಕೆ ಕಲಾ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದು 2016 ರ ಕರ್ನಾಟಕ ರಾಜ್ಯ ವಾರ್ಷಿಕ ಚಲನಚಿತ್ರ ಪ್ರಶಸ್ತಿ ಪಡೆದಿದ್ದಾರೆ. ಹೀಗೆ ಚಲನಚಿತ್ರ ರಂಗದಲ್ಲಿ

ಹೆಸರು ಮಾಡಿರುವ ಇವರು, ಇವರ ಕಲಾನಿರ್ದೇಶನದ ಸಿನಿಮಾ, ನಾಟಕ ರಂಗವೇದಿಕೆಗಳೆಂದರೆ ವೀಕ್ಷಕರಲ್ಲಿ ಕುತೂಹಲ ಹೆಚ್ಚಿರುತ್ತದೆ.

ಪ್ರಶಸ್ತಿಗಳು

ರಾಷ್ಟ್ರೀಯ ಪ್ರಶಸ್ತಿ:

ಕರ್ನಾಟಕ ರಾಜ್ಯದ ಸಿನಿಮಾ ಪ್ರಶಸ್ತಿ – ಉತ್ತಮ ಕಲಾನಿರ್ದೇಶಕ ಪ್ರಶಸ್ತಿ ದೊರಕಿದೆ.

1996–97 – ನಾಗಮಂಡಲ

1999–2000 – ಕಾನೂರು ಹೆಗ್ಗಡತಿ

2002–2003 – ಸಿಂಗಾರವ್ವ

2013 – ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ.

2016 – ಉಪ್ಪಿನ ಕಾಗದ ಸಿನಿಮಾಕ್ಕೆ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ದೊರಕಿದೆ.

ಇತರೆ ಪ್ರಶಸ್ತಿ:


2004 ರ ಚಮ್ಮಾನ್ ಲಾಲ್ ಮೆಮೋರಿಯಲ್ ಅವಾರ್ಡ್ – ಉತ್ತಮ ಕಲಾನಿರ್ದೇಶನಕ್ಕಾಗಿ – ಇನೋವೇಟಿವ್ ಫಿಲ್ಮ್ ಅವಾರ್ಡ್ ದೊರಕಿದೆ.

ಇನ್ನಷ್ಟು ಮಾಹಿತಿ:

- ❖ ಮಾರ್ಚ್ 3, 4, 5, 2017 ರಂದು ಬಳ್ಳಾರಿಯಲ್ಲಿ ರಾಜ್ಯ ಮಟ್ಟದ ವಿದ್ಯಾರ್ಥಿ ನಾಟಕೋತ್ಸವ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದರು.
- ❖ 2011 ರ ವಿಶ್ವ ಕನ್ನಡ ಸಮ್ಮೇಳನ ವೇದಿಕೆಯ ವಿನ್ಯಾಸಕರಾಗಿ ಕೆಲಸ ನಿರ್ವಹಿಸಿದ್ದಾರೆ.
- ❖ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ನಡೆದ ಡಾ॥ ಬಿ.ಆರ್. ಅಂಬೇಡ್ಕರ್ ಅವರ ಬದುಕು ಸಾಧನೆಗಳನ್ನು ಬಿಂಬಿಸುವ ಭಾರತ ಭಾಗ್ಯವಿದಾತ ಧ್ವನಿ ಬೆಳಕು ಕಾರ್ಯಕ್ರಮದ ರಂಗ ವಿನ್ಯಾಸಕ್ಕಾಗಿ ಕೆಲಸ ಮಾಡಿದ್ದಾರೆ.
- ❖ ದೇವನೂರು ಮಹದೇವ ಕೃತಿ ಮಾರಿಕೊಂಡವರು ಸಿನಿಮಾ ಮಾಡುವಾಗ ಸಂಭಾವನೆ ಪಡೆಯದೆ ಕಲಾನಿರ್ದೇಶನ ಮಾಡಿದ್ದಾರೆ. ಹೀಗೆ ರಂಗಭೂಮಿ ವಿನ್ಯಾಸಕ್ಕಾಗಿ,

ಕಲಾನಿರ್ದೇಶಕರಾಗಿ, ಸ್ತಬ್ಧಚಿತ್ರಗಳ ವಿನ್ಯಾಸಕ್ಕಾಗಿ ಸೇವೆ ಸಲ್ಲಿಸಿದ್ದು, ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದು ತಮ್ಮದೇ ಆದ ಛಾಪನ್ನು ಹೊಂದಿದ್ದಾರೆ.

ಸ್ತಬ್ಧಚಿತ್ರ ಕಲಾವಿದ ಪ್ರಕಾಶ ಚಿಕ್ಕಪಾಳ್ಯ



ಪ್ರಕಾಶ್ ಚಿಕ್ಕಪಾಳ್ಯ

ಜನನ: 24.04.1974

ಸ್ಥಳ: ಮಂಡ್ಯ ಜಿಲ್ಲೆಯ ಚಿಕ್ಕಪಾಳ್ಯದವರು

ವಿದ್ಯಾಭ್ಯಾಸ: ಪದವಿ

ಇವರು ಪ್ರಸಿದ್ಧ ಚಿತ್ರಕಾರರಾಗಿದ್ದು, ಸ್ತಬ್ಧಚಿತ್ರಗಳ ತಯಾರಿಕೆಯಲ್ಲಿ ತೊಡಗಿಸಿ ಕೊಂಡಿದ್ದಾರೆ. ಇವರು ಜನಪದ ಶೈಲಿಯಲ್ಲಿ ಅತಿ ಹೆಚ್ಚು ಚಿತ್ರಗಳನ್ನು ರಚಿಸಿದ್ದಾರೆ. ವ್ಯಂಗ್ಯಚಿತ್ರ ರಚನೆಯು ಇವರಿಗೆ ಕರಗತವಾಗಿದೆ.

ಇವರು ಪ್ರಸ್ತುತ ಆರ್ಟ್ ಅಂಡ್ ಕ್ರಾಫ್ಟ್ ಡಿಸೈನರ್ ಆಗಿ ಮೈಸೂರಿನಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಹಲವು ಯುವಕ ಯುವತಿಯರಿಗೆ ಉದ್ಯೋಗ ನೀಡಿದ್ದಾರೆ. ಕನ್ನಡದ ಅನೇಕ ದಿನಪತ್ರಿಕೆಗಳಿಗೆ ವ್ಯಂಗ್ಯಚಿತ್ರಕಾರರಾಗಿ ಕೆಲಸ ನಿರ್ವಹಿಸಿದ್ದಾರೆ.

ದಸರಾ ಸ್ತಬ್ಧಚಿತ್ರಗಳನ್ನು ರಚಿಸಿದ್ದಾರೆ. 2016 ರ ದಸರಾ ಸ್ತಬ್ಧಚಿತ್ರಗಳಲ್ಲಿ ಇವರು ರಚಿಸಿದ ಮೈಸೂರಿಗೆ ಮಹಾರಾಣಿಯರ ಕೊಡುಗೆ ಕುರಿತ ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ ದೊರಕಿರುತ್ತದೆ.

ಚಲನಚಿತ್ರರಂಗದಲ್ಲಿಯೂ ಕಲಾ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ಅಪಾರ ಮೆಚ್ಚುಗೆ ಗಳಿಸಿರುತ್ತಾರೆ. ಒಂದಾಗೋಣ ಬಾ, ನಮ್ಮ ಪ್ರೀತಿಯ ರಾಮು ಸಿನಿಮಾಗಳಲ್ಲಿ ತಮ್ಮ ಕೈಚಳಕವನ್ನು

ತೋರಿಸಿದ್ದಾರೆ. ಹಾಗೆ ಹಲವು ವರ್ಷಗಳಿಂದ ವಿವಿಧ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಕಲಾ ಪ್ರಪಂಚಕ್ಕೆ ಒಂದು ಅಮೂಲ್ಯ ಸಂಪತ್ತು ಆಗಿದ್ದಾರೆ.

ಸ್ತಬ್ಧಚಿತ್ರ ಕಲಾವಿದ ಜಿ. ಮಂಜುನಾಥ ಗೋವಿಂದವಾಡ



ಜನನ : 01.06.1973
ವಿಳಾಸ : ಬಳ್ಳಾರಿ
ವಿದ್ಯಾರ್ಹತೆ : ಎ.ಎಂ. ಆರ್ಟ್ ಮಾಸ್ಟರ್
ಅನುಭವ : ಚಿತ್ರಕಲೆಯಲ್ಲಿ 34 ವರ್ಷಗಳಿಂದ ಸೇವೆ.

ಪ್ರಸ್ತುತ ಬಳ್ಳಾರಿಯಲ್ಲಿ ಶ್ರೀ ಮಂಜುನಾಥ ಲಲಿತಕಲಾ ಬಳಗ(ರಿ) ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಣೆ, ಗಣ್ಯರುಗಳಾದ ಸಿ.ಜಿ.ಕೆ., ಶಣ್ಮುಕಪ್ಪ, ಶ್ರೀನಿವಾಸ್ ಕಪ್ಪಣ್ಣ, ಕೃಷ್ಣರಾಯಚೂರು, ರವಿ ಬೆಂಗಳೂರು ಮುಂತಾದವರ ಕೈಯಲ್ಲಿ ಪಳಗಿ ಬಳ್ಳಾರಿ ಜಿಲ್ಲೆಯಾದ್ಯಂತ ಮಕ್ಕಳಿಗೆ ಹಾಗೂ ಯುವಕರಿಗೆ ತರಬೇತಿ ಶಿಬಿರ, ಚಿತ್ರಕಲಾ ಪ್ರದರ್ಶನಗಳನ್ನು, ಸ್ಪರ್ಧೆಗಳನ್ನು ನಿರಂತರವಾಗಿ ಸಂಸ್ಥೆಯ ಮೂಲಕ ಬೆಳೆಸುವ ನಿಟ್ಟಿನಲ್ಲಿ ತಮ್ಮ ಸೇವೆಯನ್ನು ಮಾಡುತ್ತಿದ್ದಾರೆ.

ಪ್ರಶಸ್ತಿಗಳು:

- 1990 ಆಲ್ ಇಂಡಿಯಾ ಚೈಲ್ಡ್ ಆರ್ಟ್ ಕಾಂಪಿಟೇಷನ್‌ನಲ್ಲಿ ಪ್ರಕೃತಿ ಚಿತ್ರಣಕ್ಕೆ ಕಂಚಿನ ಪದಕ.
- 2006 ರಲ್ಲಿ ರಾಷ್ಟ್ರೀಯ ಬಸವದಳ(ರಿ) ಬಳ್ಳಾರಿ ಬಸವ ಜಯಂತಿ ಪ್ರಯುಕ್ತ ಸನ್ಮಾನ.

❖ 2006 ಬಳ್ಳಾರಿ ನಗರದ ತೆಲುಗು ಸಂಸ್ಕೃತಿ ವೇದಿಕೆ(ರಿ) ಇವರಿಂದ ಸನ್ಮಾನ.

ಸ್ತಬ್ಧಚಿತ್ರ ಕಲಾವಿದ ಹೆಚ್.ಮಹದೇವ್



ಜನನ: 11.11.1974

ಸ್ಥಳ: ಕೊಳ್ಳೆಗಾಲ, ಚಾಮರಾಜನಗರ ಜಿಲ್ಲೆ.

ವಿದ್ಯಾಭ್ಯಾಸ: ಬಿ.ಎಫ್.ಎ.

ಇವರು ರಚಿಸಿದ ಸ್ತಬ್ಧಚಿತ್ರಗಳು:

2012 ಚಾಮರಾಜನಗರ ಜಿಲ್ಲೆಯ ಜನಪದ ಮತ್ತು ಆಯುರ್ವೇದ ಪದ್ಧತಿ ಸ್ತಬ್ಧಚಿತ್ರ ಮೈಸೂರು ದಸರಾದಲ್ಲಿ ಪ್ರದರ್ಶಿತಗೊಂಡಿತು. ಸಮಾಧಾನಕರ ಬಹುಮಾನ ದೊರೆತಿದೆ.

2013 ಹುಲಿಯೋಜನೆ ಬಂಡಿಪುರ ಸ್ತಬ್ಧಚಿತ್ರ ಇದು ಮೈಸೂರು ದಸರಾದಲ್ಲಿ ಪ್ರದರ್ಶಿತಗೊಂಡಿತು. ಬಹುಮಾನ ದೊರೆತಿರುತ್ತದೆ.


2014 ಪ್ರಕೃತಿಯ ಮಡಿಲಿನ ಪುಣ್ಯಕ್ಷೇತ್ರಗಳು ಸ್ತಬ್ಧಚಿತ್ರ ಚಾಮರಾಜನಗರ ಜಿಲ್ಲೆ ಇದು ಮೈಸೂರು ದಸರಾದಲ್ಲಿ ಪ್ರದರ್ಶಿತಗೊಂಡಿತು.

ಇವರು ತಮ್ಮದೇ ಆದ ದೇವ ಆರ್ಟ್ಸ್ ಎಂಬ ಸಂಸ್ಥೆಯನ್ನು ನಡೆಸುತ್ತಿದ್ದು ಆ ಮುಖೇನ ಅನೇಕ ಯುವಕಲಾವಿದರಿಗೆ ಮಾರ್ಗದರ್ಶಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಾಮ ಫಲಕಗಳನ್ನು ಬರೆಯುತ್ತಾರೆ.

2017 ರಲ್ಲಿ ಚಾಮರಾಜನಗರದಲ್ಲಿ ನಡೆದ ಅಂಬೇಡ್ಕರ್ ಜಯಂತಿಯಂದು ಅಂಬೇಡ್ಕರ್ ಸ್ತಬ್ಧಚಿತ್ರವು ಪ್ರದರ್ಶನಗೊಂಡು ಅಪಾರ ಜನ ಮೆಚ್ಚುಗೆ ಗಳಿಸಿತು.

ಹೀಗೆ ಉದಯೋನ್ಮುಖ ಪ್ರತಿಭಾವಂತ ಕಲಾವಿದರಾಗಿ ಮಹದೇವು ಹೆಚ್. ರವರು ಕಲಾಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ.

ಸ್ತಬ್ಧಚಿತ್ರದ ಯುವ ಕಲಾವಿದ ಮಂಜು ಆರ್.



ಜನನ: 10.01.1986

ಸ್ಥಳ: ಬೆಳವಾಡಿ, ಮೈಸೂರು ಜಿಲ್ಲೆ.

ವಿದ್ಯಾಭ್ಯಾಸ: ಬ್ಯಾಚುಲರ್ ಆಫ್ ವಿಜ್ಯುಯಲ್ ಆರ್ಟ್ಸ್

ಇವರು ರಚಿಸಿದ ಸ್ತಬ್ಧಚಿತ್ರಗಳು:

- 2013 – ಹುಲಿಯೋಜನೆ ಬಂಡೀಪುರ (ಮೈಸೂರು ದಸರಾ ಸ್ತಬ್ಧಚಿತ್ರ)
- 2014 – ಪ್ರಕೃತಿ ಮಡಿಲಲ್ಲಿ ಪುಣ್ಯಕ್ಷೇತ್ರಗಳು (ಮೈಸೂರು ದಸರಾ ಸ್ತಬ್ಧಚಿತ್ರ)
- 2016 – ರಾಣಿ ಅಬ್ಬಕ್ಕದೇವಿ ಹೋರಾಟದ ಸ್ತಬ್ಧಚಿತ್ರ (ಮೈಸೂರು ದಸರಾ ಸ್ತಬ್ಧಚಿತ್ರ)

ಇವರು ಮೈಸೂರು ದಸರಾದ ಸ್ತಬ್ಧಚಿತ್ರ ತಯಾರಿಕೆಯಲ್ಲಿ ಕಲಾವಿದರಾಗಿಯೂ ಸಹಕಲಾವಿದರಾಗಿಯೂ ಕಾರ್ಯನಿರ್ವಹಿಸಿರುತ್ತಾರೆ. ಇವರು ವಿವಿಧ ಕಲಾಕೃತಿಗಳನ್ನು ತಯಾರಿ

ಸುತ್ತಾರೆ. ಥರ್ಮಕೋಲ್‌ನಿಂದ ವಿವಿಧ ರೀತಿಯ ಕಲಾಕೃತಿಗಳನ್ನು ತಯಾರಿಸುತ್ತಾರೆ. ಚಲನಚಿತ್ರಗಳಿಗೂ ಕಲಾಕೃತಿಗಳನ್ನು ತಯಾರಿಸಿಕೊಟ್ಟಿರುತ್ತಾರೆ. ಗೃಹವಿನ್ಯಾಸಗಳನ್ನು ಮಾಡುತ್ತಾರೆ. ಚಿತ್ರರಚನೆಯಲ್ಲಿ ತಮ್ಮದೇ ಆದ ಶೈಲಿಯಿಂದ ಗುರುತಿಸಿಕೊಂಡಿದ್ದಾರೆ.

ಸಮಾರೋಪ

ಶಿಲ್ಪಕಲೆಯ ವೃತ್ತಿಯನ್ನು ಮಾಡುತ್ತಿದ್ದ ನಾನು ನನ್ನ ಭಾವನೆಗಳನ್ನು ಶಿಲ್ಪಕಲಾಕೃತಿಗಳ ಮೂಲಕ ಅಭಿವ್ಯಕ್ತಗೊಳಿಸುತ್ತಿದ್ದು ಈ ಪ್ರಬಂಧ ವಿಚಾರವಾಗಿ ಆಲೋಚನೆಗೈಯಲು ಪ್ರಾರಂಭಿಸಿದ ಮೇಲೆ ಸ್ತಬ್ಧಚಿತ್ರಗಳ ವಿಚಾರವು ಮನಸ್ಸಿಗೆ ಗೋಚರಿಸಿತು. ಶಿಲ್ಪಕಲೆಯ ರಚನಾ ಕಾರ್ಯದಲ್ಲಿ ನಿರತನಾಗಿದ್ದ ನನಗೆ ಶಿಲ್ಪಗಳೇ ಪ್ರಮುಖವಾಗಿ ಕಂಡುಬರುವ ಚಿತ್ರಗಳನ್ನು ಅವುಗಳ ಪೂರ್ವಾಪರ ವಿಚಾರಗಳನ್ನು ದಾಖಲೀಕರಿಸಿದ ತೀರ್ಮಾನವನ್ನು ಕೈಗೊಂಡಿದ್ದೆ. ಸ್ತಬ್ಧಚಿತ್ರದ ಪೂರ್ವಾಪರ ವಿಚಾರಗಳನ್ನು ಸಂಶೋಧಿಸುತ್ತಾ ಸಾಗುತ್ತಿದ್ದಂತೆ ಸ್ತಬ್ಧಚಿತ್ರಗಳಲ್ಲಿ ಶಿಲ್ಪಕಲೆಗಳೇ ಅಲ್ಲದೆ ಹಲವಾರು ಭಿತ್ತಿಚಿತ್ರಗಳು, ಸಂದೇಶಗಳನ್ನು ನೀಡುವ ನಾಮಫಲಕಗಳು, ಉಬ್ಬುಶಿಲ್ಪಗಳು ತಗ್ಗುಶಿಲ್ಪಗಳು ವಿವಿಧ ರೀತಿಯ ಕ್ರಾಫ್ಟ್ ಕಲೆಯ ಬಳಕೆ ಎಲ್ಲವೂ ನನ್ನ ಅಧ್ಯಯನಕ್ಕೆ ಹೊಸದಾದ ತಿರುವು ನೀಡಿವೆ ಅನಿಸುತ್ತಿದೆ. ಹಾಗಾಗಿ ಕಲೆಯ ಹಲವಾರು ಪ್ರಕಾರಗಳನ್ನೊಳಗೊಂಡ ಸ್ತಬ್ಧಚಿತ್ರಗಳ ಅಧ್ಯಯನದಿಂದ ಈ ಪ್ರಬಂಧದಲ್ಲಿ ಹೊಸ ಹೊಸ ಅನುಭಗಳು, ಹೊಸ ಹೊಸ ವಿಚಾರಗಳು ಮನಸ್ಸಿನಲ್ಲಿ ಉಗಮವಾಗಿ ನನ್ನ ಅಧ್ಯಯನಕ್ಕೆ ಮತ್ತಷ್ಟು ಪ್ರೇರಣೆಯನ್ನು ನೀಡಿವೆ. ಸ್ತಬ್ಧಚಿತ್ರಗಳನ್ನು ಅಧ್ಯಯನ ಮಾಡಿದಾಗ ಸ್ತಬ್ಧಚಿತ್ರಗಳ ಮೇಲೆ ಗಣ್ಯರ ಹೆಸರಾಂತ ವ್ಯಕ್ತಿಗಳ ವಿಚಾರಧಾರೆಗಳು ವಿಮರ್ಶಕರ ಜನಸಾಮಾನ್ಯರ ಅಭಿಪ್ರಾಯಗಳು ನನ್ನನ್ನು ಹೊಸ ದಿಕ್ಕಿನಲ್ಲಿ ಆಲೋಚನೆಗೈಯಲು ಪ್ರೇರಣೆಯನ್ನು ನೀಡಿದೆ. ಸ್ತಬ್ಧಚಿತ್ರದ ಬಗ್ಗೆ ವಿಚಾರ ಮಾಡಲು ಸ್ತಬ್ಧಚಿತ್ರ ರಚನಾಕಾರ್ಯದಲ್ಲಿ ಹೊಸ ಹೊಸ ತಂತ್ರಗಳು ವಿವಿಧವಾದ ಮಾಧ್ಯಮಗಳು ಹಲವಾರು ಕಲಾವಿದರ ಕೈಚಳಕ ರಚನಾ ಕಾರ್ಯದಲ್ಲಿ ಉಪಯೋಗಿಸಿ ಎಲ್ಲಾ ರೀತಿಯ ಉಪಕರಣಗಳು ನಿಜಕ್ಕೂ ಎಂಥಹವರನ್ನು ಬೆರಗುಗೊಳಿಸುವುದು ಒಂದೆಡೆಯಾದರೆ ಮತ್ತೊಂದೆಡೆ ಸ್ತಬ್ಧಚಿತ್ರಗಳು ನೀಡುವ ಸಾಮಾಜಿಕ ಸಂದೇಶಗಳು, ಮನರಂಜನಾತ್ಮಕ ದೃಶ್ಯಗಳು ಕಲಾ ರಸಿಕರನ್ನು ಮನಸೂರೆಗೊಳ್ಳದೆ ಇರಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ನನ್ನ ಸುತ್ತಮುತ್ತಲು ನನಗೆ ಗೋಚರಿಸದೇ ಇರುವ ಹಲವಾರು ವಿಚಾರಗಳು ನನಗೆ ಕಲಾಕ್ಷೇತ್ರದಲ್ಲಿ ಉನ್ನತ ಮಟ್ಟದಲ್ಲಿ ಅಲ್ಲಿನ ವಿಚಾರಗಳು ಋಣಾತ್ಮಕವಾಗಿ ಮತ್ತು ಧನಾತ್ಮಕವಾಗಿ ವಿಮರ್ಶಿಸಿ ಹೊಸ ರಸಸ್ವಾದನೆ ಮಾಡಲು ಅವಕಾಶವಾಗಿದೆ. ಯಾವುದೇ ಒಂದು ಸ್ತಬ್ಧಚಿತ್ರದ ಮುಂದೆ ಅದರ ನಿರ್ಮಾಣದ ಹಿಂದೆ ಇರುವ ಬಹಳ ಸ್ವಾರಸ್ಯಕರ ವಿಚಾರಗಳು ಅಧ್ಯಯನ ಮಾಡಲು ಹೋದ ವ್ಯಕ್ತಿಗೆ ಅವನ ಚಿಂತನೆ ಮಟ್ಟವನ್ನು ಉನ್ನತಿಗೊಳಿಸುವುದು ಖಚಿತವೆನಿಸುತ್ತದೆ.

ಗ್ರಂಥಋಣ

1. ಕಲೆ ಎಂದರೇನು? : ಅನುವಾದ ಸಿ.ಪಿ.ಕೆ......ಮೈಸೂರು
2. ಚಿತ್ರಗಳು ಮಾತನಾಡುತ್ತಿವೆ. : ಬಾಗುರು ಮಾರ್ಕಂಡೇಯ
3. ಕಲೆ ಮತ್ತು ರಸ ಸ್ವಾದನೆ : ಪ್ರೊ. ಎಂ.ಹೆಚ್.ಕೃಷ್ಣಯ್ಯ
4. ದೃಶ್ಯಪದದೃಶ್ಯ : ಡಾ. ಶಿವಾನಂದ ಹೆಚ್ ಬಂಟನೂರ
5. ಕರ್ನಾಟಕ ಶಿಲ್ಪ ಸಂಚಲನ : ಡಾ. ಶಿವಾನಂದ ಹೆಚ್ ಬಂಟನೂರ
6. ನಾಡಹಬ್ಬ ದಸರಾ : ಡಾ. ವಿ.ರಂಗನಾಥ್
7. ಮೈಸೂರು ದಸರಾ 2016 : ಸ್ತಬ್ಧಚಿತ್ರ ಉಪಸಮಿತಿ
8. ಮೈಸೂರು ದಸರಾ 2015 : ಸ್ತಬ್ಧಚಿತ್ರ ಉಪಸಮಿತಿ
9. ಅಂತರಜಾಲದ ವಿಳಾಸಗಳು : ಗಣರಾಜ್ಯೋತ್ಸವದ ಸ್ತಬ್ಧಚಿತ್ರಗಳು

   ಕನ್ನಡ ರಾಜ್ಯೋತ್ಸವದ ಸ್ತಬ್ಧಚಿತ್ರಗಳು

   ದಸರಾ ಸ್ತಬ್ಧಚಿತ್ರಗಳು

   ಶರಣರ, ಸಂತರ ಸ್ತಬ್ಧಚಿತ್ರಗಳು

   ಶಾಲೆಗಳಲ್ಲಿ ಸ್ತಬ್ಧಚಿತ್ರಗಳ ಸ್ಪರ್ಧೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
2015-16